ಸೋಮವಾರ, ಜನವರಿ 20, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತುಂತುರು ಮಳೆ
ಬೆಂಗಳೂರಿನಲ್ಲಿ ಭಾನುವಾರ ಮಳೆ ಸುರಿದಾಗ ಜನರು ಕೊಡೆ ಹಿಡಿದು ಸಾಗಿದರು



ಬ್ರಾಹ್ಮಣ ಮಹಾ ಸಮ್ಮೇಳನ ಅಭಿಮತ • ವೈಜ್ಞಾನಿಕ ಗಣತಿಗೆ ಆಗ್ರಹ • ಇಡಬ್ಲ್ಯುಎಸ್ ಮೀಸಲಾತಿ ಜಾರಿಗೆ ಒತ್ತಾಯ

‘ಬ್ರಾಹ್ಮಣರ ಪರಿಗಣಿಸದೇ ಜಾತಿ ಜನಗಣತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಜನಗಣತಿ) ವೈಜ್ಞಾನಿಕವಾಗಿ ನಡೆದಿಲ್ಲ. ಬ್ರಾಹ್ಮಣರ ಮನೆಗಳಿಗೆ ಭೇಟಿ ನೀಡದೆಯೇ ಸಮೀಕ್ಷೆ ಪೂರ್ಣಗೊಳಿಸಲಾಗಿದೆ. ಆದ್ದರಿಂದ ಬ್ರಾಹ್ಮಣರ ಜಾತಿಗಣತಿಯನ್ನು ವೈಜ್ಞಾನಿಕವಾಗಿ ನಡೆಸಬೇಕು ಎಂದು ಬ್ರಾಹ್ಮಣ ಮಹಾ ಸಮ್ಮೇಳನ ಒತ್ತಾಯಿಸಿದೆ.

ಇದು, ಸೇರಿದಂತೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸುವರ್ಣ ಮಹೋತ್ಸವದ ಪ್ರಯುಕ್ತ ಇಲ್ಲಿ ಏರ್ಪಡಿಸಿದ್ದ ಸಮ್ಮೇಳನದ ಕಡೆಯ ದಿನವಾದ ಭಾನುವಾರ ಐದು ನಿರ್ಣಯ ತೆಗೆದುಕೊಳ್ಳಲಾಯಿತು. ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಅವರು ನಿರ್ಣಯಗಳನ್ನು ಮಂಡಿಸಿದರು.

‘ಬ್ರಾಹ್ಮಣ ಸಮುದಾಯದವರ ಮನೆಗಳಿಗೆ ಭೇಟಿ ನೀಡದಿದ್ದರೂ, ಜಾತಿಗಣತಿ ನಡೆದಿದೆ ಎನ್ನುವುದು ಸೂಕ್ತವಲ್ಲ. ಜಾತಿಗಣತಿಯನ್ನು ಇನ್ನೊಂದು ಸಾರಿ ವೈಜ್ಞಾನಿಕವಾಗಿ ಮಾಡಬೇಕು. ಸದ್ಯ ಮಾಡಿರುವ ಜಾತಿ ಗಣತಿಯ ವರದಿ ಆಧರಿಸಿ ಯಾವುದೇ ಕ್ರಮ ತೆಗೆದುಕೊಳ್ಳಬಾರದು. ಆರ್ಥಿಕವಾಗಿ ದುರ್ಬಲ ವರ್ಗದವರಿಗೆ (ಇಡಬ್ಲ್ಯುಎಸ್) ಕೇಂದ್ರ ಸರ್ಕಾರ ನೀಡಿರುವ ಶೇ 10ರಷ್ಟು ಮೀಸಲಾತಿಯನ್ನು ರಾಜ್ಯ ಸರ್ಕಾರ ಜಾರಿ ಮಾಡಬೇಕು. ದೇವಸ್ಥಾನಗಳಿಗೆ ಸ್ವಾಯತ್ತತೆ ನೀಡಬೇಕು. ಅಲ್ಪಸಂಖ್ಯಾತರ ಧಾರ್ಮಿಕ ಕ್ಷೇತ್ರಗಳಲ್ಲಿ ಮತ ಪ್ರಚಾರವಾಗುವಂತೆ, ಮುಜರಾಯಿ ದೇಗುಲಗಳು ಸನಾತನ ಧರ್ಮದ ಕೇಂದ್ರ ಆಗಬೇಕು. ದೇವಸ್ಥಾನಗಳಿಗೆ ಸೇರಿದ ಇನಾಮು ಜಮೀನು ಸರ್ಕಾರ ವಹಿಸಿಕೊಂಡಿದ್ದು, ಯಾರಿಗೂ ವಿತರಣೆ ಆಗದ ಜಮೀನನ್ನು ದೇಗುಲದ ಸುಪರ್ದಿಗೆ ಹಿಂತಿರುಗಿಸಿ ಕೊಡಬೇಕು. ಮಹಾಸಭೆಯ ಸುವರ್ಣ ಭವನಕ್ಕೆ ಮುಂದಿನ ಬಜೆಟ್‌ನಲ್ಲಿ ಅನುದಾನ ನೀಡಬೇಕು’ ಎಂದು ಆಗ್ರಹಿಸಲಾಯಿತು.

ಇದಕ್ಕೂ ಮೊದಲು ನಡೆದ ಧರ್ಮ ಸಭೆಯಲ್ಲಿ ವರ್ಚುವಲ್ ವೇದಿಕೆ ಮೂಲಕ ಪಾಲ್ಗೊಂಡ ಕಂಚಿ ಕಾಮಕೋಟಿ ಸರ್ವಜ್ಞ ಪೀಠದ ಶಂಕರವಿಜಯೇಂದ್ರ ಸರಸ್ವತಿ ಸ್ವಾಮೀಜಿ, ‘ದೇಶದಲ್ಲಿ ಧರ್ಮ ಪ್ರಚಾರ ಕಾರ್ಯದಲ್ಲಿ ಬ್ರಾಹ್ಮಣರು ಮುಂಚೂಣಿಯಲ್ಲಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಬ್ರಾಹ್ಮಣರ ಆರ್ಥಿಕ, ಸಾಮಾಜಿಕ, ಆಧ್ಯಾತ್ಮಿಕ ಪ್ರಗತಿಗೆ ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕು’ ಎಂದು ಹೇಳಿದರು.

ಹರಿಹರಪುರದ ಆದಿಶಂಕರಾಚಾರ್ಯ ಶಾರದಾ ಲಕ್ಷ್ಮೀನರಸಿಂಹ ಪೀಠದ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ವ್ಯಾಸರಾಜ ಮಠದ (ಸೋಸಲೆ) ವಿದ್ಯಾಶ್ರೀಶತೀರ್ಥ ಸ್ವಾಮೀಜಿ, ಕೂಡ್ಲಿ ಶೃಂಗೇರಿ ಶಾರದಾ ಮಠದ ಅಭಿನವ ಶಂಕರಭಾರತಿ ಸ್ವಾಮೀಜಿ, ತುಮಕೂರಿನ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ವೀರೇಶಾನಂದ ಸರಸ್ವತಿ, ಮುಳಬಾಗಿಲಿನ ಶ್ರೀಪಾದರಾಜ ಮಠದ ಸುಜಯನಿಧಿತೀರ್ಥ ಸ್ವಾಮೀಜಿ, ರಾಮಕೃಷ್ಣ ವಿವೇಕಾನಂದ ಆಶ್ರಮದ ಸ್ವಾಮಿ ನಿರ್ಭಯಾನಂದ ಮಹಾರಾಜ್ ಸಾನ್ನಿಧ್ಯ ವಹಿಸಿದ್ದರು. ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರು ಅಧ್ಯಕ್ಷತೆ ವಹಿಸಿದ್ದರು.



ಸಮ್ಮೇಳನದಲ್ಲಿ ರಾಘವೇಶ್ವರ ಭಾರತಿ ಸ್ವಾಮೀಜಿ ಆಶೀರ್ವಚನ ನೀಡಿದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಮತ್ತು ಅಖಿಲ ಹವ್ಯಕ ಮಹಾಸಭಾದ ಅಧ್ಯಕ್ಷ ಡಾ.ಗಿರಿಧರ ಕಜೆ ಉಪಸ್ಥಿತರಿದ್ದರು. ಪ್ರಜಾವಾಣಿ ಚಿತ್ರ

ಇತಿಹಾಸದ ಪುಟ ತಿರುವಿದರೆ ಬ್ರಾಹ್ಮಣರು ದೇಶಕ್ಕೆ ನೀಡಿದ ಕೊಡುಗೆಗಳು ತಿಳಿಯಲಿವೆ. ಎಲ್ಲ ಸಮುದಾಯವನ್ನು ಪ್ರೀತಿಸುತ್ತಾ, ಗೌರವಿಸುತ್ತಾ ಹೆಜ್ಜೆ ಹಾಕಬೇಕು
ಕೃಷ್ಣ ಎಸ್. ದೀಕ್ಷಿತ್
ಹೈಕೋರ್ಟ್ ನ್ಯಾಯಮೂರ್ತಿ

ಬ್ರಾಹ್ಮಣ ಜಾತಿ ಸೂಚಕ ಪದವಾಗಿರದೆ, ವರ್ಣ ಸೂಚಕ ಪದವಾಗಿದೆ. ಜಾತಿ ಬದಲು ಸಮುದಾಯವೆಂದು ಗುರುತಿಸಿಕೊಳ್ಳಿ
ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ಆದಿಶಂಕರಾಚಾರ್ಯ ಶಾರದಾ ಲಕ್ಷ್ಮೀನರಸಿಂಹ ಪೀಠ

‘ಸಂತಾನ ಬೇಡವಾದರೆ ಸನ್ಯಾಸಿಯಾಗಿ’

‘ಯಾವುದೋ ಸಣ್ಣ ಸಣ್ಣ ಲಾಭಗಳಿಗಾಗಿ ಸಂತಾನದ ಬಗ್ಗೆ ಬ್ರಾಹ್ಮಣ ಸಮುದಾಯದವರು ನಿರುತ್ಸಾಹ ತೋರುತ್ತಿದ್ದಾರೆ. ಸಂತಾನ ಬೇಡವಾದರೆ ಸಂಸಾರ ನಡೆಸದೆ, ಸಮಾಜದ ಕಲ್ಯಾಣಕ್ಕಾಗಿ ಸನ್ಯಾಸ ದೀಕ್ಷೆ ಪಡೆಯಬೇಕು’ ಎಂದು ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತಿ ಸ್ವಾಮೀಜಿ ಹೇಳಿದರು.

ಸಮ್ಮೇಳನದಲ್ಲಿ ಆಶೀರ್ವಚನ ನೀಡಿದ ಅವರು, ‘ಸಂತಾನ ಪಡೆಯದಿರುವುದು ಮತ್ತು ಸಂಸ್ಕಾರ ಹೀನತೆ ಬ್ರಾಹ್ಮಣ ಸಮುದಾಯದ ಪ್ರಮುಖ ಸಮಸ್ಯೆಗಳಾಗಿವೆ. ಸದ್ಯದ ಸ್ಥಿತಿಯಲ್ಲಿ ಸಂತಾನ, ಸಂಸ್ಕಾರವನ್ನು ವೃದ್ಧಿಸಬೇಕಾದ ಅಗತ್ಯವಿದೆ. ಸಂಸಾರಸ್ಥರು ಸಂತತಿ ಪಡೆದು, ಸಮುದಾಯವನ್ನು ಬೆಳೆಸಬೇಕು. ಪಡೆದ ಸಂತತಿಗೆ ಸಂಸ್ಕಾರವನ್ನೂ ನೀಡಬೇಕು. ಸಂತಾನ ಬೇಡವೆಂದಾದಲ್ಲಿ ಸಂಸಾರವೂ ಬೇಡ’ ಎಂದು ಹೇಳಿದರು.

‘ಬ್ರಾಹ್ಮಣರಲ್ಲಿ ಯಾರೇ ಹೆಚ್ಚಿನ ಸಂತತಿ ಪಡೆದರೂ ಅವರ ಮಕ್ಕಳಿಗೆ ಆಶೀರ್ವಾದ, ಆಶ್ರಯವನ್ನು ಮಠ ನೀಡಲಿದೆ. ಶಿಕ್ಷಣ, ಉದ್ಯೋಗಕ್ಕೂ ನೆರವಾಗುತ್ತದೆ’ ಎಂದರು.

ಸುದ್ದಿ 2 ನಿಮಿಷ

ನಿತ್ಯವೂ ಪುಣ್ಯಸ್ನಾನ ಮಾಡುತ್ತೇನೆ: ಮಹದೇವಪ್ಪ

ಮೈಸೂರು: ‘ನಾನು ನಿತ್ಯವೂ ಪುಣ್ಯಸ್ನಾನ ಮಾಡುತ್ತೇನೆ’ ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹೇಳಿದರು.

ಜಿಲ್ಲೆಯ ತಿ.ನರಸೀಪುರದ ಸಂಗಮ ಕ್ಷೇತ್ರದಲ್ಲಿ ಫೆ.10ರಿಂದ 12ರವರೆಗೆ ಕುಂಭಮೇಳ ಆಯೋಜಿಸಲಾಗಿದ್ದು ಅಲ್ಲಿ ಮಠಾಧೀಶರೊಂದಿಗೆ ಪುಣ್ಯಸ್ನಾನ ಮಾಡುತ್ತೀರಾ ಎಂಬ ಪತ್ರಕರ್ತರ ಪ್ರಶ್ನೆಗೆ ಭಾನುವಾರ ಪ್ರತಿಕ್ರಿಯಿಸಿದ ಅವರು, ‘ನಾನು ಸ್ನಾನ ಮಾಡಿದಾಗೆಲ್ಲಾ ಪುಣ್ಯ ಬಂದೇ ಬರುತ್ತದೆ’ ಎಂದರು.

‘ನನ್ನ ಮೈಮೇಲೆ ಅಂಟಿರಬಹುದಾದ ರೋಗಾಣುಗಳು, ದೂಳು, ಕಸವೆಲ್ಲಾ ನಿತ್ಯವೂ ಸ್ನಾನ ಮಾಡಿದಾಗ ಹೋಗುತ್ತದೆ. ಆಗ, ನನ್ನ ದೇಹವೆಲ್ಲಾ ಪುಣ್ಯಮಯವಾಗುತ್ತದೆ. ಹೀಗಾಗಿ, ನಿತ್ಯವೂ ಪುಣ್ಯಸ್ನಾನವೇ’ ಎಂದು ಹೇಳಿದರು.

‘ನಾನು ಶಾಲಾ ವಿದ್ಯಾರ್ಥಿಯಾಗಿದ್ದಾಗ ಕಾಲುವೆಯಲ್ಲಿ, ಕಪಿಲಾ ನದಿಯಲ್ಲಿ ಈಜುತ್ತಿದ್ದೆ. ಈಗ ಈಜುತ್ತಿಲ್ಲ’ ಎಂದರು.

‘ಕುಂಭಮೇಳಕ್ಕೆ ₹10 ಕೋಟಿ ಬೇಕಾಗುತ್ತದೆ ಎಂಬ ಪ್ರಸ್ತಾವವನ್ನು ಜಿಲ್ಲಾಡಳಿತ ಸಲ್ಲಿಸಿದೆ. ಹೋದ ಬಾರಿ ₹ 4 ಕೋಟಿಯನ್ನು ಸರ್ಕಾರ ಕೊಟ್ಟಿತ್ತು. ಈ ಬಾರಿ ₹5ಕೋಟಿಯಿಂದ ₹6 ಕೋಟಿ ಕೊಡಬಹುದು. ಮೂರು ದಿನಗಳ ಕಾಲವರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬರಲಿದ್ದಾರೆ. ಅವರಿಗೆ ಎಲ್ಲ ರೀತಿಯ ಅನುಕೂಲ ಮಾಡಿಕೊಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಧಾರ್ಮಿಕ ಆಚರಣೆಗಳಿಗೆ ವೈಯುಕ್ತಿಕ ವಿರೋಧ ಇಲ್ಲ. ಅವರವರ ಧಾರ್ಮಿಕ ನಂಬಿಕೆ, ಆಚರಣೆ ಸಂವಿಧಾನಾತ್ಮಕ ಹಕ್ಕು’ ಎಂದರು.



ಜಾತಿನಿಂದನೆ: ಪಿಎಸ್‌ಐ ಅಮಾನತು

ಕಾಳಗಿ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ರಟಕಲ್ ಪೊಲೀಸ್ ಠಾಣೆಯ ಪಿಎಸ್‌ಐ ಗಂಗಮ್ಮ ಅವರನ್ನು ಕರ್ತವ್ಯ ಲೋಪದ ಹಿನ್ನೆಲೆಯಲ್ಲಿ ಅಮಾನತು ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸೇರಿ ಗ್ರಾಮದ ಜಮೀನು ವ್ಯಾಜ್ಯ ಸಂಬಂಧ ಎರಡು ಕುಟುಂಬಗಳ ಸದಸ್ಯರಿಗೆ ತಿಳಿವಳಿಕೆ ಹೇಳುವ ಮಾತಿನ ಭರದಲ್ಲಿ ಪರಿಶಿಷ್ಟ ಸಮುದಾಯಕ್ಕೆ ಅವಮಾನ ಆಗುವ ರೀತಿಯಲ್ಲಿ ಮಾತನಾಡಿದ್ದಾರೆ ಎನ್ನಲಾದ ವಿಡಿಯೊ ಸಾಮಾಜಿಕ ಜಾಲ ತಾಣಗಳಲ್ಲಿ ಹರಿದಾಡಿದೆ. ಈ ಬಗ್ಗೆ ವಿರೋಧ ವ್ಯಕ್ತವಾಗಿ, ಕ್ರಮಕ್ಕೆ ಸಮುದಾಯದ ಮುಖಂಡರು ಒತ್ತಾಯಿಸಿದರು.

ಪ್ರಕರಣ ಸಂಬಂಧ ಪಿಎಸ್‌ಐ ಗಂಗಮ್ಮ ಅವರನ್ನು ಅಮಾನತು ಮಾಡಿ ಈಶಾನ್ಯ ವಲಯ ಐಜಿಪಿ ಅಜಯ್ ಹಿಲೋರಿ ಅವರು ಆದೇಶ ಹೊರಡಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಬೆಳಗಾವಿಯಲ್ಲಿ ಉಪಮುಖ್ಯಮಂತ್ರಿ ಅವಿರತ ಓಡಾಟ

ಎಐಸಿಸಿ ನೇತೃತ್ವದ ಸಮಾವೇಶದ ಸಿದ್ಧತೆ ಪರಿಶೀಲನೆ, ಪೂಜೆ, ಆಪ್ತರ ಜತೆ ಸಭೆ • ಎಲ್ಲದಕ್ಕೂ 22ರಂದು ಉತ್ತರ–ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಎಐಸಿಸಿಯಿಂದ ನಗರದಲ್ಲಿ ಜ.21ರಂದು ಆಯೋಜಿಸಿರುವ ‘ಜೈ ಬಾಪು, ಜೈ ಭೀಮ್, ಜೈ ಸಂವಿಧಾನ’ ಸಮಾವೇಶದ ಅಂಗವಾಗಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಭಾನುವಾರ ಇಡೀ ದಿನ ಬಿಡುವಿಲ್ಲದ ಚಟುವಟಿಕೆಗಳಲ್ಲಿ ಪಾಲ್ಗೊಂಡರು.


1924ರಲ್ಲಿ ಗಾಂಧೀಜಿ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಈಗ ನೂರು ವರ್ಷ. ಅದರ ಸ್ಮರಣಾರ್ಥ ‘ಗಾಂಧಿ ಭಾರತ’ ಕಾರ್ಯಕ್ರಮ ಆಯೋಜಿಸಲಾಗಿದೆ.

ಬೆಳಿಗ್ಗೆ ಇಲ್ಲಿನ ಕಪಿಲೇಶ್ವರ ಮಂದಿರಕ್ಕೆ ತೆರಳಿ ಅವರು ಪೂಜೆ ಸಲ್ಲಿಸಿದರು. ‘ರಕ್ಷಣೆ ಕೋರಿ ಪೂಜೆ ಸಲ್ಲಿಸಿದ್ದೇನೆ’ ಎಂದು ಮಾಧ್ಯಮದವರಿಗೆ ತಿಳಿಸಿದರು.

ನಂತರ, ಸುವರ್ಣ ವಿಧಾನಸೌಧದಲ್ಲಿ ನಿರ್ಮಿಸಿದ ಮಹಾತ್ಮ ಗಾಂಧಿ ಅವರ ಬೃಹತ್ ಪ್ರತಿಮೆ ಅನಾವರಣ, ನೂರು ವರ್ಷಗಳ ಹಿಂದೆ ನಡೆದ ಸಮಾವೇಶದ ಸ್ಥಳ (ವೀರಸೌಧ), ಸದ್ಯದ ಸಮಾವೇಶಕ್ಕೆ ಸಿ.ಪಿ.ಇಡಿ ಮೈದಾನಗಳನ್ನು ಸಿದ್ಧಗೊಳಿಸಿರುವುದನ್ನು ಅವರು ಪರಿಶೀಲಿಸಿದರು.

ಪ್ರವಾಸಿ ಮಂದಿರದಲ್ಲಿ ಬೆಳಿಗ್ಗೆ ಮುಖಂಡರು, ಶಾಸಕರ ಸಭೆ ನಡೆಸಿ ಸಮಾವೇಶ ಜವಾಬ್ದಾರಿಗಳನ್ನು ಹಂಚಿದರು. ಇಡೀ ದಿನ ಕೆಲವು ನಾಯಕರ ಮನೆಗಳಿಗೂ ಭೇಟಿ ನೀಡಿದರು. ಸಂಜೆಗೆ ಮತ್ತೆ ನೀರಾವರಿ ಇಲಾಖೆಯ ಕಚೇರಿಯಲ್ಲಿ ಅಧಿಕಾರಿಗಳ ಸಭೆ ನಡೆಸಿದರು.

‘ಈ ಓಡಾಟ ಹಾಗೂ ಸಭೆಗಳ ಉದ್ದೇಶವೇನು’ ಎಂಬ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಸಮಾವೇಶ ಮುಗಿದ ಮಾರನೇ ದಿನ; ಜ.22ರಂದು ಎಲ್ಲರಿಗೂ ಉತ್ತರ ಕೊಡುತ್ತೇನೆ’ ಎಂದಷ್ಟೇ ಹೇಳಿದರು.



ಸಚಿವ ಸತೀಶ ಜಾರಕಿಹೊಳಿ ಅವರಿಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ‘ಗಾಂಧಿ ಭಾರತ್’ ಕಾರ್ಯಕ್ರಮದ ಚಿತ್ರಗಳನ್ನು ತೋರಿಸಿ ಬೆಳಗಾವಿಯಲ್ಲಿ ಭಾನುವಾರ ನಗೆ ಬೀರಿದರು. ಸಚಿವ ಜಮೀರ್ ಅಹ್ಮದ್ ಖಾನ್ ಇದ್ದಾರೆ

ಇದು ಎಲ್ಲರ ಸಮಾವೇಶ. ಈ ದೇಶ, ಸಂವಿಧಾನ ಉಳಿಸಲು ಮತ್ತು ಗಾಂಧಿ ವಿಚಾರಧಾರೆ ಪ್ರಚಾರ ಮಾಡಲು ಇಚ್ಛಿಸುವ ಯಾರಾದರೂ ಸಮಾವೇಶದಲ್ಲಿ ಪಾಲ್ಗೊಳ್ಳಬಹುದು
ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಗಾಂಧಿ ಭಾರತ ಕಾರ್ಯಕ್ರಮವು ನಕಲಿ ಕಾಂಗ್ರೆಸ್‌ನ ನಕಲಿ ಗಾಂಧಿಗಳ ನೇತೃತ್ವದ ಸಮಾವೇಶ. ಸಮಾವೇಶಕ್ಕೆ ಸರ್ಕಾರದ ಹಣ ಪೋಲು ಮಾಡುತ್ತಿದ್ದಾರೆ
ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಬಿಜೆಪಿ ಯಾವತ್ತೂ ಗಾಂಧಿ ಪರ ಇಲ್ಲ. ಅದು ಎಂದಿಗೂ ಗಾಂಧಿ ವಿರೋಧಿ
ಜಮೀರ್ ಅಹ್ಮದ್ ಖಾನ್, ವಕ್ಫ್ ಸಚಿವ

ನಗರದಲ್ಲಿ ಮತ್ತೆ ಮರಳಿದ ‘ಕಾಂಗ್ರೆಸ್ ವೈಭವ’

ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವದ ಕಾರಣ ನಗರದಲ್ಲಿ ಮತ್ತೆ ‘ಕಾಂಗ್ರೆಸ್ ವೈಭವ’ ಮರುಕಳಿಸಿದೆ. ಸುವರ್ಣ ವಿಧಾನಸೌಧ, ಕಾಂಗ್ರೆಸ್ ಭವನ, ವೀರಸೌಧ ಸೇರಿದಂತೆ ಎಲ್ಲ ಕಡೆಯೂ ಪಕ್ಷದ ಧ್ವಜಗಳು, ಬ್ಯಾನರ್‌ಗಳು ರಾರಾಜಿಸುತ್ತಿವೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸುರ್ಜೇವಾಲಾ ಸೇರಿದಂತೆ ಎಲ್ಲ ನಾಯಕರು ಬೃಹತ್ ಕಟೌಟುಗಳು ಗಮನ ಸೆಳೆಯುತ್ತವೆ.

18 ಕಿ.ಮೀ ದೂರದ ಸಾಂಬ್ರಾ ವಿಮಾನ ನಿಲ್ದಾಣದಿಂದ ಅಧಿವೇಶನ ನಡೆಯಲಿರುವ ಸಿ.ಪಿಇಡಿ ಮೈದಾನದವರೆಗೂ ಕಾಂಗ್ರೆಸ್ ಬಾವುಟಗಳೇ ಹಾರಾಡುತ್ತಿವೆ. ರಸ್ತೆಗಳು, ವೃತ್ತಗಳನ್ನು ಆಕರ್ಷಕ ಸ್ವಾಗತ ಕಮಾನುಗಳಿಂದ ಅಲಂಕರಿಸಲಾಗಿದೆ. ಸುಮಾರು 2 ಲಕ್ಷಕ್ಕೂ ಹೆಚ್ಚು ಜನರನ್ನು ಸೇರಿಸಲಾಗುತ್ತಿದೆ. ಭವ್ಯವಾದ ಮಂಟಪ, ಶಾಮಿಯಾನವೂ ಸಿದ್ಧಗೊಂಡಿದೆ.

ಕಳೆದ ಡಿ.26 ಹಾಗೂ 27ರಂದು ಗಾಂಧಿ ಭಾರತ ಸಮಾವೇಶ ಆಯೋಜಿಸಲಾಗಿತ್ತು. 26ರಂದು ಕಾಂಗ್ರೆಸ್ ಕಾರ್ಯಕಾರಿಣಿ ಸಭೆ ಯಶಸ್ವಿಯಾಗಿತ್ತು. ಅದೇ ದಿನ ರಾತ್ರಿ ಮಾಜಿ ಪ್ರಧಾನಿ ಮನಮೋಹನ ಸಿಂಗ್ ಅವರು ನಿಧನರಾದ ಕಾರಣ 27ರ ಕಾರ್ಯಕ್ರಮ ರದ್ದು ಮಾಡಲಾಗಿತ್ತು. ಈಗ ಅದನ್ನೇ ಮತ್ತೆ ಆಯೋಜನೆ ಮಾಡಲಾಗಿದೆ.

ಎಲ್ಲರನ್ನೂ ಹೊರಗೆ ಕಳುಹಿಸಿ ಸಭೆ ನಡೆಸಿದ ಡಿಸಿಎಂ

ಸಚಿವ ಸತೀಶ ಜಾರಕಿಹೊಳಿ ವಿರೋಧಿ ಬಣದಲ್ಲಿ ಗುರುತಿಸಿಕೊಂಡ ಮಾಜಿ ಶಾಸಕ ಫಿರೋಜ್ ಸೇಠ್ ಮನೆಯಲ್ಲಿ ಶಿವಕುಮಾರ್ ಬೆಳಗಿನ ಉಪಾಹಾರ ಸೇವಿಸಿದರು.

ಫಿರೋಜ್ ಅವರ ಸಹೋದರ ಶಾಸಕ ಆಸಿಫ್ ಸೇಠ್, ಸಚಿವ ಎಂ.ಸಿ.ಸುಧಾಕರ, ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಕೂಡ ಉಪಾಹಾರದಲ್ಲಿ ಜತೆಗಿದ್ದರು. ಬಳಿಕ ಅವರೆಲ್ಲರನ್ನೂ ಹೊರಕ್ಕೆ ಕಳುಹಿಸಿ ಶಿವಕುಮಾರ್, ಫಿರೋಜ್ ಅವರೊಂದಿಗೆ ಗೋಪ್ಯ ಮಾತುಕತೆ ನಡೆಸಿದರು.

ಕಳೆದ ವಿಧಾನಸಭೆ ಚುನಾವಣೆಯಲ್ಲಿ ಬೆಳಗಾವಿ ಉತ್ತರ ಕ್ಷೇತ್ರದಿಂದ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್ ಸಿಗದ ಕಾರಣ ಫಿರೋಜ್ ಸೇಠ್ ಅವರು, ಸತೀಶ ವಿರುದ್ಧ ಮುನಿಸಿಕೊಂಡಿದ್ದರು. ಆದರೆ, ಟಿಕೆಟ್ ಪಡೆದು ಗೆದ್ದ ಅವರ ಸಹೋದರ ಆಸಿಫ್ ಅವರು ಸತೀಶ್ ಬೆಂಬಲಿಗರಲ್ಲಿ ಗುರುತಿಸಿಕೊಂಡಿದ್ದಾರೆ.

‘15 ಶಾಸಕರು ದುಬೈ ಪ್ರವಾಸಕ್ಕೆ ಹೋಗುತ್ತೇವೆ’ ಎಂಬ ಹೇಳಿಕೆ ನೀಡಿದ ಶಾಸಕ ಆಸಿಫ್ ಅವರು ಶಿವಕುಮಾರ್ ಕೆಂಗಣ್ಣಿಗೂ ಗುರಿಯಾಗಿದ್ದಾರೆ. ಈ ವಿಚಾರವಾಗಿ ಶಿವಕುಮಾರ್ ಶಾಸಕರಿಗೆ ಕಾರಿನಲ್ಲೇ ‘ಕ್ಲಾಸ್’ ತೆಗೆದುಕೊಂಡಿದ್ದಾರೆ ಎಂದು ಮೂಲಗಳು ಖಚಿತಪಡಿಸಿವೆ.

ಸತೀಶ– ಶಿವಕುಮಾರ್ ಮುಖಾಮುಖಿ

ಬೆಳಗಾವಿ: ಕಳೆದ ಮೂರು ದಿನಗಳಿಂದ ನಗರದಲ್ಲೇ ಇದ್ದರೂ ಡಿ.ಕೆ.ಶಿವಕುಮಾರ್ ಹಾಗೂ ಸತೀಶ ಜಾರಕಿಹೊಳಿ ಪರಸ್ಪರ ಭೇಟಿಯಾಗಿರಲಿಲ್ಲ. ಮುಖ ಕೊಟ್ಟು ಮಾತನಾಡದಷ್ಟು ಮುನಿಸಿಕೊಂಡಿದ್ದರು. ಭಾನುವಾರ ಇಬ್ಬರೂ ಪತ್ರಿಕಾ ಗೋಷ್ಠಿಗೆ ಬಂದು ಮಾಧ್ಯಮದ ಮುಂದೆ ‘ಪೋಸ್’ ಕೊಟ್ಟರು. ಸಿಪಿಇಡಿ ಮೈದಾನದಲ್ಲಿ ನಿರ್ಮಿಸಿದ ಬೃಹತ್ ವೇದಿಕೆಯ ಅಂತಿಮ ಹಂತದ ಸಿದ್ಧತೆ ಪರಿಶೀಲಿಸುವಾಗ ಹಸ್ತಲಾಘವ ಮಾಡುವ ಜತೆಗೆ, ಅಕ್ಕ-ಪಕ್ಕದಲ್ಲೇ ಕುಳಿತು ಸಮಾವೇಶದ ವಿಡಿಯೊ ಟೀಸರ್ ವೀಕ್ಷಿಸಿದರು. ಸಚಿವರಾದ ಜಮೀರ್ ಅಹಮದ್ ಖಾನ್, ಎಂ.ಸಿ. ಸುಧಾಕರ, ಮಾಜಿ ಸಂಸದ ಡಿ.ಕೆ.ಸುರೇಶ ಇತರರಿದ್ದರು.

‘ಕರ್ನಾಟದಲ್ಲಿ ಜಾತಿಗಣತಿ ದತ್ತಾಂಶ ಬಿಡುಗಡೆ ಮಾಡಿಲ್ಲ’

ನವದೆಹಲಿ (ಪಿಟಿಐ): ಜಾತಿ ಗಣತಿ ವಿಚಾರದಲ್ಲಿ ರಾಹುಲ್ ಗಾಂಧಿ ಅವರು ದ್ವಂದ್ವ ನಿಲುವು ಹೊಂದಿದ್ದಾರೆ ಎಂದು ಜನತಾ ದಳ (ಜೆಡಿಯು) ಭಾನುವಾರ ಆರೋಪಿಸಿದೆ.

ಕರ್ನಾಟಕದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಜಾತಿಗಣತಿ ದತ್ತಾಂಶವನ್ನು ಏಕೆ ಬಿಡುಗಡೆ ಮಾಡಿಲ್ಲ ಎಂದು ಪ್ರಶ್ನಿಸಿದೆ.

ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ‘ಇಂಡಿಯಾ’ ಗುಂಪಿನ ಸಭೆಯಲ್ಲಿ ಜಾತಿ ಗಣತಿ ವಿಷಯ ಪ್ರಸ್ತಾಪಿಸಿದಾಗ ರಾಹುಲ್ ಗಾಂಧಿ ಅವರು ಮೌನ ವಹಿಸಿದ್ದರು ಎಂದು ಹೇಳಿದೆ.

ಜೆಡಿಯು ಕಾರ್ಯಾಧ್ಯಕ್ಷ ಸಂಜಯ್ ಝಾ ಅವರು, ‘ನಿತೀಶ್ ಅವರು ಜಾತಿಗಣತಿ ಪರವಾಗಿ ಮಾತನಾಡುವಾಗ ರಾಹುಲ್ ಮೌನ ವಹಿಸಿದ್ದರು. ಈಗ ಬಿಹಾರ ಸರ್ಕಾರ ನಡೆಸಿದ ಜಾತಿಗಣತಿ ನಕಲಿ ಎಂದು ಹೇಳುತ್ತಿದ್ದಾರೆ. ಇದಕ್ಕಿಂತ ಬೂಟಾಟಿಕೆ ಮತ್ತೊಂದಿಲ್ಲ’ ಎಂದರು.

‘ಇಸ್ರೇಲ್ ತಂತ್ರ ಭಾರತವೂ ಅನುಸರಿಸಲಿ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಹಿಂದೂ ವಿರೋಧಿಗಳನ್ನು, ಭಯೋತ್ಪಾದಕರನ್ನು ಹೊಡೆದುರುಳಿಸಲು ಇಸ್ರೇಲ್ ಅನುಸರಿಸಿದ ತಂತ್ರವನ್ನೇ ಭಾರತವೂ ಅನುಸರಿಸಬೇಕಿದೆ’ ಎಂದು ಬಿಜೆಪಿ ರಾಷ್ಟ್ರೀಯ ಪ್ರವರ್ತಕಿ, ತ್ರಿವಳಿ ತಲಾಖ್ ವಿರೋಧಿ ಮುಂಚೂಣಿ ಹೋರಾಟಗಾರ್ತಿ ನಾಜಿಯಾ ಅಲಿಖಾನ್ ಹೇಳಿದರು.

‘ಹಿಂದೂಪರ ಕಾರ್ಯಕರ್ತರ ಸಂಘಟನೆ’ ವತಿಯಿಂದ ತಾಲ್ಲೂಕಿನ ಸುಳೇಭಾವಿ ಗ್ರಾಮದಲ್ಲಿ ಭಾನುವಾರ ಆಯೋಜಿಸಿದ್ದ ‘ಭಟೇಂಗೆ ತೋ ಕಟೇಂಗೆ; ಏಕ್ ಹೈ ತೋ ಸೇಫ್ ಹೈ (ಒಡಕಾದರೆ ಕೆಡುಕು;ಒಂದಾದರೆ ರಕ್ಷಣೆ)’ 28ನೇ ವರ್ಷದ ಸಮಾವೇಶದಲ್ಲಿ ಅವರು ಮಾತನಾಡಿದರು.

‘ಇಸ್ಲಾಂನಲ್ಲಿ ವೈವಾಹಿಕ ಸಂಬಂಧಗಳು ತೀರ ವಿಚಿತ್ರ. ಅಲ್ಲಿ ಹೆಣ್ಣಿನ ಶೋಷಣೆಯಿದೆ. ಇದಕ್ಕೆ ನನ್ನ ಧಿಕ್ಕಾರವಿದೆ. ಮುಸ್ಲಿಂ ಯುವಕರ ಮೇಲೆ ಮುಸ್ಲಿಂ ಯುವತಿಯರು ನಂಬಿಕೆ ಕಳೆದುಕೊಂಡಿದ್ದಾರೆ. ಇಷ್ಟು ವರ್ಷ ತ್ರಿವಳಿ ತಲಾಖ್‌ನಿಂದ ಶೋಷಣೆಗೆ ಒಳಗಾದರು. ಈಗ ಬಹು ಪತ್ನಿತ್ವಕ್ಕೆ ಬೇಸತ್ತಿದ್ದಾರೆ. ಮುಸ್ಲಿಂ ಹೆಣ್ಣುಮಕ್ಕಳಿಗೆ ನಾನು ಕರೆ ಕೊಡುತ್ತೇನೆ; ನೀವು ನಮ್ಮ ಹಿಂದೂ ಯುವಕರನ್ನು ಮದುವೆಯಾಗಿರಿ. ಹಿಂದೂ ಹುಡುಗರನ್ನು ಮದುವೆಯಾದರೂ ನಿಮಗೆಲ್ಲ ‘ಮಧುಚಂದ್ರ’ದ ಆಫರ್ ಕೊಡುತ್ತೇವೆ’ ಎಂದೂ ನಾಜಿಯಾ ಅಲಿಖಾನ್ ಹೇಳಿದರು.

‘ನೀವು ಈದ್‌ಗಳಿಗೆ ಹೋಗಿ ಶೀರ್‌ಕುರ್ಮಾ ಕುಡಿಯುತ್ತೀರಿ. ಶೀರ್‌ಕುರ್ಮಾಗೆ ಹಾಲು ಕೊಟ್ಟ ಗೋಮಾತೆಯನ್ನೇ ಅವರು ಕಡಿಯುತ್ತಾರೆ. ನನ್ನ ಮೇಲೆ ನನ್ನ ದೇವರ ಮೇಲೆ ನಂಬಿಕೆ ಇಲ್ಲದವರಿಗೆ ದೇವಸ್ಥಾನದ ಬಳಿ ಏಕೆ ವ್ಯಾಪಾರಕ್ಕೆ ಬಿಡಬೇಕು’ ಎಂದೂ ಪ್ರಶ್ನಿಸಿದರು.

ಮುಂಬೈನ ‘ಜಾತಿ ಹಠಾವೋ ಧರ್ಮ ಬಚಾವೋ’ ಆಂದೋಲನದ ರೂವಾರಿ ಜಿತೇಂದ್ರಾನಂದ ಸರಸ್ವತಿ ಸ್ವಾಮೀಜಿ ಉಪಸ್ಥಿತರಿದ್ದರು.



ಬೆಳಗಾವಿ ತಾಲ್ಲೂಕಿನ ಸುಳೇಬಾವಿಯಲ್ಲಿ ಭಾನುವಾರ ಆಯೋಜಿಸಿದ್ದ ‘ಭಟೇಂಗೆ ತೋ ಕಟೇಂಗೆ; ಏಕ್ ಹೈ ತೋ ಸೇಫ್ ಹೈ (ಒಡಕಾದರೆ ಕೆಡುಕು; ಒಂದಾದರೆ ರಕ್ಷಣೆ)’ 28ನೇ ವರ್ಷದ ಸಮಾವೇಶದಲ್ಲಿ ನಾಜಿಯಾ ಅಲಿಖಾನ್ ಮಾತನಾಡಿದರು – ಪ್ರಜಾವಾಣಿ ಚಿತ್ರ

ನಾನು ಕಟ್ಟಾ ಸನಾತನಿ. ನಾನು ಅಲ್ಲಾಹನನ್ನು ಬಿಟ್ಟು ರಾಮನನ್ನು ಪೂಜಿಸುತ್ತೇನೆ. ಮದುವೆಯಾದರೂ ಸನಾತನಿ ಯುವಕನನ್ನೇ ಆಗುತ್ತೇನೆ
ನಾಜಿಯಾ ಅಲಿಖಾನ್
ಬಿಜೆಪಿ ರಾಷ್ಟ್ರೀಯ ಪ್ರವರ್ತಕಿ

‘ಶರಣರ ಎಚ್ಚರ, ಸೂಫಿಗಳ ಪ್ರೀತಿ ಅಗತ್ಯ’

‘ಬಹುತ್ವ ಸಂಸ್ಕೃತಿ ಭಾರತೋತ್ಸವ’ದಲ್ಲಿ ಸಂಸ್ಕೃತಿ ಚಿಂತಕ ರಹಮತ್ ತರೀಕೆರೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಬಹುತ್ವ ಭಾರತವನ್ನು ಕಟ್ಟುವ ಆಲೋಚನೆ ಮಾಡಿದ್ದ ಸ್ವಾಮಿ ವಿವೇಕಾನಂದ, ಬಸವಣ್ಣ, ಶಿವಾಜಿ ಮಹಾರಾಜ, ಭಗತ್ ಸಿಂಗ್, ಸುಭಾಷ್ ಚಂದ್ರ ಬೋಸ್ ಅವರನ್ನು ಕೋಮುವಾದಿಗಳು ತಮ್ಮ ತೆಕ್ಕೆಗೆ ತೆಗೆದುಕೊಂಡಿದ್ದಾರೆ. ಆ ಎಲ್ಲ ಪ್ರಮಥರನ್ನು ನಾವು ಮರಳಿ ಪಡೆದು ಬಹುತ್ವ ಭಾರತ ಕಟ್ಟಬೇಕಿದೆ’ ಎಂದು ಸಂಸ್ಕೃತಿ ಚಿಂತಕ ರಹಮತ್ ತರೀಕೆರೆ ಹೇಳಿದರು.

ನಗರದಲ್ಲಿ ಭಾನುವಾರ ಸೌಹಾರ್ದ ಕರ್ನಾಟಕ ಸಂಘಟನೆ ಆಯೋಜಿಸಿದ್ದ ‘ಬಹುತ್ವ ಸಂಸ್ಕೃತಿ ಭಾರತೋತ್ಸವ’ ಸಮಾವೇಶದಲ್ಲಿ ಮಾತನಾಡಿದ ಅವರು, ‘ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ವಶಪಡಿಸಿಕೊಳ್ಳದಂತೆ ನೋಡಿಕೊಳ್ಳಬೇಕು. ಅವರ ಜೀತದಾಳಾಗಿ ದುಡಿಯುತ್ತಿರುವ ನಮ್ಮ ಯುವಕರು ಹಾಗೂ ಪರಂಪರೆಯನ್ನು ಸುಪರ್ದಿಗೆ ಪಡೆಯಬೇಕು. ಅದಕ್ಕಾಗಿ ನಮ್ಮಲ್ಲಿ ಶರಣರ ಎಚ್ಚರ, ಸೂಫಿಗಳ ಪ್ರೀತಿ, ತತ್ವಪದಕಾರರ ಅಧ್ಯಾತ್ಮ, ಅಂಬೇಡ್ಕರ್ ಅವರ ಸಂವಿಧಾನ ಮತ್ತು ಬುದ್ಧನ ಕರುಣೆ, ಮೈತ್ರಿ ಬರಬೇಕು’ ಎಂದರು.

‘ಕಾಳ್ಗಿಚ್ಚನ್ನು ನಂದಿಸಿ ಬೂದಿಯಾದ ನೆಲದಲ್ಲಿ ಗಿಡಗಳನ್ನು ನೆಡಬಹುದು. ಆದರೆ, ಸಂಸ್ಕೃತಿ, ದೇಶ ಭಕ್ತಿ ಮತ್ತು ರಾಷ್ಟ್ರದ ಹೆಸರಿನಲ್ಲಿ ಹಚ್ಚುವ ಕಾಳ್ಗಿಚ್ಚನ್ನು ಆರಿಸುವುದು ಬಹಳ ಕಷ್ಟ. ಎಲ್ಲ ಧರ್ಮಗಳ ನದಿಗಳ ಮೂಲಕ ಆ ಕಾಳ್ಗಿಚ್ಚನ್ನು ತಣಿಸಿ, ಬೂದಿಯಾದ ಜಾಗದಲ್ಲಿ ಹೊಸ ಗಿಡ ನೆಡಬೇಕಿದೆ’ ಎಂದು ಹೇಳಿದರು.

ಪತ್ರಕರ್ತ ದಿನೇಶ್ ಅಮಿನ್ ಮಟ್ಟು ಮಾತನಾಡಿ, ‘ನಾಗಪುರದಲ್ಲಿ 100 ವರ್ಷಗಳ ಹಿಂದೆ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಸ್ಥಾಪನೆ ಆಗಿತ್ತು. ಅದರ ಬಗ್ಗೆ ಎಚ್ಚೆತ್ತುಕೊಂಡಿದ್ದ ಅಂಬೇಡ್ಕರ್ ಅವರು ಆರ್‌ಎಸ್‌ಎಸ್ ಹುಟ್ಟಿದ ಎರಡು ವರ್ಷಗಳಲ್ಲಿಯೇ ಮನುಸ್ಮೃತಿಯನ್ನು ಸುಟ್ಟು ಹಾಕಿದ್ದರು. ಆ ಬೂದಿಯಿಂದ ಮನುಸ್ಮೃತಿ ಮತ್ತೆ ಎದ್ದೇಳುವ ಪ್ರಯತ್ನ ಮಾಡುತ್ತಿದೆ’ ಎಂದರು.

‘100 ವರ್ಷಗಳು ನಾವು ನಿದ್ರೆ ಮಾಡಿದ್ದರಿಂದಾಗಿ ಇವತ್ತು ನಾಗಪುರದ ನಾಜಿಗಳು ತಮ್ಮ ಮುಖವಾಡಗಳ ಮೂಲಕ ಕಲಬುರಗಿಯಲ್ಲಿ ಮನುಸ್ಮೃತಿಯನ್ನು ಮರುಸ್ಥಾಪನೆ ಮಾಡಲು ದೊಡ್ಡಮಟ್ಟದ ಕಾರ್ಯಕ್ರಮ ಆಯೋಜಿಸಿದ್ದಾರೆ. ಬುದ್ಧ, ಅಂಬೇಡ್ಕರ್, ಫುಲೆ, ಕನಕದಾಸ, ನಾರಾಯಣಗುರು ಅವರನ್ನು ಮುಂದಿಟ್ಟುಕೊಂಡು, ಅವರ ಚಿಂತನೆಗಳನ್ನು ಆವಾಹಿಸಿಕೊಂಡು ಯುದ್ಧದ ಕಣಕ್ಕೆ ಇಳಿಯಬೇಕಿದೆ’ ಎಂದರು.

ಸಾಹಿತಿ ಎಸ್.ಜಿ.ಸಿದ್ದರಾಮಯ್ಯ ಮಾತನಾಡಿ, ‘ಭಾರತೀಯ ಸಂಸ್ಕೃತಿ ಉತ್ಸವದಲ್ಲಿ ಪಾಲ್ಗೊಳ್ಳುವ ಮುನ್ನ ಲಿಂಗಾಯತರು ಲಿಂಗವನ್ನು ಬಿಚ್ಚಿಟ್ಟು ಹೋಗಬೇಕು. ಬಸವಣ್ಣ, ಅಂಬೇಡ್ಕರ್ ಅವರ ಹೆಸರನ್ನು ಉಚ್ಚರಿಸಬಾರದು. ಇಲ್ಲದಿದ್ದರೆ ಅವರು ಕುಲ ಕಂಟಕರು, ಬಸವ, ಅಂಬೇಡ್ಕರ್ ದ್ರೋಹಿಗಳು ಎಂಬ ಸಂದೇಶ ಕೊಡಬೇಕಾಗುತ್ತದೆ’ ಎಂದರು.



ಕಲಬುರಗಿಯಲ್ಲಿ ಭಾನುವಾರ ಬುಹುತ್ವ ಸಂಸ್ಕೃತಿ ಭಾರತೋತ್ಸವದ ಅಂಗವಾಗಿ ನಡೆದ ಮೆರವಣಿಗೆಯಲ್ಲಿ ವಿವಿಧ ಮಠಾಧೀಶರು, ಪ್ರಗತಿಪರ ಚಿಂತಕರು ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ರೋಹಿತ್ ವೇಮುಲ ಅವರ ತಾಯಿ ರಾಧಿಕಾ ಪ್ರತಿಪಾದನೆ

‘ತಾರತಮ್ಯ ರಹಿತ ಶಿಕ್ಷಣಕ್ಕಾಗಿ ರೋಹಿತ್ ಕಾಯ್ದೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜಾತಿ ತಾರತಮ್ಯ, ಶೋಷಣೆ, ನಿಂದನೆ ಇಲ್ಲದೇ ಎಲ್ಲರಿಗೂ ಶಿಕ್ಷಣ, ಅವಕಾಶ ಸಿಗುವಂತೆ ರೋಹಿತ್ ಕಾಯ್ದೆ ರೂಪಿಸಬೇಕು’ ಎಂದು ರೋಹಿತ್ ವೇಮುಲ ಅವರ ತಾಯಿ ರಾಧಿಕಾ ವೇಮುಲ ಭಾನುವಾರ ಇಲ್ಲಿ ಪ್ರತಿಪಾದಿಸಿದರು.

ಅವರು, ‘ರೋಹಿತ್ ಕಾಯ್ದೆಗೆ ಜನಾಂದೋಲನ’ ಏರ್ಪಡಿಸಿದ್ದ ‘ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ದಲಿತ ವಿದ್ಯಾರ್ಥಿಗಳ ಮೇಲಿನ ದೌರ್ಜನ್ಯಗಳು’ ಕುರಿತು ಸಮಾಲೋಚನಾ ಸಭೆಯಲ್ಲಿ ಮಾತನಾಡಿದರು.

‘ಎಲ್ಲ ಮಕ್ಕಳು ನನಗೆ ರೋಹಿತ್ ತರಹ ಕಾಣುತ್ತಿದ್ದಾರೆ. ರೋಹಿತ್‌ಗೆ ಆದ ಅನ್ಯಾಯ ಯಾರಿಗೂ ಆಗಬಾರದು. ರೋಹಿತ್ ವೈದ್ಯನಾಗಬೇಕು ಎಂದು ಕನಸು ಕಂಡಿದ್ದ. ಪಿಎಚ್‌ಡಿ ಮಾಡು ಎಂದು ಹೇಳಿದ್ದೆ. ಆರ್ಥಿಕ ತೊಂದರೆಯಿಂದ ಕಾಲೇಜು ಅರ್ಧದಲ್ಲಿ ಬಿಟ್ಟು ಕೆಲಸ ಮಾಡುತ್ತಿದ್ದ. ಮತ್ತೆ ಓದು ಮುಂದುವರಿಸುವಂತೆ ಮಾಡಿದ್ದೆ. ಆದರೆ, ವಿಶ್ವವಿದ್ಯಾಲಯದೊಳಗಿನ ಜಾತಿ ವ್ಯವಸ್ಥೆ, ಎಬಿವಿಪಿಯಂಥ ಸಂಘಟನೆಗಳು ಅವನನ್ನು ಬಲಿ ತೆಗೆದುಕೊಂಡವು’ ಎಂದು ನೆನಪು ಮಾಡಿಕೊಂಡರು.

ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಮಾತನಾಡಿ, ‘ಜಾತಿ ತಾರತಮ್ಯ ಇರಬಾರದು ಎಂದು ನಾವು ಒಂದು ಕಡೆ ರೋಹಿತ್ ಕಾಯ್ದೆಗೆ ಒತ್ತಾಯಿಸುತ್ತಿದ್ದರೆ, ಇನ್ನೊಂದೆಡೆ ಕೆಲವರು ಸಮಾಜವನ್ನು ಹಿಂದಕ್ಕೆ ಒಯ್ಯುತ್ತಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಕೆಲವು ಪಕ್ಷಗಳು ಹೊರನೋಟಕ್ಕೆ ಭಾರಿ ಪ್ರಗತಿಪರವಾಗಿರುವಂತೆ ಕಂಡರೂ ಅದರೊಳಗಿದ್ದವರು ವ್ಯವಸ್ಥಿತವಾಗಿ ಬ್ರಾಹ್ಮಣ್ಯ, ಬಂಡವಾಳಶಾಹಿ ಜಾರಿಗೆ ತರುವವರೇ ಆಗಿದ್ದಾರೆ’ ಎಂದು ಟೀಕಿಸಿದರು.

ವಿಜ್ಞಾನ ಶಿಕ್ಷಕ ವಿಕಾಸ್ ಆರ್. ಮೌರ್ಯ ಅವರು, ‘ಎಸ್‌ಸಿ-ಎಸ್‌ಟಿ ವಿದ್ಯಾರ್ಥಿಗಳಲ್ಲಿ ಶೇ 72ರಷ್ಟು ಮಂದಿ ಜಾತಿ ತಾರತಮ್ಯ, ನಿಂದನೆ ಅನುಭವಿಸುತ್ತಿದ್ದಾರೆ. ರೋಹಿತ್ ವೇಮುಲರಂತೆ 122 ವಿದ್ಯಾರ್ಥಿಗಳು ಈ ರೀತಿ ಜೀವ ಕಳೆದುಕೊಂಡಿದ್ದಾರೆ’ ಎಂದರು.

ರೋಹಿತ್‌ನ ಸಹಪಾಠಿ ದೊಂತ ಪ್ರಶಾಂತ್, ‘ರೋಹಿತ್ ಕಾಯ್ದೆಗಾಗಿ ಜನಾಂದೋಲನ’ದ ಲೇಖಾ ಅವರು ಕಾಯ್ದೆಯ ಸ್ವರೂಪದ ಬಗ್ಗೆ ವಿವರಿಸಿದರು.

ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ ವಿದ್ಯಾರ್ಥಿಯಾಗಿದ್ದ ರೋಹಿತ್ ಚಕ್ರವರ್ತಿ ವೇಮುಲ 2016ರಲ್ಲಿ ಆತ್ಮಹತ್ಯೆಗೆ ಶರಣಾಗಿದ್ದರು. ಎಬಿವಿಪಿ ಜೊತೆಗಿನ ತಿಕ್ಕಾಟ ಇದಕ್ಕೆ ಕಾರಣ ಎನ್ನಲಾಗಿದ್ದು, ಚರ್ಚೆಗೆ ಆಸ್ಪದವಾಗಿತ್ತು.



ರೋಹಿತ್ ವೇಮುಲ ಬರೆದ ಕೊನೇ ಪತ್ರವನ್ನು ‘ರೋಹಿತ್ ಕಾಯ್ದೆಗಾಗಿ ಜನಾಂದೋಲನ’ದ ಕಾರ್ಯಕ್ರಮದಲ್ಲಿ ವಾಚಿಸುವ ಸಮಯದಲ್ಲಿ ರಾಧಿಕಾ ವೇಮುಲ ಅವರು ಕಣ್ಣೀರಿಟ್ಟರು. ಶಿಕ್ಷಕ ವಿಕಾಸ್ ಆರ್. ಮೌರ್ಯ, ದಲಿತ ಸಂಘರ್ಷ ಸಮಿತಿ ರಾಜ್ಯ ಸಂಘಟನಾ ಸಂಚಾಲಕ ಮಾವಳ್ಳಿ ಶಂಕರ್, ಆಂದೋಲನದ ಲೇಖಾ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಗದ್ಗದಿತರಾದ ರಾಧಿಕಾ

ರೋಹಿತ್ ಅವರು ಬರೆದ ಕೊನೆಯ ಪತ್ರವನ್ನು ಲಕ್ಷ್ಮಣ್ ಅವರು ಓದುವಾಗ ರಾಧಿಕಾ ವೇಮುಲ ಅವರು ವೇದಿಕೆ ಮೇಲೆ ಕುಳಿತುಕೊಂಡೇ ಕಣ್ಣೀರು ಸುರಿಸಿದರು. ಬಳಿಕ ಮಾತನಾಡುವಾಗಲೂ ಮಗನಿಗೆ ಎದುರಾದ ಸವಾಲು, ಸಮಸ್ಯೆ ನೆನೆದು ಗದ್ಗದಿತರಾದರು. ‘ಮಗನನ್ನು ಡಾ. ರೋಹಿತ್ ವೇಮುಲ ಚಕ್ರವರ್ತಿ ಎಂದೇ ಎಲ್ಲರೂ ಕರೆಯಬೇಕು ಎಂಬುದು ನನ್ನ ಕನಸಾಗಿತ್ತು’ ಎಂದು ನೆನಪು ಮಾಡಿಕೊಂಡು ದುಃಖಿತರಾದರು.

ಟೆಕಿಗೆ ₹2.5 ಕೋಟಿ ವಂಚನೆ; ಸಿಮ್ ಹಾಕುತ್ತಿದ್ದಂತೆ ಹಣ ಮಾಯ

ಮೊಬೈಲ್ ಗಿಫ್ಟ್ ನೀಡಿ ಹಣ ಲೂಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರೆಡಿಟ್ ಕಾರ್ಡ್ ಮಂಜೂರಾಗಿದೆ ಎಂದು ನಂಬಿಸಿದ ಸೈಬರ್ ವಂಚಕರು ಮೊಬೈಲ್ ಫೋನ್ ಉಡುಗೊರೆಯಾಗಿ ಕಳುಹಿಸಿ ಸಾಫ್ಟ್‌ವೇರ್ ಉದ್ಯೋಗಿಯೊಬ್ಬರ ಖಾತೆಯಿಂದ ₹2.8 ಕೋಟಿ ದೋಚಿರುವ ಘಟನೆ ನಗರದಲ್ಲಿ ವರದಿಯಾಗಿದೆ.

ಖಾಸಗಿ ಬ್ಯಾಂಕ್ ಪ್ರತಿನಿಧಿಗಳ ಹೆಸರಿನಲ್ಲಿ ಮೊಬೈಲ್ ಫೋನ್ ಕಳುಹಿಸಿ ವಂಚಿಸಿರುವ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಂತ್ರಸ್ತ ವ್ಯಕ್ತಿ ನೀಡಿದ ದೂರು ಆಧರಿಸಿ ವೈಟ್‌ಫೀಲ್ಡ್ ಸಿಇಎನ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

ವಂಚಕರು ಕಳಿಸಿದ್ದ ಮೊಬೈಲ್ ವಶಕ್ಕೆ ಪಡೆದಿರುವ ಪೊಲೀಸರು, ಹಣ ವರ್ಗಾವಣೆಯಾದ ಖಾತೆಗಳ ವಿವರ ಕಲೆಹಾಕುತ್ತಿದ್ದಾರೆ.

‘ನವೆಂಬರ್‌ನಲ್ಲಿ ಟೆಕಿಗೆ ಕರೆ ಮಾಡಿದ್ದ ವಂಚಕರು, ‘ನಿಮ್ಮ ರಿವಾರ್ಡ್ ಪಾಯಿಂಟ್ಸ್ ಉತ್ತಮವಾಗಿದೆ. ಕ್ರೆಡಿಟ್ ಕಾರ್ಡ್ ಆಫರ್ ಮಾಡುತ್ತಿದ್ದೇವೆ’ ಎಂದಿದ್ದರು. ಬಳಿಕ ಸಿಮ್ ಕಾರ್ಡ್ ಖರೀದಿಸಿ ನಂಬರ್ ನೀಡಲು ತಿಳಿಸಿದ್ದರು. ಡಿಸೆಂಬರ್‌ನಲ್ಲಿ ಹೊಸ ಫೋನ್ ಕಳುಹಿಸಿದ್ದರು’ ಎಂದು ಪೊಲೀಸರು ತಿಳಿಸಿದರು.

‘ವಂಚಕರು ಕಳುಹಿಸಿದ್ದ ಮೊಬೈಲ್ ಫೋನ್‌ಗೆ ಟೆಕಿ ತಾವು ಖರೀದಿಸಿದ್ದ ಹೊಸ ಸಿಮ್ ಕಾರ್ಡ್ ಹಾಕಿ ಬಳಸಲಾರಂಭಿಸಿದ್ದಾರೆ. ಹೊಸ ಸಿಮ್ ಕಾರ್ಡ್ ಆ್ಯಕ್ಟಿವೇಟ್ ಆಗುತ್ತಿದ್ದಂತೆ ಕ್ಲೋನಿಂಗ್ ಮತ್ತು ಆ್ಯಪ್ ಹಾಕಿದ್ದ ವಂಚಕರು ಅದರಿಂದ ಅಗತ್ಯ ಮಾಹಿತಿ ಪಡೆದು, ಹಣ ವಂಚಿಸಿದ್ದರು. ವಾರದ ಬಳಿಕ ನಿಶ್ಚಿತ ಠೇವಣಿ (ಎಫ್.ಡಿ) ಖಾತೆಯಲ್ಲಿ ಹಣ ಕಡಿತ ಆಗಿರುವುದನ್ನು ಗಮನಿಸಿದ ದೂರುದಾರರು, ಬ್ಯಾಂಕ್‌ಗೆ ತೆರಳಿ ವಿಚಾರಿಸಿದಾಗ ಹಣ ವಂಚಕರ ಪಾಲಾಗಿರುವುದು ಗೊತ್ತಾಗಿದೆ’ ಎಂದು ಹೇಳಿದರು.

‘ವಂಚನೆ ಉದ್ದೇಶದಿಂದ ಆ್ಯಪ್‌ಗಳನ್ನು ಮೊಬೈಲ್‌ಗಳಲ್ಲಿ ಇನ್‌ಸ್ಟಾಲ್ ಮಾಡಿ ಅವುಗಳನ್ನೇ ವಂಚಕರು ಬ್ಯಾಂಕ್ ಹೆಸರಲ್ಲಿ ಜನರಿಗೆ ಉಡುಗೊರೆ ಕಳುಹಿಸುತ್ತಾರೆ. ಆ ಮೊಬೈಲ್‌ಗೆ ಸಿಮ್ ಹಾಕಿದ ನಂತರ ಬ್ಯಾಂಕ್ ಖಾತೆಯಿಂದ ಹಣ ದೋಚುತ್ತಾರೆ. ಹಣ ಕಡಿತವಾದ ಸಂದೇಶ ಬರದಂತೆ ಮಾಡುತ್ತಾರೆ’ ಎಂದರು.

ಉಚಿತ ಕೊಡುಗೆ ಬಗ್ಗೆ ಎಚ್ಚರ: ಡಿಸಿಪಿ

ಅಪರಿಚಿತ ವ್ಯಕ್ತಿಗಳು ಕಳುಹಿಸುವ ಯಾವುದೇ ಉಚಿತ ಕೊಡುಗೆಗಳನ್ನು ಬಳಸಬಾರದು. ಈ ಬಗ್ಗೆ ಸಾರ್ವಜನಿಕರು ಎಚ್ಚರದಿಂದ ಇರಬೇಕು ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಶಿವಕುಮಾರ್ ಗುಣಾರೆ ತಿಳಿಸಿದ್ದಾರೆ.

‘ಸೈಬರ್ ವಂಚಕರು ಮೊಬೈಲ್ ಕಳುಹಿಸಿ ನಿರಂತರವಾಗಿ ಫೋನ್‌ನಲ್ಲಿ ಸಂಪರ್ಕದಲ್ಲಿರುತ್ತಾರೆ. ಫೋನ್‌ಗೆ ಸಿಮ್ ಕಾರ್ಡ್ ಹಾಕಿ, ಮಾಹಿತಿ ಅಪ್‌ಲೋಡ್ ಮಾಡಲು ಸೂಚಿಸುತ್ತಾರೆ. ಮಾಹಿತಿ ಹಾಕಿದ ಬಳಿಕ, ಬ್ಯಾಂಕ್‌ನಿಂದ ಒಟಿಪಿ ನೇರ ವಂಚಕರಿಗೆ ಹೋಗಿ, ಹಣ ಕಳೆದುಕೊಳ್ಳುತ್ತೀರಿ’ ಎಂದು ಎಚ್ಚರಿಸಿದ್ದಾರೆ.

ಸೋಮವಾರ, ಜನವರಿ 20, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 20 | ಪುಟ 14


● www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಕೈಬರಹಕ್ಕೂ ಕ್ರಿಯಾಶೀಲತೆಗೂ ಪರಸ್ಪರ ಸಂಬಂಧವಿದೆ



ಕೆಲವು ನಿಗಮಗಳಿಗೆ ಬಿಡಿಗಾಸೂ ಇಲ್ಲ ● ಹಲವು ನಿಗಮಗಳಿಗೆ ಅತ್ಯಲ್ಪ ಮೊತ್ತ ಬಿಡುಗಡೆ

ಅನುದಾನ ಇಲ್ಲ: ಸಾಧನೆ ಸೊನ್ನೆ

● ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯ ಸರ್ಕಾರ 2024–25ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಸಮುದಾಯ ಹಾಗೂ ಜಾತಿ ಆಧಾರಿತ ಅಭಿವೃದ್ಧಿ ನಿಗಮಗಳಿಗೆ ಕೋಟ್ಯಂತರ ರೂಪಾಯಿ ಅನುದಾನ ಮೀಸಲಿಟ್ಟಿದೆ. ಆದರೆ, ಪ್ರಸಕ್ತ ಆರ್ಥಿಕ ವರ್ಷದ ಅಂತ್ಯಕ್ಕೆ ತಲುಪಿದರೂ ಹಲವು ನಿಗಮಗಳಿಗೆ ಹಂಚಿಕೆ ಮಾಡಿರುವ ಅನುದಾನ ಬಿಡುಗಡೆಯೇ ಆಗಿಲ್ಲ. ಕೆಲವೇ ನಿಗಮಗಳಿಗೆ ಅಲ್ಪ ಮೊತ್ತವಷ್ಟೇ ಬಿಡುಗಡೆ ಆಗಿದೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ರಾಜ್ಯಮಟ್ಟದ 'ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ-ಗಳು' (ಕೆಡಿಪಿ) ಸಭೆಗೆ ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಡಿಸೆಂಬರ್ ಅಂತ್ಯದ ವರೆಗಿನ ವಿವಿಧ ನಿಗಮಗಳ ಪ್ರಗತಿ ವರದಿ ಸಲ್ಲಿಸಿದ್ದಾರೆ. ಈ ವರದಿಯಲ್ಲಿ ಮಾಹಿತಿ ಬಹಿರಂಗವಾಗಿದೆ.

ಆರ್ಥಿಕ ವರ್ಷದ ಒಂಬತ್ತು ತಿಂಗಳು ಕಳೆದರೂ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಒಕ್ಕಲಿಗರ ಸಮುದಾಯ ಅಭಿವೃದ್ಧಿ ನಿಗಮ, ಉಪ್ಪಾರ ಅಭಿವೃದ್ಧಿ ನಿಗಮ, ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ, ಬಿಲ್ಲವ/ಈಡಿಗ ಸಮುದಾಯದ ಸಮಗ್ರ ಅಭಿವೃದ್ಧಿಗಾಗಿ ರಚಿಸಿರುವ ವಿಶೇಷ ಕೋಶ, ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ, ವಿಶ್ವಕರ್ಮ ಅಭಿವೃದ್ಧಿ ನಿಗಮಗಳಿಗೆ ಹಂಚಿಕೆಯಾದ ಅನುದಾನದಲ್ಲಿ ಬಿಡಿಗಾಸೂ ಬಿಡುಗಡೆ ಆಗಿಲ್ಲ.

9ನೇ ಪುಟ ನೋಡಿ

ನಿಗಮವಾರು ಅನುದಾನ ಹಂಚಿಕೆ ವಿವರ* (₹ಕೋಟಿಗಳಲ್ಲಿ)

ನಿಗಮ	ಹಂಚಿಕೆ	ಬಿಡುಗಡೆ
ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ	100	0
ಒಕ್ಕಲಿಗ ಸಮುದಾಯದ ಅಭಿವೃದ್ಧಿ ನಿಗಮ	100	0
ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ	60	0
ವಿಶ್ವಕರ್ಮ ಅಭಿವೃದ್ಧಿ ನಿಗಮ	13	0
ಉಪ್ಪಾರ ಅಭಿವೃದ್ಧಿ ನಿಗಮ	8	0
ಈಡಿಗ/ ಬಿಲ್ಲವ ಸಮುದಾಯ ಸಮಗ್ರ ಅಭಿವೃದ್ಧಿ ವಿಶೇಷ ಕೋಶ	10	0
ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ	5	0
ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ	60	15
ಭೋವಿ ಅಭಿವೃದ್ಧಿ ನಿಗಮ	55	13.75
ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮ	50	12.50
ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ	25	6.25

ಮಾಹಿತಿ: 2024ರ ಡಿಸೆಂಬರ್ ಅಂತ್ಯದವರೆಗೆ/ ಕೆಡಿಪಿ ಪ್ರಗತಿ

ಅಧ್ಯಕ್ಷರ ನೇಮಕ ಕಗ್ಗಂಟು

ಒಕ್ಕಲಿಗರ ಅಭಿವೃದ್ಧಿ ನಿಗಮ, ಮರಾಠ ಅಭಿವೃದ್ಧಿ ನಿಗಮ, ವಿಶ್ವಕರ್ಮ ಅಭಿವೃದ್ಧಿ ನಿಗಮ ಸೇರಿ ಹಲವು ನಿಗಮಗಳಿಗೆ ಸರ್ಕಾರ ಇನ್ನೂ ಅಧ್ಯಕ್ಷರನ್ನೇ ನೇಮಿಸಿಲ್ಲ. ಅಧ್ಯಕ್ಷರನ್ನು ನೇಮಿಸಿರುವ ನಿಗಮ, ಮಂಡಳಿ, ಪ್ರಾಧಿಕಾರಗಳಿಗೆ ಸದಸ್ಯರ, ನಿರ್ದೇಶಕರ ನೇಮಕ ಕೂಡಾ ನನೆಗುದಿಗೆ ಬಿದ್ದಿದೆ. ನಿಗಮಗಳಿಗೆ ಸದಸ್ಯರ ನೇಮಕಕ್ಕೆ ಸಂಬಂಧಿಸಿದಂತೆ ಗೃಹ ಸಚಿವ ಜಿ. ಪರಮೇಶ್ವರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದ್ದು, ಈ ಸಮಿತಿ ಹಲವು ಸಭೆಗಳನ್ನು ಈಗಾಗಲೇ ನಡೆಸಿದೆ. ನಿಗಮ– ಮಂಡಳಿಗಳಿಗೆ ನೇಮಕಗೊಂಡವರಿಗೆ ಎರಡೂವರೆ ವರ್ಷ ಅಧಿಕಾರ ನೀಡಲು ಚರ್ಚೆ ನಡೆದಿತ್ತು. ಆದರೆ, ಆಕಾಂಕ್ಷಿಗಳ ಸಂಖ್ಯೆ ದೊಡ್ಡದಿರುವುದರಿಂದ ನೇಮಕವೇ ಕಗ್ಗಂಟಾಗಿದೆ ಎಂದು ಕಾಂಗ್ರೆಸ್ ಪಕ್ಷದ ಮೂಲಗಳು ಹೇಳಿವೆ.

ಫೆ. 3, 4ರಂದು ಬಜೆಟ್‌ಪೂರ್ವ ಚರ್ಚೆ

ಹಣಕಾಸು ಖಾತೆಯನ್ನೂ ನಿಭಾಯಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2025–26ನೇ ಸಾಲಿನ ಬಜೆಟ್ ಅನ್ನು ಮಾರ್ಚ್ ತಿಂಗಳಲ್ಲಿ ಮಂಡಿಸಲಿದ್ದಾರೆ. ಅದಕ್ಕೂ ಮುನ್ನ ಫೆ. 3 ಮತ್ತು 4ರಂದು ಎಲ್ಲ ಇಲಾಖೆಗಳ ಅಧಿಕಾರಿಗಳು ಮತ್ತು ಸಚಿವರ ಜೊತೆ ಅವರು ಚರ್ಚಿಸುವರು.

ಮೊದಲ ದಿನ ಸಂಜೆ 4ಗಂಟೆಯಿಂದ ರಾತ್ರಿ 7ರವರೆಗೆ, ಮರುದಿನ ಬೆಳಿಗ್ಗೆ 11.30ರಿಂದ ರಾತ್ರಿ 7 ಗಂಟೆವರೆಗೆ 19 ಇಲಾಖೆಗಳ ಅಧಿಕಾರಿಗಳು, ಸಚಿವರ ಜೊತೆ ತಲಾ ಅರ್ಧ ಗಂಟೆ ಚರ್ಚಿಸುವರು. ಆಯಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿ ಸೇರಿ ಐವರು ಅಧಿಕಾರಿಗಳಿಗೆ ಮೀರದಂತೆ ಅವಶ್ಯಕ ಮಾಹಿತಿಯ ಜೊತೆಗೆ ಸಭೆಗೆ ಹಾಜರಾಗಬೇಕು ಎಂದು ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿ ಸೂಚನಾಪತ್ರ ಹೊರಡಿಸಿದ್ದಾರೆ.



ವಿಶ್ವಕಪ್ ಗೆದ್ದ ಸಂಭ್ರಮ...

ನವದೆಹಲಿಯಲ್ಲಿ ಭಾನುವಾರ ನಡೆದ ವಿಶ್ವಕಪ್ ಕೊಕ್ಕೊ ಟೂರ್ನಿಯ ಫೈನಲ್‌ನಲ್ಲಿ ನೇಪಾಳ ತಂಡವನ್ನು 78–40 ರಿಂದ ಸೋಲಿಸಿ ಚಾಂಪಿಯನ್ ಆದ ಭಾರತ ಮಹಿಳಾ ತಂಡದ ಸಂಭ್ರಮ. ಪುರುಷರ ವಿಭಾಗದಲ್ಲೂ ಭಾರತ 54–36 ರಲ್ಲಿ ನೇಪಾಳ ತಂಡವನ್ನು ಸೋಲಿಸಿ ವಿಶ್ವಕಪ್ ಗೆದ್ದುಕೊಂಡಿತು

ವಿವರ 10

ವಿಜಯೇಂದ್ರ ಅರ್ಹನಲ್ಲ, ಪಕ್ಷವೂ ಒಪ್ಪಲ್ಲ: ಯತ್ನಾಳ

ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ಬಿ.ಎಸ್.ಯಡಿಯೂರಪ್ಪ ವಿರುದ್ಧ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮತ್ತೊಮ್ಮೆ ಹರಿಹಾಯ್ದಿದ್ದಾರೆ. 'ಅವರು ಅಧ್ಯಕ್ಷ ಹುದ್ದೆಗೆ ಅರ್ಹ ಅಲ್ಲ' ಎಂದಿದ್ದಾರೆ. ಆದರೆ ಮತ್ತೊಮ್ಮೆ ಅಧ್ಯಕ್ಷರಾಗುವ ವಿಶ್ವಾಸವನ್ನು ವಿಜಯೇಂದ್ರ ವ್ಯಕ್ತಪಡಿಸಿದ್ದಾರೆ

ಪ್ರಜಾವಾಣಿ ವಾರ್ತೆ



ಬಸನಗೌಡ ಪಾಟೀಲ ಯತ್ನಾಳ

ವಿಜಯಪುರ: 'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ವಿಜಯೇಂದ್ರ ಅರ್ಹನಲ್ಲ. ತಂದೆಯ ಸಹಿ ನಕಲಿ ಮಾಡಿದವರನ್ನು ಯಾವುದೇ ಕಾರಣಕ್ಕೂ ಒಪ್ಪಲಾಗದು. ಪಕ್ಷ ಅದಕ್ಕೆ ಅವಕಾಶ ನೀಡದು. ಹೈಕಮಾಂಡ್ ಇದನ್ನು ಗಂಭೀರವಾಗಿ ತಗೆದುಕೊಳ್ಳಬೇಕು. ವಿಜಯೇಂದ್ರ ಮಾಡಿದ ತಪ್ಪಿನಿಂದಲೇ ಯಡಿಯೂರಪ್ಪ ಜೈಲಿಗೆ ಹೋಗಬೇಕಾಯಿತು' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಆರೋಪಿಸಿದರು.

5ನೇ ಪುಟ ನೋಡಿ

'ಪಕ್ಷದಿಂದ ಮತ್ತೆ ಅವಕಾಶ ಸಿಗುವ ವಿಶ್ವಾಸ'



ವಿಜಯೇಂದ್ರ

ರಾಯಚೂರು: 'ಹಿರಿಯರ ಆಶೀರ್ವಾದದಿಂದಾಗಿಯೇ ನನಗೆ ರಾಜ್ಯ ಅಧ್ಯಕ್ಷ ಸ್ಥಾನ ದೊರಕಿದೆ. ಭರವಸೆ ಇಟ್ಟಿದ್ದಕ್ಕೆ ಸಮರ್ಥವಾಗಿ ನಿಭಾಯಿಸಿರುವೆ. ಹಿರಿಯರು ಮತ್ತೆ ಅವಕಾಶ ನೀಡಿ, ಪಕ್ಷ ಮುನ್ನಡೆಸಲು ಆಶೀರ್ವದಿಸುವರು ಎನ್ನುವ ನಂಬಿಕೆ ಇದೆ' ಎಂದು ಬಿ.ವೈ. ವಿಜಯೇಂದ್ರ ಹೇಳಿದರು.

5ನೇ ಪುಟ ನೋಡಿ

ಅಧ್ಯಕ್ಷರ ಆಯ್ಕೆಗೆ ಚುನಾವಣೆ: ಜೋಶಿ



ಪ್ರಲ್ಹಾದ ಜೋಶಿ

'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆ ಆಗಲಿದೆಯೇ ಎಂಬುದಕ್ಕೆ ಉತ್ತರಿಸುವುದು ನಾನಲ್ಲ. ಅಧ್ಯಕ್ಷರ ಆಯ್ಕೆಗೆ ಚುನಾವಣೆ ಪ್ರಕ್ರಿಯೆ ನಡೆಯುತ್ತದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಹುಬ್ಬಳ್ಳಿಯಲ್ಲಿ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

5ನೇ ಪುಟ ನೋಡಿ

ಪ್ರಯಾಗ್‌ರಾಜ್: ಶಿಬಿರದಲ್ಲಿ ಅಡುಗೆ ಮಾಡುವ ವೇಳೆ ಸಿಲಿಂಡರ್ ಸ್ಫೋಟ

ಕುಂಭಮೇಳ: ಹಲವು ಡೇರೆಗಳು ಭಸ್ಮ

ಪ್ರಜಾವಾಣಿ ವಾರ್ತೆ/ಪಿಟಿಐ

ಲಖನೌ: ಪ್ರಯಾಗ್‌ರಾಜ್‌ನ ಗಂಗಾನದಿ ದಡದಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳದಲ್ಲಿ ಭಾನುವಾರ ಭಾರಿ ಅಗ್ನಿ ಅವಘಡ ಸಂಭವಿಸಿದ್ದು, ಹಲವು ಡೇರೆಗಳು ಸುಟ್ಟು ಕರಕಲಾಗಿವೆ. ಅದೃಷ್ಟವಶಾತ್ ಪ್ರಾಣಹಾನಿ ಆಗಿಲ್ಲ.

'ಮಹಾಕುಂಭ ಮೇಳದ ವ್ಯಾಪ್ತಿಯಲ್ಲಿರುವ ವಲಯ 19ರ ಗೀತಾ ಪ್ರೆಸ್ ಶಿಬಿರದಲ್ಲಿ ಭಾನುವಾರ ಸಂಜೆ 4.30ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿದೆ. ಸಮೀಪದ ಹಲವು ಡೇರೆಗಳು ಬೆಂಕಿಗೆ ಆಹುತಿಯಾಗಿವೆ. ಅಗ್ನಿಶಾಮಕ ದಳದ ಹಲವು ವಾಹನಗಳನ್ನು ಬಳಸಿ ಬೆಂಕಿ ನಂದಿಸಲಾಗಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಶಿಬಿರದಲ್ಲಿ ಅಡುಗೆ ಮಾಡುವ ಸಂದರ್ಭದಲ್ಲಿ ಸಿಲಿಂಡರ್ ಸ್ಫೋಟದಿಂದಾಗಿ ಬೆಂಕಿ ಕಾಣಿಸಿಕೊಂಡಿತು ಎಂದು ಮೂಲಗಳು ತಿಳಿಸಿವೆ. ಬಲವಾಗಿ ಗಾಳಿ ಬೀಸುತ್ತಿದ್ದ ಕಾರಣ ಕೆಲವೇ ಕ್ಷಣಗಳಲ್ಲಿ ಬೆಂಕಿಯು ಸಮೀಪದ ಡೇರೆಗಳಿಗೂ ವ್ಯಾಪಿಸಿದೆ.


ಪ್ರಯಾಗ್‌ರಾಜ್‌ನಿಂದ ಝೂಸಿಗೆ ಸಂಪರ್ಕ ಕಲ್ಪಿಸುವ ಶಾಸ್ತ್ರಿ ಸೇತುವೆ ಸಮೀಪದಲ್ಲಿರುವ ಡೇರೆಗಳಿಂದ ಬೆಂಕಿಯ ಜ್ವಾಲೆ ಮತ್ತು ದಟ್ಟ ಹೊಗೆ ಏಳುತ್ತಿರುವ ವಿಡಿಯೊಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿವೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಮೌನಿ ಅಮಾವಾಸ್ಯೆ ಸಿದ್ಧತೆ ಪರಿಶೀಲಿಸಲು ಪ್ರಯಾಗ್‌ರಾಜ್‌ಗೆ ಭಾನುವಾರ ಬಂದಿದ್ದರು. ಬೆಂಕಿ ಅವಘಡ ಸಂಭವಿಸಿದ ಸ್ಥಳಕ್ಕೂ ಭೇಟಿ ನೀಡಿದರು. 'ಇಂಥ ಘಟನೆ ಮರುಕಳಿಸದಂತೆ ಎಚ್ಚರವಹಿಸಿ' ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಬೆಂಕಿಯು ಡೇರೆಗಳಿಗೆ ಹಬ್ಬುತ್ತಿದ್ದಂತೆಯೇ ಅಡುಗೆ ಅನಿಲ ಸಿಲಿಂಡರ್‌ಗಳು ಸ್ಫೋಟಿಸುವ ಸದ್ದು ಕೇಳಿಬಂದವು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

'ಬೆಂಕಿಯನ್ನು ನಿಯಂತ್ರಿಸಲು 15 ಅಗ್ನಿಶಾಮಕ ವಾಹನಗಳನ್ನು ಬಳಸಲಾಗಿದೆ' ಎಂದು ಕುಂಭಮೇಳದ ಮುಖ್ಯ ಅಗ್ನಿಶಾಮಕ ಅಧಿಕಾರಿ ಪ್ರಮೋದ್ ಶರ್ಮಾ ತಿಳಿಸಿದ್ದಾರೆ.

ಮಾಹಿತಿ ಪಡೆದ ಪ್ರಧಾನಿ: ಪ್ರಧಾನಿ ಮೋದಿ ಅವರು ಯೋಗಿ ಆದಿತ್ಯನಾಥ ಅವರಿಗೆ ಕರೆ ಮಾಡಿ ಅವಘಡದ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ.



ಮಹಾಕುಂಭ ಮೇಳದ ತಾಣದಲ್ಲಿ ಡೇರೆಗಳಿಗೆ ಹಬ್ಬಿದ ಬೆಂಕಿಯನ್ನು ನಂದಿಸಲು ಅಗ್ನಿಶಾಮಕ ದಳದ ಸಿಬ್ಬಂದಿ ಪ್ರಯತ್ನಿಸಿದರು —ಪಿಟಿಐ ಚಿತ್ರ

ಮುಖ್ಯಾಂಶಗಳು


- 18 ಡೇರೆಗಳಿಗೆ ಬೆಂಕಿ
- ಯೋಗಿಗೆ ಕರೆ ಮಾಡಿ ಮಾಹಿತಿ ಪಡೆದ ಪ್ರಧಾನಿ

'ಕಳಪೆ ಆರೈಕೆ: ಬಾಣಂತಿಯರ ಸಾವು'

ಬೆಂಗಳೂರು: 'ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆಪೂರ್ವ, ಹೆರಿಗೆ ಮತ್ತು ಹೆರಿಗೆ ನಂತರದ ಆರೈಕೆ ಸೇವೆಗಳು ಸರಿಯಾಗಿ ಆಗುತ್ತಿಲ್ಲ. ಈ ಕಾರಣದಿಂದಲೇ ಬಾಣಂತಿಯರ ಸಾವು, ಶಿಶು ಮರಣ ಮತ್ತು ನಿರ್ಜೀವ ಹೆರಿಗೆಗಳು ಮರುಕಳಿಸು-ತ್ತಿವೆ. ಈ ಸೇವೆಗಳು ಕಳಪೆಯಾಗಿ-ರುವುದನ್ನು ಇದು ತೋರಿಸುತ್ತದೆ' ಎಂದು ಸಿಎಜಿ ಹೇಳಿದೆ. 5

ಸೈಫ್ ಮೇಲೆ ಹಲ್ಲೆ: ಆರೋಪಿ ವಶಕ್ಕೆ

ಮುಂಬೈ (ಪಿಟಿಐ): ಬಾಲಿವುಡ್ ನಟ ಸೈಫ್ ಅಲಿ ಖಾನ್ ಅವರ ಮೇಲೆ ನಡೆದ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿಸಿರುವ ವ್ಯಕ್ತಿಯನ್ನು ಜನವರಿ 24ರವರೆಗೆ ಪೊಲೀಸರ ವಶಕ್ಕೆ ಒಪ್ಪಿಸಿ ಮುಂಬೈನ ನ್ಯಾಯಾಲಯವು ಭಾನುವಾರ ಆದೇಶಿಸಿದೆ.



ಮೊಹಮ್ಮದ್ ಶರೀಫುಲ್

ಹಲ್ಲೆ ನಡೆಸಿದ ಆರೋಪ ಹೊತ್ತವನು ಬಾಂಗ್ಲಾದೇಶದ ಪ್ರಜೆ. ಹಲ್ಲೆ ನಡೆಸಿದ್ದಕ್ಕೆ ಕಾರಣ ಏನು ಎಂಬುದನ್ನು ಪತ್ತೆ ಮಾಡಬೇಕಿದೆ. ಈ ಪ್ರಕರಣದ ಹಿಂದೆ ಅಂತರರಾಷ್ಟ್ರೀಯ ಪಿತೂರಿ ಇದೆಯೇ ಎಂಬುದನ್ನು ಕೂಡ ಪತ್ತೆ ಮಾಡಬೇಕಿದೆ ಎಂದು ಪೊಲೀಸರು ಕೋರ್ಟ್‌ಗೆ ವಿವರಿಸಿದರು.

ಅಂತರರಾಷ್ಟ್ರೀಯ ಪಿತೂರಿಯ ವಿಚಾರವಾಗಿ ಪ್ರಾಸಿಕ್ಯೂಷನ್ ಮಂಡಿಸಿರುವ ವಾದವನ್ನು 'ಸಾಧ್ಯವೇ ಇಲ್ಲದ ಸಂಗತಿ ಎಂದು ಹೇಳಲಾಗದು' ಎಂದು ನ್ಯಾಯಾಲಯ ದಾಖಲೆಗಳನ್ನು ಪರಿಶೀಲಿಸಿದ ನಂತರ ಹೇಳಿದೆ.

ಹಲ್ಲೆ ನಡೆಸಿದ ಆರೋಪಿಯ ಹೆಸರು ಮೊಹಮ್ಮದ್ ಶರೀಫುಲ್ ಇಸ್ಲಾಂ ಶೆಹಜಾದ್, ಈತ ಬಾಂಗ್ಲಾದೇಶದ ಪ್ರಜೆ ಎಂದು ಪೊಲೀಸರು ಮಾಧ್ಯಮ ಪ್ರತಿನಿಧಿಗಳಿಗೆ ಭಾನುವಾರ ತಿಳಿಸಿದ್ದರು. ಈತ ಭಾರತಕ್ಕೆ ಅಕ್ರಮವಾಗಿ ಪ್ರವೇಶಿಸಿ ತನ್ನ ಹೆಸರನ್ನು ಬಿಜಯ್ ದಾಸ್ ಎಂದು ಬದಲಿಸಿಕೊಂಡಿದ್ದ ಎಂದು ಮಾಹಿತಿ ನೀಡಿದ್ದರು. ಸೈಫ್ ಅವರ ನಿವಾಸಕ್ಕೆ ಶೆಹಜಾದ್ ಕಳ್ಳತನದ ಉದ್ದೇಶದಿಂದ ಜನವರಿ 16ರ ನಸುಕಿನಲ್ಲಿ ಪ್ರವೇಶಿಸಿದ್ದ ಎಂದು ಪೊಲೀಸರು ಹೇಳಿದ್ದಾರೆ.

ಗುತ್ತಿಗೆದಾರ ನೀಡಿದ್ದ ಸುಳಿವು

ಸೈಫ್ ಅಲಿ ಖಾನ್ ಮೇಲೆ ಹಲ್ಲೆ ನಡೆಸಿದ ವ್ಯಕ್ತಿಯನ್ನು ಪತ್ತೆ ಮಾಡಲು ಪೊಲೀ ಸರಿಗೆ ನೆರವಾಗಿದ್ದು ಕಾರ್ಮಿಕರ ಗುತ್ತಿಗೆದಾರರೊಬ್ಬರು ನೀಡಿದ ಮಾಹಿತಿ. ನೂರಾರು ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಿದ್ದ ಪೊಲೀಸರಿಗೆ, ಈತ ಕಾರ್ಮಿಕರ ಗುತ್ತಿಗೆದಾರರೊಬ್ಬರನ್ನು ಸಂಪರ್ಕಿಸಿದ್ದು ಗೊತ್ತಾಯಿತು.

ದಾಳಿ ನಡೆಸಿದ ವ್ಯಕ್ತಿಯ ಬಗ್ಗೆ ಆ ಗುತ್ತಿಗೆದಾರ ಎಲ್ಲ ಮಾಹಿತಿ ಒದಗಿಸಿದರು. ಆ ಮಾಹಿತಿ ಆಧರಿಸಿ ಪೊಲೀಸರು ಆರೋಪಿಯನ್ನು ಠಾಣೆಯಲ್ಲಿ ಪತ್ತೆ ಮಾಡಿದರು ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ತಾನು ಹಲ್ಲೆ ಮಾಡಿದ್ದು ಬಾಲಿವುಡ್‌ನ ಖ್ಯಾತ ನಟನೊಬ್ಬನ ಮೇಲೆ ಎಂಬುದು ದಾಳಿಕೋರನಿಗೆ ಗೊತ್ತೇ ಇರಲಿಲ್ಲ. ಸುದ್ದಿವಾಹಿನಿಗಳಲ್ಲಿ ಪ್ರಸಾರವಾದ ವರದಿ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿನ ಪೋಸ್ಟ್‌ಗಳನ್ನು ಗಮನಿಸಿದ ನಂತರವೇ ಆತನಿಗೆ ತಾನು ಖ್ಯಾತ ನಟನ ಮೇಲೆ ಹಲ್ಲೆ ಮಾಡಿರುವುದು ಗೊತ್ತಾಯಿತು ಎಂದು ಪೊಲೀಸರು ಹೇಳಿದ್ದಾರೆ.

ಸೈಫ್ ಅವರ ಮೇಲೆ ಹಲ್ಲೆ ನಡೆಸಿದ ನಂತರ ಆರೋಪಿಯು ಬೆಳಿಗ್ಗೆ 7 ಗಂಟೆಯವರೆಗೆ ಬಾಂದ್ರಾ ಪಶ್ಚಿಮದ ಪಟವರ್ಧನ ಗಾರ್ಡನ್ ಬಸ್ ನಿಲ್ದಾಣದಲ್ಲಿ ಮಲಗಿದ್ದ. ನಂತರ ರೈಲಿನ ಮೂಲಕ ವರ್ಲಿ ತಲುಪಿದ್ದ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಮೊದಲ ದಿನ 100 ಆದೇಶಗಳಿಗೆ ಸಹಿ?

ಅಮೆರಿಕದ ನೂತನ ಅಧ್ಯಕ್ಷರಾಗಿ ಟ್ರಂಪ್ ಇಂದು ಪ್ರಮಾಣ

ವಾಷಿಂಗ್ಟನ್ (ಪಿಟಿಐ): ಅಮೆರಿಕದ 47ನೇ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಸೋಮವಾರ ಅಧಿಕಾರ ಸ್ವೀಕರಿಸಲಿದ್ದು, ಪ್ರಮಾಣವಚನ ಸ್ವೀಕರಿಸಿದ ಮೊದಲ ದಿನವೇ ಶ್ವೇತಭವನದಲ್ಲಿ 100ಕ್ಕೂ ಅಧಿಕ ಕಾರ್ಯಕಾರಿ ಆದೇಶಗಳಿಗೆ ಸಹಿ ಹಾಕಲಿದ್ದಾರೆ.



ಡೊನಾಲ್ಡ್ ಟ್ರಂಪ್

ಟ್ರಂಪ್ ಅವರ ತಂಡವು ಅಗತ್ಯ ಸಿದ್ಧತೆ ಮಾಡಿಕೊಂಡಿದ್ದು, ಓವಲ್ ಕಚೇರಿಯಲ್ಲಿ ಆದೇಶಗಳ ಪ್ರತಿಗಳು ಸಿದ್ಧಗೊಂಡಿವೆ. ಎರಡನೇ ಅವಧಿಗೆ ಅಧ್ಯಕ್ಷರಾಗುತ್ತಿದ್ದಂತೆಯೇ, ಒಂದು ನಿಮಿಷವೂ ವ್ಯರ್ಥ ಮಾಡದಂತೆ, ಚುನಾವಣೆ ಸಂದರ್ಭದಲ್ಲಿ ನೀಡಿದ ಹಲವು ಭರವಸೆಗಳನ್ನು ಈಡೇರಿಸುವ ನಿರೀಕ್ಷೆಗಳಿವೆ.

'ಅಧಿಕಾರ ಸ್ವೀಕರಿಸಿದ ಮೊದಲ ದಿನವೇ ದಾಖಲೆ ಪ್ರಮಾಣದ ಆದೇಶಗಳಿಗೆ ಸಹಿ ಹಾಕಲಾಗುವುದು' ಎಂದು ಎನ್‌ಬಿಸಿ ಸುದ್ದಿವಾಹಿನಿಗೆ ನೀಡಿದ ಸಂದರ್ಶನದಲ್ಲಿ ಡೊನಾಲ್ಡ್ ಟ್ರಂಪ್ ಹೇಳಿದ್ದರು. ಇದು 100ಕ್ಕೂ ಅಧಿಕವಾಗಿರಲಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಿದ್ದ ಅವರು, 'ಹೌದು' ಎಂದಿದ್ದರು.

ದೇಶದ ಅಧ್ಯಕ್ಷರು ಕೈಗೊಳ್ಳುವ ಏಕಪಕ್ಷೀಯ ಆದೇಶಗಳನ್ನು ಕಾನೂನು ಎಂದೇ ಪರಿಗಣಿಸಲಾಗುತ್ತದೆ. ಆದರೆ, ಇವು ಜಾರಿಯಾಗಲು ಸಂಸತ್‌ನ ಅನುಮೋದನೆ ಅಗತ್ಯವಿಲ್ಲ. ನ್ಯಾಯಾಲಯದಲ್ಲಿ ಪ್ರಶ್ನಿಸುವುದಕ್ಕೆ ಅವಕಾಶ ಇದೆ.

'ದಕ್ಷಿಣ ಗಡಿಯನ್ನು ಮುಚ್ಚುವ ನಿರ್ಧಾರ, ಸಾಮೂಹಿಕ ಗಡಿಪಾರು, ಮಹಿಳಾ ಕ್ರೀಡಾ ವಿಭಾಗದಲ್ಲಿ ತೃತೀಯ ಲಿಂಗಿಗಳ ಭಾಗವಹಿಸುವಿಕೆಗೆ ತಡೆ, ಇಂಧನ ಶೋಧಕ್ಕೆ ಹೇರಲಾಗಿರುವ ನಿರ್ಬಂಧ ಕೈಬಿಡುವುದು ಹಾಗೂ ಆಡಳಿತದಲ್ಲಿ ದಕ್ಷತೆ ಹೆಚ್ಚಳ ಸೇರಿ ಪ್ರಮುಖ ಐದು ವಿಚಾರಗಳಿಗೆ ಸಂಬಂಧಿಸಿದ ಕಾರ್ಯಕಾರಿ ಆದೇಶಗಳಿಗೆ ಟ್ರಂಪ್ ಸಹಿಹಾಕುವ ಸಾಧ್ಯತೆಯಿದೆ' ಎಂದು ಅವರ ನಿಕಟವರ್ತಿ ಸ್ಟೀಫನ್ ಮಿಲ್ಲರ್ ಅವರು ಸುದ್ದಿಸಂಸ್ಥೆಗಳಿಗೆ ತಿಳಿಸಿದ್ದಾರೆ.

ಬರ್ಲಿನ್ ಚಿತ್ರೋತ್ಸವಕ್ಕೆ ಕನ್ನಡದ 'ವಾಘಚಿಪಾಣಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟೇಶ್ ಹೆಗಡೆ ನಿರ್ದೇಶನದ, ಅನುರಾಗ್ ಕಶ್ಯಪ್ ನಿರ್ಮಾಣ ಮಾಡಿರುವ ಕನ್ನಡದ 'ವಾಘಚಿಪಾಣಿ' ಚಿತ್ರ ಬರ್ಲಿನ್ ಅಂತರರಾಷ್ಟ್ರೀಯ ಚಿತ್ರೋತ್ಸವಕ್ಕೆ ಆಯ್ಕೆಗೊಂಡಿದೆ. ಈ ಚಿತ್ರೋತ್ಸವಕ್ಕೆ ಪ್ರವೇಶ ಪಡೆದ ಮೊದಲ ಕನ್ನಡ ಚಿತ್ರ ಇದಾಗಿದೆ.



ಚಿತ್ರದ ಪೋಸ್ಟರ್

'ಫೆ.13ರಿಂದ 23ರವರೆಗೆ ನಡೆಯಲಿರುವ ಚಿತ್ರೋತ್ಸವದಲ್ಲಿ 'ಬರ್ಲಿನ್ ಫೋರಂ' ವಿಭಾಗದಲ್ಲಿ ಈ ಚಿತ್ರದ ವರ್ಲ್ಡ್ ಪ್ರೀಮಿಯರ್ ಆಗಲಿದೆ. ಈ ವಿಭಾಗದಲ್ಲಿ 30 ಚಿತ್ರಗಳು ಸ್ಪರ್ಧೆಯಲ್ಲಿವೆ' ಎಂದು ನಟೇಶ್ ಹೇಳಿದರು.

ನಟೇಶ್ ಅವರ ಎರಡನೇ ಚಿತ್ರವಿದು. ಅವರ ಮೊದಲ ಚಿತ್ರ 'ಪೆದ್ರೊ'ವನ್ನು ನಿರ್ಮಿಸಿದ್ದ ರಿಷಬ್ ಶೆಟ್ಟಿ ನಿರ್ಮಾಣ ಸಂಸ್ಥೆಯಿಂದಲೇ ಈ ಚಿತ್ರ ಕೂಡ ಪ್ರಾರಂಭಗೊಂಡಿತ್ತು. 'ರಿಷಬ್ ಶೆಟ್ಟಿ ಚಿತ್ರಕ್ಕೆ ಚಾಲನೆ ನೀಡಿದ್ದರು. ಅವರು 'ಕಾಂತಾರ ಪ್ರೀಕ್ವೆಲ್' ಚಿತ್ರೀಕರಣದಲ್ಲಿ ಮಗ್ನರಾಗಿರುವುದರಿಂದ ಇದಕ್ಕೆ ಸಮಯ ನೀಡಲು ಸಾಧ್ಯವಾಗಲಿಲ್ಲ. ಹೀಗಾಗಿ ಚಿತ್ರವನ್ನು ಅನುರಾಗ್ ಕಶ್ಯಪ್ ಖರೀದಿಸಿದರು. ಮಲಯಾಳದ ನಟ, ನಿರ್ದೇಶಕ ದಿಲೀಶ್ ಪೋತನ್ ಪ್ರಮುಖ ಪಾತ್ರದಲ್ಲಿದ್ದಾರೆ' ಎಂದರು.

ಅಮರೇಶ್ ನುಗಡೋಣಿ ಅವರ ದಲಿತ ಮಹಿಳೆ ಕುರಿತಾದ ಕಥೆ ಈ ಚಿತ್ರಕ್ಕಿದೆ. ಶಿರಸಿ ಸುತ್ತಮುತ್ತಲು ಚಿತ್ರೀಕರಣಗೊಂಡಿದೆ. ಅಚ್ಯುತ್ ಕುಮಾರ್, ನಟೇಶ್, ಗೋಪಾಲ್ ಹೆಗಡೆ ಮೊದಲಾದವರು ಚಿತ್ರದಲ್ಲಿ ಅಭಿನಯಿಸಿದ್ದಾರೆ. ಇವರ 'ಪೆದ್ರೊ' ಕೂಡ ಬೂಸಾನ್ ಸೇರಿ ಅನೇಕ ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರಶಸ್ತಿ ಗಳಿಸಿತ್ತು.

ತಾಲ್ಲೂಕು ಮಟ್ಟದಲ್ಲಿ ಶಾಸಕರ ನೇತೃತ್ವದ ಸಮಿತಿ: ಶಿಕ್ಷಣ ಇಲಾಖೆ ಮಾಹಿತಿ

ಶಿಕ್ಷಣ ಸುಧಾರಣಾ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ, ಹಾಜರಾತಿ, ಕಲಿಕೆ, ಮಾನವ ಸಂಪನ್ಮೂಲದ ಸಮರ್ಪಕ ಬಳಕೆ ಇತ್ಯಾದಿ ಅಂಶಗಳ ಕುರಿತು ಚರ್ಚಿಸಿ, ಸುಧಾರಣೆ ತರುವ ಉದ್ದೇಶದಿಂದ 'ತಾಲ್ಲೂಕು ಮಟ್ಟದ ಶಿಕ್ಷಣ ಸುಧಾರಣಾ ಸಮಿತಿ' ರಚಿಸಲು ಶಿಕ್ಷಣ ಇಲಾಖೆ ಮುಂದಾಗಿದೆ.

ಶಾಸಕರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರನ್ನು ಸಂಪರ್ಕಿಸಿ ಈ ಸಮಿತಿ ರಚಿಸಬೇಕು ಎಂದು ಎಲ್ಲ ಉಪ ನಿರ್ದೇಶಕರಿಗೆ (ಆಡಳಿತ) ಶಾಲಾ ಶಿಕ್ಷಣ ಇಲಾಖೆಯ ನಿರ್ದೇಶಕರು (ಪ್ರೌಢ ಶಿಕ್ಷಣ) ಸೂಚನೆ ನೀಡಿದ್ದಾರೆ. ಆಯಾ ತಾಲ್ಲೂಕು ವ್ಯಾಪ್ತಿಯ ಶಾಸಕರು ಈ ಸಮಿತಿಯ ಅಧ್ಯಕ್ಷರಾಗಲಿದ್ದು, ಕ್ಷೇತ್ರ ಶಿಕ್ಷಣಾಧಿಕಾರಿ ಸದಸ್ಯ ಕಾರ್ಯದರ್ಶಿ ಆಗಿ ಇರಲಿದ್ದಾರೆ.

ತಹಶೀಲ್ದಾರ್, ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿ, ಪಂಚಾಯತ್‌ರಾಜ್ ಇಲಾಖೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್, ತಾಲ್ಲೂಕಿನಲ್ಲಿ ಅತೀ ಹೆಚ್ಚು ದಾಖಲಾತಿ ಇರುವ ಪ್ರೌಢ ಶಾಲೆ ಮತ್ತು ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರು, ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರು, ಡಯಟ್‌ನ ಹಿರಿಯ ಉಪನ್ಯಾಸಕರು (ಒಬ್ಬರು–ತಾಲ್ಲೂಕು ನೋಡಲ್ ಅಧಿಕಾರಿ), ತಾಲ್ಲೂಕಿನಲ್ಲಿ ಹೆಚ್ಚಿನ ದಾಖಲಾತಿ ಇರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ಎಸ್‌ಡಿಎಂ ಪ್ರತಿನಿಧಿಗಳು (ತಲಾ ಒಬ್ಬರು), ಸರ್ಕಾರ ನಾಮನಿರ್ದೇಶಿತ ಐವರು ಈ ಸಮಿತಿಯಲ್ಲಿ ಸದಸ್ಯರಾಗಿರುತ್ತಾರೆ.

ಸರ್ಕಾರ ನಾಮನಿರ್ದೇಶನ ಮಾಡುವ ಐವರಲ್ಲಿ ಒಬ್ಬರು ಪದವೀಧರರು, ಉಳಿದಂತೆ ಎಸ್‌ಸಿ/ಎಸ್‌ಟಿ, ಮಹಿಳೆ, ಹಿಂದುಳಿದ ಮತ್ತು ಸಾಮಾನ್ಯ ಗುಂಪಿನ ಇಬ್ಬರು ಇರಬೇಕು ಎಂದೂ ಆದೇಶದಲ್ಲಿ ವಿವರಿಸಲಾಗಿದೆ.

ಕಾರ್ಯಗಳೇನು?: ಅರ್ಹ ಮಕ್ಕಳ ಶಾಲಾ ದಾಖಲಾತಿ, ಹಾಜರಾತಿ ಮತ್ತು ಮಕ್ಕಳ ಕಲಿಕಾ ಮಟ್ಟವನ್ನು ವೃದ್ಧಿಸುವುದು, ಪ್ರಾಥಮಿಕ ಶಿಕ್ಷಣದಿಂದ ಪ್ರೌಢ ಶಿಕ್ಷಣದವರೆಗೆ ಶಾಲೆ ಬಿಟ್ಟು ಹೋಗುವಿಕೆ ಪ್ರಮಾಣವನ್ನು ಶೂನ್ಯಕ್ಕೆ ಇಳಿಸುವುದು, ಸರ್ಕಾರಿ ಶಾಲೆಯ ಅಭಿವೃದ್ಧಿಗೆ ಸಮುದಾಯದ ಪಾಲ್ಗೊಳ್ಳುವಿಕೆ, ಸಿಎಸ್‌ಆರ್ ಮೂಲಕ ನೆರವು ಒದಗಿಸುವುದು ಈ ಸಮಿತಿಯ ಕಾರ್ಯವಾಗಿದೆ.

ಮಕ್ಕಳಿಲ್ಲದ ಶಾಲೆ ಹತ್ತಿರ ಶಾಲೆಗೆ ಸಂಯೋಜನೆ



ಅತೀ ಕಡಿಮೆ ದಾಖಲಾತಿ ಹೊಂದಿರುವ ಸರ್ಕಾರಿ ಶಾಲೆಗಳನ್ನು ಗುರುತಿಸಿ, ಮಕ್ಕಳ ಹಿತಾಸಕ್ತಿ ಕಾಯ್ದುಕೊಂಡು ಸರ್ವತೋಮುಖ ಬೆಳವಣಿಗೆ ಹಾಗೂ ಸಾಮಾಜೀಕರಣದ ಹಿತದೃಷ್ಟಿಯಿಂದ ಹತ್ತಿರ ಶಾಲೆಗಳ ಜೊತೆ ಸಂಯೋಜಿಸಿ, ಸಂಯೋಜಿತ ಶಾಲೆಯನ್ನು 'ಹಬ್ ಆ್ಯಂಡ್ ಸ್ಪೋಕ್ ಮಾಡೆಲ್' ರೀತಿಯಲ್ಲಿ ಕೇಂದ್ರ ಶಾಲೆಯಾಗಿ ಅಭಿವೃದ್ಧಿಪಡಿಸುವುದು ಕೂಡಾ ಸಮಿತಿಯ ಕಾರ್ಯವಾಗಿದೆ ಎಂದೂ ಶಿಕ್ಷಣ ಇಲಾಖೆ ತಿಳಿಸಿದೆ. ಆ ಮೂಲಕ, ಕಡಿಮೆ ವಿದ್ಯಾರ್ಥಿಗಳಿರುವ ಶಾಲೆಗಳನ್ನು ಮುಚ್ಚುವ ಅಥವಾ ವಿಲೀನ ಪದ ಬಳಸದೆ ಸಮೀಪದ ಶಾಲೆಗೆ ಸಂಯೋಜಿಸುವ ನಿರ್ಧಾರಕ್ಕೆ ಬಂದಿದೆ.

ಸುದ್ದಿ 2 ನಿಮಿಷ

'ಸಮಾಜದ ಅಭಿವೃದ್ಧಿಗೆ ಶ್ರಮಿಸಿ'

ಬೆಂಗಳೂರು: ಲೋಕಮಾತಾ ಅಹಿಲ್ಯಾಬಾಯಿ ಹೋಳ್ಕರ್ ಅವರ ಚಿಂತನೆಗಳು ಹಾಗೂ ಜೀವನ ಚರಿತ್ರೆ ಪ್ರತಿಯೊಬ್ಬರಿಗೆ ತಲುಪುವಂತಾಗಬೇಕು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಮಧ್ಯ ಕ್ಷೇತ್ರೀಯ ಕಾರ್ಯವಾಹ ನಾ.ತಿಪ್ಪೇಸ್ವಾಮಿ ತಿಳಿಸಿದರು.

ಲೋಕಮಾತಾ ಅಹಿಲ್ಯಾಬಾಯಿ ಹೋಳ್ಕರ್ ಅವರ ಜನ್ಮ ಶತಮಾನೋತ್ಸವ ಸಮಿತಿಯು ಭಾನುವಾರ ಜ್ಞಾನಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿದ್ದ ಮಹಿಳಾ ಸಮಾವೇಶದಲ್ಲಿ ಅವರು ಮಾತನಾಡಿದರು.

'ಅಹಿಲ್ಯಾಬಾಯಿ ಅವರು ಸಾಮಾಜಿಕವಾಗಿ, ಸಾಂಸ್ಕೃತಿವಾಗಿ, ಶೈಕ್ಷಣಿಕವಾಗಿ ಹಾಗೂ ಉತ್ತಮ ಆಡಳಿತಗಾರರಾಗಿ ಮಾಡಿದ ಕಾರ್ಯಗಳು ನಮಗೆಲ್ಲರಿಗೂ ಆದರ್ಶವಾಗಬೇಕು' ಎಂದು ಅವರು ಹೇಳಿದರು.

'ಸಂಸ್ಕಾರ ಹಾಗೂ ಸಂಸ್ಕೃತಿಯನ್ನು ಉಳಿಸುವುದು ಕುಂಟುಬಗಳ ಜವಾಬ್ದಾರಿಯಾಗಿದ್ದು, ಅಹಿಲ್ಯಾಬಾಯಿ ಅವರ ಜೀವನವನ್ನು ನಾವು ಅಧ್ಯಯನ ಮಾಡಿದ ನಂತರ ಅವರಂತೆ ಬದುಕಬೇಕು. ಸಾಮಾಜಿಕ ಕಾರ್ಯಕರ್ತರಿಗೆ ಹಾಗೂ ಪ್ರತಿಯೊಂದು ಕುಟುಂಬದವರಿಗೆ ಅಹಿಲ್ಯಾಬಾಯಿ ಒಂದು ರೀತಿಯ ಆದರ್ಶವ್ಯಕ್ತಿ ಇದ್ದಂತೆ. ಅಹಿಲ್ಯಾಬಾಯಿ ಅವರ ಸಂದೇಶಗಳನ್ನು ಸಮಾಜದಲ್ಲಿ ಸಾರುವ ಮೂಲಕ ಸಮಗ್ರ ಅಭಿವೃದ್ಧಿಗೆ ಶ್ರಮಿಸಬೇಕು' ಎಂದು ಅವರು ಕರೆ ನೀಡಿದರು.



ಹೆಗ್ಗುಂದ ಬೆಟ್ಟದ ತಪ್ಪಲಲ್ಲಿ ಕಾಣಿಸಿಕೊಂಡ ಚಿರತೆ

ದಾಬಸ್ ಪೇಟೆ: ಹೆಗ್ಗುಂದ ಬೆಟ್ಟದ ತಪ್ಪಲಲ್ಲಿ ಭಾನುವಾರ ಮಧ್ಯಾಹ್ನ ಚಿರತೆಯೊಂದು ಬಂಡೆಯ ಮೇಲೆ ಕಾಣಿಸಿಕೊಂಡಿದೆ.

ಚಿರತೆಯನ್ನು ನೋಡಿದ ಗ್ರಾಮಸ್ಥರು ಮೊಬೈಲ್ ಫೋನ್ ಮೂಲಕ ಅದರ ವಿಡಿಯೊ ಮಾಡಿದ್ದಾರೆ. ಜನರನ್ನು ಕಂಡ ಚಿರತೆ ಅಲ್ಲಿಂದ ಪರಾರಿಯಾಗಿದೆ.

ಇತ್ತೀಚೆಗೆ ಚಿರತೆಯೊಂದು ಇದೇ ಪರಿಸರದಲ್ಲಿ ಕಾಣಿಸಿಕೊಂಡಿತ್ತು. ಅರಣ್ಯ ಇಲಾಖೆಯವರು ಬೋನು ಇಟ್ಟು ಹಿಡಿದಿದ್ದರು. ಆನಂತರ ಮೂರು ಚಿರತೆಗಳು ಕಾಣಿಸಿಕೊಂಡಿದ್ದವು. ಹಿಂದೆ ಚಿರತೆ ಬೋನಿಗೆ ಬಿದ್ದ ಸ್ಥಳದಿಂದ ನೂರು ಅಡಿ ದೂರದಲ್ಲಿರುವ ಬೋಳಾರು ಬಂಡೆ ಹತ್ತಿರ ಚಿರತೆ ಕಾಣಿಸಿಕೊಂಡಿದೆ. ಇದರಿಂದ ಜನರು ಭಯಗೊಂಡಿದ್ದಾರೆ.


ಅರಣ್ಯ ಇಲಾಖೆ ಬೋನು ಇಟ್ಟು ಚಿರತೆಯನ್ನು ಸೆರೆ ಹಿಡಿಯಬೇಕು ಎಂದು ಸ್ಥಳೀಯರಾದ ರಮೇಶ್ ಆಗ್ರಹಿಸಿದ್ದಾರೆ.

ನಗರದಲ್ಲಿ ಇಂದು

ಜನತಾ ಪ್ರಣಾಳಿಕೆ ಬಿಡುಗಡೆ ಕಾರ್ಯಕ್ರಮ: ಅತಿಥಿಗಳು: ಸಿ.ಎಂ. ಇಬ್ರಾಹಿಂ, ಬಿ.ಟಿ. ಲಲಿತಾ ನಾಯಕ್, ಟಿ.ಎ. ನಾರಾಯಣಗೌಡ, ಎಂ.ಗೋಪಿನಾಥ್, ಮಾರಸಂದ್ರ ಮುನಿಯಪ್ಪ, ಎಚ್.ಡಿ. ಬಸವರಾಜ್, ಆರ್. ಮುನಿಯಪ್ಪ, ಆರ್. ಮೋಹನ್‌ರಾಜ್, ಎನ್.ಮೂರ್ತಿ, ಬಸವರಾಜ ನಾಯಕ್, ಪುಟ್ಟರಾಜು, ಶಿವರುದ್ರ ಕಲ್ಲೋಳಿಕರ್, ದಸ್ತಗಿರ್ ಮುಲ್ಲಾ, ಆರ್.ಎಂ.ಎನ್. ರಮೇಶ್, ಶಿವರಾಮು, ಬಾಬುರಾವ್ ಮುಡಬಿ, ಅಧ್ಯಕ್ಷತೆ: ಕೋಡಿಹಳ್ಳಿ ಚಂದ್ರಶೇಖರ್, ಆಯೋಜನೆ: ನವಕರ್ನಾಟಕ ನಿರ್ಮಾಣ ಸಮಿತಿ, ಸ್ಥಳ: ಭಾರತ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಸಭಾಂಗಣ, ಬೆಳಿಗ್ಗೆ 11

ಮಾನಸಿಕ ಆರೋಗ್ಯ ಸಮಸ್ಯೆಗಳಿಂದ ಚೇತರಿಸಿಕೊಂಡವರಿಗೆ ಗೌರವ: ಅತಿಥಿಗಳು: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿ.ಎನ್. ಅಶ್ವತ್‌ನಾರಾಯಣ್, ಎಸ್.ಟಿ. ಸೋಮಶೇಖರ್, ಆಯೋಜನೆ ಮತ್ತು ಸ್ಥಳ: 'ಅನ್ವಿತಾ' ಕಡಬಮ್ಸ್ ಆಸ್ಪತ್ರೆ, ಗುಲಕಮಲೆ ಗ್ರಾಮ, ತರಳು 17ನೇ ಮೈಲು, ಕನಕಪುರ ರಸ್ತೆ, ಸಂಜೆ 4

ಮಹಾಭಾರತ (ಆದಿಪರ್ವ) ಪ್ರವಚನ: ವ್ಯಾಸನಕೆರೆ ಪ್ರಭಂಜನಾಚಾರ್ಯ, ಆಯೋಜನೆ: ಪೂರ್ಣಪ್ರಜ್ಞ ಪ್ರತಿಷ್ಠಾನ, ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಕತ್ರಿಗುಪ್ಪೆ, ಸಂಜೆ 6.30



ಪುರಂದರದಾಸರ ಪುಣ್ಯದಿನ ಮಹೋತ್ಸವ: ಉದ್ಘಾಟನೆ: ವಿದ್ಯೇಶತೀರ್ಥ ಸ್ವಾಮೀಜಿ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸೇವಾ ಸಮಿತಿ, ಮಲ್ಲೇಶ್ವರ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು nagaradalli_indu@prajavani.co.in ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

ರಾಜಕೀಯ ಮಾತಾಡಲ್ಲ: ಗೃಹ ಸಚಿವ ಪರಮೇಶ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ರಾಜಕೀಯ ಮಾತನಾಡುವುದಿಲ್ಲ. ಎಐಸಿಸಿ ಅಧ್ಯಕ್ಷರು ಕೆಲಸ ಮಾಡಲು ಹೇಳಿದ್ದಾರೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ರಾಜ್ಯ ಕಾಂಗ್ರೆಸ್ ನಾಯಕರಿಗೆ ಮಲ್ಲಿಕಾರ್ಜುನ ಖರ್ಗೆ ಎಚ್ಚರಿಕೆ ನೀಡಿರುವ ಬಗ್ಗೆ ಸುದ್ದಿಗಾರರ ಪ್ರಶ್ನೆಗೆ ಅವರು, 'ನೀವು ಎಷ್ಟೇ ಕೇಳಿದರೂ ರಾಜಕೀಯ ಪ್ರಶ್ನೆಗಳಿಗೆ ಮಾತನಾಡುವುದಿಲ್ಲ' ಎಂದರು.

ಮುಡಾ ಪ್ರಕರಣದಲ್ಲಿ ಮುಖ್ಯಮಂತ್ರಿ ರಾಜೀನಾಮೆಗೆ ಬಿಜೆಪಿ ಒತ್ತಾಯಿಸುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ, 'ಸಿದ್ದರಾಮಯ್ಯನವರೇ ಪ್ರಭಾವ ಬೀರಿ ನಿವೇಶನ ಪಡೆದಿದ್ದಾರೆ ಎಂದು ಇ.ಡಿ ಎಲ್ಲೂ ಹೇಳಿಲ್ಲ. ರಾಜಕೀಯ ಬಿಟ್ಟು ದಾಖಲೆ ಇಟ್ಟುಕೊಂಡು ಬಿಜೆಪಿಯವರು ಮಾತನಾಡಲಿ' ಎಂದರು.

'ಕಾನೂನು ಸುವ್ಯವಸ್ಥೆ ಹದಗೆಟ್ಟಿಲ್ಲ'

'ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿಲ್ಲ. ಘಟನೆಗಳು ಆಗುವುದು ಮೊದಲೇ ಗೊತ್ತಾದರೆ, ಅದು ಆಗುವುದಕ್ಕೆ ಬಿಡುವುದಿಲ್ಲ' ಎಂದು ಪರಮೇಶ್ವರ ತಿಳಿಸಿದರು.

'ಕೊಲೆಗಳು, ಬ್ಯಾಂಕ್ ದರೋಡೆಗಳು ಆಗುತ್ತಿವೆ. ಪ್ರಕರಣಗಳು ನಡೆಯುವಾಗ ಅಲ್ಲಿನ ಲೋಪಗಳನ್ನೂ ನಾವು ಗಮನಿಸಬೇಕು. ಬೀದರ್‌ನಲ್ಲಿ ಎಟಿಎಂಗೆ ಹಣ ತುಂಬುವ ವಾಹನದಲ್ಲಿ ಸಶಸ್ತ್ರ ಭದ್ರತಾ ಸಿಬ್ಬಂದಿ ಇರಲಿಲ್ಲ. ಹೀಗಾಗಿ ಆ ರೀತಿ ಆಗಿದೆ. ಮಂಗಳೂರಿನಲ್ಲಿ ಬ್ಯಾಂಕ್ ದರೋಡೆ ವೇಳೆ ಅಲ್ಲಿ ಭದ್ರತಾ ಸಿಬ್ಬಂದಿ ಇರಲಿಲ್ಲ. ಇದಕ್ಕೆ ಕಾನೂನು ಸುವ್ಯವಸ್ಥೆ ಹಾಳಾಗಿದೆ ಎಂದು ಹೇಳುವುದು ಸರಿಯಲ್ಲ' ಎಂದರು.

'ಬಿಜೆಪಿ ಅಧಿಕಾರದಲ್ಲಿದ್ದಾಗ ಎಷ್ಟು ಕೊಲೆಗಳಾಗಿದ್ದವು, ಎಷ್ಟು ಅತ್ಯಾಚಾರ ಆಗಿದ್ದವು, ಎಲ್ಲೆಲ್ಲಿ ಬ್ಯಾಂಕ್ ದರೋಡೆಯಂತಹ ಘಟನೆಗಳು ನಡೆದಿವೆ ಎಂದು ನಾನು ಅಂಕಿ - ಅಂಶ ಕೊಡುತ್ತೇನೆ. ತಮ್ಮ ಆಡಳಿತದ ಅವಧಿಯಲ್ಲಿ ಆಗಿರುವ ಘಟನೆಗಳನ್ನು ಬಿಜೆಪಿಯವರು ಮರೆತಿರಬೇಕು' ಎಂದರು.

ಪರೀಕ್ಷೆಗೆ ಶೇ 39.93 ಹಾಜರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಉಳಿಕೆ ಮೂಲ ವೃಂದದ 277 ಗ್ರೂಪ್-ಬಿ ಹುದ್ದೆಗಳ ನೇಮಕಾತಿಗೆ ಭಾನುವಾರ ನಡೆದ ಸ್ಪರ್ಧಾತ್ಮಕ ಪರೀಕ್ಷೆಗೆ ಅರ್ಜಿ ಸಲ್ಲಿಸಿದವರ ಪೈಕಿ ಶೇ 39.93ರಷ್ಟು ಅಭ್ಯರ್ಥಿಗಳು ಮಾತ್ರ ಹಾಜರಾಗಿದ್ದಾರೆ.

478 ಪರೀಕ್ಷಾ ಕೇಂದ್ರಗಳಲ್ಲಿ ಬೆಳಗ್ಗೆ 10ರಿಂದ 11.30ರವರೆಗೆ ನಡೆದ ಪತ್ರಿಕೆ-1ರ ಪರೀಕ್ಷೆಗೆ ಒಟ್ಟು 1,81,314 ಅಭ್ಯರ್ಥಿಗಳು ಹೆಸರು ನೋಂದಾಯಿಸಿದ್ದರು ಎಂದು ಕೆಪಿಎಸ್‌ಸಿ ಮೂಲಗಳು ಹೇಳಿವೆ.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ **9606038256**



ನಾಗರಬಾವಿ ಮುಖ್ಯರಸ್ತೆಯ ಭೈರವೇಶ್ವರ ನಗರದ 1ನೇ ಅಡ್ಡರಸ್ತೆಯ ಅಂಚಿನಲ್ಲಿ ಕಸ ಸುರಿಯಲಾಗಿದೆ

ಕಸ ಹರಡುತ್ತಿರುವ ನಾಯಿಗಳು

ನಾಗರಬಾವಿ ಮತ್ತು ಮೂಡಲಪಾಳ್ಯ ಮುಖ್ಯರಸ್ತೆಯ ಭೈರವೇಶ್ವರ ನಗರದ ಒಂದನೇ ಅಡ್ಡರಸ್ತೆಯ ಮನೆಮನೆಗಳಿಂದ ಕಸವನ್ನು ಸಂಗ್ರಹಿಸುತ್ತಿಲ್ಲ. ಈ ಬೀದಿಯ ಬಹುತೇಕ ಮನೆಯವರು ಹಸಿ–ಒಣ ಕಸ ವಿಂಗಡಿಸದೇ, ತಂದು ರಸ್ತೆಯ ಅಂಚಿನಲ್ಲಿ ಸುರಿಯುತ್ತಾರೆ. ಕಸದಲ್ಲಿನ ಆಹಾರ ತ್ಯಾಜ್ಯವನ್ನು ನಾಯಿಗಳು ಎಳೆದಾಡಿ ರಸ್ತೆಯ ತುಂಬೆಲ್ಲ ಚೆಲ್ಲಾಡಿರುತ್ತವೆ. ಇದರಿಂದ ಇಲಿ–ಹೆಗ್ಗಣಗಳು ಸೇರಿ, ಅಕ್ಕ–ಪಕ್ಕ ನಿಲ್ಲಿಸಿರುವ ಕಾರುಗಳ ವೈಯರ್ ಕತ್ತರಿಸಿರುವ ಘಟನೆಗಳೂ ಇವೆ. ಇದನ್ನು ಬಿಬಿಎಂಪಿಯ ಆರೋಗ್ಯ ನಿರೀಕ್ಷಕರ ಗಮನಕ್ಕೆ ತಂದಿದ್ದರೂ ಸಮಸ್ಯೆ ಬಗೆಹರಿದಿಲ್ಲ. ಸಂಬಂಧಿತರು ಅಗತ್ಯ ಕ್ರಮ ತೆಗೆದುಕೊಂಡು, ಸಮಸ್ಯೆಯನ್ನು ಬಗೆಹರಿಸಬೇಕು.

ಭವಾನಿ ಶಂಕರ, ಜೀತೇಂದ್ರ, ರಾಜು, ಪುಟ್ಟರಾಜು, ದಶರಥ
ಒಂದನೇ ಅಡ್ಡರಸ್ತೆ ನಿವಾಸಿಗಳು, ಭೈರವೇಶ್ವರ ನಗರ

ಮೆಟ್ರೊ ರಸ್ತೆಗೆ ಡಾಂಬರು ಹಾಕಿಸಿ



ತಲಘಟ್ಟಪುರದಲ್ಲಿ 4ನೇ ಟಿ. ಬ್ಲಾಕ್‌ಗೆ ಹೋಗುವ ರಸ್ತೆ ಡಾಂಬರೀಕರಣವಾಗದ ಕಾರಣ ಜನರಿಗೆ ಸಮಸ್ಯೆಯಾಗುತ್ತಿದೆ

ಕನಕಪುರ ಮುಖ್ಯ ರಸ್ತೆಯ ರೇಷ್ಮೆ ಸಂಸ್ಥೆ ಮೆಟ್ರೊ ನಿಲ್ದಾಣದಿಂದ ಬನಶಂಕರಿ 6ನೇ ಹಂತ, 4ನೇ ಟಿ ಬ್ಲಾಕ್ ಸಂಪರ್ಕಿಸುವ 'ಮೆಟ್ರೊ ರಸ್ತೆ' ಸಂಪೂರ್ಣ ಹಾಳಾಗಿದೆ. ಟಿ. ಬ್ಲಾಕ್ ಬಡಾವಣೆ ಮಾತ್ರವಲ್ಲದೆ ನೆರೆಯ ವಿಐಎಸ್ 'ಎಲ್' ಲೇಔಟ್ ಸಹಿತ ಈ ಭಾಗದ ಜೀವನಾಡಿ ರಸ್ತೆ ಇದು. ಕಳೆದ ವರ್ಷ ದುರಸ್ತಿಯ ಹೆಸರಿನಲ್ಲಿ ಜಲ್ಲಿಕಲ್ಲು ಹಾಸಿದ್ದರೂ ಡಾಂಬರೀಕರಣ ಮಾತ್ರ ಕೈಗೊಂಡಿಲ್ಲ. ಸಂಚಾರ ಕಷ್ಟವಾಗಿದ್ದು, ದೂಳುಮಯವಾಗಿದೆ. ಕೂಡಲೇ ಡಾಂಬರೀಕರಣ ಮಾಡಬೇಕು.

ಆರ್. ಜಯಸಿಂಹ, ಬಿಎಸ್‌ಕೆ 6ನೇ ಹಂತ, 4ನೇ ಟಿ ಬ್ಲಾಕ್, ತಲಘಟ್ಟಪುರ

ವ್ಯರ್ಥವಾಗುತ್ತಿದೆ ಜೀವಜಲ

ನಗರದ ಮಹಾರಾಣಿ ಕಾಲೇಜು ಮುಂಭಾಗದ ಶೇಷಾದ್ರಿ ರಸ್ತೆಯಲ್ಲಿ ನಾಲ್ಕೈದು ತಿಂಗಳಿನಿಂದ ಜೀವ ಜಲ ಸೋರುತ್ತದೆ. ನೀರು ಸೋರಿಕೆಯಾಗುವ ಜಾಗದ ಪಕ್ಕದಲ್ಲೇ ಫ್ರೀಡಂ ಪಾರ್ಕ್ ಇದ್ದು, ಇಲ್ಲಿ ನಾನಾ ಸಂಘಟನೆಗಳಿಂದ ಧರಣಿ ಮತ್ತು ಮುಷ್ಕರ ಸೇರಿ ಹಲವು ಚಳವಳಿಗಳು ನಡೆಯುತ್ತಲೇ ಇರುತ್ತವೆ. ನೀರು ಸೋರುತ್ತಿರುವುದು ಯಾರಿಗೂ ಕಾಣದೇ ಹೋಗಿರುವುದು ವ್ಯವಸ್ಥೆಗೆ ಹಿಡಿದ ಗ್ರಹಣವನ್ನು ಸೂಚಿಸುತ್ತದೆ. ಶೇಷಾದ್ರಿ ರಸ್ತೆಯನ್ನು ವೈಟ್‌ಟೈಪಿಂಗ್ ಮಾಡಿರುವುದರಿಂದ, ರಸ್ತೆಯ ಒಳಭಾಗದಿಂದ ನೀರು ಜಿನುಗುತ್ತಿದೆ. ಇನ್ನು ಭೂಮಿಯೊಳಗೆ ಎಷ್ಟು ನೀರು ಇಳಿದಿರಬಹುದು ಎಂದು ನನ್ನನ್ನು ಕಾಡುತ್ತಿದೆ. ಬೆಂಗಳೂರು ಜಲ ಮಂಡಳಿ ಅಧಿಕಾರಿಗಳು ಶೀಘ್ರವಾಗಿ ಜೀವಧಾರೆ ಪೋಲಾಗುತ್ತಿರುವುದನ್ನು ತಡೆಗಟ್ಟಬೇಕು.



ನಗರದ ಮಹಾರಾಣಿ ಕಾಲೇಜು ಮುಂಭಾಗದ ಶೇಷಾದ್ರಿ ರಸ್ತೆಯಲ್ಲಿ ನೀರು ಜಿನುಗುತ್ತಿದೆ

ಶಿವಪ್ರಸಾದ್, ವಾಯು ವಿಹಾರಿ

ಉದ್ಯಾನದ ಗೇಟಿಗೆ ಸಿಗದ ರಿಪೇರಿ ಭಾಗ್ಯ



ಎನ್‌ಆರ್‌ ಕಾಲೊನಿಯಲ್ಲಿ ದುರಸ್ತಿ ಕಾಣದ ಕಬ್ಬಿಣದ ಗೇಟ್

ಎನ್.ಆರ್. ಕಾಲೊನಿ ಮುಖ್ಯರಸ್ತೆಯಲ್ಲಿರುವ ಅಂಬಾಭವಾನಿ ದೇವಾಲಯದ ಪಕ್ಕದಲ್ಲಿ ಸಣ್ಣ ಉದ್ಯಾನವಿದೆ. ಈ ಉದ್ಯಾನದ ಪ್ರವೇಶದ್ವಾರಕ್ಕೆ ಎರಡು ಕಡೆ ಕಬ್ಬಿಣದ ಗೇಟ್‌ಗಳನ್ನು ಅಳವಡಿಸಲಾಗಿದೆ. ಅವುಗಳಲ್ಲಿ ಒಂದು ಗೇಟು ಹಾಳಾಗಿ ಹಲವು ವರ್ಷಗಳಾಗಿವೆ. ಇದರ ಫೋಟೊ ತೆಗೆದು ಬಿಬಿಎಂಪಿ ಅಧಿಕಾರಿಗಳಿಗೆ ಹಲವು ಬಾರಿ ದೂರು ನೀಡಿದರೂ ರಿಪೇರಿ ಭಾಗ್ಯ ಕೂಡಿಬಂದಿಲ್ಲ. ಪಕ್ಕದಲ್ಲಿಯೇ ಆಲದಮರವಿದ್ದು ಆಲದ ಮರದ ಅಡಿಯಲ್ಲಿ ತಿಪ್ಪೆ ಗುಂಡಿಯ ರೀತಿಯಲ್ಲಿ ಕಸದ ರಾಶಿ ಬಿದ್ದಿರುತ್ತದೆ. ಸಂಬಂಧಪಟ್ಟವರು ಕೂಡಲೇ ಗೇಟ್ ದುರಸ್ತಿ ಮಾಡಬೇಕು. ಕಸ ರಾಶಿ ಹಾಕುವುದನ್ನು ತಪ್ಪಿಸಬೇಕು.

ಕೆ.ಎಸ್. ನಾಗರಾಜ್, ಬಿಬಿಎಂಪಿ ಕಾಂಪ್ಲೆಕ್ಸ್, ಎನ್.ಆರ್. ಕಾಲೊನಿ

5 ವರ್ಷದಿಂದ ದುರಸ್ತಿಯಾಗದ ರಸ್ತೆ

ಹೆಬ್ಬಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ 22ನೇ ವಾರ್ಡ್‌ನ ಸಿಐಎಲ್ ಬಡಾವಣೆ ಮುಖ್ಯ ರಸ್ತೆ ಹೊಂಡ, ಗುಂಡಿಗಳು ಬಿದ್ದು ಸುಮಾರು ಐದು ವರ್ಷಗಳಾದವು. ಯಾರೂ ಇತ್ತ ಗಮನ ಹರಿಸುತ್ತಿಲ್ಲ. ಕೂಡಲೇ ರಸ್ತೆ ದುರಸ್ತಿ ಮಾಡುವ ಮೂಲಕ ಬಡಾವಣೆಯ ನಿವಾಸಿಗಳಿಗೆ ಅನುಕೂಲ ಮಾಡಿಕೊಡಬೇಕು.

ಸಿ. ಮುನಿಕೃಷ್ಣ
ಮಹಾನಗರ ಪಾಲಿಕೆ ಮಾಜಿ ಸದಸ್ಯ



ಸಿಐಎಲ್ ಬಡಾವಣೆಯಲ್ಲಿ ರಸ್ತೆ ತುಂಬಾ ಗುಂಡಿಗಳು ಬಿದ್ದಿವೆ

ಉಮಾ ಕುಲಕರ್ಣಿಗೆ 'ಎಸ್.ಎಲ್. ಭೈರಪ್ಪ ಸಾಹಿತ್ಯ ಪ್ರಶಸ್ತಿ' ಪ್ರದಾನ

'ಭೈರಪ್ಪ ಓದುಗ ಬಳಗ ವೃದ್ಧಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾದಂಬರಿಕಾರ ಎಸ್.ಎಲ್.ಭೈರಪ್ಪ ಅವರ ಬರಹದ ಶೈಲಿ ಭಿನ್ನವಾಗಿದೆ. ಇದರಿಂದಾಗಿಯೇ ಅವರಿಗೆ ಮರಾಠಿಯಲ್ಲಿ ದೊಡ್ಡ ಓದುಗರ ವಲಯವಿದೆಯೇ ಹೊರತು, ಮಹಾರಾಷ್ಟ್ರದಲ್ಲಿ ಆರೆಸ್ಸೆಸ್ (ರಾಷ್ಟ್ರೀಯ ಸ್ವಯಂಸೇವಕ ಸಂಘ) ಪ್ರಬಲವಾಗಿರುವುದು ಕಾರಣವಲ್ಲ' ಎಂದು ಮರಾಠಿ ಅನುವಾದಕಿ, ಲೇಖಕಿ ಉಮಾ ಕುಲಕರ್ಣಿ ಹೇಳಿದರು.

ಎಸ್.ಎಲ್. ಭೈರಪ್ಪ ಸಾಹಿತ್ಯ ಪ್ರತಿಷ್ಠಾನ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು 'ಎಸ್.ಎಲ್. ಭೈರಪ್ಪ ಸಾಹಿತ್ಯ ಪ್ರತಿಷ್ಠಾನ ಪ್ರಶಸ್ತಿ' ಸ್ವೀಕರಿಸಿ, ಮಾತನಾಡಿದರು. ಪ್ರಶಸ್ತಿಯು ₹1 ಲಕ್ಷ ನಗದು ಒಳಗೊಂಡಿದೆ.

'ಮಹಾರಾಷ್ಟ್ರದಲ್ಲಿ ಆರೆಸ್ಸೆಸ್ ಪ್ರಬಲ ಆಗಿರುವುದರಿಂದ ಅಲ್ಲಿ ಭೈರಪ್ಪ ಅವರ ಕೃತಿಗಳಿಗೆ ಹೆಚ್ಚು ಬೇಡಿಕೆಯಿದೆಯೆಂದು ಕನ್ನಡದ ಕೆಲ ಸಾಹಿತಿಗಳು ಅಭಿಪ್ರಾಯ ಪಟ್ಟಿದ್ದರು. ಆದರೆ, ವಾಸ್ತವ ಬೇರೆ ಆಗಿದ್ದು, ಓದುಗರ ಬಳಗ ಹೆಚ್ಚಲು ಅವರ ಬರವಣಿಗೆ ಶೈಲಿಯೇ ಮುಖ್ಯ ಕಾರಣ. ಅವರಿಗೆ ಮರಾಠಿಯಲ್ಲಿ ದೊಡ್ಡ ಓದುಗರ ವಲಯವಿದ್ದು, ಪುಣೆಗೆ ಬರುತ್ತಾರೆಂದು ತಿಳಿದರೆ ದೊಡ್ಡ ಸಂಖ್ಯೆಯಲ್ಲಿ ಜನರು ಅವರನ್ನು ನೋಡಲು ಕಾದು ಕುಳಿತಿರುತ್ತಾರೆ' ಎಂದರು.



ಕಾರ್ಯಕ್ರಮದಲ್ಲಿ ಉಮಾ ಕುಲಕರ್ಣಿ (ಎಡದಿಂದ ಮೂರನೆಯವರು) ಅವರಿಗೆ 'ಎಸ್.ಎಲ್. ಭೈರಪ್ಪ ಸಾಹಿತ್ಯ ಪ್ರತಿಷ್ಠಾನ ಪ್ರಶಸ್ತಿ'ಯನ್ನು ಎಸ್.ಎಲ್. ಭೈರಪ್ಪ ಅವರು ನೀಡಿ ಗೌರವಿಸಿದರು. (ಎಡದಿಂದ) ಉದಯಶಂಕರ್, ಸರಸ್ವತಿ ಭೈರಪ್ಪ, ರಾಜ ಮತ್ತು ಪ್ರೊ.ಜಿ.ಎಲ್. ಶೇಖರ್ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

'ಭೈರಪ್ಪ ಅವರ 'ವಂಶವೃಕ್ಷ' ಕಾದಂಬರಿ ಅನುವಾದ ಮಾಡುವಾಗ ನಾನು ಕಣ್ಣೀರು ಹಾಕಿದ್ದೂ ಇದೆ. ಕೆಲವು ಕಾದಂಬರಿಗಳು ಆನಂದ ಕೊಟ್ಟಿದ್ದೂ ಇದೆ. 'ಮಂದ್ರ' ಕಾದಂಬರಿ ಅನುವಾದ ಮಾಡುವಾಗ ಪದಗಳ ಭಾಷಾಂತರ ಕಷ್ಟವಾಗಿತ್ತು. ಆದರೂ ಮೂಲ ಕಥೆಗೆ ಧಕ್ಕೆಯಾಗದ ರೀತಿಯಲ್ಲಿ, ಮರಾಠಿ ಓದುಗರಿಗೆ ಅರ್ಥವಾಗುವ ರೀತಿಯಲ್ಲಿ ಕಟ್ಟಿಕೊಟ್ಟಿದ್ದೇನೆ' ಎಂದು ಹೇಳಿದರು.

ಲೇಖಕಿ ಸಹನಾ ವಿಜಯಕುಮಾರ್, 'ಭೈರಪ್ಪ ಅವರನ್ನು ಮರಾಠಿ ಓದುಗರಿಗೆ ತಲುಪಿಸಿದ ಶ್ರೇಯಸ್ಸು ಉಮಾ ಕುಲಕರ್ಣಿ ಅವರಿಗೆ ಸಲ್ಲುತ್ತದೆ. ಕನ್ನಡದ ನಂತರ ಮರಾಠಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಓದುಗರನ್ನು ಭೈರಪ್ಪ ಹೊಂದಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾದಂಬರಿಕಾರ ಎಸ್.ಎಲ್.ಭೈರಪ್ಪ ಅವರು ತಮ್ಮ ಕೃತಿಯನ್ನು ಮರಾಠಿ ಓದುಗರಿಗೆ ತಲುಪಿಸಿದಕ್ಕಾಗಿ ಧನ್ಯವಾದ ತಿಳಿಸಿದರು. ಲೇಖಕಿಯರಾದ ಅಂಜಲಿ ಜೋಶಿ, ಉಮಾ ರಾಮರಾವ್, ಭೈರಪ್ಪ ಅವರ ಪತ್ನಿ ಸರಸ್ವತಿ, ಪ್ರತಿಷ್ಠಾನದ ಟ್ರಸ್ಟಿ ಉದಯಶಂಕರ್, ಪ್ರತಿಷ್ಠಾನದ ಕಾರ್ಯದರ್ಶಿ ಪ್ರೊ.ಜಿ.ಎಲ್. ಶೇಖರ್ ಹಾಗೂ ಸಾಹಿತ್ಯ ಭಂಡಾರದ ರಾಜ ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರೇಹಳ್ಳಿ ಶ್ರೀಲಕ್ಷ್ಮೀನರಸಿಂಹ ಸ್ವಾಮಿ ಕೈಂಕರ್ಯ ಸಭಾದ ವತಿಯಿಂದ ಪ್ರತಿಭಾ ಪುರಸ್ಕಾರಕ್ಕಾಗಿ ವೈಷ್ಣವ (ಅಯ್ಯಂಗಾರ್) ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

2023–24ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ, ಪಿಯುಸಿ, ಪದವಿ, ಡಿಪ್ಲೊಮಾ, ವೈದ್ಯಕೀಯ/ತಾಂತ್ರಿಕ ಪದವಿಗಳಲ್ಲಿ ಉತ್ತಮ ಅಂಕಗಳಿಸಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಅರ್ಜಿಯಲ್ಲಿ ಪೂರ್ಣ ವಿಳಾಸ, ಮೊಬೈಲ್ ಸಂಖ್ಯೆಯ ವಿವರಗಳೊಂದಿಗೆ, ಭಾವಚಿತ್ರ ಹಾಗೂ ದೃಢೀಕೃತ ಅಂಕಪಟ್ಟಿಯ ಛಾಯಾಪ್ರತಿಯನ್ನು ಫೆ.25ರ ಒಳಗೆ ಅಧ್ಯಕ್ಷರು/ಗೌರವ ಕಾರ್ಯದರ್ಶಿಗಳು, ನಂ.29(ಹಳೆಯ ಸಂಖ್ಯೆ 15), 7ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಮಲ್ಲೇಶ್ವರ, ಬೆಂಗಳೂರು–560003 – ಈ ವಿಳಾಸಕ್ಕೆ ತಲುಪಿಸಬೇಕು. ಹೆಚ್ಚಿನ ಮಾಹಿತಿಗಾಗಿ 94499 05340/8660905677 ಸಂಪರ್ಕಿಸಬಹುದು.

ಬಿಬಿಎಂಪಿ ಪಶುಪಾಲನಾ ವಿಭಾಗದಿಂದ ಬೀದಿ ನಾಟಕ

ಪ್ರಾಣಿಗಳ ಬಗ್ಗೆ ನಾಗರಿಕರಲ್ಲಿ ಅರಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಾಣಿಗಳ ಆರೋಗ್ಯದ ಮೂಲಕ ಸಾರ್ವಜನಿಕ ಆರೋಗ್ಯ'ದ ಶೀರ್ಷಿಕೆಯಡಿ ಸಮುದಾಯ ಪ್ರಾಣಿಗಳ ಜೊತೆ ಸಹಬಾಳ್ವೆ ಮೂಡಿಸುವ ಜಾಗೃತಿ ಅಭಿಯಾನ ಭಾನುವಾರ ನಗರದ ವಿವಿಧ ವಲಯಗಳಲ್ಲಿ ನಡೆಯಿತು.

ಸಮುದಾಯ ಪ್ರಾಣಿಗಳಿಗಾಗಿ ಪಾಲಿಕೆಯ ಪಶುಪಾಲನಾ ವಿಭಾಗದಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಮಾಹಿತಿ ನೀಡಲಾಯಿತು. ಪ್ರಾಣಿಗಳ ಕುರಿತು ಇರುವ ಕಾಯ್ದೆಗಳ ಬಗ್ಗೆ ಪರಿಚಯಿಸಲಾಯಿತು. ನಾಗರಿಕರು ಏನು ಮಾಡಬಹುದು-ಏನು ಮಾಡಬಾರದು, ಸಮಸ್ಯೆಯಾದರೆ ಯಾರನ್ನು ಸಂಪರ್ಕಿಸಬೇಕು ಎಂಬ ಮಾಹಿತಿ ನೀಡುವ ಮೂಲಕ ನಾಗರಿಕರಲ್ಲಿ ಅರಿವು ಮೂಡಿಸಲಾಯಿತು.

ಜನರಿಂದ ಸಮುದಾಯದ ಪ್ರಾಣಿಗಳಿಗೆ ಆಗುವ ಸಮಸ್ಯೆಗಳನ್ನು ತಪ್ಪಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು ತಿಳಿ ಹೇಳಲಾಯಿತು. ಮನುಷ್ಯರಂತೆಯೇ ಪ್ರಾಣಿಗಳು ಎಂದು ತಿಳಿದು ಅವುಗಳ ಜೊತೆ ಸೌಹಾರ್ದವಾಗಿ ವರ್ತಿಸಬೇಕು. ಕ್ರೂರವಾಗಿ ನಡೆದುಕೊಳ್ಳಬಾರದು ಎಂದು ಅಧಿಕಾರಿಗಳು ತಿಳಿಸಿದರು.



ಸಮುದಾಯ ಪ್ರಾಣಿಗಳ ಸಹಬಾಳ್ವೆ ಮೂಡಿಸುವ ಜಾಗೃತಿ ಅಭಿಯಾನ ಬೊಮ್ಮನಹಳ್ಳಿ ವಲಯದಲ್ಲಿ ನಡೆಯಿತು

ನಾಲ್ಕು ವಲಯಗಳಲ್ಲಿ ಜಾಗೃತಿ: ಆರ್.ಆರ್ ನಗರ ವಲಯದ ಮೈಸೂರು ರಸ್ತೆಯ ಗೋಪಾಲನ್ ಆರ್ಕೇಡ್ ಮಾಲ್‌ನಲ್ಲಿ ನೃತ್ಯ ರೂಪಕದ ಮೂಲಕ ಸಮುದಾಯದ ಪ್ರಾಣಿಗಳ ಕುರಿತು ಅರಿವು ಮೂಡಿಸಲಾಯಿತು. 200ಕ್ಕೂ ಹೆಚ್ಚು ಮಂದಿಗೆ ಮಾನವ–ಪ್ರಾಣಿಗಳ ಸಹಬಾಳ್ವೆಯ ಬಗ್ಗೆ ಅರಿವು ಮೂಡಿಸಲಾಯಿತು.

ಮಹದೇವಪುರದ ವಲಯ ವ್ಯಾಪ್ತಿಯಲ್ಲಿ ನೆಕ್ಸಸ್ ಶಾಂತಿನಿಕೇತನ, ಬ್ರೂಕ್ ಫೀಲ್ಡ್, ಪಾರ್ಕ್ ಸ್ಕ್ವೇರ್, ನೆಕ್ಸಸ್ ವೈಟ್ ಫೀಲ್ಡ್, ಬೆಂಗಳೂರು ಸೆಂಟ್ರಲ್ ಮಾಲ್‌ಗಳಲ್ಲಿ ಅಭಿಯಾನ ನಡೆಸಲಾಯಿತು.

ಪೂರ್ವ ವಲಯದಲ್ಲಿ ಫನ್ ವರ್ಲ್ಡ್, ಕುಮಾರ ಪಾರ್ಕ್, ತರಳಬಾಳು ರಸ್ತೆ, ಬೊಮ್ಮನಹಳ್ಳಿ ವಲಯದಲ್ಲಿ ಕೋಡಿಚಿಕ್ಕನಹಳ್ಳಿಯ ಶನೇಶ್ವರ ದೇವಸ್ಥಾನ, ಕೂಡ್ಲು ಗೇಟ್ ಹಾಗೂ ಇನ್ನಿತರೆ ಸ್ಥಳಗಳಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಸಮುದಾಯದ ಪ್ರಾಣಿಗಳ ಕುರಿತು ಬೀದಿ ನಾಟಕ, ನೃತ್ಯ ಮಾಡಲಾಯಿತು. ಭಿತ್ತಿಪತ್ರಗಳನ್ನು ವಿತರಿಸಲಾಯಿತು.

ಪಶುಪಾಲನಾ ವಿಭಾಗದ ಸಹಾಯಕ ನಿರ್ದೇಶಕರಾದ ಡಾ. ವೆಂಕಟೇಶ್, ಡಾ. ರುದ್ರೇಶ್ ಉಪಸ್ಥಿತರಿದ್ದರು.

'ಸತ್ಯ ಹೇಳುವವರು ಎಲ್ಲಿದ್ದಾರೆ?'

ಮೈಸೂರು ಸಾಹಿತ್ಯ ಉತ್ಸವ ಉದ್ಘಾಟಿಸಿದ ಸಾಯಿನಾಥ್

ಪ್ರಜಾವಾಣಿ ವಾರ್ತೆ

ಮೈಸೂರು: 'ದೆಹಲಿಯ ಗಡಿಗಳಲ್ಲಿ ನಡೆದ ರೈತ ಹೋರಾಟ, ಕೋವಿಡ್‌ನ ಸಾವುಗಳು, ವಲಸೆ ಸೇರಿದಂತೆ ದೇಶದಾದ್ಯಂತ ನಡೆದ ಘಟನೆಗಳ ಬಗ್ಗೆ ಸತ್ಯ ಹೇಳುವ ಪತ್ರಕರ್ತರು, ಕವಿಗಳು, ಓದುಗರು, ಬರಹಗಾರರು ಎಲ್ಲಿದ್ದಾರೆ' ಎಂದು ಪತ್ರಕರ್ತ ಪಿ.ಸಾಯಿನಾಥ್ ಪ್ರಶ್ನಿಸಿದರು.


ಇಲ್ಲಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಭಾನುವಾರ 'ಮೈಸೂರು ಲಿಟರರಿ ಅಸೋಸಿಯೇಷನ್' ವತಿಯಿಂದ ಆಯೋಜಿಸಿದ್ದ 6ನೇ ಆವೃತ್ತಿಯ 'ಮೈಸೂರು ಸಾಹಿತ್ಯ ಉತ್ಸವ' ಉದ್ಘಾಟಿಸಿ ಮಾತನಾಡಿದರು.

'ಮಾರ್ಚ್ 2020ರಿಂದ ಜನವರಿ 2022ರವರೆಗೆ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ 47 ಲಕ್ಷವೆಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದರೆ, ಗ್ಲೋಬಲ್ ಡೆವಲಪ್‌ಮೆಂಟಲ್ ಕೌನ್ಸಿಲ್ 49 ಲಕ್ಷವೆಂದು ತಿಳಿಸಿದೆ. ಆದರೆ, ಕೇಂದ್ರ ಸರ್ಕಾರ 4.86 ಲಕ್ಷವೆಂದು ಹೇಳುತ್ತದೆ. ಈ ಮೂಲಕ ಸತ್ಯ ಮುಚ್ಚಿಡಲಾಗಿದೆ' ಎಂದು ದೂರಿದರು.

'ಅಟಾರ್ನಿ ಜನರಲ್ ಅವರು ಸುಪ್ರೀ ಕೋರ್ಟ್‌ಗೆ ಮಾರ್ಚ್ 21ರಂದು ಒಬ್ಬರೇ ಒಬ್ಬರೂ ವಲಸೆ ಹೋಗಿಲ್ಲ ಎಂದರು. 14 ದಿನದ ನಂತರ 23,572 ವಲಸಿಗರಿಗೆ ಗಂಜಿಕೇಂದ್ರ ಸ್ಥಾಪಿಸಲಾಗಿದೆಯೆಂದು ಹೇಳುತ್ತಾರೆ. ಇವು ಯಾರಿಗಾಗಿ ಸ್ಥಾಪನೆಯಾಗಿದ್ದವು?' ಎಂದು ಕೇಳಿದರು.

'ದೆಹಲಿಯ ಗಡಿಗಳಲ್ಲಿ ನಡೆದ ರೈತ ಹೋರಾಟದಲ್ಲಿ 730 ರೈತರು ಮೃತಪಟ್ಟರು. ಮೂರು ದಶಕಗಳಲ್ಲಿಯೇ ವಿಶ್ವದ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ಮಾದರಿ ಹೋರಾಟವನ್ನು ಕೊನೆಗೊಳಿಸಲು ಕೇಂದ್ರ ಸರ್ಕಾರವು ಸೇನೆ ಬಳಸಿತ್ತು. ತನ್ನದೇ ಕಾನೂನುಗಳನ್ನು ಉಲ್ಲಂಘಿಸಿತ್ತು' ಎಂದು ದೂರಿದರು.

'ಮೈಸೂರು ಲಿಟರರಿ ಅಸೋಸಿಯೇಷನ್' ಅಧ್ಯಕ್ಷ ಪ್ರೊ.ಕೆ.ಸಿ. ಬೆಳ್ಳಿಯಪ್ಪ ಹಾಜರಿದ್ದರು.



ಮೈಸೂರಿನಲ್ಲಿ ಭಾನುವಾರ 'ಮೈಸೂರು ಸಾಹಿತ್ಯ ಉತ್ಸವ' ಉದ್ಘಾಟಿಸಿದ ಪಿ.ಸಾಯಿನಾಥ್ ಮಾತನಾಡಿದರು

'ಪುಸ್ತಕಗಳತ್ತ ಮರಳಬೇಕಿದೆ'

'ಆಕ್ಸ್‌ಫರ್ಡ್ ನಿಘಂಟು 2024ರ ವರ್ಷದ ಪದವೆಂದು 'ಬ್ರೈನ್ ರಾಟ್' ಅನ್ನು ಹೇಳಿದೆ. ವ್ಯಕ್ತಿಯ ಬೌದ್ಧಿಕತೆಯ ಕೊಳೆಯುವಿಕೆಯು ಕ್ಷುಲ್ಲಕ ವಿಚಾರದೆಡೆಗಿನ ಆಸಕ್ತಿಯಿಂದ ಇದು ಬಂದಿದೆ. ಆನ್‌ಲೈನ್‌ನಲ್ಲಿ ಹೆಚ್ಚು ಕಳೆಯುವುದಕ್ಕಿಂತ ಪುಸ್ತಕಗಳೆಡೆಗೆ ಆಸಕ್ತಿ ಬೆಳೆಸಿಕೊಳ್ಳಬೇಕಿದೆ' ಎಂದು ಸಾಯಿನಾಥ್ ಹೇಳಿದರು.

'ಮೊಬೈಲ್ ಫೋನ್‌ನಲ್ಲಿ ಹೆಚ್ಚು ಹೊತ್ತು ಕಳೆಯುವುದಕ್ಕೆ 'ಡೂಮ್‌ಸ್ಕ್ರೋಲಿಂಗ್' ಎನ್ನುತ್ತಾರೆ. ಇದು ಮಾನಸಿಕ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಸ್ವೀಡನ್ ಸರ್ಕಾರವು ಮೊದಲು ಪಠ್ಯಪುಸ್ತಕಗಳನ್ನು ಆನ್‌ಲೈನ್‌ನಲ್ಲಿ ಸಿಗುವಂತೆ ಮಾಡಿತ್ತು. ಇದೀಗ ಎಚ್ಚೆತ್ತು ಮತ್ತೆ ಪುಸ್ತಕಗಳ ಬಳಕೆ ಕಡ್ಡಾಯಗೊಳಿಸಿದೆ' ಎಂದರು.

ಲೈಂಗಿಕ ದೌರ್ಜನ್ಯ: 57 ಮಂದಿ ಬಂಧನ

ಪತ್ತನಂತಿಟ್ಟ (ಪಿಟಿಐ): ಜಿಲ್ಲೆಯ ದಲಿತ ಬಾಲಕಿಯೊಬ್ಬಳ ಮೇಲೆ ನಡೆದ ಲೈಂಗಿಕ ದೌರ್ಜನ್ಯ ಪ್ರಕರಣದ 59 ಆರೋಪಿಗಳ ಪೈಕಿ 57 ಮಂದಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಇಬ್ಬರು ಈಗ ವಿದೇಶದಲ್ಲಿದ್ದಾರೆ ಎಂದು ಜಿಲ್ಲಾ ಪೊಲೀಸ್ ಮುಖ್ಯಸ್ಥ ವಿ.ಜಿ. ವಿನೋದ್ ಕುಮಾರ್ ಹೇಳಿದ್ದಾರೆ. ಮಹಿಳಾ ಐಪಿಎಸ್ ಅಧಿಕಾರಿ ಎಸ್. ಅಜಿತಾ ಬೇಗಂ ನೇತೃತ್ವದ ಎಸ್ಐಟಿ ಈ ಪ್ರಕರಣದ ತನಿಖೆ ನಡೆಸುತ್ತಿದೆ.

ಆರೋಪಿಗಳ ಪೈಕಿ ಹಲವರು ಪತ್ತನಂತಿಟ್ಟ ಬಸ್ ನಿಲ್ದಾಣದಲ್ಲಿ ಬಾಲಕಿಯನ್ನು ಭೇಟಿಯಾದರು, ಆಕೆಯನ್ನು ವಾಹನಗಳಲ್ಲಿ ಬೇರೆ ಬೇರೆ ಸ್ಥಳಗಳಿಗೆ ಕರೆದೊಯ್ದು ದೌರ್ಜನ್ಯ ಎಸಗಿದರು ಎಂಬುದು ಈವರೆಗಿನ ತನಿಖೆಯಿಂದ ಗೊತ್ತಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಬಾಲಕಿ ಮೇಲೆ ಕನಿಷ್ಠ ಐದು ಬಾರಿ ಸಾಮೂಹಿಕ ಅತ್ಯಾಚಾರ ನಡೆದಿದೆ ಎಂಬುದು ಕೂಡ ತನಿಖೆಯಲ್ಲಿ ಗೊತ್ತಾಗಿದೆ.

ತಾನು 13 ವರ್ಷ ವಯಸ್ಸಿನಲ್ಲಿ ಇದ್ದಾಗಿನಿಂದ ಒಟ್ಟು 62 ಮಂದಿ ತನ್ನನ್ನು ಲೈಂಗಿಕ ದೌರ್ಜನ್ಯಕ್ಕೆ ಗುರಿಪಡಿಸಿದ್ದಾರೆ ಎಂದು ಸಂತ್ರಸ್ತೆ ಆರೋಪಿಸಿದ್ದಾಳೆ. ಈಗ ಈಕೆಗೆ 18 ವರ್ಷ ವಯಸ್ಸು.

ಎಸ್ಸೆಸ್ಸೆಲ್ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

'ವಿಶ್ವಕರ್ಮರು ಶೈಕ್ಷಣಿಕವಾಗಿ ಮುಂದುವರಿಯಲಿ'

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: 'ವಿಶ್ವಕರ್ಮ ಸಮಾಜವು ಶೈಕ್ಷಣಿಕವಾಗಿ ಮುಂದುವರಿಯಬೇಕಿದೆ. ಸಮುದಾಯದ ಮಕ್ಕಳು ಚೆನ್ನಾಗಿ ಓದಬೇಕು. ಉತ್ತಮ ಕೆಲಸಗಳಿಗೆ ಸೇರಿ ಸಮಾಜದಲ್ಲಿ ಗುರುತಿಸಿಕೊಳ್ಳಬೇಕು' ಎಂದು ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಜಂಟಿ ಆಯುಕ್ತ ಎಸ್. ಮಾಳಿಗಾಚಾರ್ ಸಲಹೆ ನೀಡಿದರು.

ಗಂಗಾಧರೇಶ್ವರ ಸ್ವಾಮಿ ವಿಶ್ವಕರ್ಮ ಸಾಂಸ್ಕೃತಿಕ ಸಮಿತಿ ವತಿಯಿಂದ ಶಿವಗಂಗೆಯ ದೇವಾಂಗ ಸಮುದಾಯ ಭವನದಲ್ಲಿ ಭಾನುವಾರ ನಡೆದ 'ವಿಶ್ವ ಬ್ರಾಹ್ಮಣ ವಟುಗಳಿಗೆ ಉಪನಯನ ಹಾಗೂ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಮುರನಾಳದ ಮಳೆ ರಾಜೇಂದ್ರ ಸ್ವಾಮಿ ಮಠದ ಜಗನ್ನಾಥ ಸ್ವಾಮೀಜಿ ಮಾತನಾಡಿ, 'ಸಮುದಾಯವು ಹಿಂದುಳಿದಿದೆ. ನಮ್ಮಲ್ಲಿ ಪ್ರತಿಭಾವಂತರು ಇದ್ದು, ಅವರನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಆಗಬೇಕು' ಎಂದು ಹೇಳಿದರು.

ಚಿಕ್ಕುಂಬಿಯ ಅಜಾತ ನಾಗಲಿಂಗ ಮಠದ ಅಭಿನವ ನಾಗಲಿಂಗ ಸ್ವಾಮೀಜಿ ಮಾತನಾಡಿ, 'ವಿಶ್ವಕರ್ಮ ಜನಾಂಗ ಹಿಂದುಳಿಯಲು ಒಗ್ಗಟ್ಟಿನ ಕೊರತೆ ಕಾರಣ. ಜನಾಂಗದ ಎಲ್ಲರೂ ಒಗ್ಗೂಡಿ ಪರಸ್ಪರ ಸಹಕಾರದಿಂದ ಕೈ ಜೋಡಿಸಿದಾಗ ರಾಜಕೀಯ, ಶೈಕ್ಷಣಿಕ, ಸಾಮಾಜಿಕವಾಗಿ ಮೇಲೆ ಬರಲು ಸಾಧ್ಯ' ಎಂದು ಹೇಳಿದರು.



ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು

ಕಾರ್ಯಕ್ರಮದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಗಂಗಾಧರೇಶ್ವರ ಸ್ವಾಮಿ ವಿಶ್ವಕರ್ಮ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಹೊನ್ನಪ್ಪಾಚಾರ್, ಪದಾಧಿಕಾರಿಗಳು, ಮುಖಂಡರು ಭಾಗವಹಿಸಿದ್ದರು.



ತಣ್ಣಗೆ ಸಣ್ಣಗೆ ಸುರಿದ ಮಳೆ

ನಗರದಲ್ಲಿ ಭಾನುವಾರ ದಿನವಿಡೀ ಮೋಡ ಕವಿದ ವಾತಾವರಣದ ನಡುವೆ ಸಣ್ಣಗೆ ಮಳೆ ಸುರಿಯಿತು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಭಾನುವಾರ ದಿನವಿಡೀ ಮೋಡ ಕವಿದ ವಾತಾವರಣ ಇದ್ದು, ಆಗಾಗ ಸಣ್ಣಗೆ ಮಳೆ ಸುರಿಯಿತು.

ಗುಡುಗು ಮಿಂಚುಗಳಿಲ್ಲದೇ. ಗಾಳಿಯ ರಭಸವಿಲ್ಲದೇ ಮಳೆಯಾಯಿತು. ತೇಲುವ ರೀತಿಯಲ್ಲಿ ಹನಿಗಳು ದಿನದ ಬಹುತೇಕ ಸಮಯ ತೇವದಂತೆ ಆವರಿಸಿದವು. ಬೆಳಿಗ್ಗೆ ಮತ್ತು ಸಂಜೆ ಹೊತ್ತು ನೆಲ ಒದ್ದೆಯಾಗುವಂತೆ ಮಳೆ ಬಂತು.

ಚಳಿಗಾಲದಲ್ಲಿ ಸಣ್ಣಗೆ ಬಂದಿರುವ ಈ ಮಳೆ ವಾತಾವರಣವನ್ನು ಇನ್ನಷ್ಟು ಶೀತಗೊಳಿಸಿತು. ಹಗಲು ಹೊತ್ತಲ್ಲೇ ಚಳಿ ಆವರಿಸಿದ್ದರಿಂದ ಜನರು ಮೈ ತುಂಬ ಬಟ್ಟೆ ಹೊದ್ದು, ಚಳಿಯಿಂದ ರಕ್ಷಿಸಿಕೊಳ್ಳುತ್ತಿರುವುದು ಕಂಡು ಬಂತು.

ಜಿಟಿಜಿಟಿ ಮಳೆ: ನಗರದಲ್ಲಿ ಸೋಮವಾರ ಮೋಡ ಕವಿದ ವಾತಾವರಣ ಇರಲಿದ್ದು, ಜಿಟಿ ಜಿಟಿ ಮಳೆಯಾಗುವ ಸಾಧ್ಯತೆಯಿದೆ. ಮುಂಜಾನೆ ಮಂಜು ಬೀಳುವ ಸಂಭವವಿದ್ದು, ಗರಿಷ್ಠ ತಾಪಮಾನವು 23 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ತಾಪಮಾನವು 16 ಡಿಗ್ರಿ ಸೆಲ್ಸಿಯಸ್ ಇರುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.



ಮಳೆಹನಿ ಮುಖಕ್ಕೆ ಬೀಳದಂತೆ ಕೈ ಅಡ್ಡ ಹಿಡಿದು ಜನರು ನಡೆಯುತ್ತಿರುವುದು ಚರ್ಚ್‌ಸ್ಟ್ರೀಟ್‌ನಲ್ಲಿ ಕಂಡು ಬಂತು ಪ್ರಜಾವಾಣಿ ಚಿತ್ರ/ ಎಸ್‌.ಕೆ. ದಿನೇಶ್



ವಾಯುಭಾರ ಕುಸಿತದ ಪರಿಣಾಮ ಭಾನುವಾರ ನಗರದಲ್ಲಿ ತುಂತುರು ಮಳೆಯಾಗಿದ್ದು, ಪುಟ್ಟ ಮಗುವಿಗೆ ಮಳೆ ಹನಿ ತಾಕದಿರಲು ದಂಪತಿ ಕೊಡೆಯ ಆಸರೆ ಪಡೆದರು ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಬಣ ರಾಜಕೀಯ ಕುರಿತು ಸಂಸದ ಜಗದೀಶ ಶೆಟ್ಟರ್ ಹೇಳಿಕೆ

‘ಬಿಜೆಪಿಯಲ್ಲಿ ಎಲ್ಲವೂ ಸರಿ ಇಲ್ಲ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಬಿಜೆಪಿಯಲ್ಲಿ ಎಲ್ಲವೂ ನೂರಕ್ಕೆ ನೂರರಷ್ಟು ಸರಿ ಇದೆ ಎಂದು ಹೇಳುವುದಿಲ್ಲ. ಆದರೆ, ಪಕ್ಷದಲ್ಲಿನ ವಿದ್ಯಮಾನಗಳನ್ನು ವರಿಷ್ಠರು ಗಮನಿಸುತ್ತಿದ್ದಾರೆ. ಸೂಕ್ತ ಸಮಯದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳುತ್ತಾರೆ’ ಎಂದು ಸಂಸದ ಜಗದೀಶ ಶೆಟ್ಟರ್ ಹೇಳಿದರು.

ಬಿಜೆಪಿಯಲ್ಲಿನ ಬಣ ರಾಜಕೀಯ ಕುರಿತಾದ ಪ್ರಶ್ನೆಗೆ, ಇಲ್ಲಿ ಭಾನುವಾರ ಸುದ್ದಿಗಾರರಿಗೆ ಅವರು ಪ್ರತಿಕ್ರಿಯಿಸಿದರು. ‘ವಿವಿಧ ನಾಯಕರು ಕೊಟ್ಟಿರುವ ವೈಯಕ್ತಿಕ ಹೇಳಿಕೆಗೆ ನಾನು ಪ್ರತಿಕ್ರಿಯೆ ನೀಡಲ್ಲ, ಏನೇ ಸಮಸ್ಯೆ ಇದ್ದರೂ ಮುಂದಿನ ದಿನಗಳಲ್ಲಿ ಸರಿಪಡಿಸುತ್ತಾರೆ’ ಎಂದರು.




ಜಗದೀಶ ಶೆಟ್ಟರ್

‘ಗಾಂಧಿ ಭಾರತ ಕಾರ್ಯಕ್ರಮಕ್ಕೆ ಹೆದರಿ, ಕೇಂದ್ರ ಸರ್ಕಾರವು ‘ಮುಡಾ’ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಿದೆ’ ಎಂಬ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಆರೋಪಕ್ಕೆ, ‘ಇವೆಲ್ಲ ಸಂಬಂಧವಿಲ್ಲದ ಹೇಳಿಕೆಗಳು. ನಮ್ಮ ವಿರುದ್ಧ ಆರೋಪಿಸುವ ಮೊದಲು ನಿಮ್ಮ ಪಕ್ಷ ಸರಿಪಡಿಸಿಕೊಳ್ಳಿ. ನಿಮ್ಮಲ್ಲಿ ನಿತ್ಯ ಡಿನ್ನರ್ ಪಾರ್ಟಿ, ಲಂಚ್ ಪಾರ್ಟಿ ನಡೆಯುತ್ತಿವೆ’ ಎಂದು ತಿರುಗೇಟು ನೀಡಿದರು.

‘ಸಿದ್ದರಾಮಯ್ಯ ಅವರು ಮುಡಾ ನಿವೇಶನ ಹಂಚಿಕೆ ಹಗರಣದಲ್ಲಿ ತಪ್ಪು ಮಾಡಿದ್ದಾರೆ. ಈ ಪ್ರಕರಣವನ್ನು ತನಿಖೆಗಾಗಿ ಸಿಬಿಐಗೆ ವಹಿಸಬೇಕು’ ಎಂದು ಒತ್ತಾಯಿಸಿದರು.

‘ಕಾಂಗ್ರೆಸ್ಸಿಗರು ರಾಜ್ಯ ಸರ್ಕಾರದ ಹಣ ವ್ಯಯಿಸಿ, ಗಾಂಧಿ ಭಾರತ ಕಾರ್ಯಕ್ರಮ ಮಾಡುತ್ತಿದ್ದಾರೆ. ಸಮಾವೇಶದ ಬ್ಯಾನರ್‌ಗಳಲ್ಲಿ ಪಕ್ಷದ ನಾಯಕರೇ ರಾರಾಜಿಸುತ್ತಿದ್ದಾರೆಯೇ ಹೊರತು, ಗಾಂಧೀಜಿ ಭಾವಚಿತ್ರವನ್ನು ದುರ್ಬೀನು ಹಿಡಿದು ನೋಡುವಂತಾಗಿದೆ’ ಎಂದು ಶೆಟ್ಟರ್ ಅವರು ವ್ಯಂಗ್ಯವಾಡಿದರು.

ಎಚ್‌.ಕೆ.ಪಾಟೀಲ ವ್ಯಂಗ್ಯ



ಗದಗ: ‘ಯಾವುದೇ ಕ್ಷಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡುತ್ತಾರೆ...’ ಎಂಬ ಬಿಜೆಪಿ ಸಂಸದ ಜಗದೀಶ್ ಶೆಟ್ಟರ್ ಅವರ ಹೇಳಿಕೆಗೆ ಸಚಿವ ಎಚ್‌.ಕೆ.ಪಾಟೀಲ ವ್ಯಂಗ್ಯವಾಗಿಯೇ ತಿರುಗೇಟು ನೀಡಿದ್ದು, ‘ಓಹೋ, ಹಿಂದೆ ನಮ್ಮ ಪಾರ್ಟಿಗೆ ಬಂದಿದ್ರಲ್ಲ ಆವಾಗ ಕೇಳ್ಕೊಂಡು ಹೋಗ್ಯಾರೇನೋ ನಮ್ಮನ್ನ’ ಅಂತ ಹೇಳಿ ನಕ್ಕರು.

‘ಅವರು ಹೇಳಿದ್ದಕ್ಕೆ ನೀವು (ಮಾಧ್ಯಮದವರು) ಬಹಳ ಪ್ರಚಾರ ಕೊಡ್ತೀರಿ, ಅದಕ್ಕೆ ನೀವು ಅವರನ್ನು ಪ್ರಚೋದಿಸಿ ಏನೋ ಹೇಳಿಸಿರುತ್ತೀರಿ’ ಎಂದು ಭಾನುವಾರ ಮಾಧ್ಯಮದವರನ್ನೇ ದೂರಿದರು.

ರಸ್ತೆ ಸುರಕ್ಷತೆಯ ಜಾಗೃತಿ ಜಾಥಾ

ಪ್ರಜಾವಾಣಿ ವಾರ್ತೆ

ಕೆ.ಆರ್‌.ಪುರ: ಚಾಲಕರಿಗೆ ರಸ್ತೆ ಸುರಕ್ಷತೆ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ಅದ್ವೈತ ಹುಂಡೈ ಕೆವಿಸಿಸಿ ಸಹಯೋಗದಲ್ಲಿ ಬೆಳ್ಳಂದೂರಿನಲ್ಲಿ ಹಮ್ಮಿಕೊಂಡಿದ್ದ ವಿಂಟೇಜ್ ಕಾರು ರ್‍ಯಾಲಿಗೆ ಅದ್ವೈತ ಕಂಪನಿಯ ಮಾಲೀಕ ಸುಬ್ರಮಣಿಗುಪ್ತ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ‘ಜನಸಾಮಾನ್ಯರು, ಚಾಲಕರಲ್ಲಿ ರಸ್ತೆ ಸಂಚಾರ ನಿಯಮಗಳ ಬಗ್ಗೆ ಅರಿವು ಮೂಡಿಸಬೇಕಿದೆ. ಜೊತೆಗೆ, ಆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಪ್ರತಿಯೊಬ್ಬರಲ್ಲೂ ಶಿಸ್ತು ಮೂಡಿಸಬೇಕಿದೆ’ ಎಂದರು.

ರ್‍ಯಾಲಿಯಲ್ಲಿ ಜಾಗ್ವರ್ ಮಾರ್ಕ್ 7, ಮರ್ಸಿಡಿಸ್ ಬೆಂಜ್ ಪಾಂಟನ್, ಮೋರಿಸ್ ವುಡಿ, ಆಸ್ಟಿನ್, ಚೆವಿ- ಇಂಪಾಲಾ ಮತ್ತು ಈಗಲ್, ಮೋರಿಸ್, ಮೈನರ್ ಇನ್ನೂ ಮುಂತಾದ ಕಾರುಗಳ ಪ್ರದರ್ಶನ ನಡೆಯಿತು. ಬೆಳ್ಳಂದೂರು ಹೊರವಲಯದಿಂದ ಆರಂಭವಾದ ರ್‍ಯಾಲಿ ಕೆ.ಆರ್‌.ಪುರದ ಹಳೆ ಮದ್ರಾಸ್ ರಸ್ತೆ ಮೂಲಕ ಹೊಸಕೋಟೆ, ಶ್ರೀನಿವಾಸಪುರ, ಚಿಂತಾಮಣಿ ಮೂಲಕ ಬೆಂಗಳೂರಿಗೆ ಮರಳಿತು.



ಅದ್ವೈತ ಕಂಪನಿಯ ಮಾಲೀಕ ಸುಬ್ರಮಣಿಗುಪ್ತ ವಿಂಟೇಜ್ ಕಾರುಗಳ ರ್‍ಯಾಲಿಗೆ ಚಾಲನೆ ನೀಡಿದರು

‘ವೇಮನ ಜಯಂತಿ’ಯಲ್ಲಿ ಸಚಿವ ಶಿವರಾಜ್ ತಂಗಡಗಿ ಅಭಿಮತ

ವೇಮನ ಅಪರೂಪದ ಸಮಾಜ ಸುಧಾರಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜನಸಾಮಾನ್ಯರಂತೆ ಬಾಳಿದ, ನೈಜ ಜನಪರ ಮತ್ತು ಶ್ರೇಷ್ಠ ವ್ಯಕ್ತಿ ವೇಮನ, ತಮ್ಮ ಕಾವ್ಯದ ಮೂಲಕ ಜಾತೀಯತೆಯಂತಹ ಸಾಮಾಜಿಕ ಪಿಡುಗುಗಳನ್ನು ತೊಡೆದು ಹಾಕಲು ಪ್ರಯತ್ನಿಸಿದ ಅಪರೂಪದ ಸಮಾಜ ಸುಧಾರಕ’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್‌. ತಂಗಡಗಿ ಬಣ್ಣಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಭಾನುವಾರ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಮಹಾಯೋಗಿ ವೇಮನ ಜಯಂತ್ಯುತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

‘ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಕೊಂಡವೀಡು ಗ್ರಾಮದಲ್ಲಿ ಜನಿಸಿದ ವೇಮನರು ಆ ಪ್ರಾಂತ್ಯದ ಆಳರಸರ ಸುಕುಮಾರ. ಅಹಮಿಕೆಯನ್ನು ತಲೆಗೇರಿಸಿಕೊಳ್ಳದೆ, ತನ್ನ ಎಲ್ಲ ಸುಖ-ಸಂಪತ್ತನ್ನು ತ್ಯಜಿಸಿ ಸಮಾಜ ಸೇವೆಗೆ ಧಾವಿಸಿದ ಮಹಾನ್ ವ್ಯಕ್ತಿ’ ಎಂದರು.

‘ನಮ್ಮ ಕನ್ನಡದ ಸರ್ವಜ್ಞ, ತಮಿಳಿನ ತಿರುವಳ್ಳುವರ್ ಅವರಂತೆ ತೆಲುಗಿನಲ್ಲಿ ಜನಸಾಮಾನ್ಯರ ಕವಿ ಎನಿಸಿದವರು ವೇಮನ. ಇವರು ಕಣ್ಣಿಗೆ ಕಂಡದ್ದನ್ನೆಲ್ಲಾ ಪದ್ಯಗಳನ್ನಾಗಿ ರಚಿಸಿ ಹಾಡುತ್ತಾ ದಾರ್ಶನಿಕರಾದರು. ಸಮಾಜದಲ್ಲಿನ ಅಂಕು ಡೊಂಕುಗಳನ್ನು ಕಂಡು ಮರುಗುತ್ತಾ, ಮೊನಚು ಮಾತುಗಳಿಂದ ಅಲ್ಲಲ್ಲೇ ಅವುಗಳನ್ನು ತಿದ್ದುವ ಪ್ರಯತ್ನ ಮಾಡಿದರು’ ಎಂದು ತಿಳಿಸಿದರು.

‘ಬ್ರಿಟಿಷ್ ಅಧಿಕಾರಿ ಸಿ.ಪಿ.ಬ್ರೌನ್, ಕಿಟೆಲ್ ಅವರು ತೆಲುಗಿನ ವೇಮನ ಪದ್ಯಗಳನ್ನು ಇಂಗ್ಲಿಷ್‌ಗೆ ಭಾಷಾಂತರಿಸಿ, ಅವರನ್ನು ಜಗತ್ತಿಗೆ ಪರಿಚಯಿಸಿದರು.ಈ ಮೂಲಕ ವೇಮನ ಪದ್ಯಗಳು ಜಗತ್ತಿನಾದ್ಯಂತ ಪ್ರಖ್ಯಾತವಾದವು’ ಎಂದರು.

‘ನನಗೆ ರೆಡ್ಡಿ ಸಮುದಾಯದೊಂದಿಗೆ ಆತ್ಮೀಯ ಒಡನಾಟವಿದೆ. ರೆಡ್ಡಿ ಎಂದರೇ ಹೆಚ್ಚು ಉದಾರತೆ ಇರುವ ಸಮುದಾಯ. ಈ ಸಮುದಾಯಕ್ಕೆ ಉದಾರತೆ ಜತೆಗೆ ಎಲ್ಲರನ್ನು ಒಟ್ಟಿಗೆ ಕರೆದೊಯ್ಯುವ ಶಕ್ತಿ ಇದೆ’ ಎಂದು ಸಮುದಾಯದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆವಹಿಸಿದ್ದ ರೆಡ್ಡಿ ಗುರು ಪೀಠದ ವೇಮನಾನಂದ ಸ್ವಾಮೀಜಿ, ‘ಜನರಲ್ಲಿರುವ ಹೊಟ್ಟೆಕಿಚ್ಚು, ಅಸೂಯೆ ಪ್ರವೃತ್ತಿಯಿಂದಾಗಿ ಸಮಾಜದಲ್ಲಿ ದುಃಖ ಹೆಚ್ಚಾಗಿದೆ. ಜನರಲ್ಲಿ ದುಃಖ ಕಡಿಮೆ ಆಗಬೇಕಾದರೆ ಹೊಟ್ಟೆಕಿಚ್ಚನ್ನು ಬಿಡಬೇಕು’ ಎಂದರು

‘ನಾರಾಯಣಗುರು, ವೇಮನ ಮತ್ತು ಹೇಮರಡ್ಡಿ ಮಲ್ಲಮ್ಮ ಕನ್ನಡೇತರ ವ್ಯಕ್ತಿಗಳಾಗಿದ್ದರೂ ಕರ್ನಾಟಕ ಸರ್ಕಾರ ಅವರ ಜಯಂತಿಯನ್ನೂ ಆಚರಿಸುತ್ತಿರುವುದಕ್ಕೆ ಧನ್ಯವಾದ ಸಲ್ಲಿಸುವುದಾಗಿ ಸ್ವಾಮೀಜಿ ಹೇಳಿದರು.

ರಾಜ್ಯಸಭೆಯ ಮಾಜಿ ಸದಸ್ಯ ಕೆ.ಸಿ.ರಾಮಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣಿ ದೇವಿ ಮಾಲಗತ್ತಿ, ಜಂಟಿ ನಿರ್ದೇಶಕ ಬಲವಂತರಾಯ ಪಾಟೀಲ್, ಸಮುದಾಯದ ಅಧ್ಯಕ್ಷ ಜಯರಾಮ ರೆಡ್ಡಿ, ಎನ್‌.ಶೇಖರ್ ರೆಡ್ಡಿ, ಕಂಚೀವರದಯ್ಯ ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಮಹಾಯೋಗಿ ವೇಮನ ಜಯಂತಿಯ ಕಾರ್ಯಕ್ರಮದಲ್ಲಿ ಮಹಾಯೋಗಿ ವೇಮನ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಧರಣಿ ದೇವಿ ಮಾಲಗತ್ತಿ, ಕರ್ನಾಟಕ ರೆಡ್ಡಿ ಜನ ಸಂಘದ ಅಧ್ಯಕ್ಷ ಎಸ್‌. ಜಯರಾಮ ರೆಡ್ಡಿ, ಸಚಿವ ಶಿವರಾಜ ತಂಗಡಗಿ, ಎರೆಹೊಸಹಳ್ಳಿಯ ರೆಡ್ಡಿ ಗುರುಪೀಠದ ವೇಮನಾನಂದ ಸ್ವಾಮೀಜಿ ಕಾರ್ಯಕ್ರಮದಲ್ಲಿ ಹಾಜರಿದ್ದರು ಪ್ರಜಾವಾಣಿ ಚಿತ್ರ

ಹಣ ಹೂಡಿದರೆ ಹೆಚ್ಚು ಲಾಭ ಗಳಿಸಬಹುದೆಂಬ ಆಮಿಷ: ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಟ್ರೇಡಿಂಗ್ ವ್ಯವಹಾರ: ₹ 30 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚು ಲಾಭ ಗಳಿಸಬಹುದು ಎಂದು ಆಮಿಷವೊಡ್ಡಿ ವ್ಯಕ್ತಿಯೊಬ್ಬರಿಗೆ ₹ 30.70 ಲಕ್ಷ ವಂಚಿಸಲಾಗಿದೆ.

ಬಿಕಾಸಿಪುರ ನಿವಾಸಿ ಮಜುರುಲ್ ಹಕ್ ಖಾನ್ ಅವರ ದೂರಿನ ಮೇರೆಗೆ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ.

'ನವೆಂಬರ್ 20ರಂದು ಅಪರಿಚಿತ ವ್ಯಕ್ತಿ ಮಜುರುಲ್ ಹಕ್ ಖಾನ್ ಅವರ ವಾಟ್ಸ್‌ಆ್ಯಪ್‌ಗೆ ಕರೆ ಮಾಡಿ, ಟ್ರೇಡಿಂಗ್ ವ್ಯವಹಾರದ ಬಗ್ಗೆ ಮಾಹಿತಿ ನೀಡಿ, ಹಣ ಹೂಡಿಕೆ ಮಾಡಿದರೆ ಅಧಿಕ ಲಾಭ ಗಳಿಸಬಹುದು ಎಂದು ಹೇಳಿದ್ದಾನೆ. ಈತನ ಮಾತು ನಂಬಿ, ಟ್ರೇಡಿಂಗ್ ವ್ಯವಹಾರದಲ್ಲಿ ಹೂಡಿಕೆಗೆ ಆಸಕ್ತಿ ತೋರಿಸಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ಎಸಿಐ ವೆಲ್ತ್ ಕಮ್ಯೂನಿಟಿ ಎ-604' ಎಂಬ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಮಜುರಲ್ ಅವರನ್ನು ಸೇರಿಸಿ ಬಳಿಕ ವೆಬ್ ಲಿಂಕ್ ನೀಡಿ, ಟ್ರೇಡಿಂಗ್ ಮಾಡುವಂತೆ ಸೂಚಿಸಿದ್ದಾನೆ. ಹೂಡಿಕೆ ಹೆಸರಿನಲ್ಲಿ ಅಪರಿಚಿತ ವ್ಯಕ್ತಿ ನೀಡಿದ ವಿವಿಧ ಬ್ಯಾಂಕ್ ಖಾತೆಗಳಿಗೆ ಮಜುರಲ್ ವಿವಿಧ ಹಂತಗಳಲ್ಲಿ ಒಟ್ಟು ₹30.70 ಲಕ್ಷ ವರ್ಗಾಯಿಸಿದ್ದಾರೆ' ಎಂದು ಹೇಳಿದರು.

'ಕೆಲ ದಿನಗಳ ಬಳಿಕ ಅಪರಿಚಿತ ವ್ಯಕ್ತಿ ಹಣ ಅಥವಾ ಲಾಭ ಯಾವುದನ್ನೂ ವಾಪಸ್ ಮಾಡಿಲ್ಲ. ಮಜುರುಲ್ ಹಕ್ ಕರೆ ಮಾಡಿದರೂ ಸಂಪರ್ಕಕ್ಕೆ ಸಿಕ್ಕಿಲ್ಲ. ಮೋಸ ಮಾಡಿರುವುದು ಗೊತ್ತಾಗಿ, ಠಾಣೆಗೆ ದೂರು ನೀಡಿದರು' ಎಂದರು.

ಅಪರಾಧ ಸುದ್ದಿ

ಮಹಿಳೆಗೆ ₹10 ಲಕ್ಷ ವಂಚನೆ: ಪಾರ್ಟ್ ಟೈಮ್ ಕೆಲಸ ಹುಡುಕುತ್ತಿದ್ದ ಮಹಿಳೆಗೆ ಅಪರಿಚಿತ ವ್ಯಕ್ತಿ ಆನ್‌ಲೈನ್ ಟಾಸ್ಕ್ ಹೆಸರಿನಲ್ಲಿ ಅಧಿಕ ಲಾಭದ ಆಸೆ ತೋರಿಸಿ ₹10.77 ಲಕ್ಷ ವಂಚನೆ ಮಾಡಲಾಗಿದೆ.

ಮಲ್ಲೇಶ್ವರ ನಿವಾಸಿ ಎ.ಎಂ.ಸುನಿತಾ ಅವರ ದೂರಿನ ಮೇರೆಗೆ ಕೇಂದ್ರ ವಿಭಾಗದ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.

'ಕೆಲಸ ಹುಡುಕುತ್ತಿದ್ದ ಸುನಿತಾ ಅವರನ್ನು ವಾಟ್ಸ್‌ಆ್ಯಪ್ ಮೂಲಕ ಸಂಪರ್ಕಿಸಿದ ಅಪರಿಚಿತ ವ್ಯಕ್ತಿ, ಆನ್‌ಲೈನ್ ಟಾಸ್ಕ್‌ಗಳನ್ನು ಮುಗಿಸಿದರೆ ಹೆಚ್ಚಿನ ಹಣ ಗಳಿಸಬಹುದು ಎಂದು ಆಮಿಷವೊಡ್ಡಿದ್ದಾನೆ. ಬಳಿಕ ಸುನಿತಾ ಅವರನ್ನು ಟೆಲಿಗ್ರಾಂ ಗ್ರೂಪ್‌ವೊಂದಕ್ಕೆ ಸೇರಿಸಿದ್ದಾನೆ. ವಂಚಕನ ಮಾತು ನಂಬಿ, ಆತ ನೀಡಿದ ವಿವಿಧ ಬ್ಯಾಂಕ್ ಖಾತೆಗಳಿಗೆ ₹10.77 ಲಕ್ಷ ಹಣ ವರ್ಗಾವಣೆ ಮಾಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಹಲವು ದಿನ ಕಳೆದರೂ ಲಾಭ ಬಂದಿಲ್ಲ. ಅಪರಿಚಿತ ವ್ಯಕ್ತಿಗೆ ಕರೆ ಮಾಡಿದರೆ ಸ್ವೀಕರಿಸಲಿಲ್ಲ. ಬಳಿಕ ತಾನು ಸೈಬರ್ ವಂಚನೆಗೆ ಒಳಗಾಗಿರುವುದು ಅರಿವಿಗೆ ಬಂದಿದೆ' ಎಂದು ಹೇಳಿದರು.

ಅಧಿಕಾರಿಗಳ ಸೋಗಿನಲ್ಲಿ ಕರೆ

ಬೆಂಗಳೂರು: ಬ್ಯಾಂಕ್ ಅಧಿಕಾರಿಗಳ ಸೋಗಿನಲ್ಲಿ ಕರೆ ಮಾಡಿದ ಸೈಬರ್ ಕಳ್ಳರು, ಡೆಬಿಟ್ ಕಾರ್ಡ್‌ನಲ್ಲಿ ವಿಳಾಸ ಅಪ್‌ಡೇಟ್ ಮಾಡಬೇಕೆಂದು ಹೇಳಿ ವ್ಯಕ್ತಿಯೊಬ್ಬರಿಂದ ₹1.24 ಲಕ್ಷ ದೋಚಿದ್ದಾರೆ.

ವಂಚನೆಗೆ ಒಳಗಾಗಿರುವ ವಸಂತನಗರ ನಿವಾಸಿ ಸತ್ಯಜಿತ್ ಘೋಷ್ ಅವರು ಕೇಂದ್ರ ಸಿಇಎನ್ ಠಾಣೆಗೆ ದೂರು ಸಲ್ಲಿಸಿದ್ದಾರೆ.

'ಯೆಸ್ ಬ್ಯಾಂಕ್‌ನಿಂದ ಕರೆ ಮಾಡುತ್ತಿರುವುದಾಗಿ ಹೇಳಿದ ವಂಚಕ, 'ಡೆಬಿಟ್ ಕಾರ್ಡ್‌ನಲ್ಲಿ ವಿಳಾಸ ಬದಲಾವಣೆ ಮಾಡಬೇಕಿದೆ. ಅದಕ್ಕಾಗಿ ಲಿಂಕ್ ಕಳುಹಿಸುತ್ತೇವೆ. ಲಿಂಕ್ ಬಳಸಿ ಆ್ಯಪ್ ಡೌನ್ ಲೋಡ್ ಮಾಡಿಕೊಂಡು ಅಪ್‌ಡೇಟ್ ಮಾಡಿ' ಎಂದು ಹೇಳಿ ಎಪಿಕೆ ಫೈಲ್ ಕಳುಹಿಸಿದ್ದ. ಅದರಂತೆ ಸತ್ಯಜಿತ್ ಎಪಿಕೆ ಫೈಲ್ ಡೌನ್‌ಲೌಡ್ ಮಾಡಿ ಬ್ಯಾಂಕ್ ಖಾತೆ ನಂಬರ್ ನಮೂದಿಸಿದ್ದರು' ಎಂದು ಪೊಲೀಸರು ತಿಳಿಸಿದರು.

ಬಳಿಕ ಮೊಬೈಲ್ ಸೈಬರ್ ಕಳ್ಳರ ನಿಯಂತ್ರಣಕ್ಕೆ ಹೋಗಿದ್ದು, ಹಂತ ಹಂತವಾಗಿ ₹1.24 ಲಕ್ಷ ವರ್ಗಾವಣೆ ಮಾಡಿಕೊಂಡಿದ್ದರು. ಬ್ಯಾಂಕ್ ಖಾತೆಯಲ್ಲಿ ಹಣ ಕಡಿತವಾದ ಮೇಲೆ ವಂಚನೆಗೆ ಒಳಗಾಗಿರುವುದು ಗೊತ್ತಾಗಿದೆ.

ಮೆಟ್ರೊ ಮಾರ್ಗ: ತಾಮ್ರದ ತಂತಿ ಕಳವು

ಬೆಂಗಳೂರು: 'ನಮ್ಮ ಮೆಟ್ರೊ' ಹಸಿರು ಮಾರ್ಗದಲ್ಲಿ ವಿದ್ಯುತ್ ಪೂರೈಕೆಗಾಗಿ ಅಳವಡಿಸಿದ್ದ ತಾಮ್ರದ ತಂತಿಗಳನ್ನು ಕಳವು ಮಾಡಲಾಗಿದೆ. ಈ ಸಂಬಂಧ ಮೂರು ಪ್ರತ್ಯೇಕ ಠಾಣೆಗಳಲ್ಲಿ ದೂರು ದಾಖಲಾಗಿದೆ.

ಸಹಾಯಕ ಭದ್ರತಾ ಅಧಿಕಾರಿ ಚಂದ್ರಶೇಖರ್ ಅವರ ದೂರು ಆಧರಿಸಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. 'ನಮ್ಮ ಮೆಟ್ರೊ ಮಾರ್ಗದ ಪಿಲ್ಲರ್ 12, 13, 14ರ ಬಳಿ ಅಳವಡಿಸಿದ್ದ ತಾಮ್ರದ ತಂತಿಗಳನ್ನು ಕಳವು ಮಾಡಲಾಗಿದೆ. ಪೀಣ್ಯ, ರಾಜಾಜಿನಗರ, ಬಸವನಗುಡಿ ರೈಲು ಮಾರ್ಗದಲ್ಲಿ ಲಕ್ಷಾಂತರ ರೂಪಾಯಿ ಮೌಲ್ಯದ ಉದ್ದದ ಕೇಬಲ್‌ಗಳನ್ನು ತುಂಡು ಮಾಡಿ ತೆಗೆದುಕೊಂಡು ಹೋಗಿದ್ದಾರೆ. ಈ ಬಗ್ಗೆ ತನಿಖೆ ನಡೆಸಿ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ಕೋರಲಾಗಿದೆ.

ಮೂವರು ಸೈಬರ್ ವಂಚಕರ ಬಂಧನ

ಬೆಂಗಳೂರು: ನಗರದ ಸಾಫ್ಟ್‌ವೇರ್ ಉದ್ಯೋಗಿಯೊಬ್ಬರಿಗೆ 'ಡಿಜಿಟಲ್ ಅರೆಸ್ಟ್' ಮೂಲಕ ಬೆದರಿಸಿ ₹11.83 ಕೋಟಿ ವಸೂಲಿ ಮಾಡಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಈಶಾನ್ಯ ವಿಭಾಗದ ಸಿಇಎನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸೂರತ್ ನಿವಾಸಿಗಳಾದ ಕರಣ್, ತರುಣ್ ನಟಾನಿ ಹಾಗೂ ಧವಲ್ ಶಾ ಬಂಧಿತರು. ಆರೋಪಿಗಳು ನಗರದ ಕಂಪನಿಯೊಂದರಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ವಿಜಯಕುಮಾರ್ ಅವರಿಗೆ ಒಂದು ತಿಂಗಳು ಪೀಡಿಸಿ ವಿವಿಧ ಖಾತೆಗಳಿಗೆ ಹಣವನ್ನು ವರ್ಗಾಯಿಸಿಕೊಂಡಿದ್ದರು. 'ವಿಜಯಕುಮಾರ್ ಅವರ ಕಂಪನಿಯು ತನ್ನ ₹50 ಲಕ್ಷ ಮೌಲ್ಯದ ಒಂದು ಷೇರನ್ನು ಆತನಿಗೆ ನೀಡಿತ್ತು. ಆ ಷೇರಿನ ಪ್ರಸ್ತುತ ಮೌಲ್ಯ ₹12 ಕೋಟಿ ಇರುವುದನ್ನು ತಿಳಿದಿದ್ದ ಆರೋಪಿಗಳು, ಪ್ರತ್ಯೇಕ ನಂಬರ್‌ಗಳಿಂದ ಅವರಿಗೆ ಕರೆ ಮಾಡಿ ತಾವು ಇ.ಡಿ, ಕಸ್ಟಮ್ಸ್ ಅಧಿಕಾರಿಗಳೆಂದು ಪರಿಚಯಿಸಿಕೊಂಡಿದ್ದರು'.

'ನಿಮ್ಮ ಖಾತೆಯಲ್ಲಿ ಅಕ್ರಮವಾಗಿ ವಹಿವಾಟು ನಡೆದಿರುವ ಕಾರಣ ತನಿಖೆಗಾಗಿ ಕೆವೈಸಿ ದಾಖಲೆ ನೀಡಬೇಕೆಂದು ಟೆಕಿಯಿಂದ ಪಡೆದಿದ್ದರು. ಬಳಿಕ ಹಣ ಅಕ್ರಮ ವರ್ಗಾವಣೆ ಆರೋಪದಲ್ಲಿ ನೆರವಾಗುತ್ತೇವೆ ಎಂದು ನಂಬಿಸಿ, ಒಟ್ಟು ಒಂಬತ್ತು ಖಾತೆಗಳಿಗೆ ಹಣ ವರ್ಗಾಯಿಸಿಕೊಂಡಿದ್ದರು' ಎಂದು ಪೊಲೀಸರು ತಿಳಿಸಿದರು.

ತನಿಖೆ ನಡೆಸಿದಾಗ ಸೂರತ್‌ನ ಚಿನ್ನದ ವ್ಯಾಪಾರಿಯೊಬ್ಬರ ಖಾತೆಗೆ ₹7.5 ಕೋಟಿ ವರ್ಗಾವಣೆಯಾಗಿರುವುದು ಗೊತ್ತಾಯಿತು. ಸೂರತ್‌ಗೆ ತೆರಳಿದ ಪೊಲೀಸರು ಚಿನ್ನದ ವ್ಯಾಪಾರಿಯಿಂದ ಮಾಹಿತಿ ಸಂಗ್ರಹಿಸಿದಾಗ, ಆರೋಪಿಗಳು ಆ ಹಣದಲ್ಲಿ ಚಿನ್ನಾಭರಣ ಖರೀದಿಸಿರುವುದು ಪತ್ತೆಯಾಗಿತ್ತು.

ಗೂಂಡಾ ಕಾಯ್ದೆಯಡಿ ರೌಡಿ ಬಂಧನ

ಬೆಂಗಳೂರು: ಸಿಸಿಬಿಯ ಸಂಘಟಿತ ಅಪರಾಧ ದಳದ ಅಧಿಕಾರಿಗಳು ರೌಡಿ ಶೀಟರ್ ಭರತ್ ಕುಮಾರ್ ಅಲಿಯಾಸ್ ಗುಡ್ಡೆ ಭರತನನ್ನು ಗೂಂಡಾ ಕಾಯ್ದೆಯಡಿ ಬಂಧಿಸಿದ್ದಾರೆ.

ಮೈಸೂರು ರಸ್ತೆ ಎನ್‌ಟಿವೈ ಲೇಔಟ್ ನಿವಾಸಿ ಭರತ್ 2016ರಿಂದಲೂ ಅಪರಾಧ ಕೃತ್ಯಗಳಲ್ಲಿ ತೊಡಗಿದ್ದ. ಈತನ ವಿರುದ್ಧ ಕೊಲೆ ಯತ್ನ, ಹಲ್ಲೆ, ಸುಲಿಗೆ, ಅತ್ಯಾಚಾರ, ಮಕ್ಕಳ ಮೇಲೆ ದೌರ್ಜನ್ಯ, ಡ್ರಗ್ಸ್ ಮಾರಾಟ ಸೇರಿ 9 ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಾಮೀನು ಪಡೆದು ಬಿಡುಗಡೆಯಾದ ಬಳಿಕ ನ್ಯಾಯಾಲಯಕ್ಕೆ ವಿಚಾರಣೆಗೆ ಹಾಜರಾಗದೆ ತಲೆ ಮರೆಸಿಕೊಂಡಿದ್ದ. ಈತನ ಬಂಧನಕ್ಕೆ ಪೊಲೀಸ್ ಕಮಿಷನರ್ ಅನುಮತಿ ಸಿಕ್ಕ ಬೆನ್ನಲ್ಲೇ, ಸಿಸಿಬಿ ಅಧಿಕಾರಿಗಳು ಬಂಧಿಸಿ ರಾಮನಗರ ಜಿಲ್ಲಾ ಕಾರಾಗೃಹಕ್ಕೆ ಒಪ್ಪಿಸಿದ್ದಾರೆ.

ಪತ್ನಿ, ಅತ್ತೆ ಮೇಲೆ ತಲ್ವಾರ್‌ನಿಂದ ಹಲ್ಲೆ: ಅಳಿಯನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ನಿ ಹಾಗೂ ಅತ್ತೆಯ ಮೇಲೆ ತಲ್ವಾರ್‌ನಿಂದ ಹಲ್ಲೆ ಮಾಡಿ ಪರಾರಿಯಾಗಿದ್ದ ಆರೋಪಿಯನ್ನು ಕುಮಾರಸ್ವಾಮಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆಟೊ ಚಾಲಕ ಆಸೀಫ್ (29) ಅವರನ್ನು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಹಲ್ಲೆಯಿಂದಾಗಿ ತೀವ್ರವಾಗಿ ಗಾಯಗೊಂಡಿರುವ ಹೀನಾ ಕೌಸರ್ ಮತ್ತು ಪರ್ವೀನ್ ತಾಜ್ ಅವರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಚೇತರಿಸಿಕೊಳ್ಳುತ್ತಿದ್ದಾರೆ.

ಸರಬಂಡೆಪಾಳ್ಯದಲ್ಲಿರುವ ತವರು ಮನೆಯಲ್ಲಿ ಪತ್ನಿ ಹೀನಾ ಕೌಸರ್ ಹುಡುಕಿಕೊಂಡು ಜನವರಿ 14ರಂದು ಮನೆಗೆ ಬಂದಿದ್ದ ಆರೋಪಿ, ಪತ್ನಿ ಹಾಗೂ ಅತ್ತೆ ಪರ್ವೀನ್ ತಾಜ್ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿ ಪರಾರಿಯಾಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

'ಹತ್ತು ವರ್ಷಗಳ ಹಿಂದೆ ಹೀನಾ ಕೌಸರ್ ಹಾಗೂ ಆಸೀಫ್ ಮದುವೆಯಾಗಿತ್ತು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಆದರೆ, ಆತ ಪರಸ್ತ್ರೀಯೊಂದಿಗೆ ಸಂಬಂಧ ಹೊಂದಿದ್ದ. ಮಗಳು ಬೇರೆಯವರಿಗೆ ಮೊಬೈಲ್‌ನಲ್ಲಿ ಸಂದೇಶ ಕಳುಹಿಸಿದ್ದನ್ನು ಕಂಡು ಅನುಮಾನಿಸಿ ಆಕೆಗೆ ಕಿರುಕುಳ ನೀಡುತ್ತಿದ್ದ. ಕೆಲ ತಿಂಗಳ ಹಿಂದೆ ಮನೆಗೆ ಮಗಳನ್ನು ತಂದು ಬಿಟ್ಟುಹೋಗಿದ್ದ' ಎಂದು ಪರ್ವೀನ್ ತಾಜ್ ಆರೋಪಿಸಿದರು.



ಆಸೀಫ್

'ಮಗಳು ಅಂಗಡಿಗೆ ಹೋಗಿ ವಾಪಸ್ ಬರುವಾಗ ಮಾರಕಾಸ್ತ್ರದಿಂದ ಹೊಡೆದಿದ್ದಾನೆ. ಬಿಡಿಸಿಕೊಳ್ಳಲು ಹೋದ ನನ್ನ ಮೇಲೆಯೂ ಹಲ್ಲೆ ನಡೆಸಿದ್ದಾನೆ. ಮಗಳ ತಲೆಗೆ ತುಂಬಾ ಪೆಟ್ಟಾಗಿದೆ, ಕೈಗೂ ಪೆಟ್ಟಾಗಿದೆ. ಈಗಾಗಲೇ ಆತ ಬೇರೊಂದು ಮದುವೆ ಮಾಡಿಕೊಂಡಿದ್ದಾನೆ' ಎಂದು ಹೇಳಿದ್ದಾರೆ.

ತಾಯಿ ಮತ್ತು ಮಗಳ ಚೀರಾಟ ಕೇಳಿ ಅಕ್ಕಪಕ್ಕದ ಮನೆಯವರು ಬರುತ್ತಿದ್ದಂತೆ ಮಾರಕಾಸ್ತ್ರ ಬಿಟ್ಟು ಸ್ಥಳದಿಂದ ಆಸೀಫ್ ಪರಾರಿಯಾಗಿದ್ದ. ಗಾಯಾಳುಗಳನ್ನು ಅಕ್ಕಪಕ್ಕದವರು ಆಸ್ಪತ್ರೆಗೆ ದಾಖಲಿಸಿದ್ದರು.



ಢಾಬಾ ಗೋಡೆಗೆ ಡಿಕ್ಕಿ ಹೊಡೆದಿರುವ ಬಿಎಂಟಿಸಿ ಬಸ್

ಬ್ರೇಕ್ ವಿಫಲ: ಅಂಗಡಿಗೆ ನುಗ್ಗಿದ ಬಿಎಂಟಿಸಿ ಬಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗದೇವನಹಳ್ಳಿಯಲ್ಲಿ ಭಾನುವಾರ ಬಿಎಂಟಿಸಿಯ ಎಲೆಕ್ಟ್ರಿಕ್ ಬಸ್ ಬ್ರೇಕ್ ವಿಫಲಗೊಂಡು ರಸ್ತೆಬದಿ ಅಂಗಡಿ ಹಾಗೂ ಢಾಬಾ ಗೋಡೆಗೆ ಡಿಕ್ಕಿ ಹೊಡೆದಿದೆ.

ಶಿರ್ಕೆ ವೃತ್ತದಿಂದ ಬೆಳಿಗ್ಗೆ 6.20ರ ಸಂದರ್ಭದಲ್ಲಿ ನಾಗರಬಾವಿ ಕಡೆಗೆ ಹೋಗುತ್ತಿದ್ದ ಬಸ್‌ನ ಬ್ರೇಕ್ ವಿಫಲಗೊಂಡು ಚಾಲಕನ ನಿಯಂತ್ರಣ ತಪ್ಪಿ ಬಸ್ ರಸ್ತೆ ಬದಿಯ ಬೀಡಾ ಅಂಗಡಿ ಹಾಗೂ ಢಾಬಾಗೆ ನುಗ್ಗಿದೆ.

ಬಸ್‌ನಲ್ಲಿದ್ದ ಮೂವರು ಪ್ರಯಾಣಿಕರಿಗೆ ಅಪಘಾತದಿಂದ ಸಣ್ಣಪುಟ್ಟ ಗಾಯಗಳಾಗಿವೆ. ಅಂಗಡಿ ಬಳಿಯಿದ್ದ ಸಾರ್ವಜನಿಕರು ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ.

ಅಪಘಾತದ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಜ್ಞಾನಭಾರತಿ ಸಂಚಾರ ವಿಭಾಗದ ಪೊಲೀಸರು ಬಸ್ ವಶಪಡಿಸಿಕೊಂಡು, ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ದಾರಿ ಮಧ್ಯೆ ನಂಬರ್ ಪ್ಲೇಟ್ ಬದಲಿಸಿದ್ದ ದರೋಡೆಕೋರರು

ಕೋಟೆಕಾರು ವ್ಯವಸಾಯ ಸೇವಾ ಸಹಕಾರಿ ಸಂಘದ ಶಾಖೆಯಲ್ಲಿ ದರೋಡೆ ಪ್ರಕರಣ: ಕಾರಿನ ಮೂಲ ದಾಖಲೆ ಪತ್ತೆ

ಪ್ರಜಾವಾಣಿ ವಾರ್ತೆ

ಉಳ್ಳಾಲ: ಕೋಟೆಕಾರು ವ್ಯವಸಾಯ ಸೇವಾ ಸಹಕಾರಿ ಸಂಘದ ಕೆ.ಸಿ.ರೋಡ್ ಶಾಖೆಯಲ್ಲಿ ಶುಕ್ರವಾರ ನಡೆದ ದರೋಡೆ ಪ್ರಕರಣದ ಕಾರು ಉಡುಪಿ ಕಡೆಯಿಂದ ಮಂಗಳೂರಿನತ್ತ ಬಂದಿರುವುದು ಹಾಗೂ ಕಾರಿನ ನಂಬರ್ ಪ್ಲೇಟ್ ಅನ್ನು ದಾರಿ ಮಧ್ಯೆ ಬದಲಾಯಿಸಿರುವುದು ತನಿಖೆ ವೇಳೆ ಬೆಳಕಿಗೆ ಬಂದಿದೆ.

ಕೃತ್ಯಕ್ಕೆ ಬಳಸಿರುವ ಫಿಯೆಟ್ ವಿನಿಯಾ ಕಾರು ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಉಡುಪಿ-ಪಡುಬಿದ್ರೆ ಮಾರ್ಗವಾಗಿ ಮಂಗಳೂರು ತಲುಪಿದೆ. ಉಡುಪಿ ಬರುವ ಮುನ್ನ ಕಾರು ಬೇರೆ ನಂಬರ್ ಹೊಂದಿರುವುದು ಟೋಲ್ ಬೂತ್ ಒಂದರ ಸಿಸಿಟಿವಿ ಕ್ಯಾಮೆರಾದಲ್ಲಿ ದಾಖಲಾಗಿದೆ. ಅದರ ಪ್ರಕಾರ ಕಾರಿನ ಮಾಲೀಕ ತಮಿಳುನಾಡು ಮೂಲದ ವ್ಯಕ್ತಿ ಎಂದು ಗೊತ್ತಾಗಿದೆ. ಆತನ ಪತ್ತೆಗೆ ಪೊಲೀಸರ ಒಂದು ತಂಡ ತೆರಳಿದೆ. ಪೊಲೀಸರ ಉಳಿದ ಎರಡು ತಂಡಗಳು ಮಹಾರಾಷ್ಟ್ರದ ಮುಂಬೈ ಹಾಗೂ ಕೇರಳಕ್ಕೆ ತೆರಳಿವೆ ಎಂದು ಮೂಲಗಳು ಹೇಳಿವೆ.

ಕರೆ ವಿವರ ಕಲೆ ಹಾಕುತ್ತಿರುವ ಪೊಲೀಸರು: ಸ್ಥಳೀಯರ ಸಹಕಾರ ಪಡೆದು ಹೊರ ರಾಜ್ಯದ ತಂಡವು ಈ ಕೃತ್ಯ ನಡೆಸಿರುವ ಸಾಧ್ಯತೆ ಇದೆ. ಈ ಆಯಾಮದಲ್ಲೂ ತನಿಖೆ ಕೈಗೆತ್ತಿಕೊಳ್ಳಲಾಗಿದೆ. ಸಹಕಾರಿ ಸಂಘದ ಸಿಬ್ಬಂದಿ ಸೇರಿದಂತೆ ಸುತ್ತಲಿನ ಮೊಬೈಲ್ ಟವರ್ ಸಿಡಿಆರ್ ಪಡೆದಿರುವ ಪೊಲೀಸ್ ಅಧಿಕಾರಿಗಳು ಟೆಲಿಕಾಂ ಆಪರೇಟರ್‌ಗಳಿಂದ ಕರೆಗಳ ವಿವರವನ್ನು ನೀಡುವಂತೆ ಕೋರಿದ್ದಾರೆ.

ಕೃತ್ಯಕ್ಕೆ ಬಳಕೆಯಾದ ಕಾರು ತಲಪಾಡಿ ಟೋಲ್ ಬೂತ್ ಮೂಲಕ ಸಾಗುವಾಗ ದಾಖಲಾದ ದೃಶ್ಯವು ಕಾರಿನಲ್ಲಿ ಇಬ್ಬರು ಮಾತ್ರ ಇದ್ದುದನ್ನು ಸ್ಪಷ್ಟಪಡಿಸಿದೆ.

ದರೋಡೆ ಮಾಡಿದ ಚಿನ್ನವನ್ನು ಬೇರೆ ಕಾರಿನಲ್ಲಿ ಕೊಂಡೊಯ್ದಿರುವ ಶಂಕೆ ಇರುವುದರಿಂದ ಆ ಕಾರಿಗಾಗಿ ಪೊಲೀಸರು ಶೋಧ ಮುಂದುವರಿಸಿದ್ದಾರೆ. ಕೃತ್ಯ ನಡೆದ ಸಂದರ್ಭದಲ್ಲಿ ಷವರ್ಲೆ ಕಾರೊಂದು ಹೆದ್ದಾರಿಯಲ್ಲಿ ಸಾಗಿರುವುದು ಕಂಡುಬಂದಿದೆ. ಕಿನ್ಯದ ಖಾಸಗಿ ಶಾಲೆಯ ವಿದ್ಯಾರ್ಥಿಯನ್ನು ಕಾಣಲು ಬಂದ ಪೋಷಕರ ಕಾರು ಅದು ಎಂಬುದು ವಿಚಾರಣೆಯಿಂದ ಗೊತ್ತಾಗಿದೆ. ಹಾಗಾಗಿ ಚಿನ್ನ ಸಾಗಿಸಲು ಬಳಸಿದ ಕಾರು ಹುಡುಕಲು ಮಂಗಳೂರು– ಉಡುಪಿ ಮಾರ್ಗದ ಹಲವು ಸಿಸಿಟಿವಿ ಕ್ಯಾಮೆರಾಗಳ ದಾಖಲೆಗಳನ್ನು ಪೊಲೀಸರು ಪಡೆದಿದ್ದಾರೆ.

ಗೋಲ್ಡ್ ಬ್ಲ್ಯಾಕ್ ಮಾರ್ಕೆಟ್‌ನತ್ತ ನಿಗಾ

ಕೋಟೆಕಾರು ದರೋಡೆ ಪ್ರಕರಣದ ತನಿಖೆ ನಡೆಸುತ್ತಿರುವ ಪೊಲೀಸರು ಕೇರಳ, ತಮಿಳುನಾಡು, ಹಾಗೂ ಮಹಾರಾಷ್ಟ್ರದ ಮುಂಬೈನಲ್ಲಿರುವ ಗೋಲ್ಡ್ ಬ್ಲ್ಯಾಕ್ ಮಾರ್ಕೆಟ್ ಸೇರಿದಂತೆ ದಕ್ಷಿಣ ಭಾರತದ ಪ್ರಮುಖ ಗೋಲ್ಡ್ ಬ್ಲ್ಯಾಕ್ ಮಾರ್ಕೆಗಳ ವ್ಯವಹಾರಗಳತ್ತ ನಿಗಾ ಇಟ್ಟಿದ್ದಾರೆ. ಕೇರಳ, ತಮಿಳುನಾಡು, ಮುಂಬೈ ಪೊಲೀಸರ ಸಹಾಯ ಪಡೆದು ತನಿಖೆ ತೀವ್ರಗೊಳಿಸಿದ್ದಾರೆ.

ದರೋಡೆಕೋರರು ಕೇರಳದ ಅಜ್ಞಾತ ಸ್ಥಳದಿಂದ ಸಮುದ್ರ ಮಾರ್ಗವಾಗಿ ತಮಿಳುನಾಡಿನತ್ತ ತೆರಳಿರುವ ಶಂಕೆ ಇರುವುದರಿಂದ ಆರಾಜ್ಯದ ಗೋಲ್ಡ್ ಬ್ಲ್ಯಾಕ್ ಮಾರ್ಕೆಟ್‌ಗಳತ್ತ ಹೆಚ್ಚಿನ ನಿಗಾ ವಹಿಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.




ದರೋಡೆ ಕೃತ್ಯಕ್ಕೆ ಬಳಕೆಯಾದ ಕಾರು ಕೇರಳ ಗಡಿಭಾಗದ ತಲಪಾಡಿ ಚೆಕ್‌ಪೋಸ್ಟ್ ಮೂಲಕ ಹಾದುಹೋಗುವಾಗ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯ

ರಾತ್ರಿ ಗಸ್ತು ನಡೆಸಿದ ನಗರ ಪೊಲೀಸ್ ಕಮಿಷನರ್

ಬೆಂಗಳೂರು: ಮಂಗಳೂರಿನಲ್ಲಿ ಬ್ಯಾಂಕ್ ದರೋಡೆ ಹಾಗೂ ಬೀದರ್‌ನಲ್ಲಿ ಎಟಿಎಂ ಹಣ ಲೂಟಿಯಾದ ಘಟನೆಗಳ ಬೆನ್ನಲ್ಲೇ ಜನರಲ್ಲಿ ಭಯ ಹೋಗಲಾಡಿಸಲು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ಸೇರಿ ಹಿರಿಯ ಅಧಿಕಾರಿಗಳು ರಾತ್ರಿ ಗಸ್ತು ನಡೆಸಿದರು.

ಬಿ.ದಯಾನಂದ್ ನೇತೃತ್ವದಲ್ಲಿ ಮಧ್ಯರಾತ್ರಿ 1 ರಿಂದ ನಸುಕಿನ 4 ಗಂಟೆವರೆಗೆ ಗಸ್ತು ನಡೆಸಿ, ಜನರ ಸಮಸ್ಯೆ ಆಲಿಸಿದರು. ದಯಾನಂದ್ ಅವರು ತಾವೇ ವಾಹನ ಚಾಲನೆ ಮಾಡಿದರು. ಹೆಚ್ಚುವರಿ ಪೊಲೀಸ್ ಆಯುಕ್ತರಾದ ವಿಕಾಸ್ ಕುಮಾರ್, ಚಂದ್ರಗುಪ್ತ, ಜಂಟಿ ಪೊಲೀಸ್ ಕಮಿಷನರ್ ಎಂ.ಎನ್.ಅನುಚೇತ್, ಬಿ.ರಮೇಶ್ ಪಾಲ್ಗೊಂಡಿದ್ದರು.

ಪೂರ್ವ ವಿಭಾಗದ ಡಿಸಿಪಿ ಡಿ.ದೇವರಾಜ್, ಕೇಂದ್ರ ವಿಭಾಗದ ಡಿಸಿಪಿ ಎಚ್.ಟಿ.ಶೇಖರ್, ಪಶ್ಚಿಮ ವಿಭಾಗದ ಡಿಸಿಪಿ ಎಸ್.ಗಿರೀಶ್, ಉತ್ತರ ವಿಭಾಗ ಡಿಸಿಪಿ ಸೈದುಲ ಅಡಾವತ್, ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತಿಮಾ ಹಾಗೂ ಉತ್ತರ ವಿಭಾಗ (ಸಂಚಾರ) ಡಿಸಿಪಿ ಸಿರಿಗೌರಿ ಅವರು ತಮ್ಮ ವಿಭಾಗದ ವ್ಯಾಪ್ತಿಯಲ್ಲಿ ಗಸ್ತು ನಡೆಸಿದರು. ರಾಜಕಾರಣಿಗಳು ಹಾಗೂ ಗಣ್ಯ ವ್ಯಕ್ತಿಗಳು ವಾಸಿಸುವ ಸದಾಶಿವನಗರ, ಡಾಲರ್ಸ್ ಕಾಲೊನಿಗಳಲ್ಲಿ ಪೊಲೀಸರು ಗಸ್ತು ನಡೆಸಿದರು. ಈ ವೇಳೆ ರಸ್ತೆಯಲ್ಲಿ ಭೇಟಿಯಾದ ಜನರ ಜತೆಗೆ ಮಾತುಕತೆ ನಡೆಸಿದರು.



ಬಿ.ದಯಾನಂದ್

ಪೋಡಿ ಹೆಸರಲ್ಲಿ ನಿವೃತ್ತ ಸೈನಿಕನಿಗೆ ₹22 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಚನ್ನರಾಯಪಟ್ಟಣ (ದೇವನಹಳ್ಳಿ): ತಹಶೀಲ್ದಾರ್ ಪರಿಚಯವಿದ್ದು ಜಮೀನಿನ ಪೋಡಿ ಮಾಡಿಸಿ ಕೊಡುವುದಾಗಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿ ಟಿ. ಅಗ್ರಹಾರದ ನಿವೃತ್ತ ಸೈನಿಕರೊಬ್ಬರಿಗೆ ₹21.65 ಲಕ್ಷ ವಂಚಿಸಲಾಗಿದೆ.

ಈ ಸಂಬಂಧ ಚನ್ನರಾಯಪಟ್ಟಣ ಪೊಲೀಸ್ ಠಾಣೆಯಲ್ಲಿ ಟಿ.ಅಗ್ರಹಾರ ನಿವಾಸಿ ಗೋಪಾಲ್ ಹಾಗೂ ಕುಟುಂಬ ವರ್ಗದ ವಿರುದ್ಧ ಪ್ರಕರಣ ದಾಖಲಾಗಿದೆ.

ಬೆಂಗಳೂರಿನ ಇಂದಿರಾನಗರ ನಿವಾಸಿ ಆರ್.ಎಸ್. ಕಡಬಡಿ ವಂಚನೆಗ ಒಳಗಾದ ಮಾಜಿ ಸೈನಿಕ. ಸೇನೆಯಿಂದ ನಿವೃತ್ತರಾದ ಬಳಿಕ ಟಿ.ಅಗ್ರಹಾರದಲ್ಲಿ ಜಮೀನು ಖರೀದಿಸಿದ್ದರು.

'ಈ ಜಮೀನು ಮಾರಾಟ ಮಾಡಿದರೆ ಒಳ್ಳೆ ಬೆಲೆ ಸಿಗುತ್ತದೆ. ಇದಕ್ಕಾಗಿ ಕಂದಾಯ ಇಲಾಖೆಯಿಂದ ಜಮೀನಿನ ಅಳತೆ ಮಾಡಿಸಿ, ಪೋಡಿ ಹಾಗೂ ದುರಸ್ತಿ ಮಾಡಿಸಬೇಕು' ಎಂದು ಹೇಳಿ ಗೋಪಾಲ್ ₹21.65 ಲಕ್ಷ ಹಣ ಪಡೆದು ವಂಚಿಸಿದ್ದಾರೆ' ಎಂದು ಕಡಬಡಿ ದೂರಿನಲ್ಲಿ ತಿಳಿಸಿದ್ದಾರೆ.

ವಂಚಕರಿದ್ದಾರೆ ಹುಷಾರ್!

'ನಮಗೆ ಸರ್ಕಾರಿ ಅಧಿಕಾರಿಗಳ ಪರಿಚಯ ಇದೆ. ನಿಮ್ಮ ಜಮೀನಿನ ದಾಖಲೆ ಮಾಡಿಸಿಕೊಡುತ್ತೇವೆ' ಎಂದು ವಂಚಕರು ಸಾಕಷ್ಟು ಜನರಿಂದ ಹಣ ವಸೂಲಿ ಮಾಡುತ್ತಿದ್ದಾರೆ. ಸಾರ್ವಜನಿಕರು ಇಂಥವರಿಂದ ಎಚ್ಚರಿಕೆಯಿಂದ ಇರಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪೋಡಿ ದುರಸ್ತಿ ಅಭಿಯಾನವನ್ನು ವಂಚಕರು ಹಣ ದೋಚಲು ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ. 'ತಹಶೀಲ್ದಾರ್, ಉಪ ವಿಭಾಗಾಧಿಕಾರಿ, ಜಿಲ್ಲಾಧಿಕಾರಿಗಳು ಪರಿಚಯವಿದೆ ನಿಮ್ಮ ಕೆಲಸ ಮಾಡಿಸಿಕೊಡುತ್ತೇವೆ ಎಂದು ನಂಬಿಸಿ ಹಣಕ್ಕೆ ಬೇಡಿಕೆ ಇಡುವ ಜನರನ್ನು ನಂಬ ಬೇಡಿ' ಎಂದು ಕಂದಾಯ ಇಲಾಖೆ ಮನವಿ ಮಾಡಿದೆ.


ಚಿತ್ರಾವಳಿ



ರಾಜರಾಜೇಶ್ವರಿ ನಗರ ವ್ಯಾಪ್ತಿಯ ಕೋಡಿಪಾಳ್ಯದಲ್ಲಿರುವ ವಿಶ್ವ ವೆಂಕಟೇಶ್ವರ ಶಾಲೆಯ ವಾರ್ಷಿಕೋತ್ಸವದಲ್ಲಿ ಮಕ್ಕಳು ಪೌರಾಣಿಕ ನಾಟಕವನ್ನು ಪ್ರದರ್ಶಿಸಿದರು



ಕೆ.ಆರ್.ಪುರದಲ್ಲಿ ಕರ್ನಾಟಕ ರಾಜ್ಯ ಬಲಿಜ ಯುವಶಕ್ತಿ ಸಂಘಟನೆಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಬಲಿಜ ಸಮುದಾಯದ ಶೈಕ್ಷಣಿಕ, ಔದ್ಯೋಗಿಕ, ಆರೋಗ್ಯ ಸೇವೆಗಾಗಿ ಅಭಿವೃದ್ಧಿಪಡಿಸಿರುವ ಆ್ಯಪ್ ಮತ್ತು ಸಹಾಯವಾಣಿಯನ್ನು ಸಮುದಾಯದ ಹಿರಿಯ ಮುಖಂಡ ತ್ಯಾಗರಾಜ ಬಿಡುಗಡೆ ಮಾಡಿದರು



ಕೈಬರಹದ ಕರಾಮತ್ತು

ಕೈಬರಹದಲ್ಲಿ ಮಿದುಳಿನ ಕ್ರಿಯಾಶೀಲತೆ ಅಡಗಿದೆ. ವ್ಯಕ್ತಿತ್ವ ಮಾಪನಕ್ಕೆ ಸಾಧನವೂ ಹೌದು ನಮ್ಮ ಕೈಬರಹ. ಚಂದದ ಕೈಬರಹವಿದ್ದರೆ ಅಂಕಗಳಿಕೆಯೂ ಸುಲಭ. ಗ್ಯಾಜೆಟ್‌ಗಳ ಮೇಲಿನ ಅವಲಂಬನೆಯಿಂದಾಗಿ ಕೈಬರಹ ಕುರಿತ ಪ್ರಾಮುಖ್ಯತೆ ಕಡಿಮೆಯಾಗುತ್ತಿದೆ.
ಜನವರಿ 23 ವಿಶ್ವ ಕೈಬರಹ ದಿನ.
ಈ ಹಿನ್ನೆಲೆಯಲ್ಲಿ ಕೈಬರಹದ ಬಗೆಗಿನ ಮಾಹಿತಿ

ಪ್ರೀತಿ ಎಂ. ಸಂಗಮ್

ಆಧುನಿಕ ಯುಗದಲ್ಲಿ ಗ್ಯಾಜೆಟ್‌ಗಳ ಮೇಲಿನ ಅವಲಂಬನೆಯಿಂದಾಗಿ ಕೈಬರಹದ ಕುರಿತ ಪ್ರಾಮುಖ್ಯತೆ ಕಡಿಮೆಯಾಗುತ್ತಿದೆ. ವಿದ್ಯಾರ್ಥಿ ಜೀವನದಲ್ಲಿ ಕೈಬರಹವು ತನ್ನದೇ ಪ್ರಮುಖ ಪಾತ್ರ ವಹಿಸುತ್ತದೆ. ಸುಂದರ ಕೈಬರಹವು ಅಂಕಗಳಿಕೆಗೂ ಸಹಾಯ ಮಾಡುತ್ತದೆ. ಅಷ್ಟೆ ಅಲ್ಲದೇ ಕೈಬರಹವು ಕಲಿಕೆ ಮತ್ತು ಮಿದುಳಿನ ಅಭಿವೃದ್ಧಿಗೆ ನೆರವಾಗುವ ಒಂದು ಕೌಶಲವಾಗಿದೆ

ಕೈಬರಹ ಮತ್ತು ಟೈಪಿಂಗ್‌ನಲ್ಲಿ ಪದಗಳನ್ನು ರಚಿಸುವಾಗ ಕೈ ಮತ್ತು ಬೆರಳುಗಳ ಚಲನೆಯನ್ನು ಒಳಗೊಂಡಿರುತ್ತದೆ. ಆದರೆ ಟೈಪಿಂಗ್‌ಗಿಂತಲೂ ಕೈಬರಹದಿಂದ ಆಗುವ ಪ್ರಯೋಜನಗಳು ಹೆಚ್ಚು. ಅಕ್ಷರಗಳ ಆಕಾರವನ್ನು ರಚಿಸುವಾಗ ಬೆರಳು ಮತ್ತು ಮಿದುಳಿನ ನಡುವೆ ಹಲವು ಹೊಂದಾಣಿಕೆಗಳು ನಡೆಯುತ್ತವೆ. ಬೆರಳು ಬೇರೆ ಬೇರೆ ತರಹದ ಚಲನೆಗೆ ಒಳಗಾಗುತ್ತವೆ. ಇದರಿಂದ ಮಿದುಳು ಹೆಚ್ಚು ಕ್ರಿಯಾಶೀಲವಾಗಿರುತ್ತದೆ ಎನ್ನುತ್ತಾರೆ ವಾಂಡರ್ಬಿಲ್ಟ್ ವಿಶ್ವವಿದ್ಯಾಲಯದ ನರವಿಜ್ಞಾನಿ ಸೋಫಿಯಾ ವಿನ್ಸಿ-ಬೂಹರ್.

ಆದರೆ ಟೈಪ್ ಮಾಡುವಾಗ ಇಷ್ಟೆಲ್ಲ ಸಂಕೀರ್ಣತೆ ಇರುವುದಿಲ್ಲ. ಬೆರಳುಗಳು ಏಕರೂಪದ ಚಲನೆ ಹೊಂದಿರುತ್ತದೆ. ಕೈಯಿಂದ ಅಕ್ಷರಗಳನ್ನು ರಚಿಸುವ ಪ್ರಕ್ರಿಯೆ ಬಗ್ಗೆ ನಾರ್ವೆ ಸಂಶೋಧಕರ ತಂಡವು ಸಂಶೋಧನೆಯೊಂದನ್ನು ನಡೆಸಿತು. ತಂಡವು ಬರವಣಿಗೆಗೆ (ಪೆನ್ ಮತ್ತು ಪೇಪರ್ ಬಳಸಿ ಅಥವಾ ಕೀಬೋರ್ಡ್ ಮತ್ತು ಸ್ಕ್ರೀನ್ ಬಳಸಿ) ಆಧಾರವಾಗಿರುವ ನರಮಂಡಲವನ್ನು ಸೂಕ್ಷ್ಮವಾಗಿ ಅಭ್ಯಾಸ ನಡೆಸಿತು.

ಇದಕ್ಕಾಗಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಂದ ಇಇಜಿ ಡೇಟಾವನ್ನು ಸಂಗ್ರಹಿಸಿತು. ಕೆಲವರು ಪೆನ್‌ನಿಂದ ಬರೆದಿದ್ದರು. ಇನ್ನು ಕೆಲವರು ಸ್ಕ್ರೀನ್ ಮೇಲೆ ಟೈಪ್ ಮಾಡಿದ್ದರು. 256 ಸಣ್ಣ ಸಂವೇದಕಗಳನ್ನು ನೆಟ್‌ನಲ್ಲಿ ಹೊಲಿದು ಅವರ ತಲೆಯ ಮೇಲೆ ಇರಿಸಿ, ಪ್ರತಿ ಪ್ರಾಂಪ್ಟ್‌ಗೆ ಐದು ಸೆಕೆಂಡುಗಳ ಕಾಲ ರೆಕಾರ್ಡ್ ಮಾಡಿ ಅವರ ಮಿದುಳಿನಲ್ಲಿದ್ದ ವಿದ್ಯುತ್ ಚಟುವಟಿಕೆಯನ್ನು ಅಳೆಯಲಾಯಿತು.

ಕೈಯಿಂದ ಬರೆದವರ ಮಿದಳಿನ ಹಲವು ಭಾಗಗಳು ಸಕ್ರಿಯವಾಗಿದ್ದವು. ಟೈಪ್ ಮಾಡಿದವರ ಮಿದುಳಿನಲ್ಲಿ ಅಂಥ ಬದಲಾವಣೆ ಕಂಡುಬರಲಿಲ್ಲ. ಇದಲ್ಲದೇ ಟ್ಯಾಬ್ಲೆಟ್ ಅಥವಾ ಲ್ಯಾಪ್‌ಟಾಪ್‌ನಲ್ಲಿ ಬರೆಯಲು ಕಲಿತ ಮಕ್ಕಳು ಒಂದೇ ರೀತಿಯಲ್ಲಿ ಕಂಡುಬರುವ ಅಕ್ಷರಗಳ ನಡುವಿನ ವ್ಯತ್ಯಾಸ ಕಂಡುಹಿಡಿಯಲು ಹೆಣಗಾಡುತ್ತಾರೆ. ಹಾಗಾಗಿ ಡಿಜಿಟಲ್ ಸಾಧನಗಳಿಗಿಂತ ಪೆನ್ನು ಮತ್ತು ಪೆನ್ಸಿಲ್‌ನಲ್ಲಿ ಬರೆಯುವ ಪ್ರಯೋಜನವನ್ನು ಸಂಶೋಧನೆ ಒತ್ತಿ ಹೇಳುತ್ತದೆ.

ವ್ಯಕ್ತಿತ್ವವನ್ನು ಬಿಂಬಿಸುವ ಕೈಬರಹವು ಸೃಜನಶೀಲತೆಯನ್ನು ಹೆಚ್ಚಿಸುವ, ಕಲಿಕೆ ಹಾಗೂ ಜ್ಞಾಪಕಶಕ್ತಿ ಹೆಚ್ಚಳಕ್ಕೆ ತನ್ನದೇ ಆದ ಕೊಡುಗೆ ನೀಡುತ್ತದೆ.

ಕೈಬರಹದಿಂದ ವ್ಯಕ್ತಿತ್ವ ಮಾಪನ

ಕೈಬರಹದಿಂದ ವ್ಯಕ್ತಿಯ ಗುಣವಿಶೇಷಗಳನ್ನು ಅರಿಯಬಹುದು. ಇದನ್ನು ಗ್ರಾಫಾಲಜಿ ಎನ್ನುತ್ತಾರೆ. ಕೈಬರಹ ವಿಶ್ಲೇಷಣೆಯ ಪರಿಕಲ್ಪನೆಯು ಹದಿನೇಳನೇ ಶತಮಾನದಷ್ಟು ಹಿಂದಿನದು. ಕೈಬರಹದಿಂದ ಬರಹಗಾರನ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಸ್ಥಿತಿಗಳನ್ನು ಅರ್ಥಮಾಡಿಕೊಳ್ಳಬಹುದು.

ನಾವು ಬರೆದ ಅಕ್ಷರದ ಗಾತ್ರಗಳು, ಪದಗಳ ಅಂತರ, ಅಕ್ಷರ ರೂಪಗಳು ಮತ್ತು ಇತರ ಅಂಶಗಳು ನಮ್ಮ ಪ್ರಾಮಾಣಿಕತೆ, ಏಕಾಗ್ರತೆ, ಭಾವನಾತ್ಮಕ ಸ್ಥಿರತೆ, ಕೆಲಸ ನಿರ್ವಹಿಸುವ ಪರಿ, ಸಂಘಟನಾ ಸಾಮರ್ಥ್ಯ ಸೇರಿ ಇನ್ನೂರಕ್ಕೂ ಹೆಚ್ಚು ಗುಣಲಕ್ಷಣಗಳನ್ನು ಪ್ರತಿನಿಧಿಸುತ್ತದೆ.

ದುಂಡಾದ ಅಕ್ಷರಗಳೊಂದಿಗೆ ಬರೆಯುವುದು ಸೃಜನಶೀಲತೆ ಮತ್ತು ಸೌಂದರ್ಯವನ್ನು ಸೂಚಿಸುತ್ತದೆ. ಮೊನಚಾದ ಅಕ್ಷರಗಳಲ್ಲಿ ಬರೆಯುವ ವ್ಯಕ್ತಿ ತೀಕ್ಷ್ಣ ಮತ್ತು ಕುತೂಹಲವುಳ್ಳ ಗುಣವನ್ನು ಹೊಂದಿರುತ್ತಾರೆ.

ಸಣ್ಣ ಅಕ್ಷರಗಳಲ್ಲಿ ಬರೆಯುವವರು ನಾಚಿಕೆ ಸ್ವಭಾವದವರು ಹಾಗೂ ಅಂತರ್ಮುಖಿಗಳಾಗಿರುತ್ತಾರೆ. ಅಂತೆಯೇ ದೊಡ್ಡ ಅಕ್ಷರಗಳಲ್ಲಿ ಬರೆಯುವ ಜನರು ಬಹಿರ್ಮುಖಿಗಳಾಗಿರುತ್ತಾರೆ ಎಂದು ಹೇಳುತ್ತಾರೆ. ಬರವಣಿಗೆಯ ಗಾತ್ರದಿಂದ ನಮ್ಮ ಏಕಾಗ್ರತೆ ಸಾಮರ್ಥ್ಯವನ್ನು ನಿರ್ಧರಿಸಬಹುದು.


ಪದಗಳನ್ನು ಒಟ್ಟುಗೂಡಿಸಿ ಬರೆಯುವ ವ್ಯಕ್ತಿಗಳು ಇತರರ ಸಹವಾಸವನ್ನು ಇಷ್ಟಪಡುತ್ತಾರೆ. ಪದಗುಚ್ಛಗಳ ನಡುವೆ ದೊಡ್ಡ ಜಾಗವನ್ನು ಬಿಡುವವರು ಸ್ವಾತಂತ್ರ್ಯವನ್ನು ಇಷ್ಟಪಡುತ್ತಾರೆ. ಪೆನ್ನಿನ ಮೇಲೆ ಸಾಧಾರಣ ಪ್ರಮಾಣದ ಒತ್ತಡವು ಬದ್ಧತೆಯನ್ನು ಸೂಚಿಸುತ್ತದೆ, ಆದರೆ ತುಂಬಾ ಕಠಿಣವಾದ ಒತ್ತಡವು ಉದ್ವೇಗ ಮತ್ತು ಕೋಪವನ್ನು ಸೂಚಿಸುತ್ತದೆ.


ಬರವಣಿಗೆ ಅಸ್ಪಷ್ಟವಾಗಿದ್ದರೆ ಬರಹಗಾರ ಸುಳ್ಳು ಹೇಳುವ ಸಾಧ್ಯತೆಯಿದೆ ಎಂದು ಕೈಬರಹ ವಿಶ್ಲೇಷಣಾತಜ್ಞರು ಹೇಳುತ್ತಾರೆ. ಅಪರಾಧಗಳಿಗೆ ಸಂಬಂಧಪಟ್ಟ ತನಿಖೆಯಲ್ಲಿಯೂ ಕೈಬರಹದ ವಿಶ್ಲೇಷಣಾ ಕೌಶಲವನ್ನು ಉಪಯೋಗಿಸಲಾಗುತ್ತದೆ.

ಕೈಬರಹದಿಂದಾಗುವ ಅನುಕೂಲಗಳು ಹೀಗಿವೆ



- **ಮಿದುಳಿನ ಸಂಪರ್ಕವನ್ನು ಸುಧಾರಿಸುತ್ತದೆ:** ಕೈಬರಹವು ಮಿದುಳಿನ ಹೊರಭಾಗಗಳು ಮತ್ತು ಕೇಂದ್ರ ಭಾಗಗಳ ನಡುವಿನ ಸಂಪರ್ಕವನ್ನು ಹೆಚ್ಚಿಸುತ್ತದೆ. ಇದು ಕಲಿಕೆ ಮತ್ತು ಸ್ಮರಣಾಶಕ್ತಿಗೆ ಸಹಾಯ ಮಾಡುತ್ತದೆ.
- **ನರಮಂಡಲವನ್ನು ಬಲಪಡಿಸುತ್ತದೆ:** ಕೈಬರಹವು ಹೊಸ ನರಕೋಶದ ಬೆಳವಣಿಗೆಗೆ ಪೂರಕವಾಗಿದೆ ಮತ್ತು ನರಮಂಡಲವನ್ನು ಬಲಪಡಿಸುತ್ತದೆ.
- **ಮಿದುಳನ್ನು ಚುರುಕುಗೊಳಿಸುತ್ತದೆ:** ಕೈಬರಹವು ಭಾಷೆ, ಚಲನೆ, ಸ್ಮರಣೆ ಹಾಗೂ ಓದುವಿಕೆಗೆ ಸಂಬಂಧಿಸಿದ ಮಿದುಳಿನ ನರಗಳನ್ನು ಸಕ್ರಿಯಗೊಳಿಸುತ್ತದೆ.
- **ಜ್ಞಾಪಕ ಶಕ್ತಿಯನ್ನು ಸುಧಾರಿಸುತ್ತದೆ:** ಬರೆದು ಕಲಿತದ್ದು ಹೆಚ್ಚು ನೆನಪಿನಲ್ಲಿ ಉಳಿಯುತ್ತದೆ. ವಿಮರ್ಶಾತ್ಮಕ ಚಿಂತನೆ ಮತ್ತು ಆತ್ಮಾವಲೋಕನ ಕೌಶಲವನ್ನು ಹೆಚ್ಚಿಸುತ್ತದೆ. ಇದಲ್ಲದೇ ಸತತವಾಗಿ ಕೈಬರಹದಲ್ಲಿ ತೊಡಗಿಸಿಕೊಳ್ಳುವುದರಿಂದ ಭಾವನೆಗಳನ್ನು ನಿಯಂತ್ರಿಸಲು, ಸ್ವಯಂ ಅರಿವು ಹೊಂದಲು ಸಾಧ್ಯವಿದೆ.





ಓದಿನ ಗೀಳು ಒಳ್ಳೆಯದೇ?

- **ನನ್ನ ಮಗ ವಿಪರೀತ ಓದುತ್ತಾನೆ. ಯಾರೊಂದಿಗೂ ಮಾತಾಡುವುದಿಲ್ಲ. ಊಟ, ನಿದ್ದೆ ಯಾವ ಕಡೆಯೂ ಗಮನವಿಲ್ಲ. ಅಂಕಗಳ ಬಗ್ಗೆ ಮೊದಲಿನಿಂದಲೂ ಒತ್ತಡ ಹಾಕದಿದ್ದರೂ ಗೀಳು ಹಿಡಿದವನಂತೆ ಸದಾ ಓದುತ್ತಲೇ ಇರುತ್ತಾನೆ. ಅಭ್ಯಾಸದಲ್ಲಿ ಸದಾ ಮುಂದಿದ್ದಾನೆ. ಯಾಕೆ ಹೀಗೆ?**

ಹಾಗೆ ನೋಡಿದರೆ ಇದು ಪಾಲಕರಿಗೆ ಖುಷಿಯಾಗಬೇಕಾದ ವಿಷಯ. ಆದರೆ ಇಲ್ಲಿ ಹಾಗಾಗುತ್ತಿಲ್ಲ! ಮಕ್ಕಳು ಅಸಹಜವಾಗಿ ವರ್ತಿಸಿದರೆ ಆತಂಕವಾಗಬೇಕಾದದ್ದು ಸಹಜ. ಅವನು ಮೊದಲಿನಿಂದಲೂ ಹಾಗೆಯೇ ಇದ್ದಾನಾ? ಅಥವಾ ಪರೀಕ್ಷೆ ಹತ್ತಿರ ಬಂದಂತೆಯೇ ಹೀಗಾಗಿದ್ದಾನಾ ಎನ್ನುವುದನ್ನು ಗಮನಿಸಿ. ಕೇವಲ ಅಂಕಗಳಿಕೆಯಷ್ಟೇ ಶಿಕ್ಷಣದ ಉದ್ದೇಶವಲ್ಲ. ಹೆಚ್ಚು ಅಂಕಗಳಿಸಿದವರೆಲ್ಲರೂ ಜೀವನದಲ್ಲಿ ಯಶಸ್ವಿಯಾಗಿದ್ದಾರೆ ಎನ್ನುವ ಹಾಗಿಲ್ಲ.

ಪರೀಕ್ಷೆ ಎನ್ನುವುದು ಒಂದು ಘಟ್ಟ. ಫಲಿತಾಂಶವೇ ಕೊನೆಯಲ್ಲ. ವಿದ್ಯಾರ್ಥಿ ಜೀವನದಲ್ಲಿ ಶಿಸ್ತನ್ನು ರೂಢಿಸಿಕೊಂಡರೆ, ಅಂಕಗಳೂ ಬರುತ್ತವೆ. ಮುಂದೆ ಬದುಕಿನಲ್ಲಿಯೂ ಶಿಸ್ತಿನಿಂದ, ಸುಂದರ ಬದುಕು ಕಟ್ಟಿಕೊಳ್ಳಬಹುದು. ಶಿಸ್ತನ್ನು ಮೊದಲು ಮನಸ್ಸಿಗೂ ಅದರ ಮೂಲಕ ಶರೀರಕ್ಕೂ ಕಲಿಸಬೇಕಾಗುತ್ತದೆ. ಆರರ ಬುದ್ಧಿ ಅರವತ್ತರವರೆಗೂ ಇರುತ್ತದೆ ಎನ್ನುತ್ತಾರೆ.



ಸಮಾಧಾನ
ಡಾ.ಡಿ.ಎಂ. ಹೆಗಡೆ
ಸಮಾಲೋಚಕರು

ಮಗನ ಉದಾಹರಣೆಯನ್ನು ಗಮನಿಸುವುದಾದರೆ ನೀವು ಒತ್ತಡ ಹಾಕದೇ ಇರಬಹುದು. ಬೇರೆಯವರಿಂದ ಅವನಿಗೆ ಒತ್ತಡ ಉಂಟಾಗಿದೆಯೇ, ಬೇರೆಯವರು ಅಂಕಗಳಿಸಿ ಬಿಡುತ್ತಾರೆ ಎನ್ನುವ ಕಾರಣಕ್ಕೆ ಆತಂಕಗೊಂಡಿದ್ದಾನೆಯೇ ಗಮನಿಸಿ. ಅವನ ಮನಸ್ಸಿನಲ್ಲಿ ತಾನು ಯಾವಾಗಲೂ ಮೊದಲಿಗನಾಗಿರಬೇಕು. ಎಲ್ಲರಿಗಿಂತಲೂ ಹೆಚ್ಚು ಅಂಕಗಳಿಸಬೇಕು ಎನ್ನುವುದಿದೆ. ತನಗೆ ಕಡಿಮೆ ಅಂಕ ಬಂದುಬಿಡಬಹುದೇನೋ ಎನ್ನು ಭಯವೂ ಶುರುವಾಗಿದೆ.ಈ ಭಯ ಒಳ್ಳೆಯದಲ್ಲ. ಅವನು ಮಾತನಾಡದೇ ಇರುವುದಕ್ಕೂ ಅವನೊಳಗಿನ ಆತಂಕವೇ ಕಾರಣವಾಗಿರಬಹುದು.



ಊಟ, ನಿದ್ದೆಗೆಟ್ಟು ಓದುವುದು ಸೂಕ್ತವಲ್ಲ. ಬೆಳೆಯುವ ಮಕ್ಕಳಿಗೆ ಸಮತೋಲಿತ ಆಹಾರ ಅಗತ್ಯ. ನಿರಂತರವಾಗಿ 10 ರಾತ್ರಿಗಳ ಕಾಲ ನಿದ್ರೆ ಮಾಡದೇ ಇದ್ದರೆ ಮನುಷ್ಯ ಸಾಯುತ್ತಾನೆ. ಇನ್ನು ಮೂರ್ನಾಲ್ಕು ರಾತ್ರಿ ಅಂದರೆ ಸತತವಾಗಿ 90 ತಾಸುಗಳಷ್ಟು ನಿದ್ರೆ ಮಾಡದೇ ಎಚ್ಚರವಾಗಿದ್ದರೆ ಮನುಷ್ಯನ ಮೆದುಳು ಭ್ರಮಾಧೀನಕ್ಕೆ ಒಳಗಾಗಬಹುದು.

ಹಾಗಂತ ಹಗಲು ನಿದ್ರೆ ಮಾಡಿ ರಾತ್ರಿ ಇಡೀ ಓದುವುದೂ ಖಂಡಿತಾ ಒಳ್ಳೆಯದಲ್ಲ. ಹೀಗೆ ಮಾಡಿದರೆ ಅಲ್ಪಾಯುಷಿಗಳಾಗುತ್ತಾರೆ. ಬೇಗನೇ ಮುದುಕರಂತಾಗಿಬಿಡುತ್ತಾರೆ. ಇವೆಲ್ಲವನ್ನೂ ಅವನಿಗೆ ತಿಳಿಯುವ ಹಾಗೆ ವಿವರಿಸಿರಿ. ಮಗುವಿನ ಸರ್ವತೋಮುಖ ಬೆಳವಣಿಗೆಗೆ ಬೇಕಾದ ಸಕಾರಾತ್ಮಕ ವಿಷಯಗಳನ್ನು ತಿಳಿಸಿರಿ. ಯಾವ ಕಾಲಕ್ಕೂ 'ಓದು ಒಕ್ಕಾಲು, ಬುದ್ಧಿ ಮುಕ್ಕಾಲು'. ಓದಿದ ವಿಷಯವನ್ನು ಅನುಷ್ಠಾನಕ್ಕೆ ತಂದುಕೊಳ್ಳಲು ಬುದ್ಧಿ ಇರಬೇಕು. ನಮಗೆ ಗೊತ್ತಿರುವ ಬಹಳಷ್ಟು ವಿಷಯಗಳು ನಮ್ಮ ಉಪಯೋಗಕ್ಕೇ ಬರುವುದಿಲ್ಲ. ಅವುಗಳಿಂದ ನಮಗೇನೂ ಪ್ರಯೋಜನವಿಲ್ಲ ಎನ್ನುವುದನ್ನು ತಿಳಿದುಕೊಳ್ಳಬೇಕು.

ಈ ಜಗತ್ತು ಒಂದು ಲಯದಲ್ಲಿ ಸಾಗುತ್ತಿದೆ. ಹಾಗೆಯೇ ನಮ್ಮ ಬದುಕಿಗೂ ಒಂದು ಲಯದ ಅಗತ್ಯವಿದೆ. ಅವರವರ ಲಯವನ್ನು, ವೇಗವನ್ನು, ವಿಶೇಷತೆಯನ್ನು ಅವರವರು ಕಂಡುಕೊಳ್ಳಬೇಕು. ಅದು ಅವರವರ ಬದುಕಿನ ಗುರಿಯ ದಾರಿಯನ್ನು ಸ್ಪಷ್ಟಪಡಿಸುತ್ತದೆ.

ವಿದ್ಯಾರ್ಥಿ ವೇತನ ಕೈಪಿಡಿ

ಥ್ರೀ ಸ್ಕಾಲರ್ಸ್ ಪ್ರೋಗ್ರಾಂ

ಥ್ರೀಎಸ್ ಅಸೋಸಿಯೇಟ್ಸ್ ಇಂಡಿಯಾವು ದೆಹಲಿ, ಪುಣೆ, ಚೆನ್ನೈ ಅಥವಾ ಬೆಂಗಳೂರಿನಲ್ಲಿ ಕಲಿಯುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಿದೆ.

ಅರ್ಹತೆ: ಬಿ.ಎ, ಬಿ.ಕಾಂ, ಬಿ.ಇಡಿ, ಬಿ.ಫಾರ್ಮ್, ಬಿಎಸ್.ಸಿ, ಬಿಎಸ್.ಸಿ (ಸ್ಟಾಟಿಸ್ಟಿಕ್ಸ್), ಬ್ಯಾಚುಲರ್ ಆಫ್ ಸೋಷಿಯಲ್ ವರ್ಕ್, ಬ್ಯಾಚುಲರ್ ಆಫ್ ಮಾಸ್ ಕಮ್ಯುನಿಕೇಷನ್, ಬಿಬಿಎ/ಬಿಬಿಎಂ/ಬಿಬಿಎಸ್, ಬಿಸಿಎ ಮತ್ತು ಬಿಎಸ್.ಸಿ (ಐಟಿ). ಅರ್ಹ ವೃತ್ತಿಪರ ಯುಜಿ ಕೋರ್ಸ್‌ಗಳು: ಬಿ.ಆರ್ಕ್, ಬಿಟೆಕ್/ಬಿಇ, ಬಿಎ ಎಲ್‌ಎಲ್‌ಬಿ (ಇಂಟಗ್ರೇಟೆಡ್), ಬಿಡಿಎಸ್, ಎಲ್‌ಎಲ್‌ಬಿ, ಎಂಬಿಬಿಎಸ್, ಬಿಎಸ್.ಸಿ ನರ್ಸಿಂಗ್ ಮತ್ತು ಬಿಟೆಕ್ + ಎಂಟೆಕ್ (ಇಂಟಗ್ರೇಟೆಡ್ 5-ವರ್ಷಗಳ ಕೋರ್ಸ್‌ಗಳು). ಅರ್ಜಿದಾರರು ತಮ್ಮ 12ನೇ ತರಗತಿಯ ಪರೀಕ್ಷೆಯಲ್ಲಿ ಕನಿಷ್ಠ ಶೇ 60ರಷ್ಟು ಅಂಕಗಳನ್ನು ಗಳಿಸಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದಲೂ ₹ 8 ಲಕ್ಷಗಳನ್ನು ಮೀರಬಾರದು.

ಆರ್ಥಿಕ ಸಹಾಯ: ವಾರ್ಷಿಕ ₹ 50,000ದವರೆಗೆ.
ಅರ್ಜಿ ಸಲ್ಲಿಸಲು ಕೊನೆ ದಿನ: 31-01-2025.
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url:www.b4s.in/praja/ZSPU6

ವರ್ಚೂಸಾ ಎಂಜಿನಿಯರಿಂಗ್ ಸ್ಕಾಲರ್‌ಷಿಪ್

ವರ್ಚೂಸಾ ಎಂಜಿನಿಯರಿಂಗ್ ಎಕ್ಸಲೆನ್ಸ್ ಸ್ಕಾಲರ್‌ಷಿಪ್ ಮೊದಲ ಅಥವಾ ಎರಡನೇ ವರ್ಷದ ಬಿ.ಟೆಕ್./ಬಿ.ಇ. ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಆರ್ಥಿಕ ಬೆಂಬಲ ಒದಗಿಸಲಿದೆ.

ಅರ್ಹತೆ: 36 ಕಾಲೇಜುಗಳಲ್ಲಿ ಒಂದರಲ್ಲಿ ಮೊದಲ ಅಥವಾ ಎರಡನೇ ವರ್ಷದ ಬಿ.ಟೆಕ್./ಬಿ.ಇ. ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲಭ್ಯವಿರುತ್ತದೆ. 12ನೇ ತರಗತಿಯಲ್ಲಿ ಕನಿಷ್ಠ ಶೇ 70ರಷ್ಟು ಅಂಕಗಳನ್ನು ಗಳಿಸಿರಬೇಕು ಮತ್ತು ಕುಟುಂಬದ ವಾರ್ಷಿಕ ಆದಾಯವು ₹ 6 ಲಕ್ಷವನ್ನು ಮೀರುವಂತಿರಬಾರದು.
ಆರ್ಥಿಕ ಸಹಾಯ: ವರ್ಷಕ್ಕೆ ₹ 50,000
ಅರ್ಜಿ ಸಲ್ಲಿಸಲು ಕೊನೆ ದಿನ: 31-01-2025
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url: www.b4s.in/praja/VIRS3

ಶಿಕ್ಷಾ ಸಾರಥಿ ಸ್ಕಾಲರ್‌ಷಿಪ್

ಜೆಕೆ ಟಯರ್ ಅಂಡ್ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್ ವಿದ್ಯಾರ್ಥಿ ವೇತನ ನೀಡುವ ಸಲುವಾಗಿ ಭಾರೀ ವಾಹನ ಚಾಲಕರ ಪುತ್ರಿಯರಿಂದ ಅರ್ಜಿಗಳನ್ನು ಆಹ್ವಾನಿಸುತ್ತಿದೆ.
ಅರ್ಹತೆ: ತಾಂತ್ರಿಕ ಅಥವಾ ತಾಂತ್ರಿಕೇತರ ಪದವಿ ಅಥವಾ ಡಿಪ್ಲೊಮಾ ಕೋರ್ಸ್‌ಗಳನ್ನು ಅಭ್ಯಾಸ ಮಾಡುತ್ತಿರಬೇಕು. ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಶೇ 55ರಷ್ಟು ಅಂಕಗಳನ್ನು ಗಳಿಸಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ₹ 5,00,000ಕ್ಕಿಂತ ಕಡಿಮೆ ಅಥವಾ ಸಮನಾಗಿರಬೇಕು.
ಆರ್ಥಿಕ ನೆರವು: ಒಂದು-ಬಾರಿಯ ಸ್ಕಾಲರ್‌ಷಿಪ್:
ತಾಂತ್ರಿಕ ಪದವಿ ಕೋರ್ಸ್‌ಗಳು: ₹ 25,000
ತಾಂತ್ರಿಕೇತರ ಪದವಿ ಕೋರ್ಸ್‌ಗಳು: ₹. 15,000
ಡಿಪ್ಲೊಮಾ ಕೋರ್ಸ್‌ಗಳು: ₹15,000
ಅರ್ಜಿ ಸಲ್ಲಿಸಲು ಕೊನೆ ದಿನ: 15-02-2025
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: Short Url:www.b4s.in/praja/JKTS1

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

ಎಸ್ಸೆಸ್ಸೆಲ್ಸಿ- ಸಮಾಜ ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

31) ಪೂರ್ವಾಗ್ರಹ ಎಂದರೇನು?
ಉತ್ತರ:– ಪೂರ್ವಾಗ್ರಹ ಎಂದರೆ ವ್ಯಕ್ತಿ ಇಲ್ಲವೇ ಸಮೂಹ, ಸಮಾಜದ ದುರಾಭಿಪ್ರಾಯದ ಭಾವನೆಯನ್ನು ಹೊಂದಿರುವುದು ಎಂದರ್ಥ

24) ಸಹಾಯಕ ಸೈನ್ಯ ಪದ್ಧತಿ ಮೊದಲು ಒಪ್ಪಿದವರು ಯಾರು?
ಉತ್ತರ:– ಸಹಾಯಕ ಸೈನ್ಯ ಪದ್ಧತಿ ಮೊದಲು ಒಪ್ಪಿದವರು ಹೈದರಾಬಾದಿನ ನಿಜಾಮ.

25) ಎಲೆ ಉದುರುವ ಮಾನ್ಸೂನ್ ಅರಣ್ಯಗಳನ್ನು ಯಾಕೆ ಹಾಗೆ ಕರೆಯುತ್ತಾರೆ?
ಉತ್ತರ:– ಉಷ್ಣವಲಯದ ಎಲೆ ಉದುರಿಸುವ ಮಾನ್ಸೂನ್ ಕಾಡುಗಳಲ್ಲಿ ಮರಗಳು ನಿರ್ದಿಷ್ಟ ಒಣ ಹವೆಯ ಋತುವಿನಲ್ಲಿ (ವಸಂತ ಋತು ಮತ್ತು ಬೇಸಿಗೆಯ ಆರಂಭದಲ್ಲಿ) ತಮ್ಮ ಎಲೆಗಳನ್ನು ಉದುರಿಸುತ್ತವೆ. ಹೀಗಾಗಿ ಇವುಗಳನ್ನು ಎಲೆ ಉದುರುವ 'ಮಾನ್ಸೂನ್ ಅರಣ್ಯಗಳು' ಎಂತಲೂ ಕರೆಯುವರು

26) ಬ್ರಿಟಿಷ್ ಏಕರೂಪದ ಆಡಳಿತ ವ್ಯವಸ್ಥೆಯು ಭಾರತೀಯರಲ್ಲಿ ಹೇಗೆ ರಾಷ್ಟ್ರೀಯತೆಯನ್ನು ಬೆಳೆಸಿತು?
ಉತ್ತರ : ದೇಶದಲ್ಲಿ ಹಲವಾರು ಸಂಸ್ಥಾನಗಳು ಅಸ್ತಿತ್ವದಲ್ಲಿದ್ದರೂ ಅವುಗಳ ಮೇಲೆ ಬ್ರಿಟಿಷರು ನಿಯಂತ್ರಣ ಹೊಂದಿದ್ದರು. ಇದರಿಂದ ಆಡಳಿತ ವ್ಯವಸ್ಥೆಯಲ್ಲಿ ಏಕರೂಪತೆಯನ್ನು, ಕಾನೂನು ಸುವ್ಯವಸ್ಥೆಯನ್ನು ಸಂರಕ್ಷಿಸುವಲ್ಲಿ ಬ್ರಿಟಿಷರು ಸಫಲರಾಗಿದ್ದರು. ಇದರಿಂದ ದೇಶದಲ್ಲಿ ಸಮಾನತೆ ಏಕರೂಪದ ಅಧಿಕಾರಶಾಹಿತ್ವ ಅಸ್ತಿತ್ವಕ್ಕೆ ಬಂದಿತು ಇದರಿಂದ ಭಾರತೀಯರಲ್ಲಿ ರಾಷ್ಟ್ರೀಯತೆಯನ್ನು ಬೆಳೆಸಿತು

27) ಸುರಪುರದ ರಾಜನನ್ನು(ವೆಂಕಟಪ್ಪನನ್ನು) ಬ್ರಿಟಿಷರು ಸಂಶಯದಿಂದ ನೋಡಲು ಕಾರಣ ಏನು?
ಉತ್ತರ;– 1857ರಲ್ಲಿ ಪ್ರಾರಂಭದ ಹೋರಾಟದಲ್ಲಿನ ನಾನಾಸಾಹೇಬನ ಪ್ರತಿನಿಧಿಗಳು ಸುರಪುರದಲ್ಲಿದ್ದಾರೆ ಎಂಬ ಪುಕಾರು ಕಂಡು ಬಂತು. ಇದರಿಂದಾಗಿ ಬ್ರಿಟಿಷರು ರಾಜನನ್ನು ಸಂಶಯದಿಂದ ಕಾಣುವಂತಾಯಿತು.

28) ಯಾವುದನ್ನು ವ್ಯವಸಾಯ ಅಥವಾ ಕೃಷಿ ಎನ್ನುವರು? ಅದು ಏನನ್ನೆಲ್ಲಾ ಒಳಗೊಂಡಿದೆ?
ಉತ್ತರ:– ಮನುಷ್ಯ ತನಗೆ ಅಗತ್ಯವಾದ ಆಹಾರ ಧಾನ್ಯ ಮತ್ತು ಕಚ್ಚಾ ಪದಾರ್ಥಗಳನ್ನು ಪೂರೈಸುವ ಬೆಳೆಗಳ ಪೋಷಣೆಗಾಗಿ ಭೂಮಿಯನ್ನು ಉಳುಮೆ ಮಾಡುವುದನ್ನು 'ವ್ಯವಸಾಯ ಅಥವಾ ಕೃಷಿ' ಎನ್ನುವರು. ಇಂದು ಕೃಷಿಯು ಪಶುಪಾಲನೆ, ಕೋಳಿ ಸಾಕಣೆ ಮತ್ತು ಜೇನು ಸಾಕಣೆಗಳನ್ನೂ ಒಳಗೊಂಡಿದೆ.

29) ಭಾರತದ ಮಧ್ಯಭಾಗದಲ್ಲಿ ಹಾಯ್ದು ಹೋಗುವ ಮುಖ್ಯ ಅಕ್ಷಾಂಶ ಯಾವುದು?
ಉತ್ತರ : $23\frac{1}{2}^0$ ಉತ್ತರ ಅಕ್ಷಾಂಶ (ಕರ್ಕಾಟಕ ಸಂಕ್ರಾಂತಿ ವೃತ್ತ) ಭಾರತದ ಮಧ್ಯ ಭಾಗದಲ್ಲಿ ಹಾಯ್ದು ಹೋಗುತ್ತದೆ.

30) ಸಿರಾಜನು ಕಲ್ಕತ್ತಾದ ಮೇಲೆ ನಡೆಸಿದ ಆಕ್ರಮಣಕ್ಕೆ ಯುದ್ಧ ಪರಿಹಾರವಾಗಿ ಮೀರ್ ಜಾಫರನು ಕಂಪನಿಗೆ .... ರೂಪಾಯಿಗಳನ್ನು ನೀಡಿದನು.
ಉತ್ತರ:– ಹದಿನೇಳು ಕೋಟಿ ಎಪ್ಪತ್ತು ಲಕ್ಷ

31) ಯಾವ ಅವಧಿಯನ್ನು ಮಂದಗಾಮಿ ಯುಗ ಎನ್ನುತ್ತಾರೆ?
ಉತ್ತರ:– ಸಾಂಪ್ರಾದಾಯಿಕವಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಾರಂಭದ ಇಪ್ಪತ್ತು ವರ್ಷಗಳನ್ನು 'ಮಂದಗಾಮಿಯುಗ' ಎನ್ನುತ್ತಾರೆ.

32) ಉತ್ತರದ ಮೈದಾನವನ್ನು ಸಂಚಯನ ಮೈದಾನವೆಂದು ಕರೆಯುತ್ತಾರೆ. ಏಕೆ?
ಉತ್ತರ.:– ಉತ್ತರದ ಮೈದಾನವು ನದಿಗಳು ಹೊತ್ತು ತಂದು ಹಾಕಿದ ಮೆಕ್ಕಲು ಮಣ್ಣಿನಿಂದ ನಿರ್ಮಿತವಾಗಿವುದರಿಂದ ಈ ಮೈದಾನವನ್ನು ಸಂಚಯನ ಮೈದಾನವೆಂದು ಕರೆಯುತ್ತಾರೆ.

33) ಜಯಚಾಮರಾಜ ಒಡೆಯರ ಕಾಲದಲ್ಲಿ ದಿವಾನರಾಗಿ ಸೇವೆ ಸಲ್ಲಿಸಿದವರನ್ನು ಹೆಸರಿಸಿ
ಉತ್ತರ:– ಮಿರ್ಜಾ ಇಸ್ಮಾಯಿಲ್, ಎನ್. ಮಾಧವರಾವ್ ಹಾಗೂ ಆರ್ಕಾಟ್ ರಾಮಸ್ವಾಮಿ

34) ಮಿಶ್ರ ಬೇಸಾಯ ಎಂದರೇನು?
ಉತ್ತರ: ಕೃಷಿ ಭೂಮಿಯನ್ನು ಬೆಳೆಗಳನ್ನು ಬೆಳೆಯುವುದಕ್ಕೆ ಅಲ್ಲದೆ ದನಕರು ಸಾಕಾಣಿಕೆ, ಕೋಳಿ ಸಾಕಾಣಿಕೆ, ಜೇನು ಸಾಕಾಣಿಕೆ, ಹಂದಿ ಸಾಕಾಣಿಕೆ, ರೇಷ್ಮೆ ಕೃಷಿ ಮುಂತಾದ ಉದ್ದೇಶಗಳಿಗಾಗಿಯೂ ಬಳಸಲಾಗುವುದು. ಇದಕ್ಕೆ 'ಮಿಶ್ರ ಬೇಸಾಯ' ಎಂದು ಕರೆಯುವರು

35) ಹಲಗಲಿಯ ಬೇಡರ ಹೋರಾಟದ ಕುರಿತು ಬರೆಯಿರಿ.
ಉತ್ತರ:– ಹಲಗಲಿಯ ಬೇಡರ ದಂಗೆ ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕಿನಲ್ಲಿ ಹಲಗಲಿ ಎಂಬುದು ಒಂದು ಪುಟ್ಟಗ್ರಾಮ. ಹಿಂದೆ ಇದು ಮುಧೋಳ ಸಂಸ್ಥಾನದ ಆಳ್ವಿಕೆಗೆ ಒಳಪಟ್ಟಿತು. 1857ರ ಬಂಡಾಯದ ಸಂದರ್ಭದಲ್ಲಿ ಬ್ರಿಟಿಷರು ತಮ್ಮ ಆಳ್ವಿಕೆಯ ಪ್ರದೇಶದಲ್ಲಿ ಶಸ್ತ್ರಗಳ ಬಳಕೆಯನ್ನು ನಿರ್ಬಂಧಿಸಿ ಕಾನೂನೊಂದನ್ನು ಜಾರಿಗೆ ತಂದರು. ಇದನ್ನು ಹಲಗಲಿಗೂ ಸಹ ಅನ್ವಯಿಸಲಾಯಿತು. ಹಲಗಲಿಯ ಬೇಡರು ತಲೆತಲಾಂತರಗಳಿಂದ ಬೇಟೆಯಾಡುವ ಉದ್ದೇಶಕ್ಕೆ ಮುಕ್ತವಾಗಿ ಬಳಸುತ್ತಿದ್ದ ಬಂದೂಕುಗಳನ್ನು ಬ್ರಿಟಿಷರಿಗೆ ಒಪ್ಪಿಸಲು ಸಿದ್ಧರಿರಲಿಲ್ಲ. ಬೇಡರು ತಮ್ಮ ಪರಂಪರಾನುಗತವಾದ ಹಕ್ಕನ್ನು ಉಳಿಸಿಕೊಳ್ಳುವ ಉದ್ದೇಶದಿಂದ ಬ್ರಿಟಿಷರ ವಿರುದ್ಧ ಸಿಡಿದೆದ್ದರು. ಈ ಹೋರಾಟದಲ್ಲಿ ಹಲಗಲಿಯ ಸುತ್ತಮುತ್ತಲಿನ ಪ್ರದೇಶಗಳಾದ ಮಂಟೂರು, ಬೋದಾನಿ, ಆಲಗುಂಡಿಯ ಬೇಡರು, ಹಲಗಲಿಯ ಬೇಡರೊಂದಿಗೆ ಸೇರಿಕೊಂಡರು. ಇವರ ಬಂಡಾಯವನ್ನು ಹತ್ತಿಕ್ಕಲು ನವೆಂಬರ್‌ನಲ್ಲಿ ಇಂಗ್ಲಿಷರ ಸೇನೆ ಹಲಗಲಿ ಗ್ರಾಮವನ್ನು ತಲುಪಿತು. ಬಂಡಾಯವೆದ್ದ ಬೇಡರನ್ನು ನಿಷ್ಕಾರುಣವಾಗಿ, ಅತ್ಯಂತ ದಮನಕಾರಿಯಾಗಿ ಇಂಗ್ಲಿಷರು ಹತ್ತಿಕ್ಕಿದರು. ಬಂಡಾಯಗಾರರನ್ನು ಗಲ್ಲಿಗೇರಿಸುವುದರ ಮೂಲಕ ಈ ಬಂಡಾಯವು ಕೊನೆಗೊಂಡಿತು

36) ಜನಸಂಖ್ಯಾ ಬೆಳವಣಿಗೆಯನ್ನು ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳಾವುವು?
ಉತ್ತರ: ಭಾರತ ಸರ್ಕಾರವು ತ್ವರಿತಗತಿಯಲ್ಲಿ ಏರುತ್ತಿರುವ ಜನಸಂಖ್ಯೆಯನ್ನು ತಡೆಗಟ್ಟಲು ಹಲವಾರು ಕ್ರಮಗಳನ್ನು ರೂಪಿಸಿ ಕಾರ್ಯಗತಗೊಳಿಸಿದೆ, ಅವುಗಳಲ್ಲಿ ಕುಟುಂಬ ಯೋಜನೆ, ಮಹಿಳಾ ಕಲ್ಯಾಣ ಯೋಜನೆ, ಶಿಶು ಮರಣ ತಡೆಗಟ್ಟುವುದು, ಕ್ಷೇತ್ರ ಯೋಜನೆಗಳು, ಪ್ರಚಾರ ಜಾಹೀರಾತು, ಕುಟುಂಬ ಯೋಜನಾ ಶಿಬಿರಗಳು, ಗ್ರಾಮೀಣ ಪ್ರದೇಶಗಳಲ್ಲಿ ಅತಿಹೆಚ್ಚು ಪ್ರಚಾರವನ್ನು ಮಾಡಿ ಜನರಲ್ಲಿ ಅರಿವು ಮೂಡಿಸುವಲ್ಲಿ ಈ ಕಾರ್ಯಕ್ರಮಗಳು ಮುಂದುವರಿದಿದೆ.

37) ಬ್ಯಾಂಕು ಖಾತೆಯನ್ನು ತೆಗೆಯುವುದರಿಂದ ಆಗುವ ಅನುಕೂಲಗಳು ಯಾವುವು?
ಉತ್ತರ:– ಬ್ಯಾಂಕು ಖಾತೆಯನ್ನು ತೆಗೆಯುವುದರಿಂದ ಆಗುವ ಅನುಕೂಲಗಳು ಹೀಗಿವೆ : (ಮುಂದುವರಿಯುವುದು)

II PUC -MATHEMATICS

Fill in the blanks by choosing the appropriate answer from those given in the bracket (0, 1, 2, 3, 4, 5)

1. The number of points in R for which the function $f(x) = |x| + |x+1|$ is not differentiable, is________
Ans:- 2

17. The value of $\hat{i}.(\hat{j}\times\hat{k}) - \hat{j}.(\hat{k}\times\hat{i}) - \hat{k}.(\hat{j}\times\hat{i})$ is________
Ans:- 1

18. The sum of the order and degree of the differential equation. $2x^2\left(\frac{d^2y}{dx^2}\right) - 3\left(\frac{dy}{dx}\right) + y$ is____
Ans:- 3

19. The total revenue in rupees received from the sale of x unit of a product is given by $R(x)=2x^2-4x+5$,The marginal revenue when x=2 is________
Ans:- 4

20.
If $P(A)=\frac{3}{k}$, $P(A\cap B)=\frac{2}{5}$ and $P(B|A)=\frac{2}{3}$, then k is______
Ans:- 5

II. Answer questions:-

11. Define binary operation on the set. Verify whether the operation * defined on Z by $a * b = ab + 1$ is binary or not?
Ans:- A binary operation * on a set A is a function * from A x A to A $\forall a, b \in Z$
then $a * b = ab + 1 \in Z$
$\therefore$ * is a binary operation on Z

12. Find the simplest form of $\tan^{-1}\sqrt{3} - \sec^{-1}(-2)$
$$\text{Ans}:-\frac{\pi}{3}-\left(\pi-\sec^{-1}2\right)=\frac{\pi}{3}-\left(\pi-\frac{\pi}{3}\right)=\frac{\pi}{3}-\frac{2\pi}{3}=-\frac{\pi}{3}$$

13. Evaluate $\sin\left\{\frac{\pi}{3}-\sin^{-1}\left(\frac{-1}{2}\right)\right\}$
$$\text{Ans}:-\sin\left\{\frac{\pi}{3}+\sin^{-1}\left(\frac{1}{2}\right)\right\}=\sin\left\{\frac{\pi}{3}+\frac{\pi}{6}\right\}=\sin\frac{\pi}{2}=1$$

14. Find the area of the triangle whose vertices are (3,8) (-4, 2) (5, 1) using determinants.
$$\text{Ans}:-\ \text{Area}=\frac{1}{2}\begin{vmatrix}3 & 8 & 1\\ -4 & 2 & 1\\ 5 & 1 & 1\end{vmatrix}=\frac{61}{2}\ \text{sq units}$$

15. Check the continuity of the function $f(x) = 2x + 3$ at $x = 1$
Ans:- $\lim_{x\to1} f(x) = 2(1) + 3 = 5;\ f(1) = 5$
$\therefore \lim_{x\to1} f(x) = f(1) = 5$
Hence f(x) is continuous at x = 1

16. Find the derivative of $(3x^2 - 7x + 3)^{5/2}$ w.r.t. x.
$$\text{Ans}:-\frac{dy}{dx}=\frac{5}{2}\left(3x^2-7x+3\right)^{\frac{5}{2}-1}\frac{d}{dx}\left(3x^2-7x+3\right)$$
$$\frac{dy}{dx}=\frac{5}{2}\left(3x^2-7x+3\right)^{\frac{3}{2}}(6x-7)$$

17. If the radius of a sphere is measured as 9 cm with an error, 0.03 cm then find the approximate error in calculating its volume.
Ans:- Let r be the radius of sphere and Δr be the error in measuring the radius
$$V=\frac{4}{3}\pi r^3 \Rightarrow \frac{dV}{dr}=4\pi r^2$$
$$\text{and } dV=\left(\frac{dV}{dr}\right)\Delta r$$
$$\Rightarrow dV = 4\pi\,(9)^2(0.03) = 9.72\,\pi\ cm^3$$

18. Evaluate $\int\frac{dx}{\sin^2 x\cos^2 x}$
$$\text{Ans}:-\int\frac{1}{\sin^2 x\cos^2 x}dx=\int\frac{\sin^2+\cos^2 x}{\sin^2 x\cos^2 x}dx$$
$$\Rightarrow\int\frac{\sin^2 x}{\sin^2 x\cos^2 x}dx+\int\frac{\cos^2 x}{\sin^2 x\cos^2 x}dx\left(\sin^2 x\cos^2=1\right)$$
$$\Rightarrow\int\frac{1}{\cos^2 x}dx+\int\frac{1}{\sin^2 x}dx$$
$$\Rightarrow\int\sec^2 x\,dx+\int\operatorname{cosec}^2 x\,dx$$
$$\Rightarrow \tan x+\cot x+c$$

19. Evaluate $\int \log x\,dx$
Ans:- Integration by parts $f(x) = \log x$, $g(x) = 1$
$\int f(x)\,g(x)\,dx = f(x)\int g(x) - \int\{f'(x)\int g(x)\,dx\}\,dx$
$$=\log x.x-\int\left\{\frac{1}{x}x\right\}dx$$
$= \log x.\,x - \int dx = \log x.\,x - x + c$
$= x(\log x - 1) + c$

20. Find the order and degree of the differential equation
Ans:- order : 2; degree : 1.

21. If the position vectors of the points A and B are $\hat{i}+2\hat{j}-3\hat{k}$ and $\hat{j}-\hat{k}$ find the direction cosines of $\overrightarrow{AB}$

Soln:- $\overrightarrow{OA}=\hat{i}+2\hat{j}-3\hat{k}$ and $\overrightarrow{OB}=\hat{j}-\hat{k}$
$\overrightarrow{AB}=\overrightarrow{OB}-\overrightarrow{OA}=-\hat{i}-\hat{j}+2\hat{k}\quad|\overrightarrow{AB}|=\sqrt{6}$
$\therefore$ dc' are $\frac{-1}{\sqrt6}, \frac{-1}{\sqrt6}, \frac{2}{\sqrt6}$

22. Find the vector of magnitude 8 units in the direction of the vector $\vec{a}=5\hat{i}-\hat{j}+2\hat{k}$

(Contd.........)

2016–2022ರ ಅವಧಿ • ರಾಜ್ಯದ ಆಸ್ಪತ್ರೆಗಳಲ್ಲಿ ಅಗತ್ಯ ಸೌಲಭ್ಯಗಳೇ ಇಲ್ಲ • ಸಿಎಜಿ ವರದಿಯಲ್ಲಿ ಕಳವಳ

‘ಕಳಪೆ ಆರೈಕೆಯಿಂದಲೇ ಬಾಣಂತಿಯರ ಸಾವು’

• ಜಯಸಿಂಹ ಆರ್.

ಬೆಂಗಳೂರು: ‘ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆಪೂರ್ವ, ಹೆರಿಗೆ ಮತ್ತು ಹೆರಿಗೆ ನಂತರದ ಆರೈಕೆ ಸೇವೆಗಳು ಸರಿಯಾಗಿ ಆಗುತ್ತಿಲ್ಲ. ಈ ಕಾರಣದಿಂದಲೇ ಬಾಣಂತಿಯರ ಸಾವು, ಶಿಶು ಮರಣ ಮತ್ತು ನಿರ್ಜೀವ ಹೆರಿಗೆಗಳು ಮರುಕಳಿಸುತ್ತಿವೆ. ಈ ಸೇವೆಗಳು ಕಳಪೆಯಾಗಿರುವುದನ್ನು ಇದು ತೋರಿಸುತ್ತದೆ’ ಎಂದು ಮಹಾಲೇಖಪಾಲ (ಸಿಎಜಿ) ಹೇಳಿದೆ.

‘ಬಾಣಂತಿ ಮತ್ತು ಶಿಶು ಆರೈಕೆಗೆ ಅಗತ್ಯವಿರುವ ಉಪಕರಣಗಳು, ತಜ್ಞ ಸಿಬ್ಬಂದಿ ಮತ್ತು ಔಷಧಗಳು ರಾಜ್ಯದ ಹಲವು ಸರ್ಕಾರಿ ಆಸ್ಪತ್ರೆಗಳಲ್ಲಿ ಲಭ್ಯವಿಲ್ಲ’ ಎಂದು ಸಿಎಜಿ ಡಿಸೆಂಬರ್‌ನಲ್ಲಿ ಸಲ್ಲಿಸಿರುವ, ‘ಸಾರ್ವಜನಿಕ ಆರೋಗ್ಯ ಮೂಲಸೌಕರ್ಯ ಮತ್ತು ಆರೋಗ್ಯ ಸೇವೆಗಳ ನಿರ್ವಹಣೆ ವರದಿ’ಯಲ್ಲಿ ಇದೆ. 2016 ರಿಂದ 2022ರ ನಡುವಣ ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ ಪರಿಶೀಲನೆ ನಡೆಸಿ ಈ ವರದಿ ಸಿದ್ಧಪಡಿಸಲಾಗಿದೆ.

ಬಳ್ಳಾರಿ ಜಿಲ್ಲಾ ಆಸ್ಪತ್ರೆ ಮತ್ತು ಇತರ ಆಸ್ಪತ್ರೆಗಳಲ್ಲೂ ಇದೇ ಸ್ಥಿತಿ ಇದೆ ಎಂಬುದನ್ನು ಸಿಎಜಿ 2022ರಲ್ಲಿ ಅದರ ರಾಜ್ಯ ಸರ್ಕಾರದ ಗಮನಕ್ಕೆ ತಂದಿತ್ತು. ಸೌಲಭ್ಯಗಳನ್ನು ಹೆಚ್ಚಿಸಿ, ಸಮಸ್ಯೆಗಳನ್ನು ಬಗೆಹರಿಸಲಾಗುವುದು ಎಂದು ರಾಜ್ಯ ಸರ್ಕಾರವು ಪರಿಶೋಧಕರಿಗೆ ತಿಳಿಸಿತ್ತು. ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಈಚೆಗೆ ನಡೆದ ಸಾಲು–ಸಾಲು ಬಾಣಂತಿಯರ ಸಾವಿನ ಪ್ರಕರಣಗಳು ಪರಿಸ್ಥಿತಿ ಸುಧಾರಿಸಿಲ್ಲ ಎಂಬುದರತ್ತ ಬೊಟ್ಟು ಮಾಡುತ್ತದೆ.

‘ಸ್ಥಿತಿಯಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಉಪಕರಣಗಳು, ಶುಶ್ರೂಷಕರು ಸೇರಿ ಹಲವು ವಸ್ತುಗಳ ಕೊರತೆ ಇದ್ದೇ ಇದೆ’ ಎಂದು ಬಳ್ಳಾರಿ ಜಿಲ್ಲಾ ಆಸ್ಪತ್ರೆಯ ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

‘ಕಿಮ್ಸ್, ವಿಕ್ಟೋರಿಯಾ, ಕೆ.ಸಿ. ಜನರಲ್, ಬಳ್ಳಾರಿ, ಕೋಲಾರ ಜಿಲ್ಲಾ ಆಸ್ಪತ್ರೆಗಳು, ಬಂಗಾರಪೇಟೆ, ಕೆ.ಆರ್.ಪುರ, ಕಲಘಟಗಿ, ನವಲಗುಂದ, ಶ್ರೀನಿವಾಸಪುರ, ಕುಣಿಗಲ್, ಪಿರಿಯಾಪಟ್ಟಣ ತಾಲ್ಲೂಕು ಆಸ್ಪತ್ರೆಗಳು ಮತ್ತು ಹಲವು ಸಮುದಾಯ ಆರೋಗ್ಯ ಕೇಂದ್ರಗಳನ್ನು ಪರಿಶೋಧನೆಗೆ ಒಳಪಡಿಸಲಾಗಿತ್ತು. ಹೆರಿಗೆ ಪೂರ್ವ, ಹೆರಿಗೆ ನಂತರದ ಆರೈಕೆಗೆ ಸಂಬಂಧಿಸಿ ಕೊರತೆ ಕಂಡು ಬಂದಿವೆ’ ಎಂದು ವರದಿ ವಿವರಿಸಿದೆ.



2.15 ಲಕ್ಷ 48 ಗಂಟೆ ಕಳೆದರೂ ಬಾಣಂತಿ ಮತ್ತು ಶಿಶು ಆಸ್ಪತ್ರೆಯಿಂದ ಬಿಡುಗಡೆ ಆಗದ ಪ್ರಕರಣಗಳು

2.30 ಲಕ್ಷ ಪರಿಶೋಧನೆಗೆ ಒಳಪಡಿಸಿದ ಒಟ್ಟು ಹೆರಿಗೆ ಪ್ರಕರಣಗಳು

14,504 48 ಗಂಟೆಗಳಲ್ಲಿ ಬಾಣಂತಿ ಮತ್ತು ಶಿಶು ಆರೋಗ್ಯಕರವಾಗಿ ಮನೆಗೆ ಹೋದ ಪ್ರಕರಣಗಳು

ಹೆರಿಗೆ ನಂತರದ 48 ಗಂಟೆಗಳಲ್ಲಿ ಬಾಣಂತಿ ಮತ್ತು ಶಿಶು ಆಸ್ಪತ್ರೆಯಿಂದ ಬಿಡುಗಡೆಯಾಗಿ ಮನೆಗೆ ಹೋಗುವುದು ಉತ್ತಮ ಹೆರಿಗೆ ಆರೈಕೆ ಸೇವೆಯ ಲಭ್ಯತೆಯನ್ನು ಸೂಚಿಸುತ್ತದೆ. ಆದರೆ ಲೆಕ್ಕಪರಿಶೋಧನೆಗೆ ಒಳಪಡಿಸಿದ ಆಸ್ಪತ್ರೆಗಳಲ್ಲಿ ಹೀಗೆ 48 ಗಂಟೆಗಳಲ್ಲಿ ಮನೆಗೆ ಹೋದ ಪ್ರಕರಣಗಳ ಪ್ರಮಾಣ (6.3%) ತೀರಾ ಕಳಪೆ ಮಟ್ಟದಲ್ಲಿದೆ

ಪ್ರಸವಪೂರ್ವ ಆರೈಕೆ

- ಸ್ತ್ರೀರೋಗ ತಜ್ಞರ ಅನುಪಸ್ಥಿತಿ ಮತ್ತು ಅನಿಯಮಿತ ಲಭ್ಯತೆ ಕಾರಣದಿಂದ ಹೆರಿಗೆಪೂರ್ವ ಆರೈಕೆ ಸೇವೆ ಲಭ್ಯವಿಲ್ಲ
- ಹೆರಿಗೆಪೂರ್ವದಲ್ಲಿ ಆರು ಸ್ವರೂಪದ ಪರೀಕ್ಷೆಗಳನ್ನು ನಡೆಸಬೇಕು. ಉಪಕರಣ, ತಜ್ಞ ಸಿಬ್ಬಂದಿ ಕೊರತೆಯಿಂದ ಎಲ್ಲೆಡೆ ಇದನ್ನು ಪಾಲಿಸುತ್ತಿಲ್ಲ, ಪರಿಣಾಮವಾಗಿ, ಗರ್ಭಿಣಿಯರಲ್ಲಿ ಆರೋಗ್ಯ ಸಮಸ್ಯೆ ಇದ್ದರೂ ಅದು ಪತ್ತೆಯಾಗುತ್ತಿಲ್ಲ. ಇದರಿಂದ ಹೆರಿಗೆ ಮತ್ತು ನಂತರದಲ್ಲಿ ಜೀವಕ್ಕೆ ಎದುರಾಗುವ ಅಪಾಯ
- ಹೆರಿಗೆ ನಂತರ ನಂಜಿನಿಂದಾಗಿ ತಡೆಗಟ್ಟಲು ಹೆರಿಗೆಪೂರ್ವದಲ್ಲೇ ನೀಡಬೇಕಾದ ಆರ್‌ಟಿಐ ಮತ್ತು ಎಸ್‌ಟಿಐ ನಿರೋಧಕ ಔಷಧಗಳು ಬಹುತೇಕ ಆಸ್ಪತ್ರೆಗಳಲ್ಲಿ ಇಲ್ಲ
- ವಿಶೇಷ ವೈದ್ಯರ ಕೊರತೆಯ ಕಾರಣದಿಂದ ಎಲ್ಲ ಆಸ್ಪತ್ರೆಗಳಲ್ಲಿ ಸಮಗ್ರ ಗರ್ಭಪಾತ ಆರೈಕೆ ಸೇವೆ ಲಭ್ಯವಿಲ್ಲ
- ಈ ಎಲ್ಲಾ ಕೊರತೆಗಳ ಕಾರಣದಿಂದ ಹೆರಿಗೆಪೂರ್ವದಲ್ಲೇ ಹಲವು ಗರ್ಭಿಣಿಯರಲ್ಲಿ ಹಲವು ಸಮಸ್ಯೆ ಕಾಣಿಸಿಕೊಳ್ಳುತ್ತಿವೆ

ಹೆರಿಗೆ: ಹಲವು ಕೊರತೆ

- ಪರಿಶೋಧನೆಗೆ ಒಳಪಡಿಸಿದ ಬಹುತೇಕ ಆಸ್ಪತ್ರೆಗಳ ಹೆರಿಗೆ ವಾರ್ಡ್‌ಗಳಲ್ಲಿ ಅಗತ್ಯ ಸಿಬ್ಬಂದಿ ಇರಲಿಲ್ಲ. ತಜ್ಞ ವೈದ್ಯರು, ಅರಿವಳಿಕೆ ತಜ್ಞರು, ಅಗತ್ಯ ಸಂಖ್ಯೆಯ ದಾದಿಯರು, ಸ್ವಚ್ಛತಾ ಸಿಬ್ಬಂದಿಯ ಕೊರತೆ ಇತ್ತು
- ಅವಧಿಪೂರ್ವ ಹೆರಿಗೆಗಳಲ್ಲಿ ಸಮಸ್ಯೆಗಳನ್ನು ನಿವಾರಿಸಲು ‘ಕಾರ್ಟಿಕೊಸ್ಟೆರಾಯ್ಡ್’ ಚುಚ್ಚುಮದ್ದು ನೀಡಬೇಕು. ಇದಕ್ಕೆ 5,598 ಪ್ರಕರಣಗಳನ್ನು ಪರಿಶೀಲಿಸಿದಾಗ, 1,221 ಪ್ರಕರಣಗಳಲ್ಲಿ ಚುಚ್ಚುಮದ್ದನ್ನು ನೀಡಿರಲೇ ಇಲ್ಲ
- ಬಿ–ಕಾಂಪ್ಲೆಕ್ಸ್, ಹೈಡ್ರಾಲಜಿನ್, ಲ್ಯಾಕ್ಟೀನ್, ಮೆಥೈಲ್‌ಡೋಪಾ ಮತ್ತು ಆಂಪಿಸಿಲಿನ್‌ನಂತಹ ಅತ್ಯಂತ ಅಗತ್ಯವಾದ ಔಷಧಗಳ ಸಂಗ್ರಹ ಹಲವು ಆಸ್ಪತ್ರೆಗಳಲ್ಲಿ ಇರಲಿಲ್ಲ
- ಹೆರಿಗೆ ಸಂದರ್ಭದ ನೋವಿನ ತೀವ್ರತೆ ಮತ್ತು ಸಂಕೋಚನಗಳ ನಿಗಾವಹಿಸಲು ಬಳಸುವ ಪಾರ್ಟೋಗ್ರಾಫ್ ಸೌಲಭ್ಯವು ಹಲವು ಆಸ್ಪತ್ರೆಗಳಲ್ಲಿ, ಆರೋಗ್ಯ ಕೇಂದ್ರಗಳಲ್ಲಿ ಇರಲಿಲ್ಲ

ಶಿಶು ಆರೈಕೆಗೆ ತೊಡಕು

- ಶಿಶುಗಳ ದೇಹದ ಉಷ್ಣತೆ ಮಟ್ಟ ಕಾಯ್ದುಕೊಳ್ಳಲು ಬಳಸುವ ರೇಡಿಯೆಂಟ್ ವಾರ್ಮರ್‌ಗಳು ಹಲವು ಆಸ್ಪತ್ರೆಗಳಲ್ಲಿ ಇಲ್ಲ. ಕೆಲವೆಡೆ ಕೆಟ್ಟಿರುವ ಯಂತ್ರಗಳ ರಿಪೇರಿ ಮಾಡಿಸಿಲ್ಲ
- ನವಜಾತ ಶಿಶುಗಳಿಗೆ ನೀಡುವ ಮೌಖಿಕ ಪೋಲಿಯೊ ಲಸಿಕೆ (ಒಪಿವಿ) ಮತ್ತು ವಿವಿಧ ಲಸಿಕೆಗಳ ಸಂಗ್ರಹವು, ಪರಿಶೀಲನೆಗೆ ಒಳಪಡಿಸಿದ ಹಲವು ಆಸ್ಪತ್ರೆಗಳಲ್ಲಿ ಇರಲಿಲ್ಲ
- ಬಹುತೇಕ ಆಸ್ಪತ್ರೆಗಳಲ್ಲಿ ಶಿಶು ಇನ್‌ಕ್ಯುಬೇಟರ್‌ಗಳು, ಫೋಟೊಥೆರಪಿ ಘಟಕಗಳು, ನವಜಾತ ಶಿಶು ಆರೈಕೆ ಉಪಕರಣಗಳು ಲಭ್ಯವಿರಲಿಲ್ಲ
- ಇವು ಶಿಶುಮರಣ ಅಪಾಯದ ಸಾಧ್ಯತೆಯನ್ನು ಹೆಚ್ಚಿಸುತ್ತವೆ

1000:3.62 ರಾಜ್ಯದ ಸರಾಸರಿ ನಿರ್ಜೀವ ಹೆರಿಗೆ ದರ

1000:44.19 ಸಿಎಜಿ ಪರಿಶೋಧನೆಗೆ ಒಳಪಡಿಸಿದ ಆಸ್ಪತ್ರೆಗಳಲ್ಲಿ ನಿರ್ಜೀವ ಹೆರಿಗೆ ದರ

ಬೆಟ್ಟದಲ್ಲಿ ಗೋ ವಧೆ: ಆರೋಪ

ಪ್ರಜಾವಾಣಿ ವಾರ್ತೆ

ಹೊನ್ನಾವರ: ತಾಲ್ಲೂಕಿನ ಸಾಲ್ಕೋಡ ಕೊಂಡಾಕುಳಿ ರಸ್ತೆ ಪಕ್ಕದ ಬೆಟ್ಟದಲ್ಲಿ ಮೇಯಲು ಬಿಟ್ಟಿದ್ದ ಹಸುವೊಂದನ್ನು ದುಷ್ಕರ್ಮಿಗಳು ಮಾಂಸಕ್ಕಾಗಿ ಕೊಂದು, ಅದರ ಹೊಟ್ಟೆಯಲ್ಲಿದ್ದ ಭ್ರೂಣಾವಸ್ಥೆಯ ಕರುವನ್ನು ಬಿಟ್ಟು ಪರಾರಿಯಾಗಿದ್ದಾರೆ ಎಂದು ಆರೋಪಿಸಲಾಗಿದೆ.

ಘಟನೆಗೆ ಸಂಬಂಧಿಸಿದಂತೆ ಮೃತ ಹಸುವಿನ ಮಾಲೀಕ ಕೃಷ್ಣ ನಾರಾಯಣ ಆಚಾರಿ ಭಾನುವಾರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

‘10 ವರ್ಷಗಳಿಂದ ನಾನು ಸಾಕಿದ್ದ ಕಪ್ಪು ಬಣ್ಣದ ಆಕಳನ್ನು ಶನಿವಾರ ಕಳವು ಮಾಡಿ ಅದನ್ನು ಸಾಯಿಸಿ, ಅದರ ಕಾಲುಗಳು, ಕೊಂಬುಗಳು ಹಾಗೂ ಗರ್ಭದಲ್ಲಿದ್ದ ಭ್ರೂಣಾವಸ್ಥೆಯ ಕರುವನ್ನು ಮಾತ್ರ ಸ್ಥಳದಲ್ಲಿ ಬಿಟ್ಟು ಮಾಂಸವನ್ನು ತೆಗೆದುಕೊಂಡು ಹೋಗಿದ್ದಾರೆ’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

‘ಘಟನೆಗೆ ಸಂಬಂಧಿಸಿದ ಆರೋಪಿಗಳ ಪತ್ತೆಯಾಗಿಲ್ಲ, ತನಿಖೆ ಕೈಗೊಳ್ಳಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಸಾಲ್ಕೋಡ ಗ್ರಾಮದಲ್ಲಿ ಗೋ ಹತ್ಯೆ ನಡೆದ ಸ್ಥಳಕ್ಕೆ ಬಿಜೆಪಿ ಶಾಸಕ ದಿನಕರ ಶೆಟ್ಟಿ ಭಾನುವಾರ ಭೇಟಿ ನೀಡಿ, ಕಾಂಗ್ರೆಸ್ ಸರ್ಕಾರದ ವಿರುದ್ಧ ಹರಿಹಾಯ್ದರು. ‘ಹತ್ಯೆಯಾದ ಆಕಳ ಮಾಲೀಕರಿಗೆ ಪರಿಹಾರ ಕೊಡಿಸಲು ಪ್ರಯತ್ನಿಸುತ್ತೇನೆ. ವಿಜಯೇಂದ್ರ ಅವರನ್ನು ಘಟನಾ ಸ್ಥಳಕ್ಕೆ ಕರೆ ತರುತ್ತೇನೆ’ ಎಂದು ಹೇಳಿದರು. ನಂತರ ಪೊಲೀಸ್ ಠಾಣೆಗೆ ತೆರಳಿ, ‘ಆರೋಪಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು’ ಎಂದು ಪೊಲೀಸ್ ಅಧಿಕಾರಿಗಳಲ್ಲಿ ಆಗ್ರಹಿಸಿದರು.

ಅನುವಾದಕ ಕೆ.ಕೆ.ಗಂಗಾಧರನ್ ನಿಧನ



ಗಂಗಾಧರನ್

ಬೆಂಗಳೂರು: ಲೇಖಕ, ಅನುವಾದಕ ಕೆ.ಕೆ.ಗಂಗಾಧರನ್ (76) ಅವರು ಅನಾರೋಗ್ಯದಿಂದ ನಗರದ ಖಾಸಗಿ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾದರು. ಮೃತರಿಗೆ ಪತ್ನಿ, ಪುತ್ರ ಇದ್ದಾರೆ. ಗಂಗಾಧರನ್ ಅವರ ಅಪೇಕ್ಷೆಯಂತೆ, ಮೃತದೇಹವನ್ನು ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ದಾನ ಮಾಡಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೇರಳದ ಕಾಸರಗೋಡು ಜಿಲ್ಲೆಯ ಪಾತನಡ್ಕ ಗ್ರಾಮದ ಕೆ.ಕೆ.ಗಂಗಾಧರನ್, ಕೊಡಗು ಜಿಲ್ಲೆಯ ಸೋಮವಾರ ಪೇಟೆಯಲ್ಲಿ ಬಾಲ್ಯ ಕಳೆದರು. ಕಾಜೂರು, ಸೋಮವಾರಪೇಟೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ, ನಂತರ ಮೈಸೂರು ವಿ.ವಿ. ಯಿಂದ ಬಿ.ಎಸ್ಸಿ ಪದವಿ ಪಡೆದರು. 1970ರಲ್ಲಿ ಹಾಸನದ ಕೊಥಾರಿ ಕಾಫಿ ಕ್ಯೂರಿಂಗ್ ವರ್ಕ್ಸ್‌ನಲ್ಲಿ ಉದ್ಯೋಗ ಆರಂಭಿಸಿದರು. 1974ರಲ್ಲಿ ಅಂಚೆ ಇಲಾಖೆಯ ರೈಲ್ವೆ ಮೇಲ್ ಸರ್ವೀಸ್ ಕೆಲಸಕ್ಕೆ ಸೇರಿದರು. ವಿವಿಧ ಕಾರ್ಯನಿರ್ವಹಿಸಿ 2009ರಲ್ಲಿ ನಿವೃತ್ತರಾದರು.

ಕನ್ನಡ, ಮಲಯಾಳ, ತುಳು, ತಮಿಳು, ಇಂಗ್ಲಿಷ್ ಭಾಷೆಗಳನ್ನು ಬಲ್ಲವರಾಗಿದ್ದ ಗಂಗಾಧರನ್, 1978ರಿಂದ ಅನುವಾದ ಕಾರ್ಯ ಆರಂಭಿಸಿದರು. ‘ಮಾಧವಿಯ’, ‘ಮಲಯಾಳಂ ಶ್ರೇಷ್ಠ ಕಥೆಗಳು’, ‘ಬೇಸಿಗೆ ರಜೆ ಮತ್ತು ಇತರ ಕಥೆಗಳು’, ‘ಕಮಲಾದಾಸ್: ಒಂದು ಪ್ರೀತಿಯ ಕತೆ ಮತ್ತು ಇತರ ಕಥೆಗಳು’, ‘ಮರಳಿ ಮನೆಗೆ’, ‘ಅಷ್ಟಮಂಗಲ’, ‘ಕಮಲಾದಾಸ್ ಕಥೆಗಳು’, ‘ದಮಯಂತಿ’ ಸೇರಿದಂತೆ 29 ಕೃತಿಗಳನ್ನು ಮಲಯಾಳದಿಂದ ಕನ್ನಡಕ್ಕೆ ಅನುವಾದಿಸಿದ್ದಾರೆ.

ಗಂಗಾಧರನ್ ಅವರ ‘ಮಲಯಾಳಂನ ಶ್ರೇಷ್ಠ ಕಥೆಗಳು’ ಕೃತಿಗೆ 2023ನೇ ಸಾಲಿನ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ‘ಬಳಲಿದ ಬಾಳಿಗೆ ಬೆಳಕು’ ಅನುವಾದಿತ ಕೃತಿಗೆ 2010ರಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪುರಸ್ಕಾರ ಲಭಿಸಿದೆ. ಅನುವಾದ ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಪರಿಗಣಿಸಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ 2017ರಲ್ಲಿ ಪ್ರಶಸ್ತಿ ನೀಡಿ ಗೌರವಿಸಿದೆ.

‘ವಿಜಯೇಂದ್ರ ಅರ್ಹನಲ್ಲ, ಪಕ್ಷವೂ ಒಪ್ಪಲ್ಲ’

ಒಂದನೇ ಪುಟದಿಂದ...

ಭಾನುವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಬಿ.ವೈ. ವಿಜಯೇಂದ್ರ ವಿರುದ್ಧ ಏಕವಚನದಲ್ಲೇ ವಾಗ್ದಾಳಿ ನಡೆಸಿದರು. ‘ಬಿ.ಎಸ್. ಯಡಿಯೂರಪ್ಪ ಅವರನ್ನು ಹೊರಗಡೆ ‘ಪೂಜ್ಯ ತಂದೆ’ ಎಂದು ವಿಜಯೇಂದ್ರ ಕರೆಯುತ್ತಾನೆ. ಮನೆಯಲ್ಲಿ ‘ಮುದಿಯಾ’ ಎಂದು ಕರೆಯುತ್ತಾನೆ. ಈ ವಿಜಯೇಂದ್ರನಿಂದಲೇ ಯಡಿಯೂರಪ್ಪ ಹಾಳಾಗಿದ್ದು. ಅವರಿಗೆ ತಮ್ಮ ಮನೆಯಲ್ಲಿಯೇ ಕಿಮ್ಮತ್ತಿಲ್ಲ. ಮಗನ ವ್ಯಾಮೋಹವನ್ನು ಯಡಿಯೂರಪ್ಪ ಕಡಿಮೆ ಮಾಡಿಕೊಳ್ಳಲಿ’ ಎಂದು ಹೇಳಿದರು.

ಯಡಿಯೂರಪ್ಪ ವಿರುದ್ಧವೂ ಅಸಮಾಧಾನ ಹೊರಹಾಕಿದ ಯತ್ನಾಳ, ‘ಅವರೂ ಎಷ್ಟು ಜನರಿಗೆ ಮೋಸ ಮಾಡಿಲ್ಲ? ಬಿ.ಬಿ. ಶಿವಪ್ಪ, ಮಲ್ಲಿಕಾರ್ಜುನಯ್ಯ ಸೇರಿದಂತೆ ಅನೇಕರಿಗೆ ಅನ್ಯಾಯ ಮಾಡಿದ್ದಾರೆ. ತಮ್ಮ ಸ್ವಾರ್ಥಕ್ಕಾಗಿ ಅನೇಕರ ರಾಜಕೀಯ ಜೀವನ ಅಂತ್ಯಗೊಳಿಸಿದ್ದಾರೆ. ಈಗಲಾದರೂ ಯಡಿಯೂರಪ್ಪ ಮೊಮ್ಮಕ್ಕಳ ಜೊತೆ ಆಟ ಆಡುತ್ತಾ ಕುಳಿತುಕೊಳ್ಳಲಿ’ ಎಂದು ಸಲಹೆ ನೀಡಿದರು.

‘ವಿಜಯೇಂದ್ರನ ಕಾರಣದಿಂದಾಗಿಯೇ ಸುನಿಲ್‌ಕುಮಾರ್ ಅವರು ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕಾಗಿ ಬಂದಿದೆ. ಸುನಿಲ್ ಕುಮಾರ್ ಹೇಗೆ ನೈತಿಕ ಹೊಣೆಹೊತ್ತು ರಾಜೀನಾಮೆ ನೀಡಿದರೋ ಹಾಗೆ ವಿಜಯೇಂದ್ರ ರಾಜೀನಾಮೆ ನೀಡಲಿ’ ಎಂದರು.

ಜಾರಕಿಹೊಳಿ ಮಾತನಾಡಿದ್ದರಲ್ಲಿ ತಪ್ಪಿಲ್ಲ: ‘ಶಾಸಕ ರಮೇಶ ಜಾರಕಿಹೊಳಿ ಮಾತನಾಡಿದ್ದರಲ್ಲಿ ತಪ್ಪೇನಿದೆ? ನಾನು ಸದಾ ಅವರ ಪರವಾಗಿದ್ದೇನೆ. ವಿಜಯೇಂದ್ರನ ನಾಯಕತ್ವವನ್ನು ನಾವು ಒಪ್ಪಲ್ಲ, ರಾಜ್ಯದ ಯಾವ ನಿಷ್ಠಾವಂತ ಕಾರ್ಯಕರ್ತನೂ ಒಪ್ಪೋದಿಲ್ಲ’ ಎಂದು ಯತ್ನಾಳ ಪುನರುಚ್ಚರಿಸಿದರು.

‘ರಮೇಶ ಬಗ್ಗೆ ಮೊದಲು ಹಗುರವಾಗಿ ಮಾತನಾಡಿದ್ದು ಯಾರು? ರಸ್ತೆ ಮೇಲೆ ತಿರುಗಾಡದಂತೆ ಮಾಡುತ್ತೇನೆ ಎಂದಿದ್ದು ಯಾರು? ಅದಕ್ಕೆ ಜಾರಕಿಹೊಳಿ ತಕ್ಕ ಉತ್ತರ ನೀಡಿದ್ದಾರೆ, ತಪ್ಪೇನಿದೆ?’ ಎಂದರು.

‘ರಮೇಶ–ಯತ್ನಾಳರನ್ನು ಉಚ್ಚಾಟಿಸಿ’

ಬೆಂಗಳೂರು: ಪಕ್ಷದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ಹುಚ್ಚು– ಹುಚ್ಚಾಗಿ ಮಾತನಾಡುತ್ತಿರುವ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಮತ್ತು ರಮೇಶ ಜಾರಕಿಹೊಳಿ ಅವರನ್ನು ಪಕ್ಷದಿಂದ ಉಚ್ಚಾಟಿಸಬೇಕು ಎಂದು ಮಾಜಿ ಸಚಿವರಾದ ಎಂ.ಪಿ.ರೇಣುಕಾಚಾರ್ಯ ಮತ್ತು ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಒತ್ತಾಯಿಸಿದರು.

ಯತ್ನಾಳ ಮತ್ತು ರಮೇಶ ಜಾರಕಿಹೊಳಿ ಅವರು ವಿಜಯೇಂದ್ರ ಅವರ ವಿರುದ್ಧ ಟೀಕಾ ಪ್ರಹಾರ ನಡೆಸಿರುವ ಬೆನ್ನಲ್ಲೇ ರೇಣುಕಾಚಾರ್ಯ ಅವರು ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮನೆಯಲ್ಲಿ ಜಂಟಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು.

ಇಬ್ಬರೂ ಕಾಂಗ್ರೆಸ್ ಏಜೆಂಟರಂತೆ ವರ್ತಿಸುತ್ತಾರೆ. ಯತ್ನಾಳಗೆ ಯಡಿಯೂರಪ್ಪ ಬಗ್ಗೆ ಮಾತನಾಡಲು ಯಾವುದೇ ನೈತಿಕತೆ ಇಲ್ಲ. ಗೋಮುಖ ವ್ಯಾಘ್ರನಂತೆ ವರ್ತಿಸುತ್ತಿದ್ದಾನೆ ಎಂದು ಏಕವಚನದಲ್ಲಿ ವಾಗ್ದಾಳಿ ನಡೆಸಿದರು.

ನಿರಂತರವಾಗಿ ಟೀಕಿಸುವ ಮೂಲಕ ವಿಜಯೇಂದ್ರ ಅವರನ್ನು ಕುಗ್ಗಿಸಬಹುದು ಎಂದು ಅಂದುಕೊಂಡಿರಬಹುದು. ಆದರೆ, ಅದು ಸಾಧ್ಯವಿಲ್ಲ. ಈವರೆಗೆ ಅವರಿಗೆ ಗೌರವ ಕೊಟ್ಟಿದ್ದೇವೆ. ಇನ್ನು ಸಹಿಸುವುದಿಲ್ಲ. ಬಿಜೆಪಿ ಬಿಟ್ಟು ನೆಲೆಯೇ ಕಳೆದುಕೊಂಡಿದ್ದ ಯತ್ನಾಳ ಅವರನ್ನು ಪುನಃ ಪಕ್ಷಕ್ಕೆ ಕರೆತಂದಿದ್ದು, ಯಡಿಯೂರಪ್ಪ. ಈಗ ಅವರಿಗೇ ದ್ರೋಹ ಬಗೆಯುವ ಕೆಲಸ ಮಾಡುತ್ತಿದ್ದಾರೆ ಎಂದು ರೇಣುಕಾಚಾರ್ಯ ದೂರಿದರು.

ಯತ್ನಾಳ ಮುಖವಾಡದ ಮನುಷ್ಯ, ಟಿಪ್ಪು ಟೋಪಿ ಹಾಕಿ ಮುಸ್ಲಿಮರ ಜತೆ ಕೂತು ಊಟ ಮಾಡುತ್ತಾರೆ. ಪಂಚಮಸಾಲಿ ಸಮುದಾಯದವರು 2 ಎ ಮೀಸಲಾತಿಗೆ ಹೋರಾಟ ನಡೆಸಿದರೆ, ಯತ್ನಾಳ ಮಾತ್ರ 2 ಎ ಮೀಸಲಾತಿ ಬೇಡ ಎನ್ನುತ್ತಿದ್ದಾರೆ. ಮುಂದಿನ ಶನಿವಾರ ಮತ್ತೊಮ್ಮೆ ಸಭೆ ಸೇರಿ, ವರಿಷ್ಠರ ಬಳಿಗೆ ಹೋಗಿ ಇವರಿಬ್ಬರ ವಿರುದ್ಧ ದೂರು ನೀಡುತ್ತೇವೆ ಎಂದು ಹೇಳಿದರು.

‘ಮತ್ತೊಮ್ಮೆ ಅವಕಾಶ ಸಿಗುವ ವಿಶ್ವಾಸ’

ಒಂದನೇ ಪುಟದಿಂದ...

ಮಾನ್ವಿಯಲ್ಲಿ ಕೆ.ಎಸ್.ಎನ್ ಸೇವಾ ಸಮಿತಿ ಆಯೋಜಿಸಿದ್ದ ಸಾಮೂಹಿಕ ವಿವಾಹ ಸಮಾರಂಭದಲ್ಲಿ ಪಾಲ್ಗೊಳ್ಳಲು ಬಂದಿದ್ದ ಸಂದರ್ಭದಲ್ಲಿ ಯತ್ನಾಳ ಹೇಳಿಕೆ ಕುರಿತು ಪ್ರಶ್ನಿಸಿದಾಗ ಪ್ರತಿಕ್ರಿಯೆ ನೀಡಿದರು.

ಯತ್ನಾಳ ರಾಜೀನಾಮೆಗೆ ಒತ್ತಾಯಿಸಿರುವ ವಿಷಯ ಪ್ರಸ್ತಾಪಿಸಿದಾಗ ‘ಯತ್ನಾಳಗೆ ಭಗವಂತ ಒಳ್ಳೆಯದು ಮಾಡಲಿ’ ಎಂದಷ್ಟೇ ಹೇಳಿದರು.

ಅಧ್ಯಕ್ಷರ ಆಯ್ಕೆಗೆ ಚುನಾವಣೆ: ಜೋಶಿ

ಒಂದನೇ ಪುಟದಿಂದ...

‘ಪಕ್ಷದ ವಿಚಾರವನ್ನು ಬಹಿರಂಗವಾಗಿ ಚರ್ಚಿಸುವುದು ಸೂಕ್ತವಲ್ಲ. ರಾಷ್ಟ್ರೀಯ ಅಧ್ಯಕ್ಷರು, ನಾಯಕರು ಇದ್ದಾರೆ. ಅವರೊಂದಿಗೆ ಚರ್ಚೆ ಮಾಡಬೇಕು’ ಎಂದು ಪಕ್ಷದೊಳಗಿನ ಭಿನ್ನಮತೀಯ ಹೇಳಿಕೆಗಳ ಕುರಿತು ಅವರು ಪ್ರತಿಕ್ರಿಯಿಸಿದರು.

‘ರಾಜ್ಯ ಕೇಳಿದಷ್ಟು ಅಕ್ಕಿ ಕೊಡಲು ಸಿದ್ಧ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ರಾಜ್ಯ ಸರ್ಕಾರ ಕೇಳಿದಷ್ಟು ಅಕ್ಕಿ ಕೊಡಲು ಕೇಂದ್ರ ಸರ್ಕಾರ ಸಿದ್ಧವಿದೆ ಎಂದು ರಾಜ್ಯದ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ ಅವರಿಗೆ ತಿಳಿಸಲಾಗಿದೆ. ಹಾಗಿದ್ದರೂ ರಾಜ್ಯ ಸರ್ಕಾರದಿಂದ ಈವರೆಗೆ ಯಾವುದೇ ಬೇಡಿಕೆ ಬಂದಿಲ್ಲ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಭಾನುವಾರ ಹೇಳಿದರು.

ನಗರದಲ್ಲಿ ಮಾತನಾಡಿದ ಅವರು, ‘ಪ್ರತಿ ಕೆ.ಜಿ. ಅಕ್ಕಿಗೆ ₹32 ಇದ್ದ ದರವನ್ನು ₹22.5ಕ್ಕೆ ತಗ್ಗಿಸಲಾಗಿದೆ. ಈ ದರದಲ್ಲಿ ರಾಜ್ಯ ಸರ್ಕಾರ ಖರೀದಿಸಿ ಪಡಿತರದಾರರಿಗೆ ವಿತರಿಸಿದರೆ ರಾಜ್ಯಕ್ಕೆ ಪ್ರತಿ ತಿಂಗಳು ₹190 ಕೋಟಿ ಉಳಿತಾಯ ಆಗಲಿದೆ’ ಎಂದು ತಿಳಿಸಿದರು.

‘ಎರಡು ಬಾರಿ ಮುನಿಯಪ್ಪ ಅವರು ಭೇಟಿಯಾಗಿ ಮಾತನಾಡಿದ್ದಾರೆ. ಮುಂದೆ ಯಾವುದೇ ಪ್ರಕ್ರಿಯೆ ಆಗಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕರ್ನಾಟಕದ ಜನತೆಗೆ ಅಕ್ಕಿ ವಿತರಿಸಬೇಕೆಂಬ ಕಾಳಜಿ ಇದ್ದರೆ ಅಕ್ಕಿ ಖರೀದಿಸಬಹುದು’ ಎಂದರು.

ಮಂಗಳೂರಿನಲ್ಲಿ ಅರ್ಧಗಂಟೆ ಮಳೆ

ಮಂಗಳೂರು: ನಗರದಲ್ಲಿ ಭಾನುವಾರ ಸಂಜೆ ಸುಮಾರು ಅರ್ಧ ಗಂಟೆ ಸಾಧಾರಣ ಮಳೆಯಾಗಿದೆ. ಆಹಾರ ಮೇಳಕ್ಕೆ ಹಾಗೂ ಗಾಳಿಪಟ ಉತ್ಸವಕ್ಕೆ ಅಡ್ಡಿಯಾಯಿತು.

ತುಂತುರು ಮಳೆ (ಮೈಸೂರು ವರದಿ): ನಗರ ಹಾಗೂ ಹೊರವಲಯದ ಬಡಾವಣೆಗಳಲ್ಲಿ ಭಾನುವಾರ ಮಧ್ಯಾಹ್ನ ಕೆಲಕಾಲ ತುಂತುರು ಮಳೆ ಬಿದ್ದಿತು. ಇಡೀ ದಿನ ಮೋಡ ಕವಿದ ವಾತಾವರಣವಿತ್ತು.



ತೋಳದ ಮರಿಗಳು

8 ಮರಿಗಳಿಗೆ ಜನ್ಮ ನೀಡಿದ ತೋಳ

ಪ್ರಜಾವಾಣಿ ವಾರ್ತೆ

ಕನಕಗಿರಿ (ಕೊಪ್ಪಳ ಜಿಲ್ಲೆ): ಇಲ್ಲಿಗೆ ಸಮೀಪದ ಬಂಕಾಪುರ ಪರಿಸರದ ನಿಯೋಜಿತ ತೋಳಧಾಮದಲ್ಲಿ ತೋಳವೊಂದು ಎಂಟು ಮರಿಗಳಿಗೆ ಜನ್ಮ ನೀಡಿದೆ. ಎಂಟು ಮರಿಗಳು ಓಡಾಡುತ್ತಿರುವುದು ಅರಣ್ಯ ಇಲಾಖೆ ಇರಿಸಿರುವ ಕ್ಯಾಮೆರಾದಲ್ಲಿ ಸೆರೆಯಾಗಿವೆ.

ಗಂಗಾವತಿ ಪ್ರಾದೇಶಿಕ ವಲಯ ವ್ಯಾಪ್ತಿಯಲ್ಲಿ ಸುಮಾರು 332 ಹೆಕ್ಟೇರ್ ಪ್ರದೇಶದಲ್ಲಿರುವ ಬಂಕಾಪುರ ತೋಳಧಾಮವು ಕುರುಚಲು ಅರಣ್ಯ ಪ್ರದೇಶ ಹೊಂದಿದೆ. ಗುಡ್ಡಗಳು ಸ್ವಾಭಾವಿಕ ಗುಹೆಗಳನ್ನೂ ಹೊಂದಿದ್ದು ತೋಳ, ಚಿರತೆ, ನವಿಲು, ಕತ್ತೆಕಿರುಬ, ನರಿ, ಮೊಲ, ಮುಳ್ಳುಹಂದಿ ಮೊದಲಾದ ಹಲವು ವನ್ಯಜೀವಿಗಳ ತಾಣವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಇಂಡಿಯನ್ ಗ್ರೇ ಊಲ್ಫ್ ಎಂಬ ಪ್ರಭೇದದ ತೋಳಗಳು ಈ ಸಂರಕ್ಷಿತ ಪ್ರದೇಶದಲ್ಲಿವೆ. ಈ ಪ್ರದೇಶವನ್ನು ತೋಳ ವನ್ಯಧಾಮ ಎಂದು 15ನೇ ವನ್ಯಜೀವಿ ಮಂಡಳಿ ಸಭೆಯಲ್ಲಿ ಘೋಷಿಸಲಾಗಿದೆ. ಮರಿಗಳು ಸೇರಿ ಸುಮಾರು 35-40 ತೋಳಗಳಿವೆ. ಇವುಗಳ ಸುರಕ್ಷತೆಗೆ ಕ್ರಮ ಕೈಗೊಳ್ಳಲಾಗಿದೆ’ ಎಂದು ಜೀವಿಶಾಸ್ತ್ರ ಮತ್ತು ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in




❦ ಸುಭಾಷಿತ ❦

ಶಕ್ತನಾದರೆ ನೆಂಟರೆಲ್ಲ ಹಿತರು, ಅಶಕ್ತನಾದರೆ ಅವರೇ ವೈರಿಗಳು.

-ಪುರಂದರದಾಸ

ದೇಶದ ಸ್ವಾತಂತ್ರ್ಯ ದಿನ ಭಾಗವತ್ ಹೇಳಿಕೆ ವಿಷಾದನೀಯ

ಅಯೋಧ್ಯೆಯ ರಾಮ ಮಂದಿರದಲ್ಲಿ ಬಾಲರಾಮನ ಪ್ರಾಣಪ್ರತಿಷ್ಠೆಯಾದ ದಿನವೇ ಭಾರತಕ್ಕೆ 'ನಿಜವಾದ ಸ್ವಾತಂತ್ರ್ಯ' ದೊರೆಯಿತು ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಹೇಳಿದ್ದಾರೆ. ವಸಾಹತುಶಾಹಿ ಬ್ರಿಟಿಷರಿಂದ ಭಾರತವು 1947ರ ಆಗಸ್ಟ್ 15ರಂದು ಸ್ವಾತಂತ್ರ್ಯ ಪಡೆದುದರ ಹಿಂದೆ ಬಹುದೊಡ್ಡ ಹೋರಾಟವೇ ಇತ್ತು. ದೇಶದಾದ್ಯಂತ ಚಳವಳಿ ನಡೆದಿತ್ತು. ಆದರೆ, ಭಾಗವತ್ ಅವರು ತಮ್ಮ ಹೇಳಿಕೆಯ ಮೂಲಕ ಈ ಎಲ್ಲವನ್ನೂ ನಿರಾಕರಿಸಿದ್ದಾರೆ. ದೇಶವು ತನ್ನದೇ ಆದ ಸಂವಿಧಾನವನ್ನು ಹೊಂದಿದೆ. ಇದು ಪ್ರಜಾಪ್ರಭುತ್ವ, ಒಕ್ಕೂಟ ವ್ಯವಸ್ಥೆ ಮತ್ತು ಧರ್ಮನಿರಪೇಕ್ಷ ತತ್ವವನ್ನು ತಿರುಳಾಗಿ ಹೊಂದಿದೆ. ಭಾರತ ಗಣರಾಜ್ಯವು ಈ ಸಂವಿಧಾನದ ಮೌಲ್ಯಗಳ ಮೇಲೆ ಸ್ಥಾಪಿತವಾಗಿದೆ. ಸಂವಿಧಾನವನ್ನು ಅಳವಡಿಸಿಕೊಂಡ 75ನೇ ವರ್ಷಾಚರಣೆಯನ್ನು ಸರ್ಕಾರ, ವಿರೋಧ ಪಕ್ಷಗಳು ಮತ್ತು ಇತರ ಎಲ್ಲರೂ ಆಚರಿಸಿದ್ದಾರೆ. ಆದರೆ, ಭಾಗವತ್ ಅವರು ಈ 75 ವರ್ಷಗಳನ್ನು 'ನಿಜವಾದ ಸ್ವಾತಂತ್ರ್ಯ'ದ ಅವಧಿ ಎಂದು ಪರಿಗಣಿಸಿಲ್ಲ ಎಂಬುದನ್ನು ಅವರ ಹೇಳಿಕೆಯು ಸೂಚಿಸುತ್ತದೆ. ಆರ್‌ಎಸ್‌ಎಸ್‌ಗೆ ಸಂವಿಧಾನದ ಬಗ್ಗೆಯೇ ಒಂದು ಕಾಲದಲ್ಲಿ ಸಂದೇಹಗಳಿದ್ದವು. ಆರ್‌ಎಸ್‌ಎಸ್ ಮತ್ತು ಭಾಗವತ್ ಅವರಿಗೆ ಈ ಸಂದೇಹಗಳು ಈಗಲೂ ಇವೆಯೇ? ಭಾರತವು ಒಂದು ಧರ್ಮ ನಿರಪೇಕ್ಷ ರಾಷ್ಟ್ರ ಎಂಬುದು ಸಂವಿಧಾನದಲ್ಲಿಯೇ ಇದೆ. ದೇವಾಲಯವೊಂದರ ಉದ್ಘಾಟನಾ ದಿನವನ್ನು ಈ ದೇಶದ ಸ್ವಾತಂತ್ರ್ಯ ದಿನ ಎಂದು ಪರಿಗಣಿಸಲು ಇಲ್ಲಿ ಅವಕಾಶ ಇಲ್ಲ. ರಾಜಕೀಯ ಪಕ್ಷಗಳು ಅಥವಾ ಸಂಘಟನೆಗಳು ಇಂತಹ ದಿನವನ್ನು ಒಂದು ಮೈಲಿಗಲ್ಲು ಎಂದು ಪರಿಗಣಿಸಬಹುದು ಅಷ್ಟೇ.



ದೇಶದ ಸ್ವಾತಂತ್ರ್ಯದ ದಿನವನ್ನೇ ಅಲ್ಲಗಳೆಯುವಂತಹ ಹೇಳಿಕೆಯನ್ನು ಗಂಭೀರವಾಗಿ ಪರಿಗಣಿಸಿ ಕ್ರಮ ಕೈಗೊಳ್ಳುವುದು ಕೇಂದ್ರ ಸರ್ಕಾರದ ಹೊಣೆಗಾರಿಕೆ

ಭಾರತದ ಇತಿಹಾಸವನ್ನು ಪುನರ್‌ರಚಿಸುವ, ಮರುವ್ಯಾಖ್ಯಾನಿಸುವ ಪ್ರಯತ್ನಗಳು ಈ ಹಿಂದೆ ನಡೆದಿವೆ. ಈಗಲೂ ನಡೆಯುತ್ತಿವೆ. ಪಠ್ಯಪುಸ್ತಕಗಳನ್ನು ಪರಿಷ್ಕರಿಸುವ ನೆಪದಲ್ಲಿ ಪುನರ್‌ರಚಿಸಲಾದ ಪಠ್ಯವನ್ನು ಸೇರಿಸಲಾಗಿದೆ. ಊರುಗಳ ಹೆಸರುಗಳನ್ನು ಬದಲಾಯಿಸುವ ಮೂಲಕವೂ ಇತಿಹಾಸದ ನೆನಪುಗಳ ಕುರುಹುಗಳನ್ನು ಅಳಿಸುವ ಯತ್ನ ನಡೆದಿದೆ. ಭಾಗವತ್ ಅವರು ಈಗ ನೀಡಿರುವ ಹೇಳಿಕೆಯನ್ನು ಕೂಡ ಇತಿಹಾಸ ಪುನರ್‌ರಚನೆಯ ಭಾಗವೆಂದೇ ಪರಿಗಣಿಸಬಹುದು. ಈ ಹೇಳಿಕೆಯನ್ನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಖಂಡಿಸಿದ್ದಾರೆ. ಇದು 'ನಾಚಿಕೆಗೇಡಿನ ಹೇಳಿಕೆ' ಎಂದು ಅವರು ಹೇಳಿದ್ದಾರೆ. ಭಾಗವತ್ ಅವರ ಹೇಳಿಕೆಯು 'ದೇಶವಿರೋಧಿ' ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿದ್ದಾರೆ. ಭಾಗವತ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂಬ ಆಗ್ರಹವೂ ಕೇಳಿಬಂದಿದೆ. ತಮ್ಮ ಹೇಳಿಕೆಯಿಂದ ಹುಟ್ಟಿಕೊಂಡಿರುವ ಹತ್ತಾರು ಪ್ರಶ್ನೆಗಳಿಗೆ ಉತ್ತರ ನೀಡಬೇಕಾದ ಹೊಣೆಗಾರಿಕೆ ಅವರಿಗೆ ಇದೆ. ಭಾರತದ ಸ್ವಾತಂತ್ರ್ಯ ಹೋರಾಟ ಮತ್ತು ಸಂವಿಧಾನದ ಕುರಿತು ಸಂದೇಹಗಳನ್ನು ಆರ್‌ಎಸ್‌ಎಸ್ ಮುಖಂಡರು ಈ ಹಿಂದೆ ಹಲವು ಬಾರಿ ವ್ಯಕ್ತಪಡಿಸಿದ್ದಾರೆ. ಭಾಗವತ್ ಅವರ ಈಗಿನ ಹೇಳಿಕೆಯನ್ನು ಅದರ ಮುಂದುವರಿದ ಭಾಗವೆಂದೇ ಪರಿಗಣಿಸಬೇಕಾಗುತ್ತದೆ. ದೇಶದ ಸ್ವಾತಂತ್ರ್ಯದ ದಿನವನ್ನೇ ಅಲ್ಲಗಳೆಯುವಂತಹ ಹೇಳಿಕೆಯನ್ನು ದೇಶ ವಿರೋಧಿ ಎಂದು ಪರಿಗಣಿಸಬೇಕು. ಈ ಹೇಳಿಕೆಯ ಕುರಿತು ಕೇಂದ್ರ ಸರ್ಕಾರವು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಇಂತಹ ಹೇಳಿಕೆಗಳು ವ್ಯಕ್ತವಾದ ಸಂದರ್ಭದಲ್ಲಿ ತಕ್ಕ ಕ್ರಮವನ್ನು ಕೈಗೊಳ್ಳುವುದು ಕೇಂದ್ರ ಸರ್ಕಾರದ ಹೊಣೆಗಾರಿಕೆ. ಆರ್‌ಎಸ್‌ಎಸ್ ಅನ್ನು ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿಯ ಮಾತೃಸಂಸ್ಥೆ ಎಂದು ಪರಿಗಣಿಸಲಾಗಿದೆ. ಹಾಗಾಗಿ, ಕೇಂದ್ರ ಸರ್ಕಾರವು ಯಾವುದಾದರೂ ಕ್ರಮವನ್ನು ಕೈಗೊಳ್ಳುವ ಸಾಧ್ಯತೆ ಇಲ್ಲವೇ ಇಲ್ಲ. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಭಾಗವತ್ ಹೇಳಿಕೆ ಖಂಡಿಸುವಾಗ 'ಇಂಡಿಯನ್ ಸ್ಟೇಟ್' ಪದಗಳನ್ನು ಬಳಸಿದ್ದಕ್ಕೆ ಬಿಜೆಪಿ ಆಕ್ಷೇಪ ದಾಖಲಿಸಿದೆ. ಈ ಹೇಳಿಕೆ 'ದೇಶದ್ರೋಹ' ಎಂದು ಬಿಜೆಪಿ ಮುಖಂಡರು ವ್ಯಾಖ್ಯಾನಿಸಿದ್ದಾರೆ. ಆದರೆ, ಮೋಹನ್ ಭಾಗವತ್ ಅವರ ಹೇಳಿಕೆಯು ಅಪಾಯಕಾರಿಯಾಗಿದ್ದರೂ ಈ ಹೇಳಿಕೆಗೆ ಪ್ರತಿಕ್ರಿಯೆ ನೀಡದೇ ಇರುವುದನ್ನು ಕೇಂದ್ರ ಸರ್ಕಾರದ ಲೋಪ ಎಂದೇ ಪರಿಗಣಿಸಬೇಕಾಗುತ್ತದೆ.

ದಿನದ ಟ್ವೀಟ್

ಅಕ್ಷರಲೋಕದ ಪುಟಾಣಿಗಳು



ಗ್ರಂಥಾಲಯಕ್ಕೆ ಯಾರೂ ಹೋಗುವುದಿಲ್ಲ ಎಂದು ನೀವು ಅಂದುಕೊಂಡಿದ್ದರೆ... ಅಚ್ಚರಿಗೊಳ್ಳುತ್ತೀರಿ. ಕರ್ನಾಟಕದ 5,800ಕ್ಕೂ ಹೆಚ್ಚಿನ ಸಂಖ್ಯೆಯ ಗ್ರಾಮೀಣ ಸಾರ್ವಜನಿಕ ಗ್ರಂಥಾಲಯಗಳಿಗೆ 50 ಲಕ್ಷ ಮಕ್ಕಳು ಸದಸ್ಯರಾಗಿ ಉಚಿತವಾಗಿ ನೋಂದಣಿ ಮಾಡಿಕೊಂಡಿದ್ದಾರೆ. ಸಾರ್ವಜನಿಕ ಗ್ರಂಥಾಲಯವು ಮಾಹಿತಿಗೆ ಮಾತ್ರವಲ್ಲ ಸಂವಾದ ಮತ್ತು ಒಳಗೊಳ್ಳುವಿಕೆಗೂ ಅವಕಾಶ ಕಲ್ಪಿಸುತ್ತದೆ.

ಉಮಾ ಮಹಾದೇವನ್ ದಾಸ್‌ಗುಪ್ತ
ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ

ಕಿಡಿನುಡಿ



ಕಾಂಗ್ರೆಸ್ ಪಕ್ಷಕ್ಕೆ ಒಂದು ಸ್ಟ್ಯಾಂಡ್ (ನಿಲುವು) ಇಲ್ಲ. ಅದೊಂದು ರೀತಿ ಬಸ್ ಸ್ಟ್ಯಾಂಡ್ ಇದ್ದಂತೆ.

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

25 ವರ್ಷಗಳ ಹಿಂದೆ

ಗುರುವಾರ, 20-1-2000

• ಗಡಿಯಲ್ಲಿ ಸೇನೆಯ ಮಾನವೀಯ ಮುಖ: ಶಾಲೆ, ರಸ್ತೆ ನಿರ್ಮಾಣ

ಜಮ್ಮು, ಜ. 19 (ಯುಎನ್‌ಐ)– ಒಂದು ವೇಳೆ ಸಕಾಲಕ್ಕೆ ಸೇನೆಯ ನೆರವು ಸಿಗದಿದ್ದರೆ ತಂಗಧರ್‌ನ ಜಮೀಲಾ ಬೇಗಂ ಹಾಗೂ ದೋಡಾ ಜಿಲ್ಲೆಯ ಶಫೀಕಾ ಬೇಗಂ ಇಂದು ಮೃತರ ಸಾಲಿಗೆ ಸೇರಿರುತ್ತಿದ್ದರು.

ಜಮೀಲಾ ಬೇಗಂ ಹಾಗೂ ಆಕೆಯ ಉದರದಲ್ಲಿದ್ದ ಇನ್ನೊಂದು ಜೀವವನ್ನು ಉಳಿಸಲು 5 ಶೀಷೆ ರಕ್ತದ ಅಗತ್ಯವಿತ್ತು. ಹಾಗೆ ಅಪರೂಪದ ರಕ್ತದ ಗುಂಪಿನ ಶಫೀಕಾ ಬೇಗಂಗೆ ತುರ್ತಾಗಿ ರಕ್ತ ಬೇಕಾಗಿತ್ತು. ಅವರಿಬ್ಬರ ನೆರವಿಗೆ ಧಾವಿಸಿದ್ದು, ಸಮೀಪದ ಸೇನಾ ನೆಲೆಯಲ್ಲಿದ್ದ ಯೋಧರು.

ಇವು, 1989ರಿಂದ ಜಮ್ಮು ಮತ್ತು ಕಾಶ್ಮೀರದಲ್ಲಿ ಕಾರ್ಯನಿರತವಾಗಿರುವ ಸೇನೆಯ ಮಾನವೀಯ ಮುಖದ ಎರಡು ಉದಾಹರಣೆಗಳಷ್ಟೆ. ಒಂದೆಡೆ, ಉಗ್ರರ ಸಂಚನ್ನು ವಿಫಲಗೊಳಿಸುತ್ತ ಅವರನ್ನು ಸದೆಬಡಿಯುವ ಯತ್ನದಲ್ಲಿರುವ ಸೇನೆ, ಇನ್ನೊಂದೆಡೆ, ನಾಗರಿಕರ ನೆರವಿಗಾಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತಿದೆ.

• ಹಂಪಿಯ ಅವಶೇಷಗಳ ಉಳಿವಿಗೆ ಕೊನೆಯ ಯತ್ನ

ನವದೆಹಲಿ, ಜ. 19– ವಿಶ್ವವಿಖ್ಯಾತ ಐತಿಹಾಸಿಕ ಕ್ಷೇತ್ರವಾದ ಹಂಪಿಯನ್ನು ಸಂರಕ್ಷಿಸಲು ಇದೀಗ ಕೊನೆಯ ಪ್ರಯತ್ನದಂತೆ 'ಯುನೆಸ್ಕೊ' ಸಭೆಯೊಂದನ್ನು ನಡೆಸಲಿದೆ.

ಹಂಪಿಯ ಅವಶೇಷಗಳ ಸಮೀಪ ನಿರ್ಮಾಣಗೊಳ್ಳುತ್ತಿರುವ ಸೇತುವೆಯ ಕಾಮಗಾರಿ, ಅವಶೇಷಗಳ ನಡುವಿನ ಖಾಲಿ ಜಾಗದಲ್ಲಿನ ಕೃಷಿ, ಒತ್ತುವರಿ ಮತ್ತು ಅಕ್ರಮ ಚಟುವಟಿಕೆಗಳ ಬಗ್ಗೆ ಚರ್ಚಿಸಲು ಯುನೆಸ್ಕೊ ಶೀಘ್ರದಲ್ಲಿಯೇ ಹಂಪಿಯಲ್ಲಿ ಸಭೆಯೊಂದನ್ನು ನಡೆಸಲಿದೆ.

50 ವರ್ಷಗಳ ಹಿಂದೆ

ಸೋಮವಾರ, 20-1-1975

• ಬಡವರಿಗೆ ಮಾತ್ರ ಉಚಿತ ವೈದ್ಯ ಚಿಕಿತ್ಸೆಗೆ ಕರೆ

ಬೆಂಗಳೂರು, ಜ. 19– ವೈದ್ಯಕೀಯ ಸೇವೆ ಎಲ್ಲರಿಗೂ ಉಚಿತವಾಗಿರುವ ವಿಧಾನವನ್ನು ಕೈಬಿಡಲು ಭಾರತೀಯ ವೈದ್ಯರ ಸಂಘದ ಅಧ್ಯಕ್ಷ ಡಾ. ಹರಿವೈಷ್ಣವ ಅವರು ಇಂದು ಇಲ್ಲಿ ಸಲಹೆ ನೀಡಿದರು.

ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿ ಪ್ರಾರಂಭವಾದ ಸಂಘದ ವಾರ್ಷಿಕ ಸಮ್ಮೇಳನದ ಅಧ್ಯಕ್ಷ ಭಾಷಣ ಮಾಡಿದ ಅವರು, 'ಶ್ರೀಮಂತ ರಾಷ್ಟ್ರಗಳಿಗೇ ಉಚಿತ ಚಿಕಿತ್ಸಾಲಯಗಳನ್ನು ನಡೆಸಲು ಸಾಧ್ಯ ಇಲ್ಲದಿರುವಾಗ ನಮ್ಮಂಥ ಬಡರಾಷ್ಟ್ರ ಹೇಗೆ ಅವುಗಳನ್ನು ನಡೆಸಬಲ್ಲದೆಂದು ಯೂರೋಪಿಯನ್ನರನೇಕರು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ' ಎಂದರು. ಅವರ ಪ್ರತಿಪಾದನೆ ರೀತ್ಯ 'ಶಕ್ತ್ಯಾನುಸಾರ ಸಲ್ಲಿಸಲಿ, ಸಾಧ್ಯವಿಲ್ಲದವರಿಗೆ ಮಾತ್ರ ಉಚಿತವಾಗಿ ಇರಲಿ'.

• ಚುನಾವಣೆ ಆಯೋಗ: ಜನಸಂಘದ ಟೀಕೆ

ನವದೆಹಲಿ, ಜ. 19– ದಿಢೀರ್ ಚುನಾವಣೆ ವ್ಯವಸ್ಥೆಯಲ್ಲಿ ಚುನಾವಣಾ ಆಯೋಗವು ಸರ್ಕಾರಕ್ಕೆ ಸಹಾಯಕವಾಗಿರುವುದಲ್ಲದೆ ಅದರೊಡನೆ ಶಾಮೀಲಾಗಿರುವುದೆಂದು ಜನಸಂಘದ ಪ್ರಧಾನ ಕಾರ್ಯದರ್ಶಿ ಜೆ.ಪಿ.ಮಾಥುರ್ ಅವರು ಇಂದು ಇಲ್ಲಿ ದೂರಿದರು.

ಎಂದಿನಂತೆ ಮಾಮೂಲು ಮತದಾರರ ಪಟ್ಟಿ ಸಿದ್ಧಪಡಿಸುವ ಕಾರ್ಯ ಆರಂಭಿಸುವುದಕ್ಕೆ ಕೇವಲ ಮೂರೇ ಮೂರು ದಿನಗಳ ಮುಂಚೆ ಮತದಾರರನ್ನು ಸೇರಿಸಿಕೊಳ್ಳುವ ಇಡೀ ವಿಧಾನವನ್ನೇ ಬದಲಾಯಿಸಿದ ಚುನಾವಣಾ ಆಯೋಗವು ಅಕ್ರಮ ಕೆಲಸ ಮಾಡಿರುವುದೆಂದು ಅವರು ತಿಳಿಸಿದರು.

ಆಡಳಿತದಲ್ಲಿ ಲೋಪ ಕಂಡುಬಂದರೆ ಸಾರ್ವಜನಿಕರ ವಿಶ್ವಾಸಕ್ಕೆ ಧಕ್ಕೆ ಉಂಟಾಗಬಹುದು

20 ತಿಂಗಳು ಮತ್ತು ಮೂರು ತತ್ವ



ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ


ಹೊಸ ವರ್ಷದ ಮೊದಲ ತಿಂಗಳಲ್ಲಿ ರಾಜ್ಯದ ಕಾಂಗ್ರೆಸ್ ನೇತೃತ್ವದ ಸರ್ಕಾರವು 20 ತಿಂಗಳನ್ನು ಪೂರ್ಣಗೊಳಿಸಲಿದೆ. ಅಂದರೆ, ಒಟ್ಟು 60 ತಿಂಗಳ (5 ವರ್ಷಗಳು) ಆಡಳಿತ ಅವಧಿಯ ಮೂರನೆಯ ಒಂದರಷ್ಟು ಅವಧಿ ಪೂರ್ಣಗೊಂಡಂತಾಗುತ್ತದೆ. ಸರ್ಕಾರದ ಮೌಲ್ಯಮಾಪನ ದಲ್ಲಿ ಮುಂದಿನ 20 ತಿಂಗಳು ಮಹತ್ವದ ಹಂತವಾಗಲಿದೆ. ಬೇರೆ ಬೇರೆ ಪಕ್ಷಗಳ ನೇತೃತ್ವದ ಈ ಹಿಂದಿನ ಸರ್ಕಾರಗಳು ತಮ್ಮ ಅವಧಿಯ ಎರಡನೆಯ 20 ತಿಂಗಳಲ್ಲಿ ಎಡವಿದ್ದು ಕಾಣುತ್ತದೆ. ಆಡಳಿತದಲ್ಲಿ ಲಯ ತಪ್ಪಿದ್ದು ಹಾಗೂ ಆದ್ಯತೆಗಳ ಕಡೆ ಗಮನ ಇಲ್ಲದಿದ್ದುದು ಗೋಚರಿಸುತ್ತದೆ. ಈ ಹಂತದಲ್ಲಿನ ವೈಫಲ್ಯಗಳಿಂದ ಚೇತರಿಸಿಕೊಳ್ಳಲು ಆ ಸರ್ಕಾರಗಳಿಗೆ ಬಹಳ ಕಷ್ಟವಾಯಿತು. 1985ರ ನಂತರ ಕರ್ನಾಟಕದಲ್ಲಿ ಯಾವ ಪಕ್ಷಕ್ಕೂ ಸತತ ಎರಡನೆಯ ಅವಧಿಗೆ ಬಹುಮತ ಪಡೆದುಕೊಳ್ಳಲು ಆಗದೇ ಇದ್ದುದಕ್ಕೆ ಕಾರಣ ಏನು ಎಂಬುದನ್ನು ಇದು ವಿವರಿಸುತ್ತದೆ.

ಮೂರು ತತ್ವಗಳು ರಾಜ್ಯ ಸರ್ಕಾರವೊಂದರ ಯಶಸ್ಸನ್ನು ವ್ಯಾಖ್ಯಾನಿಸುತ್ತವೆ, ತೀರ್ಮಾನಿಸುತ್ತವೆ. ಆಡಳಿತದಲ್ಲಿ ದಕ್ಷತೆ, ಆಡಳಿತಾರೂಢ ಪಕ್ಷದಲ್ಲಿನ ಒಗ್ಗಟ್ಟು ಮತ್ತು ಸಮಾಜದಲ್ಲಿ ಸಾಮರಸ್ಯವು ಆ ಮೂರು ತತ್ವಗಳು. ಹಿಂದಿನ ಸರ್ಕಾರಗಳ ಕೆಲಸಗಳನ್ನು ಪರಿಶೀಲಿಸಿದಾಗ ಈ ಮೂರು ತತ್ವಗಳನ್ನು ಅಥವಾ ಮೂರರ ಪೈಕಿ ಕನಿಷ್ಠ ಎರಡನ್ನು ಪಾಲಿಸುವಲ್ಲಿನ ವೈಫಲ್ಯವು ಕಾಣುತ್ತದೆ. ಈಗಿನ ಸಂದರ್ಭದಲ್ಲಿ ಈ ಮೂರೂ ತತ್ವಗಳ ವಿಶ್ಲೇಷಣೆ ಆಗಬೇಕಿದೆ.

ಪಕ್ಷವೊಂದರ ನೇತೃತ್ವದ ಸರ್ಕಾರವು ಆಡಳಿತದ ಪ್ರಮುಖ ಸೂಚಕಗಳಲ್ಲಿ ತಕ್ಕಮಟ್ಟಿಗೆ ಚೆನ್ನಾಗಿ ಸಾಧನೆ ತೋರಿದೆ ಎಂದು ಮತದಾರರು ಭಾವಿಸಿದಾಗ, ಆ ಪಕ್ಷವು ಅಧಿಕಾರಕ್ಕೆ ಮರಳಿದೆ ಎಂಬುದಕ್ಕೆ ದೇಶದಾದ್ಯಂತ ಹಲವಾರು ನಿದರ್ಶನಗಳು ಸಿಗುತ್ತವೆ. 2024ರ ಲೋಕಸಭಾ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷವು 9 ಸ್ಥಾನಗಳನ್ನು ಗೆದ್ದುಕೊಂಡಿದ್ದರ ಹಿಂದೆ, ಇಲ್ಲಿನ ಕಾಂಗ್ರೆಸ್ ನೇತೃತ್ವದ ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಬಗ್ಗೆ ಜನ ಹೊಂದಿದ್ದ ಭಾವನೆ ಕೆಲಸ ಮಾಡಿತ್ತು ಎಂಬುದನ್ನು ಲೋಕಸಭಾ ಚುನಾವಣೆಯ ನಂತರ ಕರ್ನಾಟಕದಲ್ಲಿ ನಡೆದ ಲೋಕನೀತಿ ಚುನಾವಣೋತ್ತರ ಅಧ್ಯಯನವು ಕಂಡುಕೊಂಡಿದೆ. ಮಹಿಳಾ ಮತದಾರರು ಕಾಂಗ್ರೆಸ್ಸಿಗೆ ಹೆಚ್ಚಿನ ಪ್ರಮಾಣದಲ್ಲಿ ಮತ ಚಲಾಯಿಸಿದ್ದು ಕೂಡ ಇದನ್ನೇ ಸೂಚಿಸುತ್ತದೆ. ವಿಧಾನಸಭೆಗೆ ನಡೆದ ಉಪ ಚುನಾವಣೆಯಲ್ಲಿ ಆಡಳಿತಾರೂಢ ಕಾಂಗ್ರೆಸ್ ಪಕ್ಷವು ಎಲ್ಲ ಸ್ಥಾನಗಳನ್ನು ಗೆದ್ದುಕೊಂಡಿದ್ದು, ಇತರ ಹಲವು ಮಹತ್ವದ ಅಂಶಗಳೊಂದಿಗೆ, ಅನುಷ್ಠಾನಕ್ಕೆ ಬಂದ ಗ್ಯಾರಂಟಿ ಯೋಜನೆಗಳ ಬಗ್ಗೆ ಜನರು ಹೊಂದಿರುವ ಭಾವನೆಯನ್ನು ತೋರಿಸುತ್ತಿದೆ. ಅಂದರೆ, ಸಮಾಜದ ವಿವಿಧ ವರ್ಗಗಳ ಆಕಾಂಕ್ಷೆಗಳಿಗೆ ಸ್ಪಂದಿಸುವುದಕ್ಕೆ ಆದ್ಯತೆ ನೀಡುವ ಆಡಳಿತವು ಯಶಸ್ಸು ಪಡೆಯುವುದು ಖಚಿತ.

ಸರ್ಕಾರ ಹಾಗೂ ಅದರ ನಾಯಕತ್ವದ ಸ್ಥಾನಗಳಲ್ಲಿ ಇರುವವರು ಹಗರಣಗಳ ಆರೋಪಗಳಿಗೆ ಗುರಿಯಾದಾಗ, ವಿವಾದಗಳಿಗೆ ತುತ್ತಾದಾಗ ಜನರ ಗಮನವು ಅತ್ತ ಸಾಗುತ್ತದೆ. ಇದು ಆಡಳಿತದಲ್ಲಿ ದಕ್ಷತೆಗೆ ಗಮನ ಕೊಡುವುದರ ಜೊತೆ ನಂಟು ಹೊಂದಿದೆ. ಹಿಂದೆಲ್ಲ ಇದು ಆಡಳಿತದ ಮೇಲೆ ಇರಬೇಕಿದ್ದ ಗಮನವು ಸರಣಿ ವಿವಾದಗಳಿಂದ ಸೃಷ್ಟಿಯಾಗುವ ಬೆಂಕಿಯನ್ನು ಆರಿಸುವುದರ ಕಡೆ ಸಾಗುವಂತೆ ಮಾಡಿದೆ. ಕರ್ನಾಟಕದಲ್ಲಿನ ಈಗಿನ ಸರ್ಕಾರವು ಇದೇ ಬಗೆಯ ಸವಾಲನ್ನು ಎದುರಿಸುತ್ತಿದೆ. ಅಧಿಕಾರ ದುರ್ಬಳಕೆಗೆ ಸಂಬಂಧಿಸಿದ ಆರೋಪಗಳಿಂದ ಹೊರಬರಲು ಮುಂದಿನ 20 ತಿಂಗಳ ಅವಧಿಯಲ್ಲಿ ಸಾಧ್ಯವಾಗುತ್ತದೆಯೇ ಅಥವಾ ಈ ಆರೋಪಕ್ಕೆ ಸಂಬಂಧಿಸಿದ ಬೆಳವಣಿಗೆಗಳು ಸರ್ಕಾರದ ಹೆಸರನ್ನು ಇನ್ನಷ್ಟು ಹಾಳುಮಾಡುತ್ತವೆಯೇ?

ಹಿಂದೆ ಆಡಳಿತದ ಚುಕ್ಕಾಣಿ ಹಿಡಿದಿದ್ದ ಪಕ್ಷಗಳ ಬಂಡಿಯು ಹಳಿ ತಪ್ಪುವಂತೆ ಮಾಡಿದ ಬಹಳ ಮಹತ್ವದ ಇನ್ನೊಂದು ಅಂಶವಿದೆ. ಅದು ಆಡಳಿತಾರೂಢ ಪಕ್ಷದಲ್ಲಿನ ಒಗ್ಗಟ್ಟು. ಪಕ್ಷದಲ್ಲಿನ ಒಗ್ಗಟ್ಟಿನ ಆಧಾರದಲ್ಲಿ ಚುನಾವಣೆಗಳಲ್ಲಿ ಗೆಲುವು ಸಾಧಿಸಿದ ನಿದರ್ಶನಗಳು ಇವೆ. ಆಡಳಿತಾರೂಢ ಪಕ್ಷದಲ್ಲಿ ಒಳಜಗಳವು ನಿರಂತರವಾಗಿ ನಡೆದಿದ್ದರೆ ಮತದಾರರು ಆ ಪಕ್ಷವನ್ನು ಅಧಿಕಾರದಿಂದ ಇಳಿಸಿದ್ದಿದೆ. 2023ರ ವಿಧಾನಸಭಾ ಚುನಾವಣೆಯನ್ನು ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ಒಗ್ಗಟ್ಟಿನಿಂದ ಎದುರಿಸಿತ್ತು. ಮುಖ್ಯಮಂತ್ರಿ ಯಾರಾಗುತ್ತಾರೆ ಎಂಬ ಪ್ರಶ್ನೆಯನ್ನು ಬದಿಗೆ ಇರಿಸಿದ್ದ ಪಕ್ಷವು, ಅಧಿಕಾರಕ್ಕೆ ಬರುವುದು ಮೊದಲು, ಮುಖ್ಯಮಂತ್ರಿ ಯಾರು ಎಂಬ ಪ್ರಶ್ನೆಯನ್ನು ಆಮೇಲೆ ಎತ್ತಿಕೊಳ್ಳುವುದು ಎನ್ನುವ ಸೂತ್ರವನ್ನು ಪಾಲಿಸಿತ್ತು. ಆಗ ಆಡಳಿತದ ಚುಕ್ಕಾಣಿ ಹಿಡಿದಿದ್ದ ಪಕ್ಷವಾದ ಬಿಜೆಪಿಯಲ್ಲಿ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಒಗ್ಗಟ್ಟು ಇಲ್ಲದಿದ್ದುದು ಬಹಿರಂಗವಾಗಿ ಕಾಣುತ್ತಿತ್ತು.



ಚುನಾವಣೆಯಲ್ಲಿ ಗೆಲುವು ಸಾಧಿಸಿದ ನಂತರ ಕಾಂಗ್ರೆಸ್ ಪಕ್ಷವು ಇಬ್ಬರು ನಾಯಕರ ನಡುವೆ ಸಹಮತವನ್ನು ಮೂಡಿಸುವ ಮೂಲಕ ನಾಯಕತ್ವದ ವಿಷಯವನ್ನು ಇತ್ಯರ್ಥಪಡಿಸಿಕೊಂಡಿತು. ಆದರೆ ಆಂತರಿಕ ಭಿನ್ನಮತವು ಕಾಲಕಾಲಕ್ಕೆ ಬಹಿರಂಗ ಆಗುತ್ತಿದೆ. ನಾಯಕರ ಬೆಂಬಲಿಗರ ನಡುವಿನ ಮುಸುಕಿನ ಗುದ್ದಾಟವು ಎದ್ದುಕಾಣುವಂತೆ ಇದೆ. ಆಂತರಿಕ ಕಚ್ಚಾಟಕ್ಕೆ ಅಂತ್ಯ ಹೇಳುವುದಕ್ಕೆ ಪಕ್ಷದ ಹೈಕಮಾಂಡ್ ಆಗಾಗ ಮಧ್ಯಪ್ರವೇಶ ಮಾಡಬೇಕಾಗಿ ಬಂದಿದೆ. ಆದರೆ, ರಾಜ್ಯದ ಬಿಜೆಪಿ ಘಟಕದಲ್ಲಿ ಕೂಡ ಆಂತರಿಕ ಭಿನ್ನಮತವು ತೀವ್ರವಾಗಿರುವುದು ರಾಜ್ಯದ ಆಡಳಿತಾರೂಢ ಕಾಂಗ್ರೆಸ್ಸಿಗೆ ಅನುಕೂಲಕರವಾಗಿ ಒದಗಿಬಂದಿದೆ.

ಮುಂದಿನ 20 ತಿಂಗಳ ಅವಧಿಯು ಆಡಳಿತಾರೂಢ ಪಕ್ಷಕ್ಕೆ ಹಾಗೂ ಪ್ರಮುಖ ವಿರೋಧ ಪಕ್ಷಕ್ಕೆ ಸಮಾನವಾಗಿ ಮಹತ್ವದ್ದಾಗಿರುತ್ತದೆ. ಆಂತರಿಕ ಕಚ್ಚಾಟವನ್ನು ಹತ್ತಿಕ್ಕಿ, ತನ್ನ ಎದುರಾಳಿ ಪಕ್ಷಕ್ಕೆ ಒಗ್ಗಟ್ಟಿನಿಂದ ಸವಾಲು ಹಾಕಲು ಯಾರಿಗೆ ಸಾಧ್ಯವಾಗುತ್ತದೆ ಎಂಬುದು ಬಹಳ ಮುಖ್ಯವಾಗುತ್ತದೆ. ಪಕ್ಷದೊಳಗಿನ ಆಂತರಿಕ ಕಚ್ಚಾಟವು ನಿರಂತರವಾಗಿ ಮುಂದುವರಿದರೆ ಪಕ್ಷಕ್ಕೆ ಹಿನ್ನಡೆ ಆಗುತ್ತದೆ ಎಂಬುದನ್ನು ಹಿಂದಿನ ಅನುಭವ ಹೇಳುತ್ತದೆ. ನಾಯಕತ್ವದ ಮಟ್ಟದಲ್ಲಿ ಸ್ಥಿರತೆ ಕಾಯ್ದುಕೊಳ್ಳುವುದು ಮಹತ್ವದ್ದಾಗುತ್ತದೆ. ಹಾಗೆಯೇ, ನಾಯಕತ್ವದ ಸ್ಥಾನಗಳಲ್ಲಿ ಇರುವವರು ನೀತಿಗಳಲ್ಲಿ ಮುಂದುವರಿಕೆ ಇರುತ್ತದೆ ಎಂಬುದನ್ನು ತೋರಿಸಿಕೊಡಬೇಕಾಗುತ್ತದೆ.

ಸಮಾಜದಲ್ಲಿ ಸಾಮರಸ್ಯವನ್ನು ಕಾಪಾಡಿಕೊಳ್ಳಬೇಕಿರುವುದು ಕೊನೆಯ ತತ್ವ. ಸಾಮರಸ್ಯವು ಹಲವು ಅಂಶಗಳ ಕಾರಣದಿಂದಾಗಿ ಸಾಧ್ಯವಾಗುವಂಥದ್ದು. ಕಾನೂನು ಮತ್ತು ಸುವ್ಯವಸ್ಥೆ, ಮಹಿಳೆಯರ ಸುರಕ್ಷತೆ, ಸಮಾಜದಲ್ಲಿ ಧಾರ್ಮಿಕ ಸಾಮರಸ್ಯ, ಸ್ಥಳೀಯ ಮಟ್ಟದಲ್ಲಿ ವಿವಿಧ ಜಾತಿ ಗುಂಪುಗಳ ನಡುವೆ ಸ್ನೇಹಮಯ ವಾತಾವರಣ ಸಾಧ್ಯವಾಗುವುದು ಹಾಗೂ ವಿವಿಧ ಬಗೆಯ ಸಾಮಾಜಿಕ ಒಡಕುಗಳು ಮತ್ತು ಕಹಿಗಳನ್ನು ನಿಯಂತ್ರಣದಲ್ಲಿ ಇರಿಸುವುದರ ಜೊತೆ ಸಾಮಾಜಿಕ ಸಾಮರಸ್ಯವು ನಂಟು ಹೊಂದಿದೆ. ಸಾಮಾಜಿಕ ಸಾಮರಸ್ಯ ಸಾಧ್ಯವಾಗಬೇಕು ಎಂದಾದರೆ, ಆಡಳಿತದ ಚುಕ್ಕಾಣಿ ಹಿಡಿದಿರುವ ಪಕ್ಷವು ಒಂದು ಹೆಜ್ಜೆ ಮುಂದಕ್ಕೆ ಬಂದು ಕೆಲಸ ಮಾಡಬೇಕಾಗುತ್ತದೆ. ಸಮಾಜದ ವಿವಿಧ ಪಾಲುದಾರರ ನಡುವೆ ವಿಶ್ವಾಸ ಮೂಡಿಸುವ ಕೆಲಸವನ್ನು ಮಾಡಬೇಕಾಗುತ್ತದೆ. ಆ ಪಕ್ಷದ ನಾಯಕರು ಮುತ್ಸದ್ದಿಗಳಂತೆ ವರ್ತಿಸಬೇಕಾಗುತ್ತದೆ.

ಮುಂದಿನ 20 ತಿಂಗಳಲ್ಲಿ ಈ ಎಲ್ಲ ಗುಣಗಳು ಕಾಣುತ್ತವೆಯೇ ಎಂಬುದನ್ನು ಮತದಾರರು ಗಮನಿಸಬಹುದು. ಈ ಕೆಲಸಗಳಲ್ಲಿ ಲೋಪ ಕಂಡುಬಂದರೆ ಸಾರ್ವಜನಿಕರ ವಿಶ್ವಾಸಕ್ಕೆ ಧಕ್ಕೆ ಉಂಟಾಗಬಹುದು. ಕೊನೆಯಲ್ಲಿ, ಯಶಸ್ಸಿನ ಮಂತ್ರದ ಕಡೆ ಮತ್ತೊಮ್ಮೆ ಗಮನ ಹರಿಸಬೇಕು: ಆಡಳಿತದಲ್ಲಿ ದಕ್ಷತೆ, ಆಡಳಿತಾರೂಢ ಪಕ್ಷದಲ್ಲಿನ ಒಗ್ಗಟ್ಟು ಮತ್ತು ಸಮಾಜದಲ್ಲಿ ಸಾಮರಸ್ಯ ಆ ಮಂತ್ರ. ಈ ದಿಸೆಯಲ್ಲಿ ಮುಂದಿನ 20 ತಿಂಗಳು ಬಹಳ ಮಹತ್ವದ್ದಾಗಿರುತ್ತದೆ.

ಚುರುಮುರಿ



ಅಭ್ಯರ್ಥಿ ಮಾನದಂಡ

• ಸುಮಂಗಲಾ

'ನಾವು ಆಂಧ್ರಪ್ರದೇಶಕ್ಕೆ ಹೋಗೂದೇ ಛಲೋ ಅನ್ನಿಸತೈತಿ' ಎಂದು ಬೆಕ್ಕಣ್ಣ ಹೇಳಿದಾಗ ಗಾಬರಿಯಾದೆ. 'ಈಗ ಪ್ರವಾಸ ಹೋಗೂದೇನು? ನನ್ನ ಹತ್ತರ ರೊಕ್ಕ ಇಲ್ಲ' ಎಂದು ಕೈಎತ್ತಿದೆ.

'ಪ್ರವಾಸ ಅಲ್ಲ... ಅಲ್ಲೇ ವಾಸ ಮಾಡಾಕೆ. ನಾವು ಅಂದರೆ ನೀನಲ್ಲ, ನಾವು ಬೆಕ್ಕಿನ ಕುಟುಂಬಗಳು ಮಾತ್ರ' ಬೆಕ್ಕಣ್ಣ ಮುಗುಮ್ಮಾಗಿ ಹೇಳಿತು.

'ಅಂದ್ರೆ ನೀವೆಲ್ಲಾರೂ ಅಲ್ಲಿಗೇ ಪರ್ಮನೆಂಟಾಗಿ ಶಿಫ್ಟ್ ಆಗತೀರೇನು? ಎದಕ್ಕೆ?' ಎಂದು ಅಚ್ಚರಿಯಿಂದ ಕೇಳಿದೆ.

'ಹೌದು... ಆಂಧ್ರದಲ್ಲಿ ಪಂಚಾಯಿತಿ ಚುನಾವಣೆಯಿಂದ ಹಿಡಕೊಂಡು ಎಲ್ಲಾ ಚುನಾವಣೆಗೆ ಸ್ಪರ್ಧಿಸೋ ಅಭ್ಯರ್ಥಿಗಳಿಗೆ ಎರಡು ಮಕ್ಕಳಿಗಿಂತ ಹೆಚ್ಚಿರಬೇಕು ಅಂತ ಚಂದ್ರಬಾಬು ನಾಯ್ಡು ಅಂಕಲ್ಲು ಆರ್ಡರ್ ಮಾಡ್ಯಾರೆ. ನಮ್ಮ ಕುಟುಂಬಗಳಲ್ಲಿ ಮಕ್ಕಳ ಸಂಖ್ಯೆಗೇನು ಬರ... ಅದಕ್ಕೆ ಆಂಧ್ರಕ್ಕೆ ಹೋಗಿ ಚುನಾವಣೆಗೆ ನಿಲ್ಲತೀವಿ!' ಎಂದು ಬೆಕ್ಕಣ್ಣ ಮೀಸೆ ತಿರುವಿತು.

'ಚುನಾವಣೆಗೆ ನಿಲ್ಲೋರು ಮನುಷ್ಯಾರು, ನೀವಲ್ಲ. ಹಂಗೆ ಬೆಕ್ಕುಗಳೆಲ್ಲ ಚುನಾವಣೆಗೆ ನಿಲ್ಲೋದಾದ್ರೆ ಆಂಧ್ರದ ಬೆಕ್ಕುಗಳೇ ನಿಲ್ಲತಾವೆ. ಅಲ್ಲಿ ಬೆಕ್ಕುಗಳ ಸಂಖ್ಯೆಗೇನು ಬರವೇ?' ನಾನು ವಾದಿಸಿದೆ.

'ಅದೂ ಖರೇ... ಅಲ್ಲಿ ಬೆಕ್ಕುಗಳ ಸಂಖ್ಯೆ ಎಷ್ಟೇತಿ ಗೊತ್ತಿಲ್ಲ. ದೇಶದಾದ್ಯಂತ ಬೆಕ್ಕುಗಳ ಗಣತಿ ಮಾಡಿದ್ದರೆ ಛಲೋ ಇತ್ತು' ಬೆಕ್ಕಣ್ಣ ಕೈಕೈ ಹಿಚುಕಿಕೊಂಡಿತು.

'ಅಲ್ಲಲೇ... ಜನಗಣತಿನೇ ಮಾಡಿಲ್ಲ. 2021ರಲ್ಲಿ ಮಾಡಬೇಕಿತ್ತು. ಕೋವಿಡ್ ಮಾರಿ ನೆಪ ಹೇಳಿ ಮುಂದೆ ಹಾಕಿದ್ರು. ಕೋವಿಡ್ ಯುಗ ಮುಗಿದು ನಾಕು ವರ್ಷ ಆತು. ಈ ವರ್ಷ ಮಾಡತೀವಿ, ಡೇಟಾ ಮುಂದಿನ ವರ್ಷ ಸಿಗತೈತಿ ಅಂದಾರೆ. ಜನಗಣತಿನೇ ಶುರುವಾಗಿಲ್ಲ. ಇನ್ನು ಬೆಕ್ಕುಗಣತಿ ಮಾಡೋರು ಯಾರು?' ಎಂದೆ.

'ಜನಗಣತಿ ಮಾಡಿದ್ರೆ ಯಾವ ಧರ್ಮದವ್ರು ಎಷ್ಟು ಮಂದಿ ಅದಾರೆ, ಯಾವ ಧರ್ಮದವರ ಫಲವಂತಿಕೆ ದರ ಎಷ್ಟೇತಿ ಅನ್ನೂ ಸತ್ಯಗಳೆಲ್ಲ ಹೊರಗೆ ಬೀಳತಿತ್ತು. ಭರತಭೂಮಿಯೊಳಗೆ ನೀವು ಮನುಷ್ಯರೇ ಎಷ್ಟು ಜನ ತುಂಬಿಕೊಂಡೀರಿ ಅನ್ನೋದೂ ಗೊತ್ತಾಗತಿತ್ತು' ಎಂದು ಬೆಕ್ಕಣ್ಣ ನನ್ನ ಮೂತಿಗೆ ತಿವಿಯಿತು.

ಸಂಗತ

ಶಿಲೆಗೆ ಮಾರುಹೋಗುವಾಕೆ: ಯಾರೀಕೆ?

ಮನುಷ್ಯರಂತೆಯೇ ಪ್ರೀತಿಯ ಸಂಗಾತಿಯನ್ನು ಆರಿಸಿಕೊಂಡು, ಜವಾಬ್ದಾರಿಯಿಂದ ಕುಟುಂಬವನ್ನು ಬೆಳೆಸುವ ಪೆಂಗ್ವಿನ್‌ಗಳು ಅಳಿವಿನಂಚಿಗೆ ಸರಿಯುತ್ತಿವೆ

• ಶಿಶಿರ ವಸಿಷ್ಠ

ಪೆಂಗ್ವಿನ್ ಎಂಬ ಪದ ಕಿವಿಗೆ ಬಿದ್ದಾಕ್ಷಣ ಮಕ್ಕಳಿಂದ ಹಿಡಿದು ವಯೋವೃದ್ಧರವರೆಗೂ ಎಲ್ಲರ ಮುಖದಲ್ಲಿ ಮಂದಹಾಸ ಮೂಡುತ್ತದೆ. ಹಕ್ಕಿಯಾದರೂ ಹಾರಲು ಬರುವುದಿಲ್ಲ, ಗಂಡುಹಕ್ಕಿಯು ಹೆಣ್ಣುಹಕ್ಕಿ ಇಟ್ಟ ಮೊಟ್ಟೆಗೆ ಕಾವು ಕೊಟ್ಟು ಮರಿ ಮಾಡುತ್ತದೆ, ಜೀವನಪೂರ್ತಿ ಒಂದೇ ಸಂಗಾತಿಯೊಂದಿಗೆ ಇರುತ್ತದೆ ಎಂಬುದು ಅಚ್ಚರಿ ಹುಟ್ಟಿಸಿದರೆ, ಈಗಾಗಲೇ ಈ ಹಕ್ಕಿಗಳ 40 ಪ್ರಭೇದಗಳು ಶಾಶ್ವತವಾಗಿ ಅಳಿದು ಬರೀ 17 ಉಳಿದುಕೊಂಡಿವೆ ಎನ್ನುವ ವಿಚಾರ ಕಣ್ಣನ್ನು ತೇವಗೊಳಿಸುತ್ತದೆ.

ಬಿಳಿ, ಕಪ್ಪು ಬಣ್ಣದ ಆಕರ್ಷಕ ದೇಹದೊಂದಿಗೆ ಹಿಮಹಾಸುಗಳ ಮೇಲೆ ಪುಟಪುಟನೆ ಹೆಜ್ಜೆ ಇಡುತ್ತ, ಮೈನಸ್ 50 ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶದ ವಾತಾವರಣದಲ್ಲಿ ಜೀವಿಸುವ ಪೆಂಗ್ವಿನ್‌ಗಳು ವಾಯುಗುಣ ಬದಲಾವಣೆಯ ವೈಪರೀತ್ಯಗಳಿಗೆ ತುತ್ತಾಗಿ ಅಳಿವಿನಂಚಿಗೆ ಸರಿಯುತ್ತಿವೆ. ಥೇಟ್ ಮನುಷ್ಯರಂತೆಯೇ ಪ್ರೀತಿಯ ಸಂಗಾತಿಯನ್ನು ಆರಿಸಿಕೊಂಡು, ಸಮಾನ ಜವಾಬ್ದಾರಿಯಿಂದ ಕುಟುಂಬವನ್ನು ಬೆಳೆಸುವ ಪೆಂಗ್ವಿನ್‌ಗಳು ಜೀವಿಲೋಕದ ಅಚ್ಚರಿಯೇ ಸರಿ. ದಕ್ಷಿಣ ಅಮೆರಿಕದ ತುದಿ, ದಕ್ಷಿಣ ಧ್ರುವ ಪ್ರದೇಶದ ದ್ವೀಪಗಳು, ಚಿಲಿ, ಪೆರು ಮತ್ತು ಅಂಟಾರ್ಕ್ಟಿಕಾದ ಭಾಗಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಆವಾಸ ಹೊಂದಿರುವ ಪೆಂಗ್ವಿನ್‌ಗಳು ಆಹಾರ ಹುಡುಕಿಕೊಂಡು ದಿನಕ್ಕೆ 60 ಕಿಲೊಮೀಟರ್ ದೂರದವರೆಗೂ ಈಜಬಲ್ಲವು.

ಹೆಣ್ಣು ಸಂಗಾತಿಯನ್ನು ಒಲಿಸಿಕೊಳ್ಳಲು ಗಂಡು ಪೆಂಗ್ವಿನ್ ಪಡುವ ಶ್ರಮ ನಾಗರಿಕ ಸಮಾಜದ ಯಾವ ಪ್ರೇಮ ನಿವೇದನೆಗೂ ಕಡಿಮೆ ಇಲ್ಲ. ಸಮುದ್ರ ತೀರದ ಬಂಡೆಕಲ್ಲುಗಳ ಕೊರಕಲುಗಳಲ್ಲಿ ಇಳಿದು, ಸಂದಿಗೊಂದಿಗಳಲ್ಲಿ ತಡಕಾಡಿ, ಸಮುದ್ರದಲೆಗಳ ಹೊಡೆತಕ್ಕೆ ಸಿಲುಕಿ, ಸುಂದರವಾಗಿ ಹಾಗೂ ನುಣುಪಾಗಿ ರೂಪುಗೊಂಡಿರುವ ವರ್ಣಮಯ ಶಿಲೆಯೊಂದನ್ನು ನಾಜೂಕಾಗಿ ಆರಿಸಿಕೊಂಡು ತಂದು, ತಾನೇ ನಿರ್ಮಿಸಿದ ಗೂಡಿನೊಳಕ್ಕೆ ಇಡುತ್ತದೆ. ಇದನ್ನೇ ಗಮನಿಸುತ್ತಿರುವ ಹೆಣ್ಣುಹಕ್ಕಿಯೊಂದು ಗೂಡಿನ ಬಳಿ ಸಾರಿ, ಶಿಲೆಯ ಅಂದವನ್ನು ಪರೀಕ್ಷಿಸಿ, ತನಗೆ ಹಿಡಿಸಿದರೆ ಗಂಡುಹಕ್ಕಿಯ ಪ್ರೀತಿಗೆ ಹಸಿರು ನಿಶಾನೆ ತೋರಿಸುತ್ತದೆ. ಸಂಗಾತಿಯೊಂದಿಗೆ ಜೀವನಪೂರ್ತಿ ಕಳೆಯುವ ಗಂಡುಹಕ್ಕಿಯು ಏಕಪತ್ನೀವ್ರತಸ್ಥನಂತೆ ಬದುಕುತ್ತದೆ. ಹೆಣ್ಣು ಪೆಂಗ್ವಿನ್ ಒಂದಕ್ಕಿಂತ ಹೆಚ್ಚು ಸಂಗಾತಿಗಳನ್ನು ಹೊಂದಿರುವ ಸಾಧ್ಯತೆಗಳಿವೆ ಎನ್ನುತ್ತಾರೆ ತಜ್ಞರು.

ಪೆಂಗ್ವಿನ್‌ಗಳಲ್ಲಿ ಎಂಪರರ್, ಹಂಬೋಲ್ಟ್, ರಾಕ್‌ಹಾಪರ್, ಮಾಕರೋನಿ, ಚಿನ್‌ಸ್ಟ್ರಾಪ್, ಅಡೆಲಿ, ಗೆಂಟೂ, ಕ್ರಸ್ಟೆಡ್ ಎಂಬ ಹಲವು ಬಗೆ ಇವೆ. ಎಂಪರರ್ ಪೆಂಗ್ವಿನ್‌ಗಳು ಅಂಟಾರ್ಕ್ಟಿಕಾದ ಹಿಮದಲ್ಲಿ ವಂಶಾಭಿವೃದ್ಧಿ ಮಾಡುತ್ತವೆ. ಹಂಬೋಲ್ಟ್ ಪೆಂಗ್ವಿನ್‌ಗಳು ಇತರ ಪೆಂಗ್ವಿನ್ ಮತ್ತು ಸೀಗಲ್‌ಗಳು ವಿಸರ್ಜಿಸಿದ ಸಗಣಿಯ ರಾಶಿಯ ಕೆಳಗೆ ಬಿಲ ಕೊರೆದು ಅಲ್ಲಿ ಮಿಲನ ಕ್ರಿಯೆಯಲ್ಲಿ ತೊಡಗುತ್ತವೆ. ನ್ಯೂಜಿಲೆಂಡ್‌ನ ಮಳೆಕಾಡುಗಳಲ್ಲಿ ವಾಸಿಸುವ ಫಿಯರ್ಡ್‌ಲ್ಯಾಂಡ್ ಪ್ರಭೇದದ ಪೆಂಗ್ವಿನ್‌ಗಳು ಶಿಲೆಗಳ ಸಂದಿಗಳಲ್ಲಿ ಕಡ್ಡಿ ಮತ್ತು ಹುಲ್ಲಿನಿಂದ ನಿರ್ಮಿಸಿಕೊಂಡ ಗೂಡುಗಳಲ್ಲಿ ವಂಶಾಭಿವೃದ್ಧಿ ಮಾಡಿಕೊಳ್ಳುತ್ತವೆ. ಮಾಕರೋನಿ ಪೆಂಗ್ವಿನ್‌ಗಳು ಸಮತಲವಾದ ಬಂಡೆಯ ಮೇಲೆ ಮೊಟ್ಟೆಗಳನ್ನು ಇರಿಸಿ, ಕಾವು ಕಾಯ್ದು ಸಂಸಾರ ಬೆಳೆಸುತ್ತವೆ.

ಮೊಟ್ಟೆ ಇಟ್ಟ ತಕ್ಷಣ ಮರಿ ಮಾಡುವ ಹೊಣೆಯನ್ನು ಗಂಡುಹಕ್ಕಿಗೆ ಒಪ್ಪಿಸುವ ಹೆಣ್ಣು ಪೆಂಗ್ವಿನ್, ಎರಡು ತಿಂಗಳು ಆಹಾರ ಹುಡುಕಿಕೊಂಡು ಹೊರಡುತ್ತದೆ. ಗಂಡು ಪೆಂಗ್ವಿನ್‌ಗಳು ಮೊಟ್ಟೆಗಳನ್ನು ತಮ್ಮ ಪಾದದ ಮೇಲಿರಿಸಿಕೊಂಡು, ರೆಕ್ಕೆಯ ತುಪ್ಪಳದಿಂದ ಮುಚ್ಚಿಕೊಂಡು, ಸುಮಾರು 9 ವಾರಗಳ ಕಾಲ ಕಾವು ಕೊಡುತ್ತವೆ. ಅಷ್ಟು ದಿನ ಗಂಡುಹಕ್ಕಿಯು ನಿಂತ ಜಾಗದಿಂದ ಕದಲುವುದಿಲ್ಲ. ಆಹಾರ ಸೇವಿಸುವುದಿಲ್ಲ. ಮರಿಗಳಾದ ತಕ್ಷಣ ತನ್ನ ಗಂಟಲಿನ ಪೋಷಕಾಂಶಯುಕ್ತ ದ್ರವವನ್ನು ಮರಿಗಳಿಗೆ ತಿನ್ನಿಸಿ ಶಕ್ತಿ ತುಂಬುತ್ತದೆ. ಬೇಕಾಗುವಷ್ಟು ಆಹಾರ ಸಂಪಾದಿಸಿಕೊಂಡು ಗೂಡಿಗೆ ಮರಳುವ ಹೆಣ್ಣುಹಕ್ಕಿಯು ಗಂಡುಹಕ್ಕಿಯನ್ನು ಸೇವೆಯಿಂದ ಬಿಡುಗಡೆ ಮಾಡಿ ಮುಂದಿನ ಪೋಷಣೆಯ ಜವಾಬ್ದಾರಿ ಹೊರುತ್ತದೆ. ಗಂಡು ಆಹಾರ ಹುಡುಕಿಕೊಂಡು ಹೊರಡುತ್ತದೆ.



ಪೆಂಗ್ವಿನ್‌ಗಳು ವಂಶಾಭಿವೃದ್ಧಿ ಮಾಡಿಕೊಳ್ಳಲು ಬಳಸುವ ಇತರ ಹಕ್ಕಿಗಳ ಸಗಣಿಯು ಉತ್ತಮ ಗೊಬ್ಬರವಾಗಿರುವುದರಿಂದ ಮನುಷ್ಯ ಅದನ್ನು ದೋಚುತ್ತಿದ್ದಾನೆ. ಗೂಡು ಕಟ್ಟಲು ಬೇಕಾದ ಪದಾರ್ಥವು ಮನುಷ್ಯರ ಪಾಲಾಗುವುದರಿಂದ ಪೆಂಗ್ವಿನ್‌ಗಳಿಗೆ ಗೂಡು ಕಟ್ಟಲು ಸರಿಯಾದ ಜಾಗ ಸಿಗದೆ ಅವುಗಳ ಸಂಖ್ಯೆ ವೃದ್ಧಿಯಾಗುತ್ತಿಲ್ಲ. ಬರೀ ಎರಡು ಲಕ್ಷದಷ್ಟಿರುವ ಕ್ರಸ್ಟೆಡ್ ಪೆಂಗ್ವಿನ್‌ಗಳು ಐಯುಸಿಎನ್ (ದಿ ಇಂಟರ್‌ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಶನ್ ಆಫ್ ನೇಚರ್) ಕೆಂಪು ಪಟ್ಟಿ ಸೇರಿವೆ. ಹಳದಿ ಕಣ್ಣಿನ ಪೆಂಗ್ವಿನ್‌ಗಳು ಬರೀ ನ್ಯೂಜಿಲೆಂಡ್ ಪ್ರದೇಶಕ್ಕೆ ಸೀಮಿತವಾಗಿದ್ದು, ಅಳಿವಿನಂಚಿಗೆ ಸರಿದಿವೆ.

ವಿಶ್ವದಲ್ಲಿ ಈಗ ಮೂರು ಕೋಟಿ ಪೆಂಗ್ವಿನ್‌ಗಳು ಇವೆ. ನೋಡಲು ಗಂಡು ಮತ್ತು ಹೆಣ್ಣು ಪೆಂಗ್ವಿನ್‌ಗಳಲ್ಲಿ ವ್ಯತ್ಯಾಸ ಗೋಚರಿಸುವುದಿಲ್ಲ. ಪೆಂಗ್ವಿನ್‌ಗಳು 20ರಿಂದ 40 ವರ್ಷಗಳವರೆಗೂ ಬದುಕಬಲ್ಲವು. ಸಣ್ಣ ಮೀನುಗಳೇ ಪೆಂಗ್ವಿನ್‌ಗಳ ಮುಖ್ಯ ಆಹಾರ.

ಅತಿಯಾದ ಮೀನು ಶಿಕಾರಿ, ಬೃಹತ್ ಹಡಗುಗಳಲ್ಲಿ ತೈಲ ಸೋರಿಕೆ, ಸಾಗರ ಸೇರುತ್ತಿರುವ ಪ್ಲಾಸ್ಟಿಕ್ ತ್ಯಾಜ್ಯ, ನದಿಗಳು ಹೊತ್ತು ತರುವ ಮಾಲಿನ್ಯವು ಪೆಂಗ್ವಿನ್‌ಗಳ ಸದೃಢ ನೆಲೆಯನ್ನು ಛಿದ್ರಗೊಳಿಸುತ್ತಿವೆ. ವಾತಾವರಣದ ಉಷ್ಣಾಂಶದಲ್ಲಿ ಎರಡು ಡಿಗ್ರಿ ಸೆಂಟಿಗ್ರೇಡ್ ಏರಿಕೆಯಾದರೂ ಪೆಂಗ್ವಿನ್‌ಗಳು ದೊಡ್ಡ ಸಮಸ್ಯೆ ಎದುರಿಸುತ್ತವೆ. ಮಾಲಿನ್ಯ ಕಡಿತಗೊಳಿಸಿ ಪೆಂಗ್ವಿನ್‌ಗಳನ್ನು ಉಳಿಸಿಕೊಳ್ಳಬೇಕಾದ ಅಗತ್ಯವನ್ನು ಪೆಂಗ್ವಿನ್ ಜಾಗೃತಿ ದಿನದ (ಜ. 20) ಈ ಸಂದರ್ಭದಲ್ಲಾದರೂ ನಾವು ಅರಿಯಬೇಕಿದೆ.

ವಾಚಕರ ವಾಣಿ

ಹಗಲು ದರೋಡೆ: ಮುನ್ನೆಚ್ಚರಿಕೆ ಅತ್ಯಗತ್ಯ

ಬ್ಯಾಂಕ್‌ಗಳನ್ನು ಗುರಿಯಾಗಿಸಿಕೊಂಡು ಹೋದ ವಾರ ಒಂದೆರಡು ದಿನಗಳ ಅಂತರದಲ್ಲೇ ನಡೆದ ಎರಡು ಹಗಲು ದರೋಡೆ ಪ್ರಕರಣಗಳು ತೀವ್ರ ಕಳವಳಕಾರಿಯಾಗಿವೆ. ಇಂತಹ ಪ್ರಕರಣಗಳು ಮರುಕಳಿಸಬಹುದು ಎಂಬ ಆತಂಕ ಉಂಟಾಗಿದೆ. ಸಾಮಾಜಿಕ- ಆರ್ಥಿಕ ಪರಿಸ್ಥಿತಿ ಹದತಪ್ಪುತ್ತಿರುವುದರ ಲಕ್ಷಣಗಳು ಇವು. ಈ ಪ್ರಕರಣಗಳನ್ನು ಬಿಡಿಬಿಡಿಯಾಗಿ ನೋಡದೆ, ತಕ್ಕ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವುದು ಅತ್ಯವಶ್ಯ.

ನಾನು ಗಮನಿಸಿರುವಂತೆ, ಬ್ಯಾಂಕ್ ಸಿಬ್ಬಂದಿ ಬಹಳಷ್ಟು ಕಡೆ ಸಾರ್ವಜನಿಕ ವ್ಯವಹಾರದ ಸಮಯ ಮುಗಿದ ನಂತರವೂ ರಾತ್ರಿ ಏಳು-ಎಂಟು ಗಂಟೆಯವರೆಗೆ ಕೆಲಸ ಮಾಡುತ್ತಿರುತ್ತಾರೆ. ಜನಸಂಚಾರ ಇಲ್ಲದ ಕೆಲವು ಗ್ರಾಮೀಣ ಪ್ರದೇಶಗಳಲ್ಲೂ ಕತ್ತಲಾದ ನಂತರ ಶಾಖೆಯೊಳಗೆ ಸಿಬ್ಬಂದಿ ಕೆಲಸ ಮಾಡುತ್ತಿರುವುದು ಕಾಣುತ್ತದೆ. ಹೆಚ್ಚಿನ ಕಡೆ ಶಸ್ತ್ರಸಜ್ಜಿತ ಭದ್ರತಾ ಸಿಬ್ಬಂದಿ ಇರುವುದಿಲ್ಲ. ಸಂಜೆಯ ನಂತರವೂ ಕೆಲಸ ಮಾಡಬೇಕೆಂದಾದರೆ ಅಗತ್ಯ ಭದ್ರತಾ ಸಿಬ್ಬಂದಿಯನ್ನು ನೇಮಿಸಬೇಕು ಇಲ್ಲವೇ ಸಂಜೆಯ ಒಳಗೆ ಎಲ್ಲ ಶಾಖೆಗಳನ್ನೂ ಮುಚ್ಚಿಸಲು ಗೃಹ ಇಲಾಖೆ ಕ್ರಮ ಕೈಗೊಳ್ಳಬೇಕು.

ಪ್ರಮೋದ ನಾಯ್ಕ, ಬೆಂಗಳೂರು

ಕೃಷಿ ಉತ್ಪನ್ನ: ಬೇಕಾಗಿದೆ ಸಮಗ್ರ ಯೋಜನೆ

'ರೈತರ ಬೆಳೆಗೆ ನ್ಯಾಯಯುತ ಬೆಲೆ ದೊರಕಿಸಿಕೊಡುವ ಉದ್ದೇಶದಿಂದ ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಗೆ ಸಾಗಿಸುವ ವೆಚ್ಚವನ್ನು ಸರ್ಕಾರದಿಂದಲೇ ಭರಿಸಲು ನಿರ್ಧರಿಸಲಾಗಿದೆ' ಎಂಬ ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರ ಭರವಸೆಯು ರೈತರ ಪಾಲಿಗೆ ವರದಾನವಾಗುವ ನಿರೀಕ್ಷೆಯಿದೆ. ಇದರಿಂದಾಗಿ ರೈತರು ಮಧ್ಯವರ್ತಿಗಳ ಕಪಿಮುಷ್ಟಿಯಿಂದ ಪಾರಾಗಬಹುದು. ಈ ದಿಸೆಯಲ್ಲಿ ನಮ್ಮ ವ್ಯವಸಾಯ ಸೇವಾ ಸಹಕಾರಿ ಸಂಘಗಳನ್ನು ಉಪಯೋಗಿಸಿಕೊಂಡು ರೈತರ ಉತ್ಪನ್ನಗಳನ್ನು ಬೇರೆ ರಾಜ್ಯಗಳಿಗೆ ಸಾಗಿಸಿ, ಹೆಚ್ಚಿನ ಬೆಲೆ ಪಡೆಯಲು ಅನುವಾಗುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಯೋಜನೆ ರೂಪಿಸಬೇಕಾಗಿದೆ.

ಶಾಂತಕುಮಾರ್, ಸರ್ಜಾಪುರ

ದೇಶ ಕಟ್ಟಿದವರು: ವಿತಂಡವಾದಕ್ಕೆ ಮದ್ದಿಲ್ಲ

'ರಾಜಕಾರಣಿಗಳು ಹಾಗೂ ಅಧಿಕಾರಿಗಳು ಈ ದೇಶದ ನಿರ್ಮಾತೃಗಳಲ್ಲ, ಉದ್ಯಮಿಗಳು ನಿಜವಾದ ನಿರ್ಮಾತೃಗಳು' ಎಂಬ ಇನ್ಫೊಸಿಸ್ ಸಹ ಸಂಸ್ಥಾಪಕ ನಾರಾಯಣ ಮೂರ್ತಿ ಅವರ ಹೇಳಿಕೆ (ಕಿಡಿನುಡಿ, ಜ. 18) ವಿತಂಡವಾದ. ಯಾವುದೇ ಉದ್ಯಮವು ಸ್ಥಾಪನೆಯಾಗಿ ಸುಸೂತ್ರವಾಗಿ ನಡೆಯಲು ಹಲವು ಅಂಕುಶಗಳ ಅವಶ್ಯಕತೆ ಇರುತ್ತದೆ. ಶಾಸನಾಂಗ ರಚಿಸಿದ ಕಾನೂನು ಮತ್ತು ಅದರ ಅಳವಡಿಕೆಗೆ ಅಧಿಕಾರಿಗಳು ಬೇಕು. ಇದು ಯಾವುದೂ ಇಲ್ಲದೇ ಇದ್ದರೆ ಉದ್ಯಮಿಗಳಿಗೆ ಲಗಾಮು ಇರುವುದಿಲ್ಲ. ದೇಶದ ನಿಜವಾದ ನಿರ್ಮಾತೃಗಳು ಮೊದಲು ರೈತರು, ನಂತರ ಶ್ರಮಜೀವಿಗಳು. ಭಾರಿ ಉದ್ಯಮಿಗಳು ಇಲ್ಲದ ರಾಜ ಮಹಾರಾಜರ ಕಾಲದಲ್ಲಿ ಸಹ ಭಾರತವು ಸುಭಿಕ್ಷವಾಗಿತ್ತು ಮತ್ತು ಶಾಂತಿಯಿಂದ ಕೂಡಿತ್ತು. ಆಗ ಇದ್ದ ಸಂಪತ್ತಿನ ಮೇಲೆ ಕಣ್ಣಿಟ್ಟೇ ವಿದೇಶಿಯರು ನಮ್ಮ ಮೇಲೆ ದಾಳಿ ಮಾಡಿದ್ದು. ಅಭಿವೃದ್ಧಿಯಲ್ಲಿ ರೈತರು, ಶ್ರಮಜೀವಿಗಳ ಪಾತ್ರ ಬಹಳ ಮುಖ್ಯವಾದುದು. ಅದನ್ನು ಕಡೆಗಣಿಸಲಾಗುವುದಿಲ್ಲ.

ಎಚ್.ಎಸ್.ಚಂದ್ರಶೇಖರ, ಬೆಂಗಳೂರು

ಸವಾಲು ಎದುರಿಸುವುದು ಕಲಿಸಬೇಕಿದೆ

'ನೀಟ್'ಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದ ಕೆಲವು ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗಿರುವುದು ಅತ್ಯಂತ ನೋವಿನ ಸಂಗತಿ. ನಮ್ಮ ಶೈಕ್ಷಣಿಕ ಪದ್ಧತಿಯಲ್ಲಿನ ಲೋಪದೋಷಗಳು ಮರುವಿಮರ್ಶೆಗೆ ಒಳಪಡಬೇಕಾಗಿದೆ. ನೀಟ್ ಆಕಾಂಕ್ಷಿಗಳಾಗಿದ್ದ 17 ವಿದ್ಯಾರ್ಥಿಗಳು ಹಿಂದಿನ ವರ್ಷ ದೇಶದ ವಿವಿಧೆಡೆ ಆತ್ಮಹತ್ಯೆ ಮಾಡಿಕೊಂಡಿರುವುದು ಕಳವಳಕಾರಿ. ಪ್ರತಿಭಾವಂತ ವಿದ್ಯಾರ್ಥಿಗಳು ಹೀಗೆ ಸಾವಿಗೆ ಶರಣಾಗುವುದು ಪ್ರಸ್ತುತ ವ್ಯವಸ್ಥೆಯ ವೈಫಲ್ಯಗಳಿಗೆ ಕನ್ನಡಿ ಹಿಡಿಯುತ್ತದೆ.

ಈ ವಿಚಾರದಲ್ಲಿ ಸಮಾಜ ಮತ್ತು ಸರ್ಕಾರಗಳು ಎಡವಿರುವುದು ಸ್ಪಷ್ಟ. ಇಂತಹ ಸ್ಥಿತಿಯಲ್ಲಿ ವಿದ್ಯಾರ್ಥಿಗಳಿಗೆ ಧೈರ್ಯವನ್ನು ತುಂಬುವ ಕೆಲಸವನ್ನು ನಮ್ಮ ಸಮಾಜ ಮಾಡಬೇಕಿದೆ. ಪೋಷಕರು ಈಗ ಹಿಂದೆಂದಿಗಿಂತಲೂ ಹೆಚ್ಚು ಜವಾಬ್ದಾರಿಯಿಂದ ಇರಬೇಕಾಗಿದೆ. ಶಾಲಾ ಕಾಲೇಜುಗಳಲ್ಲಿ ಮಕ್ಕಳಿಗೆ ಅಂಕಗಳ ಹಿಂದೆ ಓಡುವುದನ್ನು ಕಲಿಸುವ ಬದಲು ಜೀವನದಲ್ಲಿ ಯಶಸ್ಸು ಗಳಿಸುವ ಮಾರ್ಗಗಳು ಮತ್ತು ಸವಾಲುಗಳನ್ನು ಎದುರಿಸುವ ರೀತಿಗಳನ್ನು ಕಲಿಸುವುದು ಉತ್ತಮ.

ಲಕ್ಷ್ಮೀಗೌಡ, ಬೆಂಗಳೂರು

ಕೆರೆಗಳ ಅಭಿವೃದ್ಧಿಯಿಂದ ಶಾಶ್ವತ ಪರಿಹಾರ

5,200 ಹೆಕ್ಟೇರ್ ಅರಣ್ಯವನ್ನು ಬಳಸಿಕೊಂಡು 9,000 ಕೋಟಿ ರೂಪಾಯಿ ಅಂದಾಜುವೆಚ್ಚದಲ್ಲಿ ಮೇಕೆದಾಟು ಸಮತೋಲನ ಜಲಾಶಯವನ್ನು ನಿರ್ಮಿಸುವ ಯೋಜನೆ ಅಗತ್ಯವಿದೆಯೇ ಎಂದು ಯೋಚಿಸಬೇಕಾಗಿದೆ. ಇದರ ಬದಲಾಗಿ, ಪರಿಸರಸ್ನೇಹಿಯಾದ ರೀತಿಯಲ್ಲಿ ಕೆರೆಗಳ ಸಮಗ್ರ ಅಭಿವೃದ್ಧಿ ಕೈಗೊಂಡರೆ, ಶೇ 90ರಷ್ಟು ಪರಿಶುದ್ಧ ಮಳೆನೀರನ್ನು ಸಂಗ್ರಹಿಸಬಹುದು. ಆಗ ಗ್ರಾಮಗಳಲ್ಲಿ ಉದ್ಯೋಗ ಸೃಷ್ಟಿಯಾಗಿ, ಆರ್ಥಿಕ ಭದ್ರತೆಗೆ ನಾಂದಿಯಾಗುತ್ತದೆ. ಅತಿ ಕಡಿಮೆ ವೆಚ್ಚದಲ್ಲಿ ಕೆರೆಗಳನ್ನು ಅಭಿವೃದ್ಧಿಪಡಿಸುವುದರಿಂದ ನೀರಿನ ಸಮೃದ್ಧಿ ಕಾಣಬಹುದು. ಆಗ ಪರಿಸರಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲ.

ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

ಬೆಳಕಿನ ಮಾಲಿನ್ಯ: ನಿಯಂತ್ರಣ ಇರಲಿ

ಅಧಿಕ ಬೆಳಕಿನಿಂದ ಪರಿಸರ ಹಾಗೂ ಜನರ ಮೇಲೆ ಆಗುವ ದುಷ್ಪರಿಣಾಮಗಳ ಬಗ್ಗೆ ಟಿ.ಆರ್.ಅನಂತರಾಮು ಚೆನ್ನಾಗಿ ಬರೆದಿದ್ದಾರೆ (ಪ್ರ.ವಾ., ಜ. 18) 'ಮುಂಬೈ ನೆವರ್ ಸ್ಲೀಪ್ಸ್' ಅನ್ನುವ ಮಾತಿದೆ. ಈಗ ಇದನ್ನು ಬೆಂಗಳೂರಿಗೂ ಅನ್ವಯಿಸಿ ಹೇಳಬಹುದು. ರಾತ್ರಿ ಬೇರೆಯದೇ ಪ್ರಪಂಚ ಇಲ್ಲಿ ತೆರೆದುಕೊಳ್ಳುತ್ತದೆ. ವಿದೇಶಿಯರಿಗಾಗಿ ರಾತ್ರಿ ಕೆಲಸ ಮಾಡಲಾಗುತ್ತದೆ. ಈಗೀಗ ಹಬ್ಬ, ವಿವಿಧ ಕಾರ್ಯಕ್ರಮಗಳು ರಾತ್ರಿಯೇ ಹೆಚ್ಚಾಗಿ ನಡೆಯುತ್ತಿವೆ. ಹಾಗಾಗಿ, ಅಧಿಕ ವಿದ್ಯುತ್ ವ್ಯಯವಾಗುತ್ತದೆ. ಮತ್ತೆ ಅಧಿಕ ವಿದ್ಯುತ್ ಉತ್ಪಾದನೆ. ಅದರ ಜೊತೆಗೆ ಬೆಳಕಿನ ಮಾಲಿನ್ಯ. ಈ ಸರಣಿಯ ಮೇಲೆ ನಿಯಂತ್ರಣ ಹೇರಬೇಕಾಗಿದೆ.

ಗುರು ಜಗಳೂರು, ಹರಿಹರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.



ಶ್ವೇತಭವನದಲ್ಲಿ ಭಾರತ ಮೂಲದವರ ಆಡಳಿತ; ಹಲವು ಮಹತ್ವದ ಹುದ್ದೆಗಳಿಗೆ ನೇಮಕ

ಟ್ರಂಪ್ ಬಳಗದಲ್ಲಿ ಭಾರತೀಯರು

ಡೊನಾಲ್ಡ್ ಟ್ರಂಪ್ ಅವರು ಎರಡನೆಯ ಬಾರಿಗೆ ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಲಿದ್ದಾರೆ. ಟ್ರಂಪ್ ಅವರು ಈ ಬಾರಿ ತಮ್ಮ ಸರ್ಕಾರದಲ್ಲಿ ಭಾರತ ಮೂಲದ ಅಮೆರಿಕ ಪ್ರಜೆಗಳ ಪೈಕಿ ಹಲವರಿಗೆ ಮಹತ್ವದ ಹುದ್ದೆಗಳನ್ನು ನೀಡಿದ್ದಾರೆ. ಎಫ್‌ಬಿಐ ನಿರ್ದೇಶಕ, ಸರ್ಕಾರದ ಕಾರ್ಯದಕ್ಷತಾ ಇಲಾಖೆಯ ಉಸ್ತುವಾರಿಯಂತಹ ಉನ್ನತ ಸ್ಥಾನಗಳನ್ನು ಭಾರತ ಮೂಲದವರು ಪಡೆದುಕೊಂಡಿದ್ದಾರೆ. ಭಾರತ ಮೂಲದ ಆರು ಮಂದಿ ಸಂಸದರಾಗಿಯೂ ಆಯ್ಕೆಯಾಗಿದ್ದಾರೆ. ಅಮೆರಿಕದ ಆಡಳಿತ ವ್ಯವಸ್ಥೆಯಲ್ಲಿ ಭಾರತ ಮೂಲದ ಅಮೆರಿಕ ಪ್ರಜೆಗಳ ಪ್ರಭಾವ ಹೆಚ್ಚುತ್ತಿರುವುದನ್ನು ಇದು ತೋರಿಸುತ್ತಿದೆ

ಪ್ರಜಾವಾಣಿ ವಾರ್ತೆ

ವಿವೇಕ್ ರಾಮಸ್ವಾಮಿ



ಅಮೆರಿಕದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಡೊನಾಲ್ಡ್ ಟ್ರಂಪ್ ಅವರ ಎರಡನೇ ಅವಧಿಯ ಆಡಳಿತಕ್ಕೆ ಸೇರ್ಪಡೆಯಾದ ಮೊದಲ ಭಾರತ ಮೂಲದ ಅಮೆರಿಕನ್ ವಿವೇಕ್ ರಾಮಸ್ವಾಮಿ. ಟೆಸ್ಲಾ ಮಾಲೀಕ, ಉದ್ಯಮಿ ಇಲಾನ್ ಮಸ್ಕ್ ಅವರ ಜತೆಗೆ ಉದ್ಯಮಿ ವಿವೇಕ್ ರಾಮಸ್ವಾಮಿ ಅವರನ್ನು ಟ್ರಂಪ್ ಅವರು ಅಮೆರಿಕ ಸರ್ಕಾರದ ಕಾರ್ಯದಕ್ಷತಾ ಇಲಾಖೆಯ (ಡಿಒಜಿಇ) ಉಸ್ತುವಾರಿಯನ್ನಾಗಿ ನೇಮಿಸಿದ್ದಾರೆ.

ಕೇರಳದ ಪಾಲಕ್ಕಾಡ್‌ನಿಂದ ಅಮೆರಿಕಕ್ಕೆ ವಲಸೆ ಹೋದ ತಮಿಳು ಮನೆಮಾತಿನ ದಂಪತಿಯ ಮಗನಾಗಿ 1985ರಲ್ಲಿ ಸಿನ್ಸಿನಾಟಿಯಲ್ಲಿ ಜನಿಸಿದ ವಿವೇಕ್ ರಾಮಸ್ವಾಮಿ, ಅಮೆರಿಕದಲ್ಲಿ ಬಯೊಟೆಕ್ ಉದ್ಯಮಿಯಾಗಿದ್ದಾರೆ. ವಿಶೇಷ ಎಂದರೆ, ರಿಪಬ್ಲಿಕನ್ ಪಕ್ಷದಲ್ಲಿ ಪ್ರಾಥಮಿಕ ಹಂತದ ಚುನಾವಣೆಗೂ ಮೊದಲು ವಿವೇಕ್ ರಾಮಸ್ವಾಮಿ ಅವರೂ ಅಧ್ಯಕ್ಷೀಯ ಹುದ್ದೆ ಆಕಾಂಕ್ಷಿಯಾಗಿ ಅಮೆರಿಕದ ವಿವಿಧ ರಾಜ್ಯಗಳಲ್ಲಿ ಕಾರ್ಯಕರ್ತರ ಹಲವು ಸಭೆಗಳನ್ನು ನಡೆಸಿದ್ದರು. ಆದರೆ, ನಂತರ ಡೊನಾಲ್ಡ್ ಟ್ರಂಪ್ ಹೆಚ್ಚು ಜನಪ್ರಿಯ ಅಭ್ಯರ್ಥಿಯಾಗಿ ಹೊರಹೊಮ್ಮಿದ್ದರಿಂದ ಅವರನ್ನು ಅನುಮೋದಿಸಿ ಕಣದಿಂದ ಹಿಂದೆ ಸರಿದಿದ್ದರು.

ಅಮೆರಿಕದ ಉಪಾಧ್ಯಕ್ಷರಾಗಿ ಜೆ.ಡಿ.ವ್ಯಾನ್ಸ್ ಆಯ್ಕೆಯಾಗಿರುವುದರಿಂದ ತೆರವಾಗಿರುವ ಓಹಿಯೊ ಗವರ್ನರ್ ಹುದ್ದೆಗೆ ವಿವೇಕ್ ರಾಮಸ್ವಾಮಿ ಅವರು ಸ್ಪರ್ಧಿಸುವ ಸಾಧ್ಯತೆಗಳೂ ಇವೆ. ಜೆ.ಡಿ.ವ್ಯಾನ್ಸ್ ಅವರ ಪತ್ನಿ ಉಷಾ ವ್ಯಾನ್ಸ್ ಅವರು ಆಂಧ್ರಪ್ರದೇಶ ಮೂಲದವರು.

ಹರ್ಮೀತ್ ಧಿಲ್ಲೋನ್



ಅಮೆರಿಕದ ನ್ಯಾಯಾಂಗ ಇಲಾಖೆಯ ನಾಗರಿಕ ಹಕ್ಕುಗಳ ಸಹಾಯಕ ಅಟಾರ್ನಿ ಜನರಲ್ ಆಗಿ ಭಾರತ ಮೂಲದ ಹರ್ಮೀತ್ ಕೆ. ಧಿಲ್ಲೋನ್ ಅವರನ್ನು ಟ್ರಂಪ್ ಅವರು ನೇಮಿಸಿದ್ದಾರೆ.

ಚಂಡೀಗಢದ ಸಿಖ್ ಸಮುದಾಯದಲ್ಲಿ ಜನಿಸಿದ ಧಿಲ್ಲೋನ್ ಅವರು ಬಾಲ್ಯದಲ್ಲೇ ಹೆತ್ತವರ ಜೊತೆ ಅಮೆರಿಕಕ್ಕೆ ಹೋಗಿದ್ದರು. ಕ್ಯಾಲಿಫೋರ್ನಿಯಾದ ಈ ವಕೀಲೆ, ಅಮೆರಿಕದ ನಾಲ್ಕನೇ ಸರ್ಕೀಟ್ ನ್ಯಾಯಾಲಯದಲ್ಲಿ ನ್ಯಾಯಿಕ ಅಧಿಕಾರಿಯಾಗಿ ಕೆಲಸ ಮಾಡಿದ ನಂತರ ತಮ್ಮದೇ ಕಾನೂನು ಸಂಸ್ಥೆಯನ್ನು ಸ್ಥಾಪಿಸಿದ್ದರು.

2016ರಲ್ಲಿ ರಿಪಬ್ಲಿಕನ್ ರಾಷ್ಟ್ರೀಯ ಸಮಾವೇಶದಲ್ಲಿ ವೇದಿಕೆ ಏರಿದ ಮೊದಲ ಭಾರತೀಯ ಅಮೆರಿಕನ್ ಎಂದು ಹೆಸರಾಗಿದ್ದರು. 2024ರ ರಿಪಬ್ಲಿಕನ್ ಸಮಾವೇಶದಲ್ಲಿ ಸಿಖ್ ಪ್ರಾರ್ಥನೆ ಓದುವ ಮೂಲಕ ಗಮನ ಸೆಳೆದಿದ್ದರು. 2023ರಲ್ಲಿ ರಿಪಬ್ಲಿಕನ್ ಪಕ್ಷದ ರಾಷ್ಟ್ರೀಯ ಸಮಿತಿ ಅಧ್ಯಕ್ಷರಾಗಲು ಯತ್ನಿಸಿ ಸೋತಿದ್ದರು. ದೊಡ್ಡ ತಂತ್ರಜ್ಞಾನ ಸಂಸ್ಥೆಗಳ ವಿರುದ್ಧ, ಕಾರ್ಪೊರೇಟ್ ನೀತಿ ನಿಯಮಗಳ ವಿರುದ್ಧ ವಕೀಲರಾಗಿ ಹಲವು ಮೊಕದ್ದಮೆಗಳನ್ನು ನಡೆಸಿದರು.

ಟ್ರಂಪ್ ಅವರ ಕಟ್ಟಾ ಬೆಂಬಲಿಗರಾದ ಧಿಲ್ಲೋನ್, ಪಕ್ಷದೊಳಗಿನ ಮತ್ತು ಪಕ್ಷದ ಹೊರಗಿನ ಟ್ರಂಪ್ ವಿರೋಧಿಗಳ ಮೇಲೆ ವಾಗ್ದಾಳಿ ಮಾಡುವುದಕ್ಕೆ ಹೆಸರಾದವರು.

ಶ್ರೀರಾಮ್ ಕೃಷ್ಣನ್

ಭಾರತ ಮೂಲದ ಅಮೆರಿಕನ್ ವೆಂಚರ್ ಕ್ಯಾಪಿಟಲಿಸ್ಟ್ ಶ್ರೀರಾಮ್ ಕೃಷ್ಣನ್ ಅವರನ್ನು ಶ್ವೇತಭವನದ ಕೃತಕ ಬುದ್ಧಿಮತ್ತೆ ಕುರಿತ ನೀತಿಗಳ ಹಿರಿಯ ಸಲಹೆಗಾರರಾಗಿ ಡೊನಾಲ್ಡ್ ಟ್ರಂಪ್ ನೇಮಿಸಿದ್ದಾರೆ.



ಕೃಷ್ಣನ್ ಮೈಕ್ರೊಸಾಫ್ಟ್, ಟ್ವಿಟರ್, ಯಾಹೂ, ಫೇಸ್‌ಬುಕ್, ಸ್ನ್ಯಾಪ್ ಸಂಸ್ಥೆಗಳ ತಯಾರಿಕಾ ತಂಡದಲ್ಲಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ. ಇವರು ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರದಲ್ಲಿ ಟ್ರಂಪ್ ಸರ್ಕಾರದ ನೀತಿ ನಿರೂಪಣೆಗೆ ಮಾರ್ಗದರ್ಶನ ನೀಡಲಿದ್ದಾರೆ.

ಶ್ರೀರಾಮ್ ಅವರು ತಮಿಳುನಾಡು ಮೂಲದವರು. ಚೆನ್ನೈನಲ್ಲಿ ಹುಟ್ಟಿದ ಇವರು, ಕಾಂಚೀಪುರಂನಲ್ಲಿ ಬಿ.ಟೆಕ್ ಪದವಿ ಪಡೆದಿದ್ದಾರೆ. 2005ರಲ್ಲಿ ತಮ್ಮ 21ನೇ ವಯಸ್ಸಿನಲ್ಲಿ ಅಮೆರಿಕಕ್ಕೆ ಹೋದರು. ಶ್ರೀರಾಮ್ ಅವರ ಅನುಭವ ಮತ್ತು ತಿಳಿವಳಿಕೆಯನ್ನು ಗುರುತಿಸಿ ಟ್ರಂಪ್ ಅವರು ಈ ಜವಾಬ್ದಾರಿ ವಹಿಸಿದ್ದಾರೆ ಎನ್ನಲಾಗಿದೆ.

ಅಮೆರಿಕದ ಕೆಲವು ವಲಯಗಳಲ್ಲಿ ಶ್ರೀರಾಮ್ ಕೃಷ್ಣನ್ ಅವರ ನೇಮಕಕ್ಕೆ ವಿರೋಧ ವ್ಯಕ್ತವಾಗಿದೆ. ಅವರು ಟ್ರಂಪ್ ಸರ್ಕಾರದ ವಲಸೆ ನೀತಿಯ ಮೇಲೆ ಪ್ರಭಾವ ಬೀರಬಹುದು ಎನ್ನುವುದು ಅವರ ವಾದವಾಗಿದೆ.

ಕಾಶ್ ಪಟೇಲ್



ಗುಜರಾತ್ ಮೂಲದ ದಂಪತಿಯ ಮಗನಾದ ಕಾಶ್ ಪಟೇಲ್ ಅವರನ್ನು ಅಮೆರಿಕ ಗುಪ್ತಚರ ಸಂಸ್ಥೆ (ಎಫ್‌ಬಿಐ) ನಿರ್ದೇಶಕರನ್ನಾಗಿ ಡೊನಾಲ್ಡ್ ಟ್ರಂಪ್ ನೇಮಕ ಮಾಡಿದ್ದಾರೆ. ವಕೀಲರಾದ ಅವರು ಅಂತರರಾಷ್ಟ್ರೀಯ ಭಯೋತ್ಪಾದನೆಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಂಡು, ನ್ಯಾಯಾಂಗ ಇಲಾಖೆ ಸೇರಿದ್ದರು.

ರಾಷ್ಟ್ರೀಯ ಭದ್ರತಾ ಸಂಸ್ಥೆಯಲ್ಲಿ ಭಯೋತ್ಪಾದನಾ ಕೃತ್ಯಗಳ ವಿರುದ್ಧದ ಕಾರ್ಯಾಚರಣೆಗಳಲ್ಲಿ ಪಟೇಲ್ ಮುಖ್ಯ ಪಾತ್ರ ವಹಿಸಿದ್ದರು. ರಕ್ಷಣಾ ಇಲಾಖೆಯಲ್ಲಿಯೂ ರಕ್ಷಣಾ ಕಾರ್ಯದರ್ಶಿಗೆ ಸಿಬ್ಬಂದಿ ಮುಖ್ಯಸ್ಥರಾಗಿ ಕೆಲಸ ಮಾಡಿದ್ದಾರೆ. ಪಟೇಲ್ ಅವರು ರಷ್ಯಾದ ವಂಚನೆಯನ್ನು ಬಹಿರಂಗಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಟ್ರಂಪ್ ಬಣ್ಣಿಸಿದ್ದರು.

ತಮ್ಮ ವಿರುದ್ಧ ನಡೆಯುವ ಒಳಸಂಚನ್ನು ಪತ್ತೆಹಚ್ಚಿ, ಅದರಿಂದ ಸರ್ಕಾರವನ್ನು ಪಾರು ಮಾಡುವ ಸಲುವಾಗಿಯೇ ಕಾಶ್ ಪಟೇಲ್ ಅವರನ್ನು ಎಫ್‌ಬಿಐ ನಿರ್ದೇಶಕರಾಗಿ ಟ್ರಂಪ್ ಅವರು ನೇಮಕ ಮಾಡಿದ್ದಾರೆ ಎನ್ನಲಾಗಿದೆ. ಪಟೇಲ್ ಅವರು ಎಫ್‌ಬಿಐನಲ್ಲಿ ಸುಧಾರಣೆ ತರಬೇಕು ಎನ್ನುವ ಇರಾದೆ ಹೊಂದಿರುವುದಾಗಿ ಹೇಳಿಕೊಂಡಿದ್ದಾರೆ.

ಜೈ ಭಟ್ಟಾಚಾರ್ಯ



ಅಮೆರಿಕದ ಆರೋಗ್ಯ ಇಲಾಖೆ ಅಡಿ ಕಾರ್ಯನಿರ್ವಹಿಸುತ್ತಿರುವ ಅತ್ಯುನ್ನತ ಸಂಸ್ಥೆಯಾದ ನ್ಯಾಷನಲ್ ಇನ್‌ಸ್ಟಿಟ್ಯೂಟ್ಸ್ ಆಫ್ ಹೆಲ್ತ್‌ನ (ಎನ್‌ಐಎಚ್) ನೂತನ ನಿರ್ದೇಶಕರನ್ನಾಗಿ ಭಾರತ ಮೂಲದ ವಿಜ್ಞಾನಿ ಜೈ ಭಟ್ಟಾಚಾರ್ಯ ಅವರನ್ನು ನೇಮಕ ಮಾಡಲಾಗಿದೆ.

ಜೈವಿಕ ವೈದ್ಯಕೀಯ ವಿಜ್ಞಾನಕ್ಕೆ ಸಂಬಂಧಿಸಿದ ಸಂಶೋಧನೆಗಳಿಗೆ ಅತಿ ಹೆಚ್ಚು ಧನಸಹಾಯ ಮಾಡುವ ಸಂಸ್ಥೆ ಎಂದೇ ಹೆಸರಾಗಿದೆ. ಈ ಸಂಸ್ಥೆಯ ನೆರವಿನೊಂದಿಗೆ ಕೈಗೊಳ್ಳಲಾದ ಸಂಶೋಧನೆಗಳಿಗೆ 100ಕ್ಕೂ ಹೆಚ್ಚು ನೊಬೆಲ್ ಪ್ರಶಸ್ತಿಗಳು ಲಭಿಸಿವೆ. 2010ರಿಂದ 2019ರವರೆಗೆ ಅಮೆರಿಕದಲ್ಲಿ ಅನುಮೋದನೆ ಪಡೆದ ಔಷಧಗಳ ಪೈಕಿ ಶೇ 99ರಷ್ಟು ಈ ಸಂಸ್ಥೆಯ ನೆರವಿನಿಂದಲೇ ತಯಾರಾದಂಥವು ಎನ್ನುವುದು ಒಂದು ದಾಖಲೆಯಾಗಿದೆ.

ಕೋಲ್ಕತ್ತಾದಲ್ಲಿ ಜನಿಸಿದ ಜೈ ಭಟ್ಟಾಚಾರ್ಯ ಅವರು ಅಮೆರಿಕದ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಿಂದ ವೈದ್ಯಕೀಯ ಪದವಿ ಪಡೆದಿದ್ದಾರೆ. ಅವರು ಕೋವಿಡ್–19 ಸಂದರ್ಭದಲ್ಲಿ ನೀಡಿದ್ದ ಹೇಳಿಕೆ ವಿವಾದಕ್ಕೆ ಗುರಿಯಾಗಿತ್ತು. ಕೊರೊನಾ ಅನ್ನು ಆರೋಗ್ಯವಂತರ ನಡುವೆ ಹರಡಲು ಬಿಡಬೇಕು ಮತ್ತು ಲಾಕ್‌ಡೌನ್ ಹೇರಬಾರದು ಎಂದು ಅವರು ಪ್ರತಿಪಾದಿಸಿದ್ದರು. ಭಾರತದಲ್ಲಿ ಬಹುತೇಕರು ಸಹಜ ರೋಗನಿರೋಧಕತೆ ಹೊಂದಿದ್ದು, ಕೊರೊನಾದಿಂದ ಅಪಾಯವಿಲ್ಲ ಎಂದು ಹೇಳಿದ್ದರು. ಭಾರತದಲ್ಲಿ ಕೋವಿಡ್ ಸಂಬಂಧಿ ಸಾವುಗಳು ಭಾರಿ ಪ್ರಮಾಣದಲ್ಲಿ ವರದಿಯಾದ ನಂತರ ಟೀಕೆಗೂ ಗುರಿಯಾಗಿದ್ದರು.

ಅಮೆರಿಕದ ಸಂಸತ್‌ನಲ್ಲಿ ‘ಸಮೋಸಾ ಗುಂಪು’

ಕಳೆದ ವರ್ಷಾಂತ್ಯದಲ್ಲಿ ಅಮೆರಿಕದಲ್ಲಿ ನಡೆದ ಚುನಾವಣೆಯಲ್ಲಿ ಭಾರತ ಮೂಲದ ಒಂಬತ್ತು ಮಂದಿ ಸ್ಪರ್ಧಿಸಿದ್ದರು. ಈ ಪೈಕಿ ಆರು ಮಂದಿ ಗೆಲುವು ಸಾಧಿಸಿದ್ದಾರೆ. ಅಮೆರಿಕದ ಕಾಂಗ್ರೆಸ್‌ನಲ್ಲಿರುವ ‘ಸಮೋಸಾ ಗುಂಪಿ’ನಲ್ಲಿ (ಭಾರತ ಮೂಲದ ಸದಸ್ಯರನ್ನು ಒಟ್ಟಾಗಿ ಅಮೆರಿಕದಲ್ಲಿ ಸಮೋಸಾ ಗುಂಪು ಎಂದು ಕರೆಯಲಾಗುತ್ತದೆ) ಈ ಹಿಂದೆ ಐವರು ಇದ್ದರು. ಆ ಸಂಖ್ಯೆ ಈ ಬಾರಿ ಆರಕ್ಕೆ ಏರಿದೆ.

ಸುಹಾಸ್ ಸುಬ್ರಹ್ಮಣ್ಯಂ: ಅಮೆರಿಕದ ಕಾಂಗ್ರೆಸ್‌ಗೆ ಆಯ್ಕೆಯಾದ ದಕ್ಷಿಣ ಏಷ್ಯಾ ಮೂಲದ ಮೊದಲ ವ್ಯಕ್ತಿ ಎಂಬ ಹೆಗ್ಗಳಿಕೆ ಸುಹಾಸ್ ಸುಬ್ರಹ್ಮಣ್ಯಂ ಅವರದ್ದು. ಇವರು ವರ್ಜೀನಿಯಾದ 10ನೇ ಕಾಂಗ್ರೆಸ್ ಜಿಲ್ಲೆಯ ಪ್ರತಿನಿಧಿಯಾಗಿ ಡೆಮಾಕ್ರಟಿಕ್ ಪಕ್ಷದಿಂದ ಆಯ್ಕೆಯಾಗಿದ್ದಾರೆ.



ಸುಬ್ರಹ್ಮಣ್ಯಂ ಅವರ ತಾಯಿ ಬೆಂಗಳೂರಿನವರು. ಅಮೆರಿಕದಲ್ಲಿ ಶಿಕ್ಷಣ ಪಡೆಯುವುದಕ್ಕಾಗಿ 1979ರಲ್ಲಿ ಅಲ್ಲಿಗೆ ವಲಸೆ ಹೋಗಿದ್ದರು. ಸುಹಾಸ್ ಅವರು ನಾರ್ತ್‌ವೆಸ್ಟರ್ನ್ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಪಡೆದಿದ್ದಾರೆ.



ಆ್ಯಮಿ ಬೆರಾ: 2013ರಿಂದ ಅಮೆರಿಕ ಕಾಂಗ್ರೆಸ್‌ನ ಸದಸ್ಯರಾಗಿರುವ ಆ್ಯಮಿ ಬೆರಾ ಅವರು ದೀರ್ಘಾವಧಿಗೆ ಅಮೆರಿಕ ಕಾಂಗ್ರೆಸ್ ಪ್ರತಿನಿಧಿಸುತ್ತಿರುವ ಭಾರತ ಮೂಲದ ಅಮೆರಿಕ ಪ್ರಜೆ. ಲಾಸ್ ಏಂಜಲೀಸ್‌ನಲ್ಲಿ ಜನಿಸಿರುವ ಬೆರಾ ಅವರು ವೈದ್ಯ ಮತ್ತು ವೈದ್ಯಕೀಯ ಶಿಕ್ಷಣ ಬೋಧಕರಾಗಿದ್ದವರು. ಡೆಮಾಕ್ರಟಿಕ್ ಪಕ್ಷದವರಾದ ಇವರು ಕ್ಯಾಲಿಫೋರ್ನಿಯಾದ 6ನೇ ಕಾಂಗ್ರೆಸ್ ಜಿಲ್ಲೆಯಿಂದ ಏಳನೇ ಬಾರಿ ಆಯ್ಕೆಯಾಗಿದ್ದಾರೆ. ಆ್ಯಮಿ ಬೆರಾ ಅವರ ಕುಟುಂಬದ ಮೂಲ ಗುಜರಾತ್.



ರಾಜಾ ಕೃಷ್ಣಮೂರ್ತಿ: ಇವರು ಇಲಿನಾಯ್ ಕ್ಷೇತ್ರದಿಂದ ಡೆಮಾಕ್ರಟಿಕ್ ಅಭ್ಯರ್ಥಿಯಾಗಿ ಅಮೆರಿಕದ ಜನಪ್ರತಿನಿಧಿ ಸಭೆಗೆ ಪುನರಾಯ್ಕೆಯಾಗಿದ್ದಾರೆ. 2016ರಲ್ಲಿ ಮೊದಲ ಬಾರಿಗೆ ಸಂಸತ್ ಸದಸ್ಯರಾಗಿದ್ದ ಇವರು ಈಗ ಸಂಸತ್ ಪ್ರವೇಶಿಸುತ್ತಿರುವುದು ಐದನೇ ಬಾರಿ. ನವದೆಹಲಿಯಲ್ಲಿ ಜನಿಸಿದ್ದ ಇವರು, ಮೆಕ್ಯಾನಿಕಲ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದಿದ್ದಾರೆ. ವಕೀಲರಾಗಿರುವ ಕೃಷ್ಣಮೂರ್ತಿ ಅವರು ಗುಪ್ತಚರ ವಿಷಯಗಳಿಗೆ ಸಂಬಂಧಿಸಿದ ಜನಪ್ರತಿನಿಧಿ ಸಭೆಯ ಶಾಶ್ವತ ಸಮಿತಿಯ ಸದಸ್ಯರೂ ಆಗಿದ್ದಾರೆ.



ರೋ ಖನ್ನಾ: ಕ್ಯಾಲಿಫೋರ್ನಿಯಾದ ಹದಿನೇಳನೇ ಕಾಂಗ್ರೆಸ್ ಡಿಸ್ಟ್ರಿಕ್ಟ್ ಪ್ರತಿನಿಧಿಯಾಗಿ ಡೆಮಾಕ್ರಟಿಕ್ ಪಕ್ಷದಿಂದ ಚುನಾಯಿತರಾಗಿದ್ದಾರೆ. ಸಿಲಿಕಾನ್ ವ್ಯಾಲಿಯ ಹೃದಯ ಭಾಗವಾದ ಹದಿನೇಳನೇ ಕಾಂಗ್ರೆಸ್ ಜಿಲ್ಲೆ 1990ರಿಂದಲೂ ಡೆಮಾಕ್ರಟಿಕ್ ಪಕ್ಷದ ಭದ್ರಕೋಟೆಯಾಗಿದೆ. 2016ರಲ್ಲಿ ರೋ ಖನ್ನಾ ಅವರು ಮೊದಲ ಬಾರಿಗೆ ಸಂಸದರಾಗಿ ಆಯ್ಕೆಯಾಗಿದ್ದರು.

1976ರಲ್ಲಿ ಪಂಜಾಬ್ ಮೂಲದ ಕುಟುಂಬದಲ್ಲಿ ಫಿಲಡೆಲ್ಫಿಯಾದಲ್ಲಿ ರೋ ಖನ್ನಾ ಜನಿಸಿದರು. ಇವರು ಅರ್ಥಶಾಸ್ತ್ರ ಮತ್ತು ಕಾನೂನು ಪದವೀಧರರಾಗಿದ್ದಾರೆ. ರಾಜಕೀಯಕ್ಕೆ ಬರುವ ಮುನ್ನ ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಉಪನ್ಯಾಸಕರಾಗಿದ್ದರು.

ಶ್ರೀ ಥಾಣೇದಾರ್: ಇವರು ಬೆಳಗಾವಿ ಮೂಲದವರು. ರಸಾಯನಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪೂರೈಸಿದ ನಂತರ 1979ರಲ್ಲಿ ಅಮೆರಿಕಕ್ಕೆ ವಲಸೆ ಹೋದರು.



ಅಮೆರಿಕದ ಅಕ್ರಾನ್ ವಿಶ್ವವಿದ್ಯಾಲಯದಲ್ಲಿ 1982ರಲ್ಲಿ ಪಿಎಚ್‌.ಡಿ ಪದವಿ ಗಳಿಸಿದರು. 1988ರಿಂದ ಅಮೆರಿಕದ ಪ್ರಜೆಯಾಗಿದ್ದಾರೆ.

ಶ್ರೀ ಥಾಣೇದಾರ್ ಅವರು ಅಮೆರಿಕದಲ್ಲಿ ಔಷಧ ಸಂಶೋಧಕರಾಗಿ, ಉದ್ಯಮಿಯಾಗಿ ಯಶಸ್ಸು ಗಳಿಸಿದ್ದಾರೆ. ಇವರು ಮಿಷಿಗನ್‌ನಿಂದ ಸಂಸದರಾಗಿ ಆಯ್ಕೆಯಾಗಿದ್ದಾರೆ.

ಪ್ರಮೀಳಾ ಜಯಪಾಲ್: ಇವರು ಅಮೆರಿಕ ಸಂಸತ್ ಅನ್ನು ಪ್ರತಿನಿಧಿಸಿದ ದಕ್ಷಿಣ ಏಷ್ಯಾ ಮೂಲದ ಮೊದಲ ಮಹಿಳೆ ಎನಿಸಿದ್ದಾರೆ. ಇವರು ವಾಷಿಂಗ್ಟನ್ 7ನೇ ಜಿಲ್ಲೆಯನ್ನು ಪ್ರತಿನಿಧಿಸುತ್ತಿದ್ದಾರೆ. ಸತತ 5ನೇ ಬಾರಿಗೆ ಸಂಸತ್‌ಗೆ ಆಯ್ಕೆಯಾಗಿದ್ದಾರೆ.



ಭಾರತದಲ್ಲಿ ಜನಿಸಿ, ತಮ್ಮ 16ನೇ ವಯಸ್ಸಿನಲ್ಲಿ ಅಮೆರಿಕಕ್ಕೆ ಬಂದರು. ನಂತರ ನಾರ್ತ್‌ವೆಸ್ಟ್ರನ್ ವಿಶ್ವವಿದ್ಯಾಲಯದಿಂದ ಎಂಬಿಎ ಪದವಿ ಗಳಿಸಿದರು. ಟ್ರಂಪ್ ಅವರ ಮೊದಲ ಅವಧಿಯಲ್ಲಿ ಅವರ ವಲಸೆ ನೀತಿಯ ವಿರುದ್ಧ ಹೋರಾಡಿದವರಲ್ಲಿ ಪ್ರಮೀಳಾ ಜಯಪಾಲ್ ಮುಖ್ಯರು.

ಸಿನಿ ಬಿಟ್ಸ್



ಚಿತ್ರದ ಪೋಸ್ಟರ್

‘ಲ್ಯಾಂಡ್ ಲಾರ್ಡ್’ ಆದ ವಿಜಯ್

‘ಭೀಮ’ದ ಯಶಸ್ಸಿನ ಬಳಿಕ ದುನಿಯಾ ವಿಜಯ್ ನಟಿಸುತ್ತಿರುವ ಚಿತ್ರಕ್ಕೆ ‘ಲ್ಯಾಂಡ್ ಲಾರ್ಡ್’ ಎಂದು ಹೆಸರಿಡಲಾಗಿದೆ. ದುನಿಯಾ ವಿಜಯ್ ಜನ್ಮದಿನದಂದು ಚಿತ್ರದ ಶೀರ್ಷಿಕೆ ಅನಾವರಣಗೊಂಡಿದೆ. ವಿಜಯ್ ಅವರ 29ನೇ ಸಿನಿಮಾ ಇದಾಗಿದ್ದು, ‘ಕಾಟೇರ’ ಚಿತ್ರದ ಬರಹಗಾರ ಹಾಗೂ ನಿರ್ದೇಶಕ ಜಡೇಶ್ ಹಂಪಿ ಈ ಚಿತ್ರಕ್ಕೆ ಆ್ಯಕ್ಷನ್–ಕಟ್ ಹೇಳುತ್ತಿದ್ದಾರೆ.

‘ಚಿತ್ರದಲ್ಲಿ ವಿಜಯ್ ಪಾತ್ರದ ಹೆಸರು ರಾಚಯ್ಯ. ಶೇಕಡ 70ರಷ್ಟು ಚಿತ್ರೀಕರಣ ಪೂರ್ಣಗೊಂಡಿದೆ. ಹಾಡು ಮತ್ತು ಆ್ಯಕ್ಷನ್ ದೃಶ್ಯಗಳ ಚಿತ್ರೀಕರಣ ಬಾಕಿಯಿದೆ. ಈ ವರ್ಷ ಆಗಸ್ಟ್‌ನಲ್ಲಿ ಚಿತ್ರವನ್ನು ತೆರೆಗೆ ತರುವ ಆಲೋಚನೆಯಿದೆ. ಇದು ಯಾವುದೇ ಹೋರಾಟ ಅಥವಾ ಭೂಮಿಗೆ ಸಂಬಂಧಿಸಿದ ಕಥೆಯಲ್ಲ. ಭೂಮಿ ಒಡೆಯನಾಗಬೇಕೆಂದು ಹೊರಟವನ ಕಥೆ. ಅಪ್ಪ–ಮಗಳ ಭಾವನಾತ್ಮಕ ಸನ್ನಿವೇಶಗಳನ್ನು ಹೊಂದಿರುವ ಚಿತ್ರ’ ಎಂದು ಜಡೇಶ್ ಹೇಳಿದ್ದಾರೆ.

‘ಇದು ಆಳಿದವರ ಕಥೆಯಲ್ಲ, ಅಳಿದು ಉಳಿದವರ ಕಥೆ’ ಎಂಬ ಟ್ಯಾಗ್‌ಲೈನ್ ಹೊಂದಿದೆ. ದೇವಾಲಯದ ಎದುರು ದೇವರ ರಥವೊಂದು ಹೊತ್ತಿ ಉರಿಯುತ್ತಿರುವ ಪೋಸ್ಟರ್ ಅನ್ನು ಚಿತ್ರತಂಡ ಈ ಹಿಂದೆ ಬಿಡುಗಡೆಗೊಳಿಸಿತ್ತು.

ವಿಜಯ್‌ಗೆ ರಚಿತಾ ರಾಮ್ ಜೋಡಿಯಾಗಿದ್ದಾರೆ. ದುನಿಯಾ ವಿಜಯ್ ಅವರ ಮಗಳು ಮೋನಿಕಾ, ಉಮಾಶ್ರೀ ಮುಖ್ಯ ಪಾತ್ರದಲ್ಲಿ ನಟಿಸುತ್ತಿದ್ದಾರೆ. ರಂಗಾಯಣ ರಘು, ಗೋಪಾಲಕೃಷ್ಣ ದೇಶಪಾಂಡೆ, ಅಚ್ಯುತ್ ಕುಮಾರ್, ಬಿ.ಸುರೇಶ್ ಮೊದಲಾದವರು ಚಿತ್ರದಲ್ಲಿದ್ದಾರೆ. ‘ಸಾರಥಿ’ ಸಿನಿಮಾದ ನಿರ್ಮಾಪಕ ಕೆ.ವಿ. ಸತ್ಯಪ್ರಕಾಶ್ ಈ ಚಿತ್ರಕ್ಕೆ ಬಂಡವಾಳ ಹೂಡುತ್ತಿದ್ದಾರೆ.

‘ವಿಷ್ಣು–ಪ್ರಿಯಾ’ಳ ಪ್ರೇಮಗೀತೆ

‘ಪಡ್ಡೆಹುಲಿ’ ಚಿತ್ರದ ಮೂಲಕ ಗುರುತಿಸಿಕೊಂಡಿದ್ದ ಶ್ರೇಯಸ್ ಮಂಜು ಹಾಗೂ ನಟಿ ಪ್ರಿಯಾ ವಾರಿಯರ್ ಅಭಿನಯದ ‘ವಿಷ್ಣುಪ್ರಿಯಾ’ ಚಿತ್ರದ ಪ್ರೇಮಗೀತೆ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ತೊಂಬತ್ತರ ದಶಕದಲ್ಲಿ ನಡೆಯುವ ಪ್ರೇಮಕಥೆಯನ್ನು ಹೊಂದಿರುವ ಚಿತ್ರಕ್ಕೆ ವಿ.ಕೆ.ಪ್ರಕಾಶ್ ಚಿತ್ರಕಥೆ, ನಿರ್ದೇಶನವಿದೆ.

ಚಿತ್ರದ ‘ಏಳು ಗಿರಿಗಳ ಏಳು ಕಡಲಿನ ಆಚೆ’ ಹಾಡನ್ನು ಶ್ರೀಮುರಳಿ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು. ಹಾಡಿಗೆ ಗೋಪಿಸುಂದರ್ ಸಂಗೀತ ಸಂಯೋಜಿಸಿದ್ದು, ಹರೀಶ್ ಶಿವರಾಮಕೃಷ್ಣನ್ ಧ್ವನಿ, ವಿ.ನಾಗೇಂದ್ರ ಪ್ರಸಾದ್ ಸಾಹಿತ್ಯವಿದೆ. ಕೆ.ಮಂಜು ಬಂಡವಾಳ ಹೂಡಿದ್ದಾರೆ.

‘ಗಿರೀಶ್ ಕಾಸರವಳ್ಳಿ, ಬಿ.ವಿ.ಕಾರಂತ್ ಅವರ ಸಿನಿಮಾ ನೋಡಿ ಬೆಳೆದವರು ನಾವು. ಇದೊಂದು ಸದಭಿರುಚಿಯ ಪ್ರೇಮಕಥೆ. ಚಿತ್ರೀಕರಣಕ್ಕೂ ಮುನ್ನ ನಟನೆ ಕಾರ್ಯಾಗಾರ ಮಾಡಿದ್ದೆ. ಹೀಗಾಗಿ ಚಿತ್ರದಲ್ಲಿ ನಾಯಕ–ನಾಯಕಿ ಕೆಮಿಸ್ಟ್ರಿ ತುಂಬ ಚೆನ್ನಾಗಿ ವರ್ಕ್ ಆಗಿದೆ. ಫೆಬ್ರವರಿ 21ರಂದು ಚಿತ್ರ ತೆರೆಗೆ ಬರುತ್ತಿದೆ’ ಎಂದರು ನಿರ್ದೇಶಕರು.

ನಾಯಕನ ತಂದೆಯಾಗಿ ಅಚ್ಯುತ್ ಕುಮಾರ್ ಹಾಗೂ ನಾಯಕಿಯ ತಂದೆಯಾಗಿ ಸುಚೇಂದ್ರ ಪ್ರಸಾದ್ ಅವರು ಅಭಿನಯಿಸಿದ್ದಾರೆ. ವಿನೋದ್ ಭಾರತಿ ಛಾಯಾಚಿತ್ರಗ್ರಹಣ, ಸುರೇಶ್ ಅರಸ್ ಸಂಕಲನ ಈ ಚಿತ್ರಕ್ಕಿದೆ.



ಶ್ರೇಯಸ್ ಮಂಜು, ಪ್ರಿಯಾ ವಾರಿಯರ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ರೋಪಡ್ ಐಐಟಿಯಲ್ಲಿ ಶಿಕ್ಷಣ ಮಾಡಿ, ಬ್ರಹ್ಮೋಸ್‌ನಲ್ಲಿ ಏರೋಸ್ಪೇಸ್ ಎಂಜಿನಿಯರ್ ಆಗಿದ್ದುಕೊಂಡು ಪಾಕಿಸ್ತಾನದ ಗುಪ್ತಚರ ಸಂಸ್ಥೆ ಐಎಸ್‌ಐ ಪರವಾಗಿ ಗೂಢಚರ್ಯೆ ಮಾಡಿದ ಕಾರಣಕ್ಕೆ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ನಿಶಾಂತ್ ಅಗರ್‌ವಾಲ್ ಸನ್ಯಾಸಿಯಾಗಿ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳದಲ್ಲಿ ಭಾಗವಹಿಸಿದ್ದಾರೆ ಎಂದು ಹೇಳಿಕೊಂಡು ‘ಎಕ್ಸ್’ ಬಳಕೆದಾರರೊಬ್ಬರು ಪೋಸ್ಟ್ ಮಾಡಿದ್ದಾರೆ. ಈ ಪೋಸ್ಟ್ ಅನ್ನು ಹಲವರು ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಸುಳ್ಳು.

ಪೋಸ್ಟ್‌ನಲ್ಲಿದ್ದ ಫೋಟೊವನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ, ನ್ಯೂಸ್ 18 ಮಾಧ್ಯಮದಲ್ಲಿ ಪ್ರಸಾರವಾದ ಸಾಧುವೊಬ್ಬರ ಸಂದರ್ಶನದ ವಿಡಿಯೊ ಸಿಕ್ಕಿತು. ಪೋಸ್ಟ್ ಮಾಡಲಾದ ಚಿತ್ರವು ಈ ವಿಡಿಯೊದ ಸ್ಕ್ರೀನ್ ಶಾಟ್ ಎಂಬುದು ದೃಢಪಟ್ಟಿತು. ಆ ಸಂದರ್ಶನದಲ್ಲಿ ಸಾಧುವು, ತಾನು ಅಭಯ್ ಸಿಂಗ್, ಬಾಂಬೆ ಐಐಟಿಯಲ್ಲಿ ಏರೋಸ್ಪೇಸ್ ಎಂಜಿನಿಯರಿಂಗ್ ಪೂರ್ಣಗೊಳಿಸಿ ನಂತರ ಅಧ್ಯಾತ್ಮದತ್ತ ಮುಖ ಮಾಡಿರುವುದರ ಬಗ್ಗೆ ಮಾತನಾಡಿದ್ದಾರೆ. ನಂತರ ನಿಶಾಂತ್ ಅಗರ್‌ವಾಲ್ ಅವರಿಗೆ ಸಂಬಂಧಿಸಿದಂತೆ ನಿರ್ದಿಷ್ಟ ಪದಗಳನ್ನು ಬಳಸಿ ಹುಡುಕಾಡಿದಾಗ, ಐಎಸ್‌ಐ ಪರವಾಗಿ ಗೂಢಚರ್ಯೆ ಮಾಡಿದ್ದಕ್ಕಾಗಿ ಬ್ರಹ್ಮೋಸ್‌ನಲ್ಲಿ ಏರೋಸ್ಪೇಸ್ ಎಂಜಿನಿಯರ್ ಆಗಿದ್ದ ನಿಶಾಂತ್ ಅಗರ್‌ವಾಲ್‌ಗೆ ಜೀವಾವಧಿ ಶಿಕ್ಷೆ ವಿಧಿಸಿರುವ ಬಗ್ಗೆ 2024ರ ಜೂನ್ 3ರಂದು ಪ್ರಕಟವಾದ ಮಾಧ್ಯಮ ವರದಿ ಸಿಕ್ಕಿತು. ಅದರಲ್ಲಿ, ಆತ ಕುರುಕ್ಷೇತ್ರದ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆಯಲ್ಲಿ ಶಿಕ್ಷಣ ಪಡೆದಿರುವ ಬಗ್ಗೆ ಉಲ್ಲೇಖ ಇತ್ತು. ಹಾಗಾಗಿ, ಪೋಸ್ಟ್‌ನಲ್ಲಿ ಇರುವಂತೆ ಆತ ರೋಪಡ್ ಐಐಟಿಯಲ್ಲಿ ಓದಿಲ್ಲ ಎಂಬುದು ಸ್ಪಷ್ಟವಾಯಿತು. ಆದ್ದರಿಂದ ಕುಂಭಮೇಳದಲ್ಲಿ ಭಾಗವಹಿಸಿರುವ ಐಐಟಿ ಪದವೀಧರ ಸಾಧು ಅಭಯ್ ಸಿಂಗ್ ಅವರನ್ನು ತಪ್ಪಾಗಿ ನಿಶಾಂತ್ ಅಗರ್‌ವಾಲ್ ಎಂದು ಗುರುತಿಸಲಾಗಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಜನವರಿ 20, 2025

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪೌಷ ಕೃಷ್ಣ ಷಷ್ಠಿ ಗಂ. 09-59 ನಕ್ಷತ್ರ: ಹಸ್ತ ಗಂ. 20-30 ಯೋಗ: ಸುಕರ್ಮ ಗಂ. 26-52 ಕರಣ: ವಣಿಜ ಗಂ. 09-59, ಮಕರ ಮಾಸದ 06 ನೇ ದಿನ, ಮಳೆನಕ್ಷತ್ರ: ಉತ್ತರಾಷಾಢ 3.
ರಾಹುಕಾಲ: ಬೆಳಿಗ್ಗೆ 07-30 – 09-00
ಸೂರ್ಯೋದಯ: 07-01 ಸೂರ್ಯಾಸ್ತ : 06-22
ಮುಸ್ಲಿಂ ದಿನಾಂಕ: 19 ರಜಬ್
ಅದೃಷ್ಟ ಸಂಖ್ಯೆ: 3, 1

ಮೇಷ: ಕೋರ್ಟ್ ಕಚೇರಿ ಗೊಡವೆಗಳಿಗೆ ಪ್ರಾಮುಖ್ಯ ಕೊಡುವುದು ಸರಿಯಲ್ಲ. ಹರಿದು ಬರುವ ಅವಕಾಶಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಿ. ಕೆಲಸಗಳನ್ನು ನೀವೆ ನಿರ್ವಹಿಸುವಂತಾಗಲಿದೆ.

ವೃಷಭ: ವಿದೇಶಿ ಸಂಸ್ಥೆಗಳೊಡನೆ ಸಹಭಾಗಿತ್ವ ಒಪ್ಪಂದಗಳನ್ನು ಮಾಡಿಕೊಳ್ಳುವುದು ಸಮಂಜಸವಾಗಿ ಕಾಣುವುದಿಲ್ಲ. ರಿಯಲ್ ಎಸ್ಟೇಟ್ ವ್ಯವಹಾರಗಳಿಂದ ಅಧಿಕ ಲಾಭ ಹೊಂದುವಿರಿ. ಉದ್ಯೋಗ ನಿಮಿತ್ತ ಪ್ರಯಾಣ ಸಂಭವ.

ಮಿಥುನ: ಕೆಲವು ವಿಚಾರಗಳನ್ನು ತೀರ್ಮಾನಿಸುವ ಸಂದರ್ಭದಲ್ಲಿ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವುದು ಉತ್ತಮ. ಸ್ವಾದಿಷ್ಟ ಭೋಜನ ಆರೋಗ್ಯಕ್ಕೆ ಸ್ವಲ್ಪ ತೊಂದರೆ ತರಬಹುದು. ಸರ್ಕಾರಿ ಕೆಲಸದವರಿಗೆ ಅನುಕೂಲಕರ ದಿನ.

ಕರ್ಕಾಟಕ: ದವಸ-ಧಾನ್ಯಗಳ ವ್ಯಾಪಾರಸ್ಥರು ಅವುಗಳನ್ನು ಶೇಖರಣೆ ಮಾಡಿದ್ದಲ್ಲಿ ಅಧಿಕ ಲಾಭ ಉಂಟಾಗುವ ಸಂಭವ ಇದೆ. ತಾತ್ಕಾಲಿಕ ಹುದ್ದೆಯಲ್ಲಿರುವವರಿಗೆ ಬದಲಾವಣೆಯ ಸೂಚನೆ ಕಂಡುಬರಲಿದೆ. ಮಾತಿನಲ್ಲಿ ಹಿಡಿತವಿರಲಿ.

ಸಿಂಹ: ಸಹೋದ್ಯೋಗಿಗಳಿಂದ ಉತ್ತಮ ಸಹಕಾರ ಮತ್ತು ಮಾರ್ಗದರ್ಶನವನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಅವಕಾಶಗಳು ಲಭ್ಯವಾಗಲಿವೆ. ಮನೆಯಲ್ಲಿ ಜವಾಬ್ದಾರಿ ಹೆಚ್ಚಲಿದೆ.

ಕನ್ಯಾ: ನಿರೀಕ್ಷಿಸಿದ ಕಾರ್ಯಗಳು ನೆರವೇರಿ ಮನಸ್ಸಿಗೆ ನೆಮ್ಮದಿ ಉಂಟಾಗುವುದು. ಕೈ ತಪ್ಪಿ ಹೋದ ವಿಚಾರಗಳು ಪುನಃ ಕೈ ಸೇರಿ ಸಂತೋಷ ಇಮ್ಮಡಿಗೊಳ್ಳಲಿದೆ. ಇಂದಿನಿಂದ ಮತ್ತೊಬ್ಬರ ಅವಲಂಬನೆ ಬೇಡವೆನಿಸುತ್ತದೆ.

ತುಲಾ: ಷೇರು ಮಾರುಕಟ್ಟೆ ಹಾಗೂ ಕಮಿಷನ್ ವ್ಯಾಪಾರಕ್ಕೆ ಸಂಬಂಧಿಸಿದಂಥ ವೃತ್ತಿಯಲ್ಲಿರುವವರಿಗೆ ನಷ್ಟದ ಬಿಸಿ ಮುಟ್ಟಲಿದೆ. ಬ್ಯಾಂಕಿನ ಸಾಲಗಳು ತೀರಿ ಮನೆಯಲ್ಲಿ ನೆಮ್ಮದಿ ಮೂಡಲಿದೆ.

ವೃಶ್ಚಿಕ: ಕೆಲಸದ ಕ್ಷೇತ್ರದಲ್ಲಿ ಜವಾಬ್ದಾರಿಯುತ ಕಾರ್ಯವೈಖರಿ ಮೆಚ್ಚುಗೆಗೆ ಪಾತ್ರವಾಗಲಿದೆ. ಲೇವಾದೇವಿ ವ್ಯವಹಾರಗಳಲ್ಲಿ ಎಚ್ಚರಿಕೆಯಿಂದ ಇರುವುದು ಸೂಕ್ತ. ಸಹಚರರನ್ನು ಒಮ್ಮನಸ್ಸಿನಿಂದ ಕರೆದೊಯ್ಯುವಲ್ಲಿ ಯಶಸ್ವಿಯಾಗುವಿರಿ.

ಧನು: ದುರಭ್ಯಾಸಗಳಿಗೆ ಒಳಗಾಗದಂತೆ ಮನಸ್ಸನ್ನು ಸ್ಥಿಮಿತದಲ್ಲಿ ಇಟ್ಟುಕೊಳ್ಳುವ ಪ್ರಯತ್ನ ಮಾಡಿ. ಮನೆಯನ್ನು ನವೀಕರಣಗೊಳಿಸುವ ವಿಚಾರಗಳು ಬರಲಿವೆ. ನೀವಂದುಕೊಂಡ ಕೆಲಸ ನಡೆಯುತ್ತದೆ.

ಮಕರ: ಜನರೊಂದಿಗೆ ಹೆಚ್ಚು ಬೆರೆಯುವುದನ್ನು ಅಭ್ಯಾಸ ಮಾಡಿಕೊಂಡಲ್ಲಿ ವ್ಯವಹಾರ ಸುಗಮವಾಗುವುದು. ಸಣ್ಣ ಕೈಗಾರಿಕೋದ್ಯಮಿಗಳಿಗೆ ಸರ್ಕಾರದಿಂದ ಸಹಾಯ ಹಸ್ತ ದೊರಕಲಿದೆ. ಯಥಾಸ್ಥಿತಿ ಕಾಪಾಡಿಕೊಳ್ಳುವುದು ಉತ್ತಮ.

ಕುಂಭ: ಬಹಳ ಪ್ರಯತ್ನದಿಂದ ಗುತ್ತಿಗೆ ಕೆಲಸದ ಬಾಕಿ ಹಣ ಸಂದಾಯವಾಗುವುದು. ಗೊಂದಲದ ಸಮಸ್ಯೆಗೆ ಅನುಭವಿಗಳ ಸಲಹೆ ಪಡೆಯುವುದು ಸರಿಯಾದ ಮಾರ್ಗ. ವಿದ್ಯಾರ್ಥಿಗಳಿಗೆ ಓದಿನೆಡೆಗೆ ಆಸಕ್ತಿ ಮೂಡುವುದು.

ಮೀನ: ಧಾರ್ಮಿಕ ಮಾರ್ಗದರ್ಶಕರ ಸಹಾಯದಿಂದ ಬದುಕನ್ನು ಅರ್ಥಪೂರ್ಣವಾಗಿಸುವ ಬಗ್ಗೆ ತಿಳಿದುಕೊಳ್ಳುವಿರಿ. ಕೆಲಸದಲ್ಲಿ ಅಥವಾ ಕೆಲಸದ ಜಾಗವನ್ನು ಬದಲಾವಣೆ ಮಾಡುವುದು ಸರಿಯಲ್ಲ.

ನುಡಿ ಬೆಳಗು — 113



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ಧನಕನಕ ಸಂಪತ್ತಲ್ಲ!

ಐಶ್ವರ್ಯ ಮೂಲ ಲಿಂಗಾರ್ಚನೆ. ಐಶ್ವರ್ಯ ಬರಬೇಕು ಎಂದರೆ ಪೂಜೆ ಮಾಡಬೇಕು ಎನ್ನುತ್ತಾರೆ ಶರಣರು. ‘ಅಯ್ಯೋ, ನಾವು ಎಷ್ಟು ಪೂಜೆ ಮಾಡಿದ್ದೇವೆ. ಆದರೂ ಐಶ್ವರ್ಯ ಬಂದಿಲ್ಲ’ ಎಂದು ಕೇಳ್ತೀರಿ. ಸಂಪತ್ತು ಎಂದರೆ ಯಾವುದು? ಯಾವುದು ನಮಗೆ ಆಪತ್ತು ತರೋದಿಲ್ಲ ಅದು ಸಂಪತ್ತು. ನಮ್ಮ ಸಂಪತ್ತು ನಮಗೆ ಆಪತ್ತು ತಂದಿದೆ. ಒಂದಿಷ್ಟು ಬಂಗಾರ ಹಾಕಿಕೊಂಡು ರಾತ್ರಿ ನಿರ್ಭೀತಿಯಿಂದ ನಡೀತೀರೇನು? ಬಂಗಾರ ನಮ್ಮ ಜೀವಕ್ಕೇ ಮುಳುವಾಗಬಹುದು. ಲಿಂಗಾರ್ಚನೆ ಎಂದರೆ ಯಾವುದೋ ಗುಡಿಯಲ್ಲಿರುವ ಕಲ್ಲು ಲಿಂಗಗಳಿಗೆ ಪೂಜೆ ಮಾಡುವುದಲ್ಲ. ಅಲ್ಲಮಪ್ರಭುಗಳು ಹೇಳುತ್ತಾರೆ, ‘ಲಿಂಗವೆಂಬುದು ಅನಂತದ ಹೆಸರೋ ಗುಹೇಶ್ವರದೆಂಬುದೇನು’ ಅಂತ. ಲಿಂಗ ಅಂದರೆ, ಈ ಅನಂತ ವಿಶ್ವ. ನಮ್ಮ ಕಣ್ಣಿಗೆ ತೋರುವುದೆಲ್ಲವೂ ಲಿಂಗ. ಐಶ್ವರ್ಯ ಗಳಿಸೋದಕ್ಕೆ ಮುಂಚೆ ನಮಗೆ ಬಡತನ ಯಾಕೆ ಬಂತು ಎನ್ನುವುದನ್ನು ತಿಳಕೋಬೇಕು. ನಮ್ಮ ಮುಂದೆ ಇರುವುದೆಲ್ಲವೂ ಸಂಪತ್ತು ಎನ್ನುವುದು ನಮಗೆ ಗೊತ್ತಾಗದೇ ಇರುವುದರಿಂದ ನಮಗೆ ಬಡತನ ಬಂತು. ಬೆಳ್ಳಿ, ಬಂಗಾರ, ದುಡ್ಡು ಇದ್ದರಷ್ಟೇ ಸಂಪತ್ತು ಎಂದು ನಾವು ತಿಳಿದುಕೊಂಡಿರುವುದರಿಂದ ನಮಗೆ ಬಡತನ ಬಂದೈತಿ. ಚಿತ್ತಶುದ್ಧದಲ್ಲಿ ಕಾಯಕವ ಮಾಡುವ ಶರಣಂಗೆ ಎತ್ತೆತ್ತ ನೋಡಿದರಲ್ಲಿ ಲಕ್ಷ್ಮಿ ತಾನಾಗಿರ್ಪಳು. ಕಾಯಕವನ್ನು ಮಾಡುವವನು ಎಲ್ಲದರಲ್ಲಿಯೂ ಸಂಪತ್ತು ಕಾಣುತ್ತಾನೆ. ಭೂಮಿ ಸಂಪತ್ತು. ಗಾಳಿ, ಬೆಳಕು, ನೀರು, ಮಾತು, ತಂದೆ ತಾಯಿ ಎಲ್ಲವೂ ಸಂಪತ್ತು. ಸಂಪತ್ತು ಯಾವುದು ಎಂದು ಗುರುತಿಸುವಲ್ಲಿ ನಾವು ಸೋತಿದ್ದೇವೆ ಅಷ್ಟೆ.


ಒಬ್ಬ ಮಹಾರಾಜ ಇದ್ದ. ಅವನು ಒಂದು ಯುದ್ಧದಲ್ಲಿ ಸಾಕಷ್ಟು ಸುಸ್ತಾಗಿದ್ದ. ಅವನಿಗೆ ಸಾಯುವ ಕಾಲ ಬಂತು. ಆಗ ಒಂದು ಹನಿ ನೀರು ಸಿಕ್ಕಿರಲಿಲ್ಲ. ಅದೇ ಹೊತ್ತಿಗೆ ಒಬ್ಬ ಕೈಯಲ್ಲಿ ನೀರಿನ ಲೋಟ ಇಟ್ಟುಕೊಂಡು ಕುಳಿತಿದ್ದು ಕಂಡು ಅವನಿಗೆ ‘ನೀರು ಕೊಡು’ ಎಂದು ಕೇಳಿದ. ಅದಕ್ಕೆ ಆ ವ್ಯಕ್ತಿ, ‘ನಾನು ನೀರು ಕೊಟ್ಟರೆ ನೀನು ನನಗೆ ಏನು ಕೊಡ್ತಿ?’ ಎಂದು ಕೇಳಿದ. ‘ನೀನು ಅರ್ಧ ಲೋಟ ನೀರು ಕೊಟ್ಟರೆ ನಾನು ನಿನಗೆ ನನ್ನ ಅರ್ಧ ರಾಜ್ಯವನ್ನೇ ಕೊಡ್ತೇನೆ’ ಎಂದ ಮಹಾರಾಜ. ಅದಕ್ಕೆ ಆ ವ್ಯಕ್ತಿ ‘ನೀರು ಕೊಡಲ್ಲ’ ಎಂದ. ‘ನೀನು ನೀರು ಕೊಡದೇ ಇದ್ದರೆ ನಾನು ಸತ್ತೇ ಹೋಗ್ತೀನಿ. ನೀನು ನೀರು ಕೊಟ್ಟರೆ ನನ್ನ ಜೀವಮಾನದಲ್ಲಿ ನಾನು ಗಳಿಸಿದ ರಾಜ್ಯ, ಸಂಪತ್ತು ಎಲ್ಲವನ್ನೂ ನಿನಗೇ ಕೊಡ್ತೀನಿ’ ಅಂದ ಮಹಾರಾಜ. ಆಗ ಆ ವ್ಯಕ್ತಿ ‘ನೀನು ಜೀವಮಾನದಲ್ಲಿ ಗಳಿಸಿದ ಎಲ್ಲ ಆಸ್ತಿಪಾಸ್ತಿಗಿಂತ, ರಾಜ್ಯಗಳಿಗಿಂತ, ಧನಕನಕಗಳಿಗಿಂತ ಅರ್ಧ ಲೋಟ ನೀರು ಹೆಚ್ಚು ಬೆಲೆ ಬಾಳುತ್ತದೆ’ ಎಂದ. ಹೌದು ನೀರು ಸಂಪತ್ತು. ತುಂಗಭದ್ರಾ ನದಿ ಹರೀತಿರತೈತಿ. ಅದಕ್ಕೆ ಭದ್ರಾದಲ್ಲಿ ಡ್ಯಾಂ ಕಟ್ಟಿದರೆ ಭದ್ರಾ ಡ್ಯಾಂ ಅಂತಾರೆ. ಮುನಿರಾಬಾದ್‌ನಲ್ಲಿ ಡ್ಯಾಂ ಕಟ್ಟಿದರೆ, ಮುನಿರಾಬಾದ್ ಡ್ಯಾಂ ಅಂತಾರೆ. ಅಂದರೆ ನದಿ ಯಾರದ್ದೂ ಅಲ್ಲ. ಯಾವ ಊರಲ್ಲಿ ಅದು ಹರಿಯುತ್ತಿರುತ್ತದೆಯೋ ಅದು ಅಲ್ಲಿಯದೇ ಆಗಿರುತ್ತದೆ. ಹಾಗೆಯೇ ಹಣವೂ ಕೂಡ. ಯಾರ ಜೇಬಿನಲ್ಲಿ ಇರುತ್ತದೆಯೋ ಅದು ಅವರದ್ದೇ ಆಗಿರುತ್ತದೆ. ಧನಕನಕ ಎಂದೂ ಸಂಪತ್ತಲ್ಲ ಅನ್ನೋದನ್ನು ತಿಳಕೋಬೇಕು ಮನುಷ್ಯ.

ಪದಬಂಧ 5928

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕೊನೆಗೆ ಹಾರವಿದ್ದಾಗಿನ ವ್ಯಾಪಾರ (3)
3.ಮುಪ್ಪು ಇಲ್ಲದಿರುವಿಕೆ (5)
5.ವಾದ್ಯವನ್ನು ನುಡಿಸುವಿಕೆ (3)
6.ಸಲ್ಲೇಖನ ವ್ರತ ಮಾಡಿದ ಗೆಳೆಯ (2)
8.ಬಂಧನ ಅಥವಾ ನೇಣು (2)
9.ಯತಿಗೆ ಸಿಕ್ಕಿರುವ ಸೋಡಿ (4)
11.ಕುದುರೆಯ ಕೆನೆತ (4)
13.ನಿಯಮದಂತೆ ಬಂದಿರುವ ನರಕಾಧಿಪತಿ (2)
14.ಕನಸಲ್ಲಿ ಕಾಣಿಸಿದ ಕೊಳೆ (2)
16.ಉತ್ತರದವರ ಮಂಚ (3)
17.ರಾಮನ ಮಗನಿದ್ದರೆ ಈ ಹುರುಪು! (5)
18.ಜನರಿದ್ದರೂ ಇದು ನಿರ್ಜನ! (3)

ಮೇಲಿಂದ ಕೆಳಕ್ಕೆ
1.ಹೊಣೆಗೇಡಿತನವನ್ನು ಹೀಗೆನ್ನಿ (5)
2.ಆನೆಯ ದಾಡೆ (3)
3.ಸಂಸ್ಕೃತದಿಂದ ಹುಟ್ಟಿರುವ ಭಾಷೆ ಅಥವಾ ಪದ (4)
4.ರಾಯರಿಂದ ಬಂದಿರುವ ನಿರೂಪ! (3)
7.ಗೋಚರವಾದ ಪಕ್ಷಿ (3)
8.ಬೀಜ ಬಿತ್ತಲು ಮಾಡಿದ ಮಡಿ (2)
10.ಬೇಡುವವನು ಇಲ್ಲಿದ್ದಾನೆ (3)
11.ಬಂಗಾರವನ್ನು ಹೀಗೂ ಹೇಳುತ್ತಾರೆ (2)
12.ಮಳೆಯ ಪ್ರಾರಂಭ (5)
13.ವನಿತೆ ತೆರೆದಿಟ್ಟ ಪರದೆ! (4)
15.ನೀರಿಗೊಂದು ಪರ್ಯಾಯ ಪದ (3)
16.ಪದ ಹೇಳಿ ಪಡೆದುಕೊಂಡಿರುವ ಡಿಗ್ರಿ! (3)



5927ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಏಕಾಗ್ರತೆ 3.ಕುಂಟುನೆಪ 5.ರಪಣ 7.ವಿದ್ರುಮ 9.ಪಾಯಸ 11.ಸಹಾಯಧನ 12.ಚರಣ 13.ಕಲಹ 14.ಬದಲಿ 18.ಕಡಿತಲೆ 19.ತರಂಗಿಣಿ

ಮೇಲಿಂದ ಕೆಳಕ್ಕೆ: 1.ಏತ 2.ತೆಪರ 3.ಕುಂದಣ 4.ಪತ್ತೆ 6.ಪರ್ಯಾಯ ಪದ 7.ವಿಕಚ 8.ಮಸಣ 9.ಪಾನಕ 10.ಸನ್ನಾಹ 14.ಬತ್ತಲೆ 15.ಲಿಖಿತ 16.ಸಂಕ 17.ಏಣಿ

ಸುಡೊಕು 6313

		6		4		3		5
	3		5					
	9	2		3		7		1
2	1		9		3	6		
				1			5	3
3	8			5			7	
9		8						7
				9			3	
4		3			1	2		6

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6312 ಸುಡೊಕು

2	4	8	1	6	3	5	9	7
7	5	6	4	9	8	2	3	1
1	3	9	2	5	7	4	8	6
6	1	5	9	7	4	8	2	3
3	9	7	8	1	2	6	5	4
8	2	4	6	3	5	7	1	9
5	6	3	7	2	1	9	4	8
9	8	2	3	4	6	1	7	5
4	7	1	5	8	9	3	6	2

ರಾಜ್ಯದ ಎಲ್ಲಾ ಎಪಿಎಂಸಿಗಳಿಗೆ ವಿಸ್ತರಿಸಲು ನಿರ್ಧಾರ

ಸೆಸ್: ಡಿಜಿಟಲ್ ಪಾವತಿ ಯಶಸ್ವಿ

• ಜಿ.ಬಿ.ನಾಗರಾಜ್

ದಾವಣಗೆರೆ: ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ (ಎಪಿಎಂಸಿ) ಆದಾಯದ ಮೂಲವಾದ ಮಾರುಕಟ್ಟೆ ಶುಲ್ಕ (ಸೆಸ್) ಪಾವತಿಗೆ ಆನ್‌ಲೈನ್ ವ್ಯವಸ್ಥೆ ರೂಪಿಸಿ ದಾವಣಗೆರೆಯಲ್ಲಿ ನಡೆಸಿದ ಪ್ರಯೋಗ ಯಶಸ್ವಿಯಾಗಿದೆ. ಇದನ್ನು ರಾಜ್ಯದಾದ್ಯಂತ ವಿಸ್ತರಿಸಲು ಕೃಷಿ ಉತ್ಪನ್ನ ಮಾರಾಟ ಇಲಾಖೆ ಮುಂದಾಗಿದೆ.

ಡಿಜಿಟಲ್ ಶುಲ್ಕ ಪಾವತಿ ವ್ಯವಸ್ಥೆಯನ್ನು ಮೊದಲ ಹಂತದಲ್ಲಿ ಚಿತ್ರದುರ್ಗ ಹಾಗೂ ಹಾವೇರಿ ಜಿಲ್ಲೆಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಅನುಷ್ಠಾನಕ್ಕೆ ತರಲಾಗಿದೆ. ರಾಜ್ಯದ ಇತರ ಮಾರುಕಟ್ಟೆಯ ಖರೀದಿದಾರರು ಹಾಗೂ ಸಿಬ್ಬಂದಿಗೆ ತರಬೇತಿ ನೀಡುವ ಪ್ರಕ್ರಿಯೆ ನಡೆಯುತ್ತಿದೆ. ಇದರಿಂದ ಕೃಷಿ ಉತ್ಪನ್ನಗಳ ಖರೀದಿ ಹಾಗೂ ಸಾಗಣೆಗೆ ಪರವಾನಗಿ ಪಡೆಯುವಲ್ಲಿ ಆಗುತ್ತಿದ್ದ ವಿಳಂಬ ತಪ್ಪಲಿದೆ.

ಕೃಷಿ ಉತ್ಪನ್ನಗಳನ್ನು ರೈತರಿಂದ ಖರೀದಿಸುವ ವರ್ತಕರು ಶೇ 0.60ರಷ್ಟು ಮಾರುಕಟ್ಟೆ ಶುಲ್ಕವನ್ನು ಎಪಿಎಂಸಿಗೆ ಪಾವತಿಸಬೇಕು. ಖರೀದಿಸಿದ ಉತ್ಪನ್ನದ ಮೌಲ್ಯವನ್ನು ಆಧರಿಸಿ ಇದು ನಿರ್ಧಾರವಾಗುತ್ತದೆ. ಖರೀದಿದಾರರು ಎಪಿಎಂಸಿ ಕಚೇರಿಗೆ ತೆರಳಿ ಚೆಕ್, ಆರ್‌ಟಿಜಿಎಸ್ ಹಾಗೂ ನೆಫ್ಟ್ ಮೂಲಕ ಪಾವತಿಸಬೇಕಿತ್ತು. 24 ಗಂಟೆಯ ಕಾಲಮಿತಿಯಲ್ಲಿ ಸೆಸ್ ಪಾವತಿಸದ ವರ್ತಕರಿಗೆ ಶೇ 12ರಿಂದ ಶೇ 30ರಷ್ಟು ದಂಡ ವಿಧಿಸಲಾಗುತ್ತಿತ್ತು. ದಂಡದ ಹೊರೆ ತಪ್ಪಿಸಲು ಡಿಜಿಟಲ್ ಪಾವತಿಗೆ ಅವಕಾಶ ಕಲ್ಪಿಸುವಂತೆ ಕರ್ನಾಟಕ ಮೆಕ್ಕೆಜೋಳ ವರ್ತಕರ ಸಂಘ ಸರ್ಕಾರಕ್ಕೆ ಮನವಿ ಮಾಡಿತ್ತು.

ವರ್ತಕರು ಖರೀದಿಸಿದ ಕೃಷಿ ಉತ್ಪನ್ನಗಳ ಸಾಗಣೆಗೆ ಎಪಿಎಂಸಿ ಪರವಾನಗಿ (ನಮೂನೆ 35 ಎ) ನೀಡುತ್ತದೆ. ಮಾರುಕಟ್ಟೆ ಶುಲ್ಕ ಪಾವತಿಸಿದ ಬಳಿಕವಷ್ಟೇ ಇದು ‘ರೆಮ್ಸ್’ ತಂತ್ರಾಂಶದಲ್ಲಿ ಲಭ್ಯವಾಗುತ್ತದೆ.

ಖರೀದಿ ಮಾಡಿದ ಉತ್ಪನ್ನಗಳ ಸಾಗಣೆಗೆ ಪರವಾನಗಿ ಪಡೆಯುವ ಪ್ರಕ್ರಿಯೆ ತೀರಾ ವಿಳಂಬವಾಗುತ್ತಿತ್ತು. ಇಲಾಖೆಯ ಅಧಿಕಾರಿಗಳು ಹಾಗೂ ‘ರೆಮ್ಸ್’ ತಂತ್ರಾಂಶದ ಪ್ರತಿನಿಧಿಗಳನ್ನು ಒಳಗೊಂಡ ಸಮಿತಿಯು ಅಧ್ಯಯನ ನಡೆಸಿ ಏಕೀಕೃತ ಡಿಜಿಟಲ್ ಪಾವತಿ ವ್ಯವಸ್ಥೆಗೆ ಶಿಫಾರಸು ಮಾಡಿತ್ತು. ಕಳೆದ ವರ್ಷದ ಡಿಸೆಂಬರ್ 11ರಿಂದ ದಾವಣಗೆರೆ ತಾಲ್ಲೂಕು ಹಾಗೂ ಜನವರಿ 6ರಿಂದ ಜಿಲ್ಲಾ ವ್ಯಾಪ್ತಿಯ ಎಪಿಎಂಸಿಗಳಲ್ಲಿ ಸೆಸ್ ಪಾವತಿ ಆನ್‌ಲೈನ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿತ್ತು.

‘ಕೃಷಿ ಉತ್ಪನ್ನ ಖರೀದಿಸುವ ವರ್ತಕರಿಗೆ ‘ರೆಮ್ಸ್’ ತಂತ್ರಾಂಶದಲ್ಲಿ ‘ಸೆಸ್’ ಪಾವತಿಗೆ ಅವಕಾಶ ಕಲ್ಪಿಸಲಾಗಿದೆ. ಕ್ಯೂಆರ್ ಕೋಡ್, ನೆಟ್ ಬ್ಯಾಂಕಿಂಗ್, ಯುಪಿಐ ಮತ್ತು ಕಾರ್ಡ್‌ಗಳನ್ನು ಬಳಸಿ ಶುಲ್ಕ ಪಾವತಿಸಬಹುದಾಗಿದೆ. ವರ್ತಕರಿಗಾಗಿ ರೂಪಿಸಿದ ‘ಟ್ರೇಡರ್ಸ್ ಆ್ಯಪ್’ ಮೂಲಕವೂ ಸುಲಭವಾಗಿ ಡಿಜಿಟಲ್ ಪಾವತಿ ಮಾಡಬಹುದಾಗಿದೆ. ಉತ್ಪನ್ನಗಳ ಸಾಗಣೆಗೆ ಪರವಾನಗಿ ಕೂಡ ಸಕಾಲಕ್ಕೆ ಲಭ್ಯವಾಗುತ್ತಿದೆ’ ಎಂದು ದಾವಣಗೆರೆ ಎಪಿಎಂಸಿ ಸಹಾಯಕ ನಿರ್ದೇಶಕ ಜಿ. ಪ್ರಭು ತಿಳಿಸಿದರು.



‘ನಮೂನೆ 35 ಬಿ’ ರದ್ದತಿಗೆ ಒತ್ತಾಯ

‘ಮಾರುಕಟ್ಟೆ ಶುಲ್ಕ ಪಾವತಿಸಿದ ಖಚಿತತೆಗೆ ಎಪಿಎಂಸಿ ನೀಡುತ್ತಿದ್ದ ‘ನಮೂನೆ 35 ಬಿ’ ಪರವಾನಗಿಯು ಡಿಜಿಟಲ್ ಪಾವತಿ ವ್ಯವಸ್ಥೆಯ ಬಳಿಕ ಮೌಲ್ಯ ಕಳೆದುಕೊಂಡಿದೆ. ಇದನ್ನು ರದ್ದುಪಡಿಸಿದರೆ ವರ್ತಕರಿಗೆ ಅನುಕೂಲವಾಗುತ್ತದೆ’ ಎಂದು ಜಿಲ್ಲಾ ಎಪಿಎಂಸಿ ಮೆಕ್ಕೆಜೋಳ ವರ್ತಕರ ಸಂಘದ ಅಧ್ಯಕ್ಷ ಟಿ. ಶ್ರೀನಿವಾಸ್ ಒತ್ತಾಯಿಸಿದ್ದಾರೆ.


‘ರೈತರಿಂದ ಖರೀದಿಸಿದ ಉತ್ಪನ್ನಗಳ ಸಾಗಣೆಗೆ ನೀಡುತ್ತಿದ್ದ ‘ನಮೂನೆ 35 ಎ’ ಪರವಾನಗಿ ಪಡೆಯುವ ವ್ಯವಸ್ಥೆಯ ಸರಳೀಕರಣಗೊಂಡಿದೆ. ‘ನಮೂನೆ 35 ಬಿ’ ನೀಡುವವರೆಗೂ ಕಂಪನಿಗಳು ವರ್ತಕರಿಗೆ ಹಣ ಪಾವತಿಸುವುದಿಲ್ಲ. ಮಾರುಕಟ್ಟೆ ಶುಲ್ಕ ಪಾವತಿಸಿದ 15 ದಿನಗಳವರೆಗೆ ‘ನಮೂನೆ 35 ಬಿ’ಗೆ ಕಾಯಬೇಕಿದೆ. ವರ್ತಕರ ಸಮಸ್ಯೆ ಸಂಪೂರ್ಣ ಬಗೆಹರಿದಿಲ್ಲ’ ಎಂದು ಹೇಳಿದರು.

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)
₹502-653
ದ್ವಿತಳಿ (ಬಿ.ವಿ)
₹233-772

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹520
12 ಕ್ಕೆ	₹70
ಮೈಸೂರು	
100ಕ್ಕೆ	₹520

ಎಫ್‌ಪಿಐ: ₹44,396 ಕೋಟಿ ವಾಪಸ್

ನವದೆಹಲಿ (ಪಿಟಿಐ): ಜನವರಿ ಆರಂಭದಿಂದ 17ರ ವರೆಗೆ ದೇಶದ ಈಕ್ವಿಟಿ ಮಾರುಕಟ್ಟೆಯಿಂದ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಒಟ್ಟು ₹44,396 ಕೋಟಿಯನ್ನು ಹಿಂಪಡೆದಿದ್ದಾರೆ.

ಡಾಲರ್ ಮೌಲ್ಯದಲ್ಲಿ ಏರಿಕೆಯಾಗಿದೆ. ಅಮೆರಿಕದ ಬಾಂಡ್ ಗಳಿಕೆಯಲ್ಲೂ ಹೆಚ್ಚಳವಾಗಿದೆ. ಇದು ವಿದೇಶಿ ಬಂಡವಾಳದ ಹೊರಹರಿವಿನ ಪ್ರಮಾಣ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಕಳೆದ ವರ್ಷದ ಡಿಸೆಂಬರ್‌ನಲ್ಲಿ ₹15,446 ಕೋಟಿ ಬಂಡವಾಳ ಹೂಡಿಕೆಯಾಗಿತ್ತು.

‘ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಗಳ ನಿವ್ವಳ ಲಾಭದ ಪ್ರಮಾಣವು ನಿರೀಕ್ಷಿತ ಮಟ್ಟದಲ್ಲಿಲ್ಲ. ದೇಶದ ಆರ್ಥಿಕ ಬೆಳವಣಿಗೆ ದರ ಇಳಿಕೆಯಾಗಲಿದೆ ಎಂದು ಅಂದಾಜಿಸಲಾಗಿದೆ. ಇದರಿಂದ ಈಕ್ವಿಟಿ ಮಾರುಕಟ್ಟೆಯಿಂದ ವಿದೇಶಿ ಹೂಡಿಕೆದಾರರು ಬಂಡವಾಳ ಹಿಂಪಡೆಯುತ್ತಿದ್ದಾರೆ’ ಎಂದು ಮಾರ್ನಿಂಗ್‌ಸ್ಟಾರ್ ಇನ್ವೆಸ್ಟ್‌ಮೆಂಟ್ ರಿಸರ್ಚ್ ಇಂಡಿಯಾದ ಸಹಾಯಕ ನಿರ್ದೇಶಕ ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

ಈ ಐದು ಹೂಡಿಕೆ ಅಪಾಯಕಾರಿ



ಹಣಕಾಸು ಸಾಕ್ಷರತೆ
ರಾಜೇಶ್ ಕುಮಾರ್ ಟಿ.ಆರ್.

ಹೂಡಿಕೆ ಉತ್ಪನ್ನಗಳು ಎಂದಾಗ ಮಾರುಕಟ್ಟೆಯಲ್ಲಿ ಹತ್ತಾರು ಆಯ್ಕೆಗಳಿವೆ. ಎಲ್ಲಾ ಹೂಡಿಕೆ ಆಯ್ಕೆಗಳಲ್ಲೂ ಅದರದ್ದೇ ಆದ ಸಾಧಕ, ಬಾಧಕಗಳಿವೆ. ಆದರೆ, ಕೆಲವು ಹೂಡಿಕೆಗಳಲ್ಲಿ ಅನುಕೂಲಕ್ಕಿಂತ ಅನನುಕೂಲವೇ ಹೆಚ್ಚಿರುತ್ತದೆ.

ಅತಿಯಾದ ನಿರ್ವಹಣಾ ಶುಲ್ಕ, ಗೋಪ್ಯ ನಿಯಮಗಳು, ಕಡಿಮೆ ಲಾಭ ಗಳಿಕೆ ಒಳಗೊಂಡಂತೆ ಹೂಡಿಕೆದಾರನಿಗೆ ಪೂರಕವಲ್ಲದ ಅಂಶಗಳು ಅಂತಹ ಹೂಡಿಕೆಗಳಲ್ಲಿವೆ. ಆ ಹೂಡಿಕೆಗಳು ಯಾವುವು, ಹೂಡಿಕೆಗೆ ಇವು ಏಕೆ ಉತ್ತಮ ಆಯ್ಕೆಗಳಲ್ಲ ಎನ್ನುವ ಬಗ್ಗೆ ವಿವರವಾಗಿ ತಿಳಿದುಕೊಳ್ಳೋಣ.

• **ಡಿಜಿಟಲ್ ಗೋಲ್ಡ್‌ನಲ್ಲಿ ಪಾರದರ್ಶಕತೆ ಕೊರತೆ:** ಡಿಜಿಟಲ್ ಗೋಲ್ಡ್ ಒಂದು ಜನಪ್ರಿಯ ಹೂಡಿಕೆ ಮಾದರಿಯಾಗಿದ್ದರೂ ಸಾಕಷ್ಟು ಅನನುಕೂಲಗಳು ಈ ಹೂಡಿಕೆಯಲ್ಲಿವೆ. ಪ್ರತಿ ಬಾರಿ ನೀವು ಡಿಜಿಟಲ್ ಗೋಲ್ಡ್ ಖರೀದಿಸಿದಾಗ ಶೇ 3ರಷ್ಟು ಜಿಎಸ್‌ಟಿ ಪಾವತಿಸಬೇಕಾಗುತ್ತದೆ.

ಆದರೆ, ಡಿಜಿಟಲ್ ಚಿನ್ನ ಮಾರಾಟ ಮಾಡುವಾಗ ನಿಮಗೆ ಜಿಎಸ್‌ಟಿಗೆ ಕಟ್ಟಿದ ಹಣ ಸಿಗುವುದಿಲ್ಲ. ಅಲ್ಲದೆ, ಡಿಜಿಟಲ್ ಗೋಲ್ಡ್ ಕೊಳ್ಳುವಾಗ ಅದರ ಬೆಲೆ ಜಾಸ್ತಿ ಇರುತ್ತದೆ. ಮಾರಾಟ ಮಾಡುವಾಗ ಕಡಿಮೆ ಬೆಲೆ ಇರುತ್ತದೆ. ಇಂತಹ ರೂಢಿ ಡಿಜಿಟಲ್ ಗೋಲ್ಡ್‌ನಲ್ಲಿದೆ.

ಇನ್ನು ಡಿಜಿಟಲ್ ಗೋಲ್ಡ್ ಮಾರಾಟ ಮಾಡುವ ವೇದಿಕೆಗಳಲ್ಲಿ ಬೆಲೆ ನಿಗದಿ, ನಿರ್ವಹಣಾ ಶುಲ್ಕ ವಿಧಿಸುವಿಕೆಯು ಪಾರದರ್ಶಕವಾಗಿಲ್ಲ. ಆದ್ದರಿಂದ ಈ ಹೂಡಿಕೆ ಮಾಡುವ ನಿರ್ಧಾರ ಕೈಗೊಳ್ಳುವ ಮುನ್ನ ಈ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಿ.

• **ಯುಲಿಪ್‌ನಲ್ಲಿ ಶುಲ್ಕ ದುಬಾರಿ, ಗಳಿಕೆ ಕಡಿಮೆ:** ಇನ್ಶೂರೆನ್ಸ್ ಮತ್ತು ಹೂಡಿಕೆ ಇವೆರಡನ್ನೂ ಯುನಿಟ್ ಲಿಂಕ್ಡ್ ಇನ್ಶೂರೆನ್ಸ್ ಪ್ಲಾನ್‌ಗಳು (ಯುಲಿಪ್ಸ್) ಒಳಗೊಂಡಿರುತ್ತವೆ. ವಾಸ್ತವದಲ್ಲಿ ಈ ಪ್ಲಾನ್‌ಗಳಿಂದ ಹೆಚ್ಚು ಇನ್ಶೂರೆನ್ಸ್ ಕವರೇಜ್ ಸಿಗುವುದಿಲ್ಲ ಜೊತೆಗೆ, ಅಧಿಕ ಹೂಡಿಕೆ ಲಾಭವೂ ದಕ್ಕುವುದಿಲ್ಲ. ಯುಲಿಪ್‌ಗಳಲ್ಲಿ ಹೂಡಿಕೆ ಮಾಡಿದಾಗ ಮೊದಲ ವರ್ಷದ ಶುಲ್ಕ ಶೇ 8ರಿಂದ ಶೇ 10ರಷ್ಟು ಇರುತ್ತದೆ.

ಇಷ್ಟೆಲ್ಲಾ ಶುಲ್ಕವೇ ಇರುವಾಗ ಗಳಿಕೆ ಸಾಧ್ಯತೆಯು ಈ ಹೂಡಿಕೆಯಲ್ಲಿ ಕುಂಠಿತ ಆಗುತ್ತದೆ. ನಿರ್ವಹಣಾ ಶುಲ್ಕ, ಆಡಳಿತ ಶುಲ್ಕ, ಕಂತಿನ ಹಂಚಿಕೆ ಶುಲ್ಕ, ಪ್ರಾಣ ಹಾನಿ ಶುಲ್ಕ (ಮೊರ್ಟಾಲಿಟಿ ಶುಲ್ಕ) ಜೊತೆಗೆ ವಿಮಾ ಕಂತಿನ ಮೇಲೆ ಶೇ 18ರಷ್ಟು ಜಿಎಸ್‌ಟಿಯನ್ನು ಯುಲಿಪ್ ಪಾಲಿಸಿಗಳಲ್ಲಿ ವಿಧಿಸಲಾಗುತ್ತದೆ. ಹಾಗಾಗಿ ನೀವು ಹೂಡಿಕೆ ಮಾಡಿರುವ ಯುಲಿಪ್ ಫಂಡ್ ಶೇ 10ರಷ್ಟು ಗಳಿಕೆ ನೀಡಿದರೂ ನಿಮಗೆ ಅದರ ಲಾಭ ದಕ್ಕುವುದಿಲ್ಲ.

ಅಲ್ಲದೆ, ಯುಲಿಪ್ ಹೂಡಿಕೆಗಳು ಸಾಕಷ್ಟು ಗೋಪ್ಯ ಶುಲ್ಕಗಳನ್ನೂ ಒಳಗೊಂಡಿರುತ್ತವೆ. ಸಾಮಾನ್ಯ ಹೂಡಿಕೆದಾರನಿಗೆ ಇದು ಅಷ್ಟು ಸುಲಭವಾಗಿ ಅರ್ಥವಾಗುವುದಿಲ್ಲ. ಈ ಕಾರಣಗಳಿಂದ ಆದಷ್ಟು ಯುಲಿಪ್ ಹೂಡಿಕೆಗಳಿಂದ ದೂರ ಉಳಿಯುವುದು ಒಳಿತು.

• **ಪೀರ್-ಟು-ಪೀರ್ ಲೆಂಡಿಂಗ್ ಬಗ್ಗೆ ಜೋಪಾನ:** ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ಸಾಲ ಕೊಡಿಸುವ ಪೀರ್-ಟು- ಪೀರ್ ಲೆಂಡಿಂಗ್ ಪ್ಲಾಟ್ ಫಾರಂಗಳಿವೆ. ಈ ಪ್ಲಾಟ್ ಫಾರಂಗಳು ಶೇ 12ರಷ್ಟು ಗಳಿಕೆ ಲಾಭ ಒದಗಿಸುವುದಾಗಿ ಹೇಳುತ್ತವೆ. ಆದರೆ, ಇಂತಹ ಸಾಲ ಕೊಡಿಸುವ ವೇದಿಕೆಗಳಿಗೆ ದುಡ್ಡು ಹಾಕುವುದರಿಂದ ರಿಸ್ಕ್ ಜಾಸ್ತಿ ಇರುತ್ತದೆ.

ಯಾರಿಗೆ ಸರ್ಕಾರಿ ಅಥವಾ ಖಾಸಗಿ ಬ್ಯಾಂಕ್‌ಗಳಲ್ಲಿ ಸಾಲ ಸಿಗುವುದಿಲ್ಲವೋ ಅವರು ಪೀರ್-ಟು-ಪೀರ್ ಲೆಂಡಿಂಗ್ ಪ್ಲಾಟ್ ಫಾರಂಗಳಿಂದ ಸಾಲ ಪಡೆದುಕೊಳ್ಳುತ್ತಾರೆ. ಹೀಗೆ ಸಾಲ ಪಡೆದವರು ಅದನ್ನು ಹಿಂದಿರುಗಿಸದಿದ್ದರೆ ನಿಮ್ಮ ಹೂಡಿಕೆ ನಷ್ಟವಾಗುವ ಸಾಧ್ಯತೆ ಇರುತ್ತದೆ. ಪೀರ್-ಟು-ಪೀರ್ ಲೆಂಡಿಂಗ್‌ನಲ್ಲಿ ಲಾಭ ಗಳಿಕೆ ಸಾಧ್ಯತೆಯ ಜೊತೆಗೆ ರಿಸ್ಕ್ ಕೂಡ ಜಾಸ್ತಿಯಿದೆ ಎನ್ನುವುದು ನಿಮಗೆ ಗೊತ್ತಿರಲಿ.

• **ಹೋಲ್ ಲೈಫ್ ಇನ್ಶೂರೆನ್ಸ್ ದುಬಾರಿ:** ಹೋಲ್ ಲೈಫ್ ಇನ್ಶೂರೆನ್ಸ್ ವ್ಯಕ್ತಿಯ ಜೀವಿತಾವಧಿಗೆ ಕವರೇಜ್ ಒದಗಿಸುತ್ತದೆ. ಆದರೆ, ಈ ಇನ್ಶೂರೆನ್ಸ್ ಪಾಲಿಸಿಗಳು ಟರ್ಮ್ ಲೈಫ್ ಇನ್ಶೂರೆನ್ಸ್ ಪಾಲಿಸಿಗಳಿಗಿಂತ ದುಬಾರಿ. ಬೆಲೆ ಏರಿಕೆ ಕಾರಣದಿಂದ ಹೋಲ್ ಲೈಫ್ ಇನ್ಶೂರೆನ್ಸ್‌ನಲ್ಲಿ ಸಿಗುವ ಕ್ಲೇಮು ಬೆನಿಫಿಟ್ ಕಾಲಕ್ರಮೇಣ ಮೌಲ್ಯ ಕಳೆದುಕೊಳ್ಳುತ್ತಾ ಹೋಗುತ್ತದೆ.

ಅಲ್ಲದೆ, ವಯಸ್ಸಾಗುತ್ತಾ ಸಾಗಿದಂತೆ ವ್ಯಕ್ತಿಯ ಹಣಕಾಸಿನ ಜವಾಬ್ದಾರಿಗಳು ಕಮ್ಮಿಯಾಗುತ್ತಾ ಹೋಗುತ್ತವೆ. ಆಗ ಜೀವಿತಾವಧಿ ಕವರೇಜ್ ಕೂಡ ಅಗತ್ಯವಿರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ಹೋಲ್ ಲೈಫ್ ಇನ್ಶೂರೆನ್ಸ್ ದೀರ್ಘಾವಧಿಯಲ್ಲಿ ಪಾಲಿಸಿದಾರನಿಗೆ ಅಷ್ಟು ಅನುಕೂಲ ಒದಗಿಸುವುದಿಲ್ಲ.

• **ಕಣ್ಮುಚ್ಚಿಕೊಂಡು ಎನ್‌ಎಫ್‌ಒನಲ್ಲಿ ಹೂಡಿಕೆ ಬೇಡ:** ಮ್ಯೂಚುವಲ್ ಫಂಡ್ ಕಂಪನಿಗಳು (ಅಸೆಟ್ ಮ್ಯಾನೇಜ್‌ಮೆಂಟ್ ಕಂಪನಿಗಳು) ಹೊಸದಾಗಿ ಆರಂಭಿಸುವ ಮ್ಯೂಚುವಲ್ ಫಂಡ್‌ಗಳನ್ನು ನ್ಯೂ ಫಂಡ್ ಆಫರ್ (ಎನ್‌ಎಫ್‌ಒ) ಎಂದು ಕರೆಯಲಾಗುತ್ತದೆ. ಈ ಎನ್‌ಎಫ್‌ಒಗಳಿಗೆ ಸಾಕಷ್ಟು ಮಾರ್ಕೆಟಿಂಗ್ ಕೂಡ ಮಾಡಲಾಗಿರುತ್ತದೆ.

ಎನ್‌ಎಫ್‌ಒಗಳಲ್ಲಿ ಹೂಡಿಕೆ ಮಾಡಿದರೆ ಭರ್ಜರಿ ಲಾಭ ಸಿಗುತ್ತದೆ ಎಂದು ಬಿಂಬಿಸಲಾಗುತ್ತದೆ. ಆದರೆ, ಎನ್‌ಎಫ್‌ಒಗಳು ಹೊಸ ಮ್ಯೂಚುವಲ್ ಫಂಡ್ ಹೂಡಿಕೆಗಳಾಗಿವೆ. ಇದರಿಂದ ಈ ಹಿಂದೆ ಅವು ಎಷ್ಟು ಲಾಭ ಕೊಟ್ಟಿವೆ ಎಂದು ನೋಡಲು ಸಾಧ್ಯವಿಲ್ಲ. ಮುಂದೆ ಬರುವ ಲಾಭಾಂಶ ಹೇಗಿರಬಹುದು ಎಂದು ಅಂದಾಜು ಮಾಡಲೂ ಸಾಧ್ಯವಾಗುವುದಿಲ್ಲ. ಎನ್‌ಎಫ್‌ಒಗಳ ಎನ್‌ಎವಿ (ನೆಟ್ ಅಸೆಟ್ ವ್ಯಾಲ್ಯೂ) ಆಕರ್ಷಕವಾಗಿರುತ್ತದೆ ಎನ್ನುವುದು ನಿಜ. ಆದರೆ, ಎನ್‌ಎವಿ ನಿರ್ದಿಷ್ಟ ಫಂಡ್ ಇಂತಿಷ್ಟೇ ಲಾಭ ಕೊಡುತ್ತದೆ ಎಂಬ ಖಾತರಿ ಒದಗಿಸುವುದಿಲ್ಲ. ಹಾಗಾಗಿ, ಎನ್‌ಎಫ್‌ಒ ಹೂಡಿಕೆಗಳ ಹಿಂದೆ ಕಣ್ಣು ಮುಚ್ಚಿಕೊಂಡು ಓಡಬೇಡಿ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಎರಡನೇ ವಾರವೂ ಕುಸಿದ ಷೇರುಪೇಟೆ



ಷೇರುಪೇಟೆ ಸೂಚ್ಯಂಕಗಳು ಸತತ ಎರಡನೇ ವಾರವೂ ಕುಸಿತ ಕಂಡಿವೆ. 76,619 ಅಂಶಗಳಲ್ಲಿ ವಹಿವಾಟು ಮುಗಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.98ರಷ್ಟು ಇಳಿಕೆಯಾಗಿದೆ. 23,203 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ನಿಫ್ಟಿ ಶೇ 0.97ರಷ್ಟು ತಗ್ಗಿದೆ.

ಅಮೆರಿಕದ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಅಧಿಕಾರ ಸ್ವೀಕರಿಸುವುದು, ಕಂಪನಿಗಳ ಮೂರನೇ ತ್ರೈಮಾಸಿಕ ಫಲಿತಾಂಶದಲ್ಲಿ ಸಾಧಾರಣ ಲಾಭದ ನಿರೀಕ್ಷೆ, ಅಮೆರಿಕದ ಡಾಲರ್ ಮತ್ತು ಬಾಂಡ್ ಮೌಲ್ಯ ಹೆಚ್ಚಳ, ವಿದೇಶಿ ಹೂಡಿಕೆದಾರರಿಂದ ಮಾರಾಟದ ಒತ್ತಡ, ರೂಪಾಯಿ ಮೌಲ್ಯ ಕುಸಿತ ಸೇರಿ ಹಲವು ಅಂಶಗಳು ಷೇರು ಮಾರುಕಟ್ಟೆ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಐ.ಟಿ ಶೇ 5.78, ರಿಯಲ್ ಎಸ್ಟೇಟ್ ಶೇ 2.5, ಮಾಧ್ಯಮ ಶೇ 2.36, ಎಫ್‌ಎಂಸಿಜಿ ಶೇ 2.31, ಫಾರ್ಮಾ ಶೇ 1.43, ಆಟೊ ಶೇ 0.98, ಫೈನಾನ್ಸ್ ಶೇ 0.54 ಮತ್ತು ಬ್ಯಾಂಕ್ ಶೇ 0.4ರಷ್ಟು ಕುಸಿದಿವೆ. ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 3.43, ಲೋಹ ಶೇ 3.13, ಎನರ್ಜಿ ಶೇ 2.79, ಅನಿಲ ಮತ್ತು ತೈಲ ಸೂಚ್ಯಂಕ ಶೇ 1.41ರಷ್ಟು ಗಳಿಸಿಕೊಂಡಿವೆ.


ಇಳಿಕೆ– ಗಳಿಕೆ: ವಾರದ ಅವಧಿಯನ್ನು ಗಣನೆಗೆ ತೆಗೆದುಕೊಂಡಾಗ ನಿಫ್ಟಿಯಲ್ಲಿ ಎಚ್‌ಸಿಎಲ್ ಟೆಕ್ನಾಲಜೀಸ್ ಶೇ 10.31, ಇನ್ಫೊಸಿಸ್ ಶೇ 7.6, ವಿಪ್ರೊ ಶೇ 6.27, ಟ್ರೆಂಟ್ ಶೇ 5.8, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 5.51, ಎಕ್ಸಿಸ್ ಬ್ಯಾಂಕ್ ಶೇ 4.68, ಡಾ.ರೆಡ್ಡೀಸ್ ಶೇ 3.35, ಟಿಸಿಎಸ್ ಶೇ 3.31, ಹಿಂದುಸ್ತಾನ್ ಯುನಿಲಿವರ್ ಶೇ 3.28, ಅಪೋಲೊ ಹಾಸ್ಪಿಟಲ್ಸ್ ಶೇ 3.17, ಟೆಕ್ ಮಹೀಂದ್ರ ಶೇ 2.81, ಏಷ್ಯನ್ ಪೇಂಟ್ಸ್ ಶೇ 2.72ರಷ್ಟು ಕುಸಿದಿವೆ.

ಹಿಂಡಾಲ್ಕೋ ಇಂಡಸ್ಟ್ರೀಸ್ ಶೇ 7.23, ಎನ್‌ಟಿಪಿಸಿ ಶೇ 5.81, ಎಚ್‌ಡಿಎಫ್‌ಸಿ ಲೈಫ್ ಶೇ 5.51, ಕೋಲ್ ಇಂಡಿಯಾ ಶೇ 5.4, ರಿಲಯನ್ಸ್ ಇಂಡಸ್ಟ್ರೀಸ್ ಶೇ 4.68, ಅದಾನಿ ಪೋರ್ಟ್ಸ್ ಶೇ 4.57, ಮಾರುತಿ ಸುಜುಕಿ ಶೇ 4.11, ಎಸ್‌ಬಿಐ ಲೈಫ್ ಶೇ 4.11, ಭಾರತ್ ಎಲೆಕ್ಟ್ರಾನಿಕ್ಸ್ 4.04, ಇಂಡಸ್‌ಇಂಡ್ ಬ್ಯಾಂಕ್ ಶೇ 3.76, ಟಾಟಾ ಸ್ಟೀಲ್ ಶೇ 2.13 ಮತ್ತು ಎಸ್‌ಬಿಐ ಶೇ 2.11ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಜೊಮಾಟೊ, ಪೇಟಿಎಂ, ಐಆರ್‌ಎಫ್‌ಸಿ, ಡಿಕ್ಸಾನ್ ಟೆಕ್ನಾಲಜೀಸ್, ಐಡಿಬಿಐ ಬ್ಯಾಂಕ್, ಟಾಟಾ ಟೆಕ್ನಾಲಜೀಸ್, ಕೆಇಐ ಇಂಡಸ್ಟ್ರೀಸ್, ಐಸಿಐಸಿಐ ಪ್ರೂಡೆನ್ಶಿಯಲ್ ಲೈಫ್ ಇನ್ಶೂರೆನ್ಸ್ ಕಂಪನಿ, ಹಿಂದುಸ್ತಾನ್ ಯುನಿಲಿವರ್, ಎಚ್‌ಡಿಎಫ್‌ಸಿ ಬ್ಯಾಂಕ್, ಪಿಡಿಲೈಟ್ ಇಂಡಸ್ಟ್ರೀಸ್, ಪಾಲಿಕ್ಯಾಬ್ ಇಂಡಿಯಾ, ಎಚ್‌ಪಿಸಿಎಲ್, ಬಿಪಿಸಿಎಲ್, ಅಲ್ಟ್ರಾ ಟೆಕ್ ಸಿಮೆಂಟ್, ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಜೆಕೆ ಸಿಮೆಂಟ್ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ಸಕ್ಕರೆ ರಫ್ತಿಗೆ ಅನುಮತಿ ನಿರೀಕ್ಷೆ

ಉತ್ಪಾದನೆ 8 ವರ್ಷದ ಕನಿಷ್ಠ ಮಟ್ಟಕ್ಕೆ ತಲುಪುವ ಸಾಧ್ಯತೆ



ಮುಂಬೈ/ ನವದೆಹಲಿ (ಪಿಟಿಐ): ಪ್ರಸಕ್ತ ಮಾರುಕಟ್ಟೆ ವರ್ಷದಲ್ಲಿ ಕೇಂದ್ರ ಸರ್ಕಾರವು 10 ಲಕ್ಷ ಟನ್ ಸಕ್ಕರೆ ರಫ್ತಿಗೆ ಅನುಮತಿ ನೀಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ಇದರಿಂದ ದಾಸ್ತಾನಿರುವ ಸಕ್ಕರೆ ಮಾರಾಟಕ್ಕೆ ಕಾರ್ಖಾನೆಗಳಿಗೆ ನೆರವಾಗಲಿದೆ. ಜೊತೆಗೆ, ಜಾಗತಿಕ ಮಾರುಕಟ್ಟೆಯಲ್ಲಿ ಸಕ್ಕರೆ ಬೆಲೆಯ ಮೇಲೂ ಪರಿಣಾಮ ಬೀರಬಹುದು. ಶೀಘ್ರವೇ ಸರ್ಕಾರವು ಈ ಕುರಿತು ಆದೇಶ ಹೊರಡಿಸುವ ಸಾಧ್ಯತೆಯಿದೆ ಎಂದು ಹೇಳಿವೆ.

ಈ ಬಾರಿ ದೇಶದ ವಾರ್ಷಿಕ ಬಳಕೆ ಪ್ರಮಾಣಕ್ಕಿಂತಲೂ ಸಕ್ಕರೆ ಉತ್ಪಾದನೆ ಕಡಿಮೆಯಾಗಲಿದ್ದು, ಎಂಟು ವರ್ಷದ ಕನಿಷ್ಠ ಮಟ್ಟಕ್ಕೆ ತಲುಪುವ ಸಾಧ್ಯತೆಯಿದೆ. ಇದರ ಬೆನ್ನಲ್ಲೇ ರಫ್ತಿಗೆ ಅನುಮತಿ ನೀಡಲು ಸರ್ಕಾರ ಮುಂದಾಗಿದೆ ಎಂಬ ಸುದ್ದಿಯು ಕೆಲವು ವಾರಗಳಿಂದ ಹರಿದಾಡುತ್ತಿದೆ. ಇದು ವರ್ತಕರಿಗೆ ಅಚ್ಚರಿ ಕೂಡ ಉಂಟು ಮಾಡಿದೆ ಎಂದು ಹೇಳಿವೆ.

ದೇಶದ ಒಟ್ಟು ಸಕ್ಕರೆ ಉತ್ಪಾದನೆ ಪೈಕಿ ಮಹಾರಾಷ್ಟ್ರ, ಕರ್ನಾಟಕ ಮತ್ತು ಉತ್ತರ ಪ್ರದೇಶದಲ್ಲಿ ಶೇ 80ರಷ್ಟಕ್ಕಿಂತ ಹೆಚ್ಚು ಉತ್ಪಾದನೆಯಾಗುತ್ತದೆ. ಆದರೆ, ಪ್ರಸಕ್ತ ವರ್ಷ ಈ ರಾಜ್ಯಗಳಲ್ಲಿ ಕಬ್ಬಿನ ಇಳುವರಿ ಕಡಿಮೆಯಾಗಿದೆ. ಹಾಗಾಗಿ, ಪ್ರಸಕ್ತ ಮಾರುಕಟ್ಟೆ ವರ್ಷದಲ್ಲಿ ಉತ್ಪಾದನೆಯ ಅಂದಾಜನ್ನು ಕಾರ್ಖಾನೆಗಳು ಪರಿಷ್ಕರಿಸುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ.


ಹಿಂದಿನ ಮಾರುಕಟ್ಟೆ ವರ್ಷಕ್ಕೆ ಹೋಲಿಸಿದರೆ ಈ ಬಾರಿ 27 ದಶಲಕ್ಷ ಟನ್‌ನಷ್ಟು ಸಕ್ಕರೆ ಉತ್ಪಾದನೆ ಕಡಿಮೆಯಾಗುವ ಬಗ್ಗೆ ಅಂದಾಜಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ದೇಶೀಯ ಮಾರುಕಟ್ಟೆಯಲ್ಲಿನ ಬೇಡಿಕೆ ಮತ್ತು ಬೆಲೆ ನಿಯಂತ್ರಿಸುವ ಉದ್ದೇಶದಿಂದ ಸರ್ಕಾರವು 2023–24ರಿಂದ ಸಕ್ಕರೆ ರಫ್ತಿಗೆ ನಿರ್ಬಂಧ ಹೇರಿದೆ. ಭಾರತವು ಪ್ರಮುಖವಾಗಿ ಇಂಡೊನೇಷ್ಯಾ, ಬಾಂಗ್ಲಾದೇಶ ಮತ್ತು ಯುಎಇಗೆ ಸಕ್ಕರೆ ರಫ್ತು ಮಾಡುತ್ತದೆ.

‘ಸ್ಥಳೀಯವಾಗಿ ಸಕ್ಕರೆ ಬೆಲೆ ಕಡಿಮೆ ಇರುವುದರಿಂದ ಕಾರ್ಖಾನೆಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಿವೆ. ರಫ್ತಿಗೆ ಅನುಮತಿ ನೀಡಿದರೆ ಕಾರ್ಖಾನೆಗಳಿಗೆ ಅನುಕೂಲ ಆಗಲಿದೆ’ ಎಂದು ಭಾರತೀಯ ಸಕ್ಕರೆ ಮತ್ತು ಜೈವಿಕ ಇಂಧನ ತಯಾರಕರ ಸಂಘದ (ಐಎಸ್‌ಎಂಎ) ಮಹಾ ನಿರ್ದೇಶಕ ದೀಪಕ್ ಬಲ್ಲಾನಿ ಹೇಳಿದ್ದಾರೆ.

ತೆರಿಗೆ ಭಯೋತ್ಪಾದನೆ, ರೇಡ್ ರಾಜ್ ನಿಲ್ಲಿಸಿ: ಕಾಂಗ್ರೆಸ್

ಪ್ರಜಾವಾಣಿ ವಾರ್ತೆ



ಜೈರಾಮ್ ರಮೇಶ್

ನವದೆಹಲಿ: ‘ಬೆಳವಣಿಗೆಯನ್ನು ಹಿಮ್ಮುಖವಾಗಿಸುವಂಥ ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ನೀತಿಗಳು ಭಾರತದ ಹೂಡಿಕೆದಾರರ ವಿಶ್ವಾಸವನ್ನೇ ಕಳೆದುಬಿಟ್ಟಿವೆ. ‘ರೇಡ್ ರಾಜ್’ (ವಿವಿಧ ತನಿಖಾ ಸಂಸ್ಥೆಗಳಿಂದ ದಾಳಿ ಮಾಡಿಸುವುದು) ಮತ್ತು ತೆರಿಗೆ ಭಯೋತ್ಪಾದನೆಯನ್ನು ತೊಡೆದು ಹಾಕಲು ಮುಂಬರುವ ಬಜೆಟ್‌ನಲ್ಲಿ ಕ್ರಮ ಕೈಗೊಳ್ಳಿ’ ಎಂದು ಕಾಂಗ್ರೆಸ್ ಭಾನುವಾರ ಆಗ್ರಹಿಸಿದೆ.

ಫೆ.1ರಂದು ಕೇಂದ್ರ ಬಜೆಟ್ ಮಂಡನೆ ಆಗಲಿರುವುದರಿಂದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಹೇಳಿಕೆ ಬಿಡುಗಡೆ ಮಾಡಿದರು. ‘ಭಾರತದ ತಯಾರಿಕಾ ವಲಯದಲ್ಲಿ ಉದ್ಯೋಗವನ್ನು ರಕ್ಷಿಸುವ ಮತ್ತು ವೇತನವನ್ನು ಹೆಚ್ಚಿಸುವ ಬಗ್ಗೆ ಸರ್ಕಾರವು ನಿರ್ಧಾರ ಕೈಗೊಳ್ಳಬೇಕು. ಆ ಮೂಲಕ ಜನರ ಖರೀದಿ ಸಾಮರ್ಥ್ಯವನ್ನು ವೃದ್ಧಿಸಬೇಕು. ಆಗ ಹೂಡಿಕೆ ಮಾಡಲು ಜನ ಮುಂದೆ ಬರುತ್ತಾರೆ’ ಎಂದರು.

‘ಕಳೆದ 10 ವರ್ಷಗಳಲ್ಲಿ 17.5 ಲಕ್ಷ ಭಾರತೀಯರು ಬೇರೆ ದೇಶಗಳ ಪೌರತ್ವವನ್ನು ಪಡೆದು ದೇಶ ಬಿಟ್ಟಿದ್ದಾರೆ. 2022 ಮತ್ತು 2025ರ ಮಧ್ಯೆ ಸುಮಾರು 21,300 ಕೋಟ್ಯಧಿಪತಿಗಳು ಭಾರತ ಬಿಟ್ಟಿದ್ದಾರೆ ಎಂದು ಅಂದಾಜಿಸಲಾಗಿದೆ. ಕ್ಲಿಷ್ಟ ಜಿಎಸ್‌ಟಿ, ಚೀನಾದಿಂದ ನಿರಂತರ ಆಮದು ಕಾರಣದಿಂದ ಈ ಬೆಳವಣಿಗೆ ನಡೆದಿದೆ’ ಎಂದು ಅಭಿಪ್ರಾಯಪಟ್ಟರು.

ಪಂಜಾಬ್–ಸಿಂಧ್ ಬ್ಯಾಂಕ್: ₹2 ಸಾವಿರ ಕೋಟಿ ಬಂಡವಾಳ ಸಂಗ್ರಹ ಗುರಿ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಅಂತ್ಯದೊಳಗೆ ಅರ್ಹ ಸಾಂಸ್ಥಿಕ ಹೂಡಿಕೆ (ಕ್ಯೂಐಪಿ) ಮೂಲಕ ₹2,000 ಕೋಟಿ ಬಂಡವಾಳ ಸಂಗ್ರಹಿಸಲಾಗುವುದು ಎಂದು ಸರ್ಕಾರಿ ಸ್ವಾಮ್ಯದ ಪಂಜಾಬ್ ಆ್ಯಂಡ್ ಸಿಂಧ್ ಬ್ಯಾಂಕ್ ತಿಳಿಸಿದೆ.

ಈಗಾಗಲೇ, ಈ ಸಂಬಂಧ ಸಿದ್ಧತೆ ನಡೆದಿದೆ ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಸ್ವರೂಪ್ ಕುಮಾರ್ ಸಹಾ ತಿಳಿಸಿದ್ದಾರೆ.


ಡಿಸೆಂಬರ್ ಅಂತ್ಯಕ್ಕೆ ಕೇಂದ್ರ ಸರ್ಕಾರವು ಬ್ಯಾಂಕ್‌ನಲ್ಲಿ ಶೇ 98.25ರಷ್ಟು ಷೇರುಗಳನ್ನು ಹೊಂದಿದೆ. ಬಂಡವಾಳ ಸಂಗ್ರಹದಿಂದ ಸರ್ಕಾರಿ ಒಡೆತನದ ಷೇರುಗಳ ಪೈಕಿ ಶೇ 3ರಿಂದ ಶೇ 4ರಷ್ಟು ಕಡಿಮೆಯಾಗಲಿದೆ ಎಂದು ತಿಳಿಸಿದ್ದಾರೆ.



ತುಮಕೂರಿನಲ್ಲಿ ಭಾನುವಾರ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಹಮ್ಮಿಕೊಂಡಿದ್ದ 39ನೇ ರಾಜ್ಯ ಪತ್ರಕರ್ತರ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ‘ಪ್ರಜಾವಾಣಿ’ಯ ಅರೆಕಾಲಿಕ ವರದಿಗಾರ ಪ್ರಸನ್ನ ಕುಲಕರ್ಣಿ, ಮಂಡ್ಯ ಜಿಲ್ಲಾ ವರದಿಗಾರ ಸಿದ್ದು ಆರ್‌.ಜಿ.ಹಳ್ಳಿ, ದಾವಣಗೆರೆ ಬ್ಯೂರೊ ಮುಖ್ಯಸ್ಥ ಸಿದ್ದಯ್ಯ ಹಿರೇಮಠ, ಕೋಲಾರ ಜಿಲ್ಲಾ ವರದಿಗಾರ ಕೆ.ಓಂಕಾರ ಮೂರ್ತಿ ಅವರಿಗೆ ಸಂಘದ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು

ಅಂಬಾನಿ ಮುಷ್ಟಿಯಲ್ಲಿ ದೇಶದ ಮಾಧ್ಯಮಗಳು: ಪಿ. ಸಾಯಿನಾಥ್

ಪ್ರಜಾವಾಣಿ ವಾರ್ತೆ



ಪಿ. ಸಾಯಿನಾಥ್

ತುಮಕೂರು: ‘ದೆಹಲಿಯಲ್ಲಿ ರೈತರು ಒಂದು ವರ್ಷಕ್ಕೂ ಹೆಚ್ಚು ಹೋರಾಟ ನಡೆಸಿದರೂ ಮಾಧ್ಯಮಗಳು ಸಮರ್ಪಕವಾಗಿ ಬೆಳಕು ಚೆಲ್ಲುವ ಕೆಲಸ ಮಾಡಲಿಲ್ಲ’ ಎಂದು ಹಿರಿಯ ಪತ್ರಕರ್ತ ಪಿ. ಸಾಯಿನಾಥ್ ಹೇಳಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಹಮ್ಮಿಕೊಂಡಿದ್ದ 39ನೇ ರಾಜ್ಯ ಪತ್ರಕರ್ತರ ಸಮ್ಮೇಳನದ ಸಮಾರೋಪದಲ್ಲಿ ಭಾನುವಾರ ಅವರು ಮಾತನಾಡಿದರು.

ದೆಹಲಿಯಲ್ಲಿ ನಡೆದ ರೈತರ ಹೋರಾಟದಲ್ಲಿ ಹಲವು ರೈತರು ಮೃತಪಟ್ಟರೂ, ಸಾವಿನ ಸಂಖ್ಯೆ ಮುಚ್ಚಿಡಲಾಯಿತು. ಖಚಿತ ಮಾಹಿತಿ ನೀಡುವ ಪ್ರಯತ್ನವನ್ನು ಮಾಧ್ಯಮಗಳು ಮಾಡಲಿಲ್ಲ. ಆದರೆ, ಇದೇ ಸಮಯದಲ್ಲಿ ಅಂಬಾನಿ, ಅದಾನಿ ವಿಜೃಂಭಿಸಿದರು. ಭಾರತದ ಶೇ 60ರಷ್ಟು ಮಾಧ್ಯಮಗಳು ಅಂಬಾನಿ ಕೈಯಲ್ಲಿವೆ. ಅಂಬಾನಿ ದೇಶದ ಅತಿದೊಡ್ಡ ಮಾಧ್ಯಮ ಮಾಲೀಕರಾಗಿದ್ದಾರೆ ಎಂದು ತಿಳಿಸಿದರು.

ಕೋವಿಡ್ ಸಮಯದಲ್ಲಿ ಎಷ್ಟು ಮಂದಿ ಸಾವನ್ನಪ್ಪಿದರು ಎಂದು ಯಾವುದೇ ಪತ್ರಿಕೆ ನಿಖರವಾಗಿ ಬರೆಯಲಿಲ್ಲ. ವಿಶ್ವ ಆರೋಗ್ಯ ಸಂಸ್ಥೆ 4.7 ಮಿಲಿಯನ್ (47 ಲಕ್ಷ) ಭಾರತೀಯರು ಸಾವನ್ನಪ್ಪಿದರು ಎಂದು ಹೇಳಿತು. ಕೇಂದ್ರ ಸರ್ಕಾರ, ಮಾಧ್ಯಮಗಳು 4.86 ಲಕ್ಷ ಜನ ಮೃತಪಟ್ಟರು ಎಂದು ಹೇಳಿದವು. ಸಮರ್ಪಕ ಮಾಹಿತಿ ನೀಡುವ ಕೆಲಸ ಮಾಡಲಿಲ್ಲ ಎಂದು ತರಾಟೆಗೆ ತೆಗೆದುಕೊಂಡರು.

ಮುಂಬೈ: ಆರ್‌ಎಸ್‌ಎಸ್, ಪರಿವಾರ ಸಂಘಟನೆಗಳ ಚಿಂತನಾ ಸಭೆ

ಮುಂಬೈ (ಪಿಟಿಐ): ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಇಲ್ಲಿ ಎರಡು ದಿನ ಬಿಜೆಪಿ ಮತ್ತು ಇತರೆ ಸಹಯೋಗಿ ಸಂಘಟನೆಗಳ ಪದಾಧಿಕಾರಿಗಳ ಸಭೆಯನ್ನು ನಡೆಸಿತು.

ಆರ್‌ಎಸ್‌ಎಸ್ ಜಂಟಿ ಕಾರ್ಯದರ್ಶಿ ಅತುಲ್ ಲಿಮಯೆ ಅಧ್ಯಕ್ಷತೆಯಲ್ಲಿ ನಡೆದ ಸಮಾಲೋಚನಾ ಸಭೆಯಲ್ಲಿ ಬಿಜೆಪಿ ಹೊರತುಪಡಿಸಿ ವಿಶ್ವ ಹಿಂದೂ ಪರಿಷತ್, ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಮತ್ತು ಇತರೆ ಸಂಘಟನೆಗಳ ಪದಾಧಿಕಾರಿಗಳಿದ್ದರು.

ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, ಸಚಿವರಾದ ಚಂದ್ರಕಾಂತ ಪಾಟೀಲ, ಚಂದ್ರಶೇಖರ ಬಾವಂಕುಲೆ ಮತ್ತು ಇತರೆ ಬಿಜೆಪಿ ನಾಯಕರು ಪಾಲ್ಗೊಂಡಿದ್ದರು.

ಬರುವ ದಿನಗಳಲ್ಲಿ ನಡೆಯಲಿರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯ ಕಾರಣದಿಂದಾಗಿ ಈ ಸಭೆಯು ಮಹತ್ವದ್ದಾಗಿದೆ. ರಾಜ್ಯದಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಕೂಟದ ಭಾರಿ ಗೆಲುವಿನ ನಂತರ ನಡೆದ ಪ್ರಥಮ ಸಭೆ ಇದಾಗಿದೆ.

ಒಪಿಎಸ್‌ಗೆ ಹಕ್ಕೊತ್ತಾಯ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಳೆ ಪಿಂಚಣಿ ವ್ಯವಸ್ಥೆ (ಒಪಿಎಸ್) ಜಾರಿಗೆ ಒತ್ತಾಯಿಸಿ ಫೆ.7ರಿಂದ ಅಹೋರಾತ್ರಿ ಧರಣಿ ನಡೆಸುತ್ತೇವೆ’ ಎಂದು ಕರ್ನಾಟಕ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘದ ರಾಜ್ಯಾಧ್ಯಕ್ಷ ಶಾಂತಾರಾಮ ಹೇಳಿದ್ದಾರೆ.

‘ಒಪಿಎಸ್ ಮರುಜಾರಿ ಮಾಡುತ್ತೇವೆ ಎಂದು 2024ರ ಜನವರಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದ್ದರು. ಅಷ್ಟರಲ್ಲಿ ಕೇಂದ್ರ ಸರ್ಕಾರವು ಏಕೀಕೃತ ಪಿಂಚಣಿ ವ್ಯವಸ್ಥೆ (ಎನ್‌ಎಂಒಪಿಎಸ್) ಜಾರಿಗೆ ತಂದಿತು. ನಮ್ಮ ಸಂಘವು ಎನ್‌ಎಂಒಪಿಎಸ್ ಅನ್ನು ತಿರಸ್ಕರಿಸುತ್ತದೆ’ ಎಂದಿದ್ದಾರೆ.

‘ಒಪಿಎಸ್ ಮರುಜಾರಿಯನ್ನು ಈ ಸಾಲಿನ ಬಜೆಟ್‌ನಲ್ಲಿ ಘೋಷಿಸಬೇಕು. ಇಲ್ಲದಿದ್ದಲ್ಲಿ ಒಪಿಎಸ್ ಹಕ್ಕೊತ್ತಾಯ ಧರಣಿ ನಡೆಸುತ್ತೇವೆ’ ಎಂದು ಪ್ರಧಾನ ಕಾರ್ಯದರ್ಶಿ ಸಿದ್ದಪ್ಪ ಸಂಗಣ್ಣನವರ ಹೇಳಿದ್ದಾರೆ.



ಜನ ಜಂಗುಳಿ

ನವದೆಹಲಿಯಲ್ಲಿ ನಡೆಯುತ್ತಿರುವ ಭಾರತ್ ಮೊಬಿಲಿಟಿ ಗ್ಲೋಬಲ್ ಎಕ್ಸ್‌ಪೋಗೆ ಭಾನುವಾರ ಭಾರಿ ಸಂಖ್ಯೆಯಲ್ಲಿ ಜನರು ಭೇಟಿ ನೀಡಿದ್ದರು –ಪಿಟಿಐ ಚಿತ್ರ

ಕೈಗಾರಿಕೆ ಅಭಿವೃದ್ಧಿಗೆ ರಾಜ್ಯದ ಅಸಹಕಾರ ಎಂಬುದರಲ್ಲಿ ಹುರುಳಿಲ್ಲ: ಎಂ.ಬಿ. ಪಾಟೀಲ

‘ಕುಮಾರಸ್ವಾಮಿ ಆರೋಪ ನಿರಾಧಾರ’

ಪ್ರಜಾವಾಣಿ ವಾರ್ತೆ



ಎಂ.ಬಿ. ಪಾಟೀಲ

ಬೆಂಗಳೂರು: ‘ರಾಜ್ಯದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರವು ಸಹಕಾರ ನೀಡುತ್ತಿಲ್ಲ ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರು ಮಾಡಿರುವ ಆರೋಪ ನಿರಾಧಾರವಾದುದು’ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾಗಿ ಅಧಿಕಾರ ಸ್ವೀಕರಿಸಿದ ನಂತರ ಸ್ವತಃ ನಾನು ಮತ್ತು ನಮ್ಮ ಇಲಾಖೆಯ ಅಧಿಕಾರಿಗಳು ಅವರನ್ನು ಭೇಟಿ ಮಾಡಿದ್ದೇವೆ. ರಾಜ್ಯದಲ್ಲಿ ಸೆಮಿಕಂಡಕ್ಟರ್ ಸೇರಿ ಹಲವು ಕೈಗಾರಿಕಾ ವಲಯಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಅವರಿಗೆ ಬೇಡಿಕೆ ಸಲ್ಲಿಸಿದ್ದೇನೆ’ ಎಂದರು.

‘ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮತ್ತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನೂ ಭೇಟಿ ಮಾಡಿ, ಬೇಡಿಕೆ ಸಲ್ಲಿಸಿದ್ದೇವೆ. ಆದರೆ, ಈಗ ಕುಮಾರಸ್ವಾಮಿ ಅವರು ಈ ರೀತಿ ಹೇಳುವುದು ಸರಿಯಲ್ಲ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ನಾವು ಅವರಿಗೆ ಏನೆಲ್ಲಾ ಬೇಡಿಕೆ ಸಲ್ಲಿಸಿದ್ದೆವು ಎಂಬ ದಾಖಲೆ ನನ್ನಲ್ಲಿ, ಇಲಾಖೆ ಅಧಿಕಾರಿಗಳ ಬಳಿ ಇದೆ. ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಅವರನ್ನೆಲ್ಲಾ ಆಹ್ವಾನಿಸಲು ದೆಹಲಿಗೆ ಹೋಗಲಿದ್ದೇನೆ. ಆಗ ಕುಮಾರಸ್ವಾಮಿ ಅವರಿಗೆ ಆ ಎಲ್ಲಾ ದಾಖಲೆಗಳ ಪ್ರತಿಗಳನ್ನು ನೀಡುತ್ತೇನೆ’ ಎಂದರು.

‘ಈ ವಿಚಾರದಲ್ಲಿ ಪ್ರತಿಷ್ಠೆ ಅಡ್ಡಬರಬಾರದು. ಕೈಗಾರಿಕಾ ಸಚಿವನಾಗಿ ನಾನು ಹಲವು ಬಾರಿ ಅವರನ್ನು ಭೇಟಿ ಆಗಿದ್ದೇನೆ. ಅವರು ಕೇಂದ್ರ ಸಚಿವರು. ಅವರೇ ಒಂದು ಹೆಜ್ಜೆ ಮುಂದೆ ಬಂದು, ಸಿ.ಎಂ ಅವರನ್ನು ಭೇಟಿ ಮಾಡಿ ಚರ್ಚಿಸಲಿ. ರಾಜ್ಯಕ್ಕೆ ಕೈಗಾರಿಕೆಗಳನ್ನು ತಂದರೆ ಅವರಿಗೇ ಹೆಸರು ಬರಲಿದೆ’ ಎಂದರು.

ವಿಮಾನ ನಿಲ್ದಾಣಕ್ಕೆ ಜಾಗ ಶೀಘ್ರವೇ ಶಿಫಾರಸು: ‘ಬೆಂಗಳೂರಿಗೆ ಎರಡನೇ ವಿಮಾನ ನಿಲ್ದಾಣ ನಿರ್ಮಾಣ ಸಂಬಂಧ ಸ್ಥಳಗಳ ಆಯ್ಕೆ ನಡೆದಿದೆ. ಒಂದೆರಡು ದಿನಗಳಲ್ಲಿ ಮುಖ್ಯಮಂತ್ರಿ ಜತೆ ಚರ್ಚಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಕಳುಹಿಸುತ್ತೇವೆ’ ಎಂದು ತಿಳಿಸಿದರು.

‘ಶಿಸ್ತು ಪಾಲಿಸಿ ಎನ್ನುವುದರಲ್ಲಿ ತಪ್ಪಿಲ್ಲ’

‘ಪಕ್ಷದಲ್ಲಿ ಶಿಸ್ತು ಪಾಲಿಸಬೇಕು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಎಚ್ಚರಿಕೆ ನೀಡಿದ್ದಾರೆ. ಯಾರಿಗಾದರೂ ಸಮಸ್ಯೆ ಇದ್ದರೆ, ಪಕ್ಷದೊಳಗೇ ಅದನ್ನು ಬಗೆಹರಿಸಿಕೊಳ್ಳಬೇಕು ಎಂದು ತಿಳಿಸಿದ್ದಾರೆ. ಇದರಲ್ಲಿ ತಪ್ಪೇನಿಲ್ಲ’ ಎಂದು ಎಂ.ಬಿ. ಪಾಟೀಲ ಅವರು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

‘ಕಾಂಗ್ರೆಸ್‌ನಲ್ಲಿ 139 ಶಾಸಕರಿದ್ದಾರೆ. ನಮ್ಮಲ್ಲಿ ಒಗ್ಗಟ್ಟಿದೆ. ನಮ್ಮಲ್ಲಿ ಹೈಕಮಾಂಡ್ ಎಲ್ಲವನ್ನೂ ತೀರ್ಮಾನಿಸುತ್ತದೆ. ಹೀಗಿರುವಾಗ ಎಂ.ಬಿ. ಪಾಟೀಲ, ಪರಮೇಶ್ವರ ಮತ್ತು ಸತೀಶ ಜಾರಕಿಹೊಳಿ ಅವರದೇನೂ ನಡೆಯುವುದಿಲ್ಲ’ ಎಂದರು.

ಗಾಜಾ ಪಟ್ಟಿ: ಕದನ ವಿರಾಮ ಜಾರಿ ಬಳಿಕ ಮನೆಗಳತ್ತ ಪ್ಯಾಲೆಸ್ಟೀನಿಯರು • ಶಸ್ತ್ರಾಸ್ತ್ರಗಳ ನಿರಂತರ ಪೆಟ್ಟಿನಿಂದ ಬದಲಾದ ನಗರಗಳ ಚಹರೆ

ಅವಶೇಷಗಳಡಿ ಅಳಿದುಳಿದ ಬದುಕಿನ ಹುಡುಕಾಟ...

ಡೇರ್ ಅಲ್ ಬಲಾಹ್ (ಗಾಜಾ ಪಟ್ಟಿ) (ಎಪಿ, ರಾಯಿಟರ್ಸ್, ಎಎಫ್‌ಪಿ): ದುಗುಡ, ಆತಂಕ, ಮುಂದೇನು ಎಂಬ ಪ್ರಶ್ನೆಗಳೇ ಕಾಡುತ್ತಿದ್ದ ಗಾಜಾಪಟ್ಟಿಯ ಅಸಂಖ್ಯ ನಿವಾಸಿಗಳ ಮೊಗದಲ್ಲೀಗ ಸಮಾಧಾನದ ನಗು, ನೆಮ್ಮದಿಯ ನಿಟ್ಟುಸಿರು. ಗಾಜಾಪಟ್ಟಿಯ ಮೇಲೆ ಸತತ 15 ತಿಂಗಳು ಬಿದ್ದ ಪೆಟ್ಟುಗಳು ಈ ನಗರಗಳ ಚಹರೆ ಬದಲಿಸಿವೆ.

ಯುದ್ಧದ ಸದ್ದು ಶುರುವಾದ ನಂತರ 15 ತಿಂಗಳ ಹಿಂದೆ ಮನೆಗಳನ್ನೇ ಬಿಟ್ಟು ಸುರಕ್ಷಿತ ತಾಣಗಳತ್ತ ವಲಸೆ ಹೋಗಿದ್ದ ಅಷ್ಟೂ ಜನರು ಭಾನುವಾರ ಮರಳಿ ಮನೆಗಳತ್ತ ಹೆಜ್ಜೆ ಹಾಕಿದರು. ಅವರದೀಗ ಅವಶೇಷಗಳಡಿ ಅಳಿದುಳಿದ ಬದುಕು ಹುಡುಕುವ ಕಾಯಕ ಮತ್ತು ಮತ್ತೆ ಬದುಕು ಕಟ್ಟಿಕೊಳ್ಳುವ ತವಕ.

ಇಸ್ರೇಲ್ ಸೇನೆ ಮತ್ತು ಹಮಾಸ್ ಬಂಡುಕೋರರ ನಡುವೆ ನಿರಂತರ ಮಾತುಕತೆಯ ನಂತರ ಅಮೆರಿಕ, ಈಜಿಪ್ಟ್, ಕತಾರ್‌ನ ಮಧ್ಯಸ್ಥಿಕೆಯಲ್ಲಿ ಮೂಡಿದ್ದ ಕದನವಿರಾಮ ಒಪ್ಪಂದದ ಅನುಷ್ಠಾನ ನಿಗದಿತ ಅವಧಿಗಿಂತಲೂ 3 ಗಂಟೆ ತಡವಾಗಿ ಆರಂಭವಾಯಿತು.

ಸ್ಥಳೀಯ ಕಾಲಮಾನ ಬೆಳಿಗ್ಗೆ 11.15 ಗಂಟೆಗೆ ಕದನವಿರಾಮ ಜಾರಿ ಆರಂಭವಾಯಿತು. ಯುದ್ಧ, ಅದರ ಪರಿಣಾಮಗಳಿಗೆ ಸಾಕ್ಷಿಯಾಗಿದ್ದ ನೆಲದಲ್ಲಿ ಭಾನುವಾರ ಬೆಳಿಗ್ಗೆ ಸಂಭ್ರಮ ಮನೆಮಾಡಿತ್ತು. ಕದನ ವಿರಾಮದ ಮಾಹಿತಿ ಇದ್ದ ನಿವಾಸಿಗಳು ಗಾಜಾಪಟ್ಟಿಯ ವಿವಿಧ ನಗರಗಳತ್ತ ಮರಳಿ ಬರುತ್ತಿದ್ದರು.

ಇಸ್ರೇಲ್ ಮತ್ತು ಹಮಾಸ್ ಬಂಡುಕೋರರ ನಡುವೆ ಸಂಘರ್ಷ ಕೊನೆಗಾಣಿಸುವ ನಿಟ್ಟಿನಲ್ಲಿ ಇದು ಮೊದಲ ಹೆಜ್ಜೆಯಾಗಿದೆ. ಒಪ್ಪಂದದಂತೆ ಹಮಾಸ್ ಬಂಡುಕೋರರು ತಾವು ಬಿಡುಗಡೆ ಮಾಡಬೇಕಿದ್ದ ಮೂವರು ಒತ್ತೆಯಾಳುಗಳ ಹೆಸರು ಪ್ರಕಟಿಸಲು ತಡಮಾಡಿದ್ದು, ವಿಳಂಬಕ್ಕೆ ಕಾರಣವಾಯಿತು.

ಕದನ ವಿರಾಮವು ಒಟ್ಟು 42 ದಿನ ಇರಲಿದೆ. ಒಪ್ಪಂದದಂತೆ, ಹಮಾಸ್ ಬಂಡುಕೋರರು ಹಂತ ಹಂತವಾಗಿ 33 ಒತ್ತೆಯಾಳುಗಳನ್ನು ಹಾಗೂ ಇಸ್ರೇಲ್ ಸೇನೆಯು ಸುಮಾರು 700 ಜನ ಕೈದಿಗಳನ್ನು ಬಿಡುಗಡೆ ಮಾಡಬೇಕು ಎಂಬುದು ಒಪ್ಪಂದದ ಭಾಗವಾಗಿದೆ.

ಅಲ್ಲದೆ, ಇಸ್ರೇಲ್ ಸೇನೆ ಗಾಜಾದಲ್ಲಿನ ಬಫರ್ ವಲಯ ದಿಂದ ಹಿಂದೆ ಸರಿಯಬೇಕು. ನಿರ್ವಸಿತರಾಗಿರುವ ಅನೇಕ ಪ್ಯಾಲೆಸ್ಟೀನಿಯರು ಮನೆಗೆ ಮರಳಲು ಅನುವು ಮಾಡಿಕೊಡಬೇಕು ಎಂಬುದೂ ಒಪ್ಪಂದದಲ್ಲಿ ಸೇರಿದೆ. ಕದನ ವಿರಾಮ ಅವಧಿಯಲ್ಲಿ ಯುದ್ಧ ಬಾಧಿತ ನಗರಗಳ ನಿವಾಸಿಗಳಿಗೆ ಅಗತ್ಯ ನೆರವು ಮುಖ್ಯವಾಗಿ ಆಹಾರ, ಆರೋಗ್ಯ ಚಿಕಿತ್ಸೆಗೆ ಸಂಬಂಧಿಸಿದ ನೆರವು ಒದಗಿಸಲು ನೆರವಾಗಲಿದೆ ಎಂದು ಆಶಿಸಲಾಗಿದೆ. ನಾಗರಿಕರು ಪ್ಯಾಲೆಸ್ಟೀನ್ ಧ್ವಜ ಹಿಡಿದು ಸಂಭ್ರಮಿಸಿದರು. ಸಂಭ್ರದ ನಡುವೆ ಅಲ್ಲಲ್ಲಿ ಮುಸುಕುಧಾರಿ ಬಂಡುಕೋರರು ಕಾಣಿಸಿಕೊಂಡರು. ಪ್ಯಾಲೆಸ್ಟೀನ್ ಮತ್ತು ಬಂಡುಕೋರರ ಪರವಾಗಿಯೂ ಘೋಷಣೆಗಳು ಕೇಳಿಬಂದವು.

ಸಾವಿರಾರು ಪ್ಯಾಲೆಸ್ಟೀನಿಯರು ಲಾರಿಗಳಲ್ಲಿ, ಕತ್ತೆ ಗಾಡಿಗಳಲ್ಲಿ ವಿವಿಧ ಪರಿಕರಗಳೊಂದಿಗೆ ಸಾಗುತ್ತಿದ್ದುದು ಗಡಿ ಪ್ರದೇಶಗಳಲ್ಲಿ ಸಾಮಾನ್ಯ ದೃಶ್ಯವಾಗಿತ್ತು. ಗಾಜಾ ಪಟ್ಟಿಯ ಉತ್ತರ ಭಾಗದಲ್ಲಿ ಮಕ್ಕಳು, ಮಹಿಳೆಯರು ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿ ಜನರು ನಡೆದುಕೊಂಡೇ ತೆರಳುತ್ತಿದ್ದರು.

'ಗಡಿಯಲ್ಲಿ ಗುಂಡುಗಳ ಮೊರೆತ ತಗ್ಗಿಲ್ಲ. ಅದರ ನಡುವೆಯೂ ಜನರು ಮೂಲ ಮನೆಗಳತ್ತ ಬರುತ್ತಿದ್ದಾರೆ. ಅವರಿಗೆ ಕಾಯುವ ಮನಃಸ್ಥಿತಿಯಿಲ್ಲ. ಈ ಹುಚ್ಚಾಟ ಸಾಕು ಎನಿಸಿದೆ' ಎಂದು ಸ್ಥಳೀಯ ನಿವಾಸಿ ಅಹ್ಮದ್ ಮ್ಯಾಟರ್ ಪ್ರತಿಕ್ರಿಯಿಸಿದರು. ಇನ್ನೊಂದೆಡೆ, ಕದನ ವಿರಾಮ ನಂತರದ ಬೆಳವಣಿಗೆಗಿಂತಲೂ ಒತ್ತೆಯಾಳುಗಳು ಸುರಕ್ಷಿತ ವಾಗಿ ವಾಪಸಾಗುವತ್ತ ಇಸ್ರೇಲಿಗರ ಗಮನ ಹೆಚ್ಚು ಕೇಂದ್ರೀಕೃತವಾಗಿದೆ.


ಕದನ ವಿರಾಮ ಒಪ್ಪಂದ ಜಾರಿ ಹಿಂದೆಯೇ ಜಬಾಲಿಯಾದ ಸಫ್ತಾವಿ ವಲಯದಿಂದ ನೂರಾರು ಪ್ಯಾಲೆಸ್ಟೀನಿಯರು ಗಾಜಾ ನಗರ ಪ್ರವೇಶಿಸಿದರು —ಎಎಫ್‌ಪಿ ಚಿತ್ರ

ಒತ್ತೆಯಾಳುಗಳ ಬಿಡುಗಡೆ, ಹಮಾಸ್ ಸರ್ಕಾರ ಮತ್ತು ಅದರ ಸೇನಾ ಸಾಮರ್ಥ್ಯವನ್ನು ಅಸ್ಥಿರಗೊಳಿಸುವ ಗುರಿ ಸಾಧನೆಗೆ ಇಸ್ರೇಲ್ ಬದ್ಧವಾಗಿದೆ. ಹಮಾಸ್ ಅಧಿಕಾರದಲ್ಲಿ ಇದ್ದರೆ ಅಲ್ಲಿ ಶಾಂತಿ ಉಳಿಯುವುದಿಲ್ಲ.
ಗಿಡಿಯೋನ್ ಸಾರ್ ವಿದೇಶಾಂಗ ಸಚಿವ, ಇಸ್ರೇಲ್

ಮೂವರು ಒತ್ತೆಯಾಳು ಬಿಡುಗಡೆ

ಜೆರುಸಲೇಂ (ಎಎಫ್‌ಪಿ): ಹಮಾಸ್ ಬಂಡುಕೋರರು ತಾವು ಮೊದಲಿಗೆ ಬಿಡುಗಡೆ ಮಾಡಲಿರುವ ಮೂವರು ಮಹಿಳಾ ಒತ್ತೆಯಾಳುಗಳ ಹೆಸರನ್ನು ಮೂರು ಗಂಟೆ ತಡವಾಗಿ ಬಹಿರಂಗಪಡಿಸಿದರು. ಅವರೆಂದರೆ, ಎಮಿಲಿ ಡಮರಿ, ರೊಮಿ ಗೊನೆನ್ ಮತ್ತು ಡೊರೊನ್ ಸ್ಟೀನ್‌ಬ್ರೆಚರ್. ಈ ಪೈಕಿ ಎಮಿಲಿ ಮತ್ತು ರೊಮಿ ಅವರನ್ನು ಕಿಬುಟ್ಜ್ ಕರ್ ಅಜಾದಿಂದ ಮತ್ತು ಗೊನೆನ್ ಅವರನ್ನು ನೊವಾ ಉತ್ಸವದ ಸ್ಥಳದಿಂದ ಅಪಹರಿಸಲಾಗಿತ್ತು.

ಕದನ ವಿರಾಮದ ನಂತರ...

- ಇಸ್ರೇಲ್ ನಿಯಂತ್ರಣದ ಕೆರೆಮ್ ಶಾಲೊಂ ಕ್ರಾಸಿಂಗ್‌ನಿಂದ ಇಂಧನ, ಅಗತ್ಯ ವಸ್ತುಗಳ ಹೊತ್ತು ಗಾಜಾ ಪ್ರವೇಶಿಸಿದ 200 ಲಾರಿಗಳು
- ಕದನ ವಿರಾಮ ವಿರೋಧಿಸಿ ಪಕ್ಷದ ಸಚಿವರು ರಾಜೀನಾಮೆ ಸಲ್ಲಿಸಿದ್ದಾರೆ ಎಂದು ಇಸ್ರೇಲ್‌ನ ರಾಷ್ಟ್ರೀಯ ಭದ್ರತಾ ಸಚಿವ ಇಟಮರ್ ಬೆನ್ ವಿರ್ ಹೇಳಿಕೆ
- ಒಜ್ಮಾ ಯೆಉಡಿಟ್ ಪಕ್ಷದ ಬೆಂಬಲ ಹಿಂತೆಗೆತದಿಂದ ಬೆಂಜಮಿನ್ ನೇತನ್ಯಾಹು ನೇತೃತ್ವದ ಮೈತ್ರಿ ಸರ್ಕಾರ ತುಸು ದುರ್ಬಲ ಗೊಳ್ಳಲಿದೆ. ಆದರೆ, ಕದನವಿರಾಮ ಜಾರಿ ಪ್ರಕ್ರಿಯೆಗೆ ಯಾವುದೇ ತೊಡಕಾಗದು
- ಹಮಾಸ್ ನೇತೃತ್ವದ ಸರ್ಕಾರದ ನಾಗರಿಕ ರಕ್ಷಣಾ ಪಡೆಯಿಂದ ಗಾಜಾದಲ್ಲಿ ಗಸ್ತು. ಸಂಭ್ರಮಾಚರಣೆ ವೇಳೆ ಕಂಡುಬಂದ, ಹಮಾಸ್ ನಂತರದ ಅತಿದೊಡ್ಡ ಬಂಡುಕೋರರ ಸಂಘಟನೆಯಾದ ಇಸ್ಲಾಮಿಕ್ ಜಿಹಾದ್‌ನ ಧ್ವಜಗಳು
- ಯುದ್ಧದ ಈ 15 ತಿಂಗಳಲ್ಲಿ ಗಾಜಾದ ಶೇ 90ರಷ್ಟು ಜನರು ಅತಂತ್ರರಾಗಿದ್ದರು. ಆರೋಗ್ಯ ವ್ಯವಸ್ಥೆ, ರಸ್ತೆ ಸಂಪರ್ಕ, ಇತರೆ ಮೂಲಸೌಕರ್ಯಗಳು ತೀವ್ರ ಹಾನಿಗೊಂಡಿವೆ
- ಕದನಕ್ಕೆ ಪೂರ್ಣವಿರಾಮ ಬಿದ್ದ ನಂತರ ಇವುಗಳ ಮರುನಿರ್ಮಾಣಕ್ಕೆ ಹಲವು ವರ್ಷಗಳೇ ಬೇಕಾಗಲಿದೆ ಎಂಬುದು ವಿಶ್ವಸಂಸ್ಥೆಯ ಅಂದಾಜು

ಐಐಟಿ-ಮದ್ರಾಸ್‌ನ ಕಾಮಕೋಟಿ ಹೇಳಿಕೆ

ಸನ್ಯಾಸಿಯೊಬ್ಬರಿಗೆ ಜ್ವರ ಬಂದಿದ್ದಾಗ ಅವರು ಗೋಮೂತ್ರ ಕುಡಿದು ಗುಣಮುಖರಾಗಿದ್ದರು ಎಂಬ ಹೇಳಿಕೆ ಇರುವ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ವ್ಯಾಪಕವಾಗಿ ಹರಿದಾಡಿದೆ

ಗೋಮೂತ್ರದಲ್ಲಿ ಔಷಧ ಗುಣ: ಐಐಟಿ ನಿರ್ದೇಶಕ

ಚೆನ್ನೈ (ಪಿಟಿಐ): ಐಐಟಿ-ಮದ್ರಾಸ್ ನಿರ್ದೇಶಕ ವಿ. ಕಾಮಕೋಟಿ ಅವರು ಗೋಮೂತ್ರದ ಔಷಧೀಯ ಮಹತ್ವವನ್ನು ಹೊಗಳುತ್ತಿರುವುದು ಎನ್ನಲಾದ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳ ಮೂಲಕ ವ್ಯಾಪಕವಾಗಿ ಹಂಚಿಕೊಳ್ಳಲಾಗಿದೆ.

ದೇಶಿ ಗೋತಳಿಗಳ ಸಂರಕ್ಷಣೆ ಮತ್ತು ಸಾವಯವ ಕೃಷಿಯ ಮಹತ್ವದ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಅವರು ಗೋಮೂತ್ರದ ಕುರಿತು ಉಲ್ಲೇಖಿಸಿದ್ದಾರೆ ಎನ್ನಲಾಗಿದೆ.



ಜನವರಿ 15ರಂದು ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಸನ್ಯಾಸಿಯೊಬ್ಬರ ಜೀವನದಲ್ಲಿ ನಡೆದ ಘಟನೆಯನ್ನು ವಿವರಿಸಿದ್ದಾರೆ. ಸನ್ಯಾಸಿಗೆ ಒಮ್ಮೆ ಜ್ವರ ಬಂದಿದ್ದಾಗ ಅವರು ಗೋಮೂತ್ರ ಕುಡಿದರು, ಜ್ವರ ಗುಣವಾಯಿತು ಎಂದು ಕಾಮಕೋಟಿ ಅವರು ಹೇಳಿದ್ದಾರೆ.

ಗೋಮೂತ್ರವು ಬ್ಯಾಕ್ಟೀರಿಯಾ ಮತ್ತು ಶಿಲೀಂಧ್ರ ವಿರೋಧಿ ಗುಣಗಳನ್ನು ಹೊಂದಿದೆ ಎಂದು ಅವರು ಹೇಳಿದ್ದಾರೆ. ಗೋಮೂತ್ರದ ಔಷಧೀಯ ಮಹತ್ವವನ್ನು ಪರಿಗಣಿಸಬೇಕು ಎಂದಿದ್ದಾರೆ.

ಕಾಮಕೋಟಿ ಅವರ ಮಾತುಗಳಿಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿರುವ ಡಿಎಂಕೆ ನಾಯಕ ಟಿ.ಕೆ.ಎಸ್. ಇಳಂಗೋವನ್, 'ದೇಶದಲ್ಲಿ ಶಿಕ್ಷಣವನ್ನು ಹಾಳುಮಾಡುವುದು ಕೇಂದ್ರದ ಉದ್ದೇಶ' ಎಂದು ಹೇಳಿದ್ದಾರೆ.

'ತಮ್ಮ ಮಾತುಗಳಿಗೆ ಕಾಮಕೋಟಿ ಅವರು ಆಧಾರ ಒದಗಿಸಬೇಕು. ಅದು ಸಾಧ್ಯವಾಗದಿದ್ದರೆ ಅವರು ಕ್ಷಮೆ ಯಾಚಿಸಬೇಕು. ಕ್ಷಮೆ ಕೇಳದೆ ಇದ್ದರೆ ನಾವು ಅವರ ವಿರುದ್ಧ ಪ್ರತಿಭಟನೆ ನಡೆಸುತ್ತೇವೆ' ಎಂದು ತಂಥೈ ಪೆರಿಯಾರ್ ದ್ರಾವಿಡರ್ ಕಳಗಂ ನಾಯಕ ಕೆ. ರಾಮಕೃಷ್ಣನ್ ಅವರು ಒತ್ತಾಯಿಸಿದ್ದಾರೆ.

ನನ್ನ ಜೀವ ಈ ದೇಶಕ್ಕೆ ಮುಡಿಪು: ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್

'ದೆಹಲಿ ಎಂದೂ ಇಂಥ ಪ್ರಚಾರ ಕಂಡಿಲ್ಲ'

ನವದೆಹಲಿ (ಪಿಟಿಐ): ನನ್ನ ಜೀವವು ಈ ದೇಶಕ್ಕೆ ಮುಡಿಪಾಗಿದೆ. ಆದರೆ ಮಾಜಿ ಮುಖ್ಯಮಂತ್ರಿಯೊಬ್ಬರ ಮೇಲೆ 'ಕೊಲೆ ಯತ್ನ' ನಡೆದಿದೆ. ದೆಹಲಿಯು ಎಂದೂ ಇಂಥ ಚುನಾವಣಾ ಪ್ರಚಾರಕ್ಕೆ ಸಾಕ್ಷಿಯಾಗಿರಲಿಲ್ಲ ಎಂದು ಎಎಪಿ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ಆರೋಪಿಸಿದರು.


ಅರವಿಂದ ಕೇಜ್ರಿವಾಲ್

ಬಿಜೆಪಿಯು ಹೀನಾಯವಾಗಿ ಸೋಲಲಿದೆ. ಹೀಗಾಗಿ ಬಿಜೆಪಿಯವರು ಈ ರೀತಿಯ ಪ್ರಚಾರದ ಹಾದಿ ಹಿಡಿದಿದ್ದಾರೆ ಎಂದು ಹೇಳಿದರು.

ಚುನಾವಣಾ ಪ್ರಚಾರದ ಸಂದರ್ಭದಲ್ಲಿ ತಮ್ಮ ವಾಹನದ ಮೇಲೆ ದಾಳಿ ನಡೆದ ವಿಚಾರವಾಗಿ ಈ ಹೇಳಿಕೆ ನೀಡಿದರು.

ಜಂಟಿ ವಸತಿ ಯೋಜನೆ ಶಿಫಾರಸು: 'ಸರ್ಕಾರಿ ಉದ್ಯೋಗಿಗಳಿಗಾಗಿ, ಅದರಲ್ಲೂ ವಿಶೇಷವಾಗಿ ಸ್ವಚ್ಛತಾ ಕಾರ್ಮಿಕರಿಗಾಗಿ ವಸತಿ ಯೋಜನೆ ಜಾರಿಗೊಳಿಸಲಿಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದೇನೆ. ಕೇಂದ್ರ ಸರ್ಕಾರವು ನಿವೇಶನ ಒದಗಿಸಿದರೆ ಸರ್ಕಾರವು ಮನೆ ನಿರ್ಮಿಸಿಕೊಡಲಿದೆ ಎಂದು ಶಿಫಾರಸು ಮಾಡಲಾಗಿದೆ' ಎಂದು ತಿಳಿಸಿದರು.

ಎಎಪಿ ಸುಳ್ಳು ಕತೆ ಹೆಣೆಯುತ್ತಿದೆ: ಪರ್ವೇಶ್



ಕೇಜ್ರಿವಾಲ್ ಅವರ ಮೇಲೆ ದಾಳಿ ನಡೆದಿದೆ ಎಂದು ಎಎಪಿಯು ಸುಳ್ಳು ಕತೆ ಹೆಣೆಯುತ್ತಿದೆ ಎಂದು ನವದೆಹಲಿ ಬಿಜೆಪಿ ಅಭ್ಯರ್ಥಿ ಪರ್ವೇಶ್ ವರ್ಮಾ ಆರೋಪಿಸಿದರು.

ಪರ್ವೇಶ್ ವರ್ಮಾ ಅವರ ಗೂಂಡಾಗಳು ಕೇಜ್ರಿವಾಲ್ ಅವರ ಕಾರಿನ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ ಎಂದು ಎಎಪಿ ನಾಯಕರು ಆರೋಪಿಸಿದ್ದಾರೆ.

ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಪರ್ವೇಶ್ ವರ್ಮಾ ಅವರು, 'ಕೇಜ್ರಿವಾಲ್ ಅವರು ಕುಳಿತಿದ್ದ ಕಾರು, ಮೂವರು ಸ್ಥಳೀಯ ಯುವಕರಿಗೆ ಡಿಕ್ಕಿ ಹೊಡೆದಿತ್ತು. ಆದರೆ ಕೇಜ್ರಿವಾಲ್ ಅವರ ಮೇಲೆ ದಾಳಿ ನಡೆದಿದೆ ಎಂದು ಸುಳ್ಳು ಕತೆ ಹೆಣೆಯಲಾಗುತ್ತಿದೆ' ಎಂದರು. ಕೇಜ್ರಿವಾಲ್ ಅವರು ಕ್ಷೇತ್ರದ ಜನರನ್ನು ಗೂಂಡಾಗಳು ಎಂದು ಕರೆಯುತ್ತಾರೆ ಎಂದು ತಿರುಗೇಟು ನೀಡಿದರು. ಇದೇ ವೇಳೆ, ಕೇಜ್ರಿವಾಲ್ ಅವರನ್ನು 20,000 ಮತಗಳ ಅಂತರದಲ್ಲಿ ಸೋಲಿಸುತ್ತೇವೆ ಎಂದು ಬರೆದು ಕೊಡುತ್ತೇನೆ ಎಂದು ಹೇಳಿದರು.

ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ಮತ್ತೆ ಅಡ್ಡಿ

ಕೇಜ್ರಿವಾಲ್, ಮನೀಶ್ ಸಿಸೋಡಿಯಾ ಸೇರಿದಂತೆ ಆಮ್ ಆದ್ಮಿ ಪಕ್ಷದ ನಾಯಕರನ್ನು ಬಂಧಿಸಿದ ಕುರಿತು ನಿರ್ಮಿಸಿರುವ 'ಅನ್‌ಬ್ರೇಕಬಲ್' ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲು ದೆಹಲಿ ಪೊಲೀಸರು ಭಾನುವಾರ ಮತ್ತೆ ಅಡ್ಡಿ ಮಾಡಿದರು ಎಂದು ಎಎಪಿ ಆರೋಪಿಸಿದೆ.

ಆರೋಪಕ್ಕೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ನೀತಿ ಸಂಹಿತೆ ಜಾರಿಯಲ್ಲಿರುವ ಕಾರಣ ಸಾಕ್ಷ್ಯಚಿತ್ರ ಪ್ರದರ್ಶಕ್ಕೆ ಅನುಮತಿ ಪಡೆಯಬೇಕಾಗುತ್ತದೆ ಎಂದು ಶನಿವಾರ ಹೇಳಿದ್ದರು.

ಎಎಪಿ ಸಂಸದ ಸಂಜಯ್ ಸಿಂಗ್ ಅವರು, 'ಯಾವ ನಿಯಮದ ಅಡಿಯಲ್ಲಿ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ಅನುಮತಿ ನೀಡುತ್ತಿಲ್ಲ ಎಂದು ಚುನಾವಣಾ ಆಯೋಗವನ್ನು ಕೇಳುತ್ತೇನೆ. ಸಾಕ್ಷ್ಯಚಿತ್ರದಲ್ಲಿ ಸಾರ್ವಜನಿಕ ಸಭೆ, ಚುನಾವಣಾ ಪ್ರಚಾರ ಅಥವಾ ಮತ ಹಾಕಲು ಮನವಿ ಮಾಡಿರುವುದು–ಈ ಯಾವುದೇ ಅಂಶಗಳಿಲ್ಲ. ನಾನೊಬ್ಬನೇ ಪತ್ರಿಕಾಗೋಷ್ಠಿ ನಡೆಸಿ ಸಾಕ್ಷ್ಯಚಿತ್ರ ಪ್ರದರ್ಶಿಸಬೇಕಿತ್ತು. ಆದರೆ ಪೊಲೀಸರು ಅನುಮತಿ ನಿರಾಕರಿಸಿದರು' ಎಂದು ಹೇಳಿದರು.

ಪ್ರಜಾ ಮತ
ಜನತಂತ್ರದ ಹಬ್ಬ

ಕೇಜ್ರಿವಾಲ್ ಅವರ ಹತ್ಯೆಗೆ ಬಿಜೆಪಿ ಪಿತೂರಿ ನಡೆಸುತ್ತಿದೆ. ದಾಳಿಯಲ್ಲಿ ಭಾಗಿಯಾದ ಒಬ್ಬ ವ್ಯಕ್ತಿ ಪರ್ವೇಶ್ ವರ್ಮಾ ಅವರೊಂದಿಗೆ ಹಲವು ಬಾರಿ ಕಾಣಿಸಿಕೊಂಡಿದ್ದ
ಆತಿಶಿ ದೆಹಲಿ ಮುಖ್ಯಮಂತ್ರಿ

'ಪ್ರಚಾರದಲ್ಲಿ ಖರ್ಗೆ, ರಾಹುಲ್, ಪ್ರಿಯಾಂಕಾ ಭಾಗಿ'

ನವದೆಹಲಿ (ಪಿಟಿಐ): ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಸೇರಿದಂತೆ ಪಕ್ಷದ ನಾಯಕರು ದೆಹಲಿ ಚುನಾವಣಾ ಪ್ರಚಾರದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲಿದ್ದಾರೆ ಎಂದು ದೆಹಲಿ ಕಾಂಗ್ರೆಸ್ ಘಟಕದ ಮುಖ್ಯಸ್ಥ ದೇವೇಂದ್ರ ಯಾದವ್ ಭಾನುವಾರ ತಿಳಿಸಿದರು.

ಪಿಟಿಐ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಅವರು, ಫೆ.5ರ ಚುನಾವಣೆ ಅಂಗವಾಗಿ ಪಕ್ಷವು ಘೋಷಿಸಿದ 'ಗ್ಯಾರಂಟಿ'ಗಳಿಗೆ ಬೆಂಬಲ ವ್ಯಕ್ತವಾಗಿದೆ ಎಂದು ಹೇಳಿದರು.

'ಸಾಮಾಜಿಕ ಹೊಣೆಗಾರಿಕೆಯನ್ನು ಪೂರ್ಣಗೊಳಿಸುವುದು ಪ್ರತಿ ಸರ್ಕಾರದ ಕರ್ತವ್ಯ ಎಂದು ಭಾವಿಸುತ್ತೇನೆ. ಕಳೆದ 10 ವರ್ಷಗಳಲ್ಲಿ ಹಣದುಬ್ಬರ ಮತ್ತು ನಿರುದ್ಯೋಗ ಹೆಚ್ಚಿದೆ. ಕುಟುಂಬವನ್ನು ನಿರ್ವಹಿಸಲು ಮಹಿಳೆಯರು ಕಷ್ಟಪಡುತ್ತಿದ್ದಾರೆ. ಅವರ ಕಷ್ಟದಲ್ಲಿ ಭಾಗಿಯಾಗುವುದು ನಮ್ಮ ಜವಾಬ್ದಾರಿ' ಎಂದು ಹೇಳಿದರು.

'ಕೇಜ್ರಿವಾಲ್ ದಲಿತ ವಿರೋಧಿ'

ನವದೆಹಲಿ (ಪಿಟಿಐ): ಆಮ್ ಆದ್ಮಿ ಪಕ್ಷದ (ಎಎಪಿ) ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಅವರು 'ದಲಿತ ವಿರೋಧಿ' ಎಂದು ಕಾಂಗ್ರೆಸ್ ನಾಯಕ ಉದಿತ್ ರಾಜ್ ಅವರು ಭಾನುವಾರ ಅಭಿಪ್ರಾಯ-ಪಟ್ಟಿದ್ದಾರೆ.


ಉದಿತ್ ರಾಜ್

'ದೇವಾಲಯದ ಅರ್ಚಕರು ಮತ್ತು ಗುರುದ್ವಾರದ ಗ್ರಂಥಿಗಳಿಗೆ ಮಾಸಿಕ ₹18 ಸಾವಿರ ಗೌರವಧನ ನೀಡುವ 'ಪೂಜಾರಿ– ಗ್ರಂಥಿ ಸಮ್ಮಾನ್ ಯೋಜನೆ'ಯನ್ನು ಎಎಪಿ ಘೋಷಿಸಿತ್ತು. ಆದರೆ, ಈ ಯೋಜನೆ ವಾಲ್ಮೀಕಿ ಮತ್ತು ರವಿದಾಸ ದೇವಾಲಯದ ಅರ್ಚಕರನ್ನು ಒಳಗೊಂಡಿಲ್ಲ' ಎಂದು ರಾಜ್ ಹೇಳಿದರು.

ವಾಲ್ಮೀಕಿ ಮತ್ತು ರವಿದಾಸ ದೇವಾಲಯದ 'ಭಿಕ್ಷುಗಳು' ಮತ್ತು ಅರ್ಚಕರು ಈ ಯೋಜನೆಯಲ್ಲಿ ತಮ್ಮನ್ನೂ ಸೇರಿಸಿಕೊಳ್ಳಬೇಕು ಎಂದು ಒತ್ತಾಯಿಸಿ, ಎಎಪಿ ವಿರುದ್ಧ ಸೋಮವಾರ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಲಿದ್ದಾರೆ. ಅವರಿಗೂ ಅದೇ ಗೌರವಧನ ನೀಡಬೇಕೆಂದು ಒತ್ತಾಯಿಸಿದರು.

'ಪಂಜಾಬ್‌ನಲ್ಲಿ ಎಎಪಿ ಸರ್ಕಾರ ರಚಿಸಿದಾಗ, ದಲಿತರನ್ನು ಉಪ ಮುಖ್ಯಮಂತ್ರಿ ಮಾಡುವುದಾಗಿ ನೀಡಿದ್ದ ಭರವಸೆಯನ್ನು ಈಡೇರಿಸಲಿಲ್ಲ' ಎಂದರು.

ಸಂಕ್ಷಿಪ್ತ ಸುದ್ದಿ

ಮಾನವ–ಆನೆ ಸಂಘರ್ಷ ತಡೆ ಕ್ರಮಕ್ಕೆ ಮೋದಿ ಶ್ಲಾಘನೆ

ಗುವಾಹಟಿ (ಪಿಟಿಐ): ಅಸ್ಸಾಂನ ನಗಾಂವ್ ಜಿಲ್ಲೆಯಲ್ಲಿ ಆನೆಗಳಿಗೆಂದೇ ನಿರ್ದಿಷ್ಟ ವಿಧದ ಹುಲ್ಲನ್ನು ಬೆಳೆಯುವ ಮೂಲಕ ಮಾನವ–ಆನೆ ಸಂಘರ್ಷ ತಡೆಗೆ ವಿನೂತನ ದಾರಿ ಕಂಡುಕೊಂಡಿರುವುದನ್ನು 'ಮನದ ಮಾತು' ತಿಂಗಳ ರೇಡಿಯೊ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಶ್ಲಾಘಿಸಿದರು.


ನರೇಂದ್ರ ಮೋದಿ

'ಆನೆಗಳ ಸ್ನೇಹಿತರು' (ಹಾಥಿ ಬಂಧು) ಹೆಸರಿನ ಗುಂಪಿನ ವಿನೂತನ ಕಾರ್ಯದ ಕುರಿತ ಆಡಿಯೊ ಕ್ಲಿಪ್ ಅನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿರುವ ಅವರು, ನಗಾಂವ್ ಜಿಲ್ಲೆಯ ಪ್ರಯತ್ನವು ಪ್ರತಿಯೊಬ್ಬರನ್ನೂ ಪ್ರೇರೇಪಿಸುವ ಶಕ್ತಿ ಹೊಂದಿದೆ ಎಂದು ಹೇಳಿದ್ದಾರೆ.

'ನಗಾಂವ್‌ನಲ್ಲಿ ನಿರಂತರವಾಗಿ ಮಾನವ–ಆನೆ ಸಂಘರ್ಷ ನಡೆಯುತ್ತಿತ್ತು. ಆಹಾರ ಅರಸಿ ಗ್ರಾಮಗಳಿಗೆ ಬರುತ್ತಿದ್ದ ಆನೆಗಳು ಬೆಳೆಗಳನ್ನು ನಾಶಪಡಿಸುತ್ತಿದ್ದವು. ಇದರಿಂದ ಕಂಗಾಲಾದ ಗ್ರಾಮಸ್ಥರು 'ಹಾಥಿ ಬಂಧು' ಹೆಸರಿನಲ್ಲಿ ಗುಂಪು ಕಟ್ಟಿಕೊಂಡು ಆನೆಗಳು ಬೆಳೆ ನಾಶಪಡಿಸದಿರಲು ವಿನೂತನ ಹೆಜ್ಜೆ ಇಟ್ಟರು. ಗ್ರಾಮಸ್ಥರೆಲ್ಲ ಒಗ್ಗೂಡಿ 264ಎಕರೆ ಬರಡು ಭೂಮಿಯಲ್ಲಿ ಮೇವಿನ ಹುಲ್ಲು (ನೇಪಿಯರ್ ಹುಲ್ಲು) ಬೆಳೆಯಲು ಆರಂಭಿಸಿದರು. ಪರಿಣಾಮವಾಗಿ ಕೃಷಿ ಭೂಮಿಗೆ ಆನೆಗಳು ಲಗ್ಗೆ ಇಡುವುದು ಕಡಿಮೆಯಾಗಿದೆ. ಇದರಿಂದ ಸಾವಿರಾರು ರೈತರು ನಿಟ್ಟುಸಿರು ಬಿಡುವಂತಾಗಿದೆ' ಎಂದು ತಿಳಿಸಿದ್ದಾರೆ.

ನಟ ಸತ್ಯರಾಜ್ ಪುತ್ರಿ ದಿವ್ಯಾ ಡಿಎಂಕೆಗೆ

ಚೆನ್ನೈ (ಪಿಟಿಐ): ನಟ ಸತ್ಯರಾಜ್ ಅವರ ಪುತ್ರಿ ದಿವ್ಯಾ ಅವರು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಸಮ್ಮುಖದಲ್ಲಿ ಭಾನುವಾರ ಆಡಳಿತಾರೂಢ ಡಿಎಂಕೆಗೆ ಸೇರ್ಪಡೆಗೊಂಡರು.



'ನನ್ನ ಜೀವನದ ಪ್ರಮುಖ ಅಧ್ಯಾಯವೊಂದು ಆರಂಭಗೊಂಡಿದೆ. ನಮ್ಮ ಜನರ ಪ್ರಗತಿಗಾಗಿ ನಿಸ್ವಾರ್ಥವಾಗಿ ಕೆಲಸ ಮಾಡಲು ತಮಿಳುನಾಡಿನ ಹೆಮ್ಮೆಯ ಮಗಳಾಗಿ ನಾನು ಈ ಹೊಸ ಪಯಣ ಆರಂಭಿಸುವೆ' ಎಂದು ಸಾಮಾಜಿಕ ಜಾಲತಾಣದ ಪೋಸ್ಟ್‌ನಲ್ಲಿ ದಿವ್ಯಾ ಬರೆದಿದ್ದಾರೆ.

ಡಿಎಂಕೆ ಸಂಸದ ಟಿ.ಆರ್. ಬಾಲು, ಸಚಿವರಾದ ಪಿ.ಕೆ. ಶೇಖರ್ ಬಾಬು, ಕೆ.ಎನ್. ನೆಹರು ಪಕ್ಷ ಸೇರ್ಪಡೆ ಸಂದರ್ಭ ಉಪಸ್ಥಿತರಿದ್ದರು ಎಂದು ಪ್ರಕಟಣೆ ತಿಳಿಸಿದೆ.

ಹಕ್ಕಿ ಜ್ವರ: 50ಕ್ಕೂ ಹೆಚ್ಚು ಕಾಗೆಗಳು ಬಲಿ

ಲಾತೂರ್ (ಪಿಟಿಐ): ಮಹಾರಾಷ್ಟ್ರದ ಲಾತೂರ್ ಜಿಲ್ಲೆಯ ಉದ್ಗೀರ್ ನಗರದಲ್ಲಿ ಹಕ್ಕಿ ಜ್ವರಕ್ಕೆ 50ಕ್ಕೂ ಹೆಚ್ಚು ಕಾಗೆಗಳು ಬಲಿಯಾಗಿವೆ ಎಂದು ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.



'ಭೋಪಾಲ್‌ನ ಪಶುವೈದ್ಯಕೀಯ ಪ್ರಯೋಗಾಲಯದಿಂದ ಶನಿವಾರ ಬಂದ ವರದಿಯು, ಕಾಗೆಗಳು ಏವಿಯನ್ ಇನ್‌ಫ್ಲೂಯೆಂಜಾದಿಂದ (ಎಚ್5ಎನ್1)ಮೃತಪಟ್ಟಿರುವುದನ್ನು ದೃಢಪಡಿಸಿದೆ' ಎಂದು ಪಶುಸಂಗೋಪನೆ ಆಯುಕ್ತ ಡಾ. ಶ್ರೀಧರ್ ಶಿಂಧೆ ತಿಳಿಸಿದರು.

'ಜ. 18ರವರೆಗೆ ಉದ್ಗೀರ್ ನಗರದಲ್ಲಿ 50ಕ್ಕೂ ಹೆಚ್ಚು ಕಾಗೆಗಳು ಮೃತಪಟ್ಟಿವೆ. ರೋಗ ಹರಡದಂತೆ ತಡೆಯಲು ಜಿಲ್ಲಾಡಳಿತವು ಮುಂಜಾಗ್ರತಾ ಕ್ರಮ ಕೈಗೊಂಡಿದೆ' ಎಂದು ಅವರು ತಿಳಿಸಿದರು.

ಸಂಭಲ್ ಹಿಂಸಾಚಾರ: ಮತ್ತೆ 10 ಮಂದಿ ಬಂಧನ

ಸಂಭಲ್ (ಉತ್ತರ ಪ್ರದೇಶ): ಶಾಹಿ ಜಾಮಾ ಮಸೀದಿ ಸಮೀಪ ಕಳೆದ ನವೆಂಬರ್ 24ರಂದು ನಡೆದ ಹಿಂಸಾಚಾರದಲ್ಲಿ ಭಾಗಿಯಾಗಿದ್ದ ಸಂಬಂಧ ಮತ್ತೆ 10 ಮಂದಿಯನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ. ಈ ಘಟನೆಗೆ ಸಂಬಂಧಿಸಿ ಇದುವರೆಗೆ ಒಟ್ಟು 70 ಮಂದಿಯನ್ನು ಬಂಧಿಸಿದಂತಾಗಿದೆ ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀಶ್‌ಚಂದ್ರ ಹೇಳಿದ್ದಾರೆ.

ಬಂಧಿತರಲ್ಲಿ ಒಬ್ಬನಾದ ಅಫ್ರೋಜ್ ವಾಹನ ಮತ್ತು ಶಸ್ತ್ರಾಸ್ತ್ರ ಕಳ್ಳಸಾಗಣೆಯಲ್ಲಿ ತೊಡಗಿರುವ ಸಾರಿಕ್ ಸಾತಾ ಗ್ಯಾಂಗ್‌ನ ಸಕ್ರಿಯ ಸದಸ್ಯ. ಈತನ ಬಳಿ ಇದ್ದ ಪಾಯಿಂಟ್ 32-ಬೋರ್ ಪಿಸ್ತೂಲ್, ಮೂರು ಕಾಟ್ರಿಡ್ಜ್‌ಗಳು ಮತ್ತು 15 ಖಾಲಿ ಕಾಟ್ರಿಡ್ಜ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಆರೋಪಿಗಳನ್ನು ಜೈಲಿಗೆ ಕಳುಹಿಸಲಾಗಿದೆ ಎಂದು ಶ್ರೀಶ್‌ಚಂದ್ರ ತಿಳಿಸಿದರು.

ಬಿಹಾರ: ದೋಣಿ ಮಗುಚಿ ಮೂವರು ಸಾವು

ಕಟಿಹಾರ್ (ಬಿಹಾರ) (ಪಿಟಿಐ): ಹದಿನೇಳು ಮಂದಿಯನ್ನು ಹೊತ್ತು ಸಾಗಿದ್ದ ದೋಣಿಯು ಕಟಿಹಾರ್ ಜಿಲ್ಲೆಯ ಗೋಲಾಘಾಟ್ ಎಂಬಲ್ಲಿ ಭಾನುವಾರ ಮಗುಚಿ ಬಿದ್ದಿದ್ದರಿಂದ ಮೂವರು ಮೃತ-ಪಟ್ಟಿದ್ದಾರೆ. ನಾಲ್ವರು ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಇದುವರೆಗೆ ಹತ್ತು ಮಂದಿಯನ್ನು ರಕ್ಷಿಸಲಾಗಿದೆ. ಅವರಲ್ಲಿ ಬಹುತೇಕರು ತಾವಾಗಿಯೇ ಈಜಿ ದಡ ಮುಟ್ಟುವಲ್ಲಿ ಯಶಸ್ವಿಯಾದರು. ನಾಲ್ವರು ನಾಪತ್ತೆ ಆಗಿದ್ದು, ಶೋಧಕಾರ್ಯ ನಡೆದಿದೆ ಎಂದು ಜಿಲ್ಲಾ ಮ್ಯಾಜಿಸ್ಟ್ರೇಟ್ ಮಹೇಶ್ ಕುಮಾರ್ ಮಾಹಿತಿ ನೀಡಿದ್ದಾರೆ.

ಮೃತರಲ್ಲಿ ಇಬ್ಬರನ್ನು ಪವನ್ ಕುಮಾರ್ (60) ಹಾಗೂ ಸುಧೀರ್ ಮಂಡಲ್ (70) ಎಂದು ಗುರುತಿಸಲಾಗಿದೆ ಎಂದಿದ್ದಾರೆ.

'ಇಂಡಿಯನ್ ಸ್ಟೇಟ್' ಹೇಳಿಕೆ ರಾಹುಲ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಗುವಾಹಟಿ: 'ಕಾಂಗ್ರೆಸ್ ಪಕ್ಷವು ಈಗ ಆರ್‌ಎಸ್‌ಎಸ್, ಬಿಜೆಪಿ ಮತ್ತು ಭಾರತ ಸರ್ಕಾರದ (ಇಂಡಿಯನ್ ಸ್ಟೇಟ್) ವಿರುದ್ಧವೇ ಹೋರಾಡುತ್ತಿದೆ' ಎಂದಿದ್ದ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ವಿರುದ್ಧ ಇಲ್ಲಿ ಎಫ್‌ಐಆರ್ ದಾಖಲಾಗಿದೆ. ಇಲ್ಲಿನ ಗಾಂಧಿ ಬಸ್ತಿ ಪ್ರದೇಶದ ನಿವಾಸಿಯೊಬ್ಬರು ಪೊಲೀಸರಿಗೆ ದೂರು ನೀಡಿದ್ದಾರೆ.

'ಭಾರತ ಸರ್ಕಾರದ (ಇಂಡಿಯನ್ ಸ್ಟೇಟ್) ವಿರುದ್ಧವೇ ನಮ್ಮ ಹೋರಾಟ' ಎನ್ನುವ ಮೂಲಕ ಆರೋಪಿಯು ವಿಧ್ವಂಸಕ ಚಟುವಟಿಕೆಗಳಿಗೆ ಮತ್ತು ದಂಗೆಗೆ ಪ್ರಚೋದಿಸುತ್ತಿದ್ದಾರೆ. ಸರ್ಕಾರದ (ಸ್ಟೇಟ್) ಅಧಿಕಾರದ ನ್ಯಾಯಸಮ್ಮತತೆಯನ್ನು ನಿರಾಕರಿಸಿ, ಅದನ್ನು ಶತ್ರು ಎನ್ನುವಂತೆ ಬಿಂಬಿಸಲಾಗಿದೆ' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.


ರಾಹುಲ್ ಗಾಂಧಿ

'ರಾಹುಲ್ ಅವರ ಹೇಳಿಕೆಯು ದೇಶದ ಭದ್ರತೆಗೆ, ಸಾರ್ವಜನಿಕ ವ್ಯವಸ್ಥೆಗೆ ಗಂಭೀರ ಬೆದರಿಕೆ ಒಡ್ಡುತ್ತದೆ' ಎಂದೂ ಆರೋಪಿಸಲಾಗಿದೆ. ಭಾರತೀಯ ನ್ಯಾಯ ಸಂಹಿತೆ 152ನೇ ಸೆಕ್ಷನ್ (ಭಾರತದ ಸಾರ್ವಭೌಮತ್ವ, ಏಕತೆ ಮತ್ತು ಸಮಗ್ರತೆಗೆ ಧಕ್ಕೆ) ಅಡಿಯಲ್ಲಿ ಪ್ರಕರಣ ದಾಖಲಾಗಿದೆ.

ರಾಹುಲ್ ಅವರು ನವದೆಹಲಿಯಲ್ಲಿ ಎಐಸಿಸಿ ನೂತನ ಕಚೇರಿ ಉದ್ಘಾಟನೆಯ ಸಂದರ್ಭದಲ್ಲಿ ಈ ಹೇಳಿಕೆ ನೀಡಿದ್ದರು.

ಅನುದಾನ ಇಲ್ಲ: ಸಾಧನೆ ಸೊನ್ನೆ

ಒಂದನೇ ಪುಟದಿಂದ...

'ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಸಮುದಾಯಗಳಿಗೆ ಶಕ್ತಿ ತುಂಬುವುದು ಈ ನಿಗಮಗಳ ಸ್ಥಾಪನೆಯ ಉದ್ದೇಶ. ಆದರೆ, ಅನುದಾನವೇ ಬಿಡುಗಡೆ ಆಗದ ಕಾರಣ ಈ ನಿಗಮಗಳಿಗೆ ಕಾರ್ಯಕ್ರಮಗಳ ಅನುಷ್ಠಾನ ಸಾಧ್ಯವಾಗಿಲ್ಲ. ಆರ್ಥಿಕ ವರ್ಷದಲ್ಲಿ ಇನ್ನು ಎರಡೂವರೆ ತಿಂಗಳಷ್ಟೆ ಬಾಕಿ ಉಳಿದಿದೆ. ಈಗ ಅನುದಾನ ಬಿಡುಗಡೆ ಮಾಡಿದರೂ ಅರ್ಹ ಫಲಾನುಭವಿಗಳನ್ನು ಗುರುತಿಸಿ ಸೌಲಭ್ಯ ತಲುಪಿಸುವುದು ಕಷ್ಟ' ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಫಲಾನುಭವಿಗಳಿಗೆ ಸೌಲಭ್ಯಗಳನ್ನು ಒದಗಿಸುವ ಮೂಲಕ ₹25 ಕೋಟಿ ಮೊತ್ತದ ಆರ್ಥಿಕ ಗುರಿಯನ್ನು ಡಿಸೆಂಬರ್ ಅಂತ್ಯಕ್ಕೆ ಸಾಧಿಸಬೇಕಿತ್ತು. ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮ ಮತ್ತು ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ತಲಾ ₹15 ಕೋಟಿ ಮೊತ್ತದ ಗುರಿ ಪೂರ್ಣಗೊಳಿಸಬೇಕಿತ್ತು. ಅದೇ ರೀತಿ,ಉಪ್ಪಾರ ಅಭಿವೃದ್ಧಿ ನಿಗಮದ ₹2 ಕೋಟಿ, ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ₹1.25 ಕೋಟಿ, ವಿಶ್ವಕರ್ಮ ಅಭಿವೃದ್ಧಿ ನಿಗಮ ₹3.25 ಕೋಟಿ, ಈಡಿಗ/ ಬಿಲ್ಲವ ಸಮುದಾಯದ ಸಮಗ್ರ ಅಭಿವೃದ್ಧಿಯ ವಿಶೇಷ ಕೋಶ ₹2.50 ಕೋಟಿಯನ್ನು ವಿವಿಧ ಕಾರ್ಯಕ್ರಮಗಳ ಮೂಲಕ ವೆಚ್ಚ ಮಾಡಬೇಕಿತ್ತು. ಆದರೆ, ಈ ನಿಗಮಗಳಿಗೆ ಅನುದಾನವೇ ಬಿಡುಗಡೆ ಆಗದೇ ಇರುವುದರಿಂದ ಪ್ರಸಕ್ತ ಸಾಲಿನಲ್ಲಿ ಈವರೆಗಿನ ಆರ್ಥಿಕ ಸಾಧನೆಯು ಶೂನ್ಯ ಎಂದು ಕೆಡಿಪಿ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಇನ್ನು ಕೆಲವು ನಿಗಮ, ಮಂಡಳಿ, ಪ್ರಾಧಿಕಾರಗಳಿಗೆ ಅತ್ಯಲ್ಪ ಅನುದಾನ ಹಂಚಿಕೆ ಮಾಡಲಾಗಿದೆ. ಅಲೆಮಾರಿ ಮತ್ತು ಅರೆ ಅಲೆಮಾರಿ ಬುಡಕಟ್ಟು ಅಭಿವೃದ್ಧಿ ಯೋಜನೆಗಳಿಗೆ ಆಯವ್ಯಯದಲ್ಲಿ ₹28.78 ಕೋಟಿ ಹಂಚಿಕೆ ಮಾಡಲಾಗಿದೆ. ಅದರಲ್ಲಿ ಈವರೆಗೆ ₹10.37 ಕೋಟಿ ಬಿಡುಗಡೆ ಮಾಡಲಾಗಿದೆ. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರಕ್ಕೆ ಹಂಚಿಕೆಯಾದ ₹5.01 ಕೋಟಿಯಲ್ಲಿ ₹1.25 ಕೋಟಿ ಬಿಡುಗಡೆ ಮಾಡಲಾಗಿದ್ದು, ಅಷ್ಟೂ ಹಣ ಖರ್ಚು ಮಾಡಲಾಗಿದೆ. ಹಿಂದುಳಿದ ಸಮುದಾಯದ ವಿದ್ಯಾರ್ಥಿಗಳ ವಿದೇಶ ಅಧ್ಯಯನಕ್ಕೆ ಶಿಷ್ಯ ವೇತನ, ಸ್ಪರ್ಧಾತ್ಮಕ ಪರೀಕ್ಷೆಗೆ ತರಬೇತಿ, ಪಿಎಚ್‌.ಡಿ ಫೆಲೋಶಿಪ್ ನೀಡಲು ಒಟ್ಟು ₹40 ಕೋಟಿ ಮೀಸಲಿಟ್ಟು, ₹19.28 ಕೋಟಿ ಬಿಡುಗಡೆ ಮಾಡಲಾಗಿದೆ. ಹಿಂದುಳಿದ ವರ್ಗಗಳ ವಿವಿಧ ಸಮುದಾಯಗಳ ಅಭಿವೃದ್ಧಿಗಾಗಿ ಒಟ್ಟು ₹191 ಕೋಟಿ ಹಂಚಿಕೆ ಮಾಡಲಾಗಿದ್ದು, ಈವರೆಗೆ ₹70.66 ಕೋಟಿ ಮಾತ್ರ ಬಿಡುಗಡೆ ಮಾಡಲಾಗಿದೆ. ಈ ಮೊತ್ತದಲ್ಲಿ ₹51.36 ಕೋಟಿ ವೆಚ್ಚವಾಗಿದೆ ಎಂದೂ ವರದಿಯಲ್ಲಿದೆ.

ಪರಿಶಿಷ್ಟ ಜಾತಿ ನಿಗಮ: ಅತ್ಯಲ್ಪ ಹಣ

ಪರಿಶಿಷ್ಟ ಜಾತಿಯಲ್ಲಿರುವ ವಿವಿಧ ಒಳ ಪಂಗಡಗಳ ಅಭಿವೃದ್ಧಿ ಉದ್ದೇಶದಿಂದ ಸಮಾಜ ಕಲ್ಯಾಣ ಇಲಾಖೆಯ ಅಡಿಯಲ್ಲಿ ಹಲವು ಅಭಿವೃದ್ಧಿ ನಿಗಮಗಳಿವೆ. ಈ ಪೈಕಿ, ಕೆಲವು ನಿಗಮಗಳಿಗೆ ಅತ್ಯಲ್ಪ ಮೊತ್ತದ ಅನುದಾನ ಬಿಡುಗಡೆ ಆಗಿದೆ.

ಆರ್‌.ಜಿ. ಕರ್: ಶಿಕ್ಷೆ ಪ್ರಮಾಣ ಇಂದು ಪ್ರಕಟ

ಕೋಲ್ಕತ್ತ (ಪಿಟಿಐ): ಆರ್‌.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ವೈದ್ಯಕೀಯ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರ ನಡೆಸಿ, ಆಕೆಯನ್ನು ಕೊಂದಿದ್ದು ಸಂಜಯ್ ರಾಯ್ ಎಂದು ಹೇಳಿರುವ ನ್ಯಾಯಾಲಯವು ಸೋಮವಾರ ಶಿಕ್ಷೆಯ ಪ್ರಮಾಣ ತೀರ್ಪು ಪ್ರಕಟಿಸಲಿದೆ.

ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ಸೆಕ್ಷನ್ 64 (ಅತ್ಯಾಚಾರ), ಸೆಕ್ಷನ್ 66 (ಮಹಿಳೆಯ ಸಾವಿಗೆ ಕಾರಣವಾಗುವುದು) ಹಾಗೂ ಸೆಕ್ಷನ್ 103(1) (ಹತ್ಯೆ) ಅಡಿಯಲ್ಲಿ ರಾಯ್ ಅಪರಾಧಿ ಎಂದು ಸಿಯಾಲದಹ ನ್ಯಾಯಾಲಯದ ನ್ಯಾಯಾಧೀಶ ಅನಿರ್ಬನ್ ದಾಸ್ ಅವರು ಶನಿವಾರ ಆದೇಶ ಪ್ರಕಟಿಸಿದ್ದರು.

ಸೆಕ್ಷನ್ 103(1)ರ ಅಡಿಯಲ್ಲಿ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆ ವಿಧಿಸಲು ಅವಕಾಶ ಇದೆ.

'ಮಗನಿಗೆ ತಕ್ಕ ಶಿಕ್ಷೆಯೇ ಸಿಗಲಿ. ಅದು ಗಲ್ಲು ಶಿಕ್ಷೆಯಾದರೂ ಸರಿ' ಎಂದು ಆರೋಪಿಯ ತಾಯಿ ಪ್ರತಿಕ್ರಿಯಿಸಿದ್ದಾರೆ.

ಚಿಕಿತ್ಸೆ ಪಡೆಯಲು ಒಪ್ಪಿದ ರೈತ ನಾಯಕ ಜಗಜಿತ್ ಸಿಂಗ್

121 ರೈತರ ಆಮರಣಾಂತ ಉಪವಾಸ ಅಂತ್ಯ

ಚಂಡೀಗಢ (ಪಿಟಿಐ): ಅನಿರ್ದಿಷ್ಟಾವಧಿ ನಿರಶನ ನಡೆಸುತ್ತಿದ್ದ ರೈತ ನಾಯಕ ಜಗಜಿತ್ ಸಿಂಗ್ ಡಲ್ಲೇವಾಲ್ ಅವರು ಭಾನುವಾರ ವೈದ್ಯಕೀಯ ಚಿಕಿತ್ಸೆಗೆ ಒಳಗಾಗಿದ್ದಾರೆ. ಇದರ ಬೆನ್ನಲ್ಲೇ, ಅವರ ಹೋರಾಟಕ್ಕೆ ಬೆಂಬಲ ಸೂಚಿಸಿ ಪ್ರತಿಭಟನಾ ಸ್ಥಳವಾದ 'ಖನೌರಿ'ಯಲ್ಲಿ ಆಮರಣಾಂತ ಉಪವಾಸ ನಿರಶನ ಆರಂಭಿಸಿದ್ದ 121 ಮಂದಿ ರೈತರು ಪ್ರತಿಭಟನೆಯನ್ನು ಕೊನೆಗೊಳಿಸಿದರು.

2024ರ ನವೆಂಬರ್ 26ರಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ಡಲ್ಲೇವಾಲ್ (70) ಯಾವುದೇ ರೀತಿಯ ವೈದ್ಯಕೀಯ ನೆರವು ಪಡೆಯಲು ನಿರಾಕರಿಸಿದ್ದರು. ರೈತರ ಬೇಡಿಕೆಗಳನ್ನು ಈಡೇರಿಸುವ ಕುರಿತು ಕೇಂದ್ರ ಸರ್ಕಾರ, ಫೆ. 14ರಂದು ಮಾತುಕತೆಗೆ ಆಹ್ವಾನಿಸಿದ್ದರಿಂದ ವೈದ್ಯಕೀಯ ನೆರವು ಪಡೆಯಲು ಶನಿವಾರವೇ ಸಮ್ಮತಿ ನೀಡಿದ್ದರು.

ಡಲ್ಲೇವಾಲ್ ಅವರ ಆರೋಗ್ಯವು ತೀವ್ರವಾಗಿ ಹದಗೆಟ್ಟಿದ್ದರಿಂದ ಮತ್ತು ಬೇಡಿಕೆ ಈಡೇರಿಸಲು ಸರ್ಕಾರ ವಿಳಂಬ ನೀತಿ ಅನುಸರಿಸಿದ್ದರಿಂದ 111 ರೈತರು ಜ.15ರಂದು ಉಪವಾಸ ಸತ್ಯಾಗ್ರಹ ಆರಂಭಿಸಿದ್ದರು. ಹರಿಯಾಣ ಭಾಗವಾದ ಖನೌರಿಯಲ್ಲಿ ಉಪವಾಸ ನಿರಶನ ಆರಂಭಿಸಿದ್ದ ಇವರನ್ನು ಜ.17ರಂದು ಮತ್ತೆ 10 ಮಂದಿ ರೈತರು ಜೊತೆಗೂಡಿದ್ದರು.


ಪಂಜಾಬ್‌ನ ಸಂಗ್ರೂರ್ ಜಿಲ್ಲೆಯ ಖನೌರಿಯಲ್ಲಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದ ರೈತ ನಾಯಕ ಜಗಜಿತ್ ಸಿಂಗ್ ಡಲ್ಲೇವಾಲ್ ಅವರು ಭಾನುವಾರದಿಂದ ವೈದ್ಯಕೀಯ ನೆರವು ಪಡೆದುಕೊಂಡರು —ಪಿಟಿಐ ಚಿತ್ರ

ಡಿಜಿಪಿ ಮನ್‌ದೀಪ್ ಸಿಂಗ್ ಸಿಧು ಹಾಗೂ ಪಾಟಿಯಾಲದ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ನಾನಕ್ ಸಿಂಗ್ ಅವರು ನೀಡಿದ ಹಣ್ಣಿನರಸ ಕುಡಿಯುವ ಮೂಲಕ 121 ರೈತರು ಉಪವಾಸ ಕೊನೆಗೊಳಿಸಿದರು.

ದೊಡ್ಡ ಯಶಸ್ಸಲ್ಲ, ಮುಚ್ಚಿದ ಬಾಗಿಲು ತೆರೆದಿದೆ: 'ಇದು ದೊಡ್ಡ ಯಶಸ್ಸಲ್ಲ, ಆದರೆ, ಮುಚ್ಚಿದ ಬಾಗಿಲು ತೆರೆಯುವಲ್ಲಿ ಯಶಸ್ವಿಯಾಗಿದ್ದೇವೆ' ಎಂದು ರೈತ ಮುಖಂಡ ಕಾಕಾ ಸಿಂಗ್ ಕೊಟ್ರಾ ತಿಳಿಸಿದರು.

'ಬೇಡಿಕೆ ಸಂಬಂಧ ಚರ್ಚೆ ನಡೆಸಲು ಕೇಂದ್ರ ಸರ್ಕಾರವು ಮಾತುಕತೆಗೆ ಆಹ್ವಾನಿಸಿದೆ. ಆದರೂ, ಇದೊಂದು ದೊಡ್ಡ ಯಶಸ್ಸು ಎಂದು ಭಾವಿಸುವುದಿಲ್ಲ, ಒಂದು ಹೆಜ್ಜೆ ಮುಂದಿಟ್ಟಿದ್ದೇವೆ. ಮಾತುಕತೆಗೆ ಇದ್ದ ಮುಚ್ಚಿದ ಬಾಗಿಲು ತೆರೆಯುವಲ್ಲಿ ಯಶಸ್ವಿಯಾಗಿದ್ದೇವೆ' ಎಂದು ವಿವರಿಸಿದರು.

ಆದಷ್ಟು ಬೇಗ ಮಾತುಕತೆ ನಡೆಸಲಿ ಕೇಂದ್ರಕ್ಕೆ ರೈತ ನಾಯಕರ ಒತ್ತಾಯ

ಚಂಡೀಗಢ (ಪಿಟಿಐ): 'ಪ್ರತಿಭಟನೆಯಲ್ಲಿ ತೊಡಗಿದ್ದ ರೈತರ ಜೊತೆಗೆ ಮಾತುಕತೆ ನಡೆಸಲು ಮುಂದಾಗಿರುವ ಕೇಂದ್ರ ಸರ್ಕಾರದ ನಿರ್ಧಾರ ಸರಿಯಾಗಿದೆ. ಫೆ.14ರ ತನಕ ಕಾಯುವ ಬದಲು ಆದಷ್ಟು ಬೇಗ ನಡೆಸಬೇಕು' ಎಂದು ಪಂಜಾಬ್‌ನ ಕೃಷಿ ಖಾತೆ ಸಚಿವ ಗುರ್ಮೀತ್ ಸಿಂಗ್ ಕುದುಡಿಯಾನ್ ಅವರು ಹೇಳಿದ್ದಾರೆ. 'ಡಲ್ಲೇವಾಲ್ ಅವರ ಆರೋಗ್ಯ ಸ್ಥಿತಿಗತಿ ಕುರಿತು ಚಿಂತಿಸುವಂತಾಗಿದೆ. ರೈತರ ಜೊತೆಗೆ ಆದಷ್ಟು ಬೇಗ ಮಾತುಕತೆ ನಡೆಸಬೇಕು' ಎಂದು ಅವರು ಆಗ್ರಹಿಸಿದ್ದಾರೆ.

ಮೋಡಿ ಮಾಡಿದ ಕರ್ನಾಟಕದ ಚೈತ್ರಾ: ಎರಡೂ ವಿಭಾಗಗಳಲ್ಲಿ ನೇಪಾಳ ರನ್ನರ್ಸ್ ಅಪ್

ಭಾರತಕ್ಕೆ ಕೊಕ್ಕೊ ವಿಶ್ವ ಕಿರೀಟ

• ಪ್ರದೀಶ್ ಎಚ್. ಮರೋಡಿ

ನವದೆಹಲಿ: ಕರ್ನಾಟಕದ ಚೈತ್ರಾ ಬಿ. ಅವರ ಅಮೋಘ ಆಟದ ಬಲದಿಂದ ಭಾರತದ ಮಹಿಳೆಯರ ತಂಡವು ಕೊಕ್ಕೊ ವಿಶ್ವಕಪ್‌ನ ಫೈನಲ್ ಪಂದ್ಯದಲ್ಲಿ ಜಯಭೇರಿ ಬಾರಿಸಿತು. ಅದರ ಬೆನ್ನಲ್ಲೇ ಪುರುಷರ ತಂಡವೂ ಸಾಂಘಿಕ ಆಟ ಪ್ರದರ್ಶಿಸಿ ದೇಸಿ ಕ್ರೀಡೆಯ ಚೊಚ್ಚಲ ವಿಶ್ವಕಿರೀಟ ಧರಿಸಿತು.

ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ತವರಿನ ಪ್ರೇಕ್ಷಕರ ಮುಂದೆ ಪ್ರಿಯಾಂಕಾ ಇಂಗ್ಳೆ ಮತ್ತು ಪ್ರತೀಕ್ ವೈಕರ್ ಬಳಗವು ಗೆದ್ದು ಬೀಗಿದವು. ಎರಡೂ ವಿಭಾಗಗಳಲ್ಲೂ ನೇಪಾಳ ತಂಡವು ರನ್ನರ್ಸ್ ಅಪ್ ಆಯಿತು. ಆತಿಥೇಯ ತಂಡಗಳು ಜಯ ಸಾಧಿಸುತ್ತಿದ್ದಂತೆ ಕಿಕ್ಕಿರಿದು ಸೇರಿದ್ದ ಕ್ರೀಡಾಭಿಮಾನಿಗಳು ಎದ್ದು ನಿಂತು ಚಪ್ಪಾಳೆ ತಟ್ಟಿ, ರಾಷ್ಟ್ರಧ್ವಜದೊಂದಿಗೆ ಕುಣಿದು ಕುಪ್ಪಳಿಸಿದರು.

19 ತಂಡಗಳಿದ್ದ ಮಹಿಳೆಯರ ವಿಭಾಗದಲ್ಲಿ ಭಾರತ ಮತ್ತು ನೇಪಾಳವು ಅಜೇಯವಾಗಿ ಫೈನಲ್ ಪ್ರವೇಶಿಸಿದ್ದವು. ಹೀಗಾಗಿ, ಅವುಗಳ ಸೆಣಸಾಟ ಭಾರೀ ಕುತೂಹಲ ಮೂಡಿಸಿತ್ತಾದರೂ, ಅಂತಿಮವಾಗಿ 78–40ರಿಂದ ಆತಿಥೇಯ ಬಳಗವು ಪಾರಮ್ಯ ಮೆರೆಯಿತು.

ಪುರುಷರ ವಿಭಾಗದ ಉದ್ಘಾಟನಾ ಪಂದ್ಯದಲ್ಲಿ ಭಾರತ ತಂಡವು ನೇಪಾಳವನ್ನು ಮಣಿಸಿ ಅಭಿಯಾನವನ್ನು ಆರಂಭಿಸಿತ್ತು. ನಂತರದ ಪಂದ್ಯಗಳನ್ನು ಸತತವಾಗಿ ಗೆದ್ದು ಫೈನಲ್‌ಗೆ ಬಂದಿದ್ದ ಅದೇ ತಂಡವನ್ನು 54–36ರಿಂದ ಭಾರತ ಮಣಿಸಿ, ಅಜೇಯವಾಗಿ ಉಳಿಯಿತು. ಪುರುಷರ ವಿಭಾಗದಲ್ಲಿ 20 ತಂಡಗಳು ಭಾಗವಹಿಸಿದ್ದವು.

ಭಾರತದ ವನಿತೆಯರು ಆರಂಭದಲ್ಲೇ ಚುರುಕಿನ ಆಟಕ್ಕೆ ಒತ್ತು ನೀಡಿದರು. ಮೊದಲ ನಿಮಿಷದಲ್ಲೇ ಎದುರಾಳಿ ತಂಡದ ಮೂರು ಡಿಫೆಂಡರ್‌ಗಳನ್ನು ಹೊರದಬ್ಬಿ ಉತ್ತಮ ಆರಂಭ ಪಡೆದರು. ಆಕರ್ಷಕ ಪ್ಲೈಯಿಂಗ್ ಜಂಪ್, ಸ್ಕೈಡೈವ್ ಮಾಡಿದ ತರುಣಿಯರು ಮೊದಲ ಸರದಿಯಲ್ಲೇ 34 ಅಂಕ ಸಂಪಾದಿಸಿದರು.

ಎರಡನೇ ಸರದಿಯಲ್ಲಿ ರಕ್ಷಣೆಗೆ ಇಳಿದ ಭಾರತ ತಂಡಕ್ಕೆ ಮೈಸೂರು ಜಿಲ್ಲೆಯ ಟಿ.ನರಸೀಪುರದ ಚೈತ್ರಾ ಆಸರೆಯಾದರು. ಆರಂಭದಲ್ಲೇ ಕಣಕ್ಕೆ ಇಳಿದ ಅವರು ಚುರುಕಿನ ಪಾದಚಲನೆ ಮೂಲಕ ಸುಮಾರು ಮೂರುವರೆ ನಿಮಿಷಗಳ ಕಾಲ ನೇಪಾಳ ತಂಡದ ಆಟಗಾರ್ತಿಯರನ್ನು ಕಾಡಿದರು. ಹೀಗಾಗಿ, ವಿರಾಮದ ವೇಳೆಗೆ ಭಾರತ 35–24 ಮುನ್ನಡೆ ಪಡೆಯಲು ಸಾಧ್ಯವಾಯಿತು.

ಮೂರನೇ ಸರದಿಯಲ್ಲೂ ಆತಿಥೇಯ ತಂಡವು ಉತ್ತಮ ಆಟ ಪ್ರದರ್ಶಿಸಿ ಅಂತರವನ್ನು 73–24ಕ್ಕೆ ವಿಸ್ತರಿಸಿಕೊಂಡಿತು. ಕೊನೆಯ ಸರದಿಯಲ್ಲಿ ಮತ್ತೆ ಚೈತ್ರಾ ಮೋಡಿ ಮಾಡಿದರು. ಐದು ನಿಮಿಷಕ್ಕೂ ಅಧಿಕ ಸಮಯ ರಕ್ಷಣೆಯಲ್ಲಿ ಮಿಂಚು ಹರಿಸಿದರು. ಒಂದು ಹಂತದಲ್ಲಿ ಚೈತ್ರಾ ಆಟಕ್ಕೆ ಮನಸೋತ ಪ್ರೇಕ್ಷಕರು ಎದ್ದುನಿಂತು ಚಪ್ಪಾಳೆ ತಟ್ಟಿ ಹುರಿದುಂಬಿಸಿದರು.

ಪುರುಷರ ತಂಡವೂ ಮೊದಲು ದಾಳಿಗಿಳಿದು ಆಕರ್ಷಕ ನೆಗೆತ, ಸ್ಕೈಡೈವ್ ಮೂಲಕ ಆರಂಭದ ಸರದಿಯಲ್ಲಿ 26 ಅಂಕಗಳನ್ನು ಕಲೆ ಹಾಕಿ, ಪಾರಮ್ಯ ಮೆರೆಯಿತು.

ಎರಡನೇ ಸರದಿಯಲ್ಲಿ ಎದುರಾಳಿ ತಂಡವು 18 ಅಂಕ ಪಡೆದರೆ, ಮೂರನೇ ಸರದಿಯಲ್ಲಿ ಮತ್ತೆ ಆತಿಥೇಯ ತಂಡದ ಆಟಗಾರರು 28 ಅಂಕ ಸಂಪಾದಿಸಿ ಅಂತರವನ್ನು ಹಿಗ್ಗಿಸಿಕೊಂಡರು. ಅಂತಿಮ ಸರದಿಯಲ್ಲೂ ಎದುರಾಳಿ ತಂಡ ಹೆಚ್ಚಿನ ಪ್ರತಿರೋಧ ತೋರಲು ಅವಕಾಶ ನೀಡಲಿಲ್ಲ.

ಪಂದ್ಯದ ಆಟನಾರನಾಗಿ ಸುಯೇಶ್ ಗಾರ್ಗಟೆ, ಸರಣಿಯ ಆಟಗಾರನಾಗಿ ರಾಮ್ಜಿ ಕಶ್ಯಪ್, ಪಂದ್ಯದ ಆಟಗಾರ್ತಿಯಾಗಿ ಬಿ. ಚೈತ್ರಾ, ಸರಣಿಯ ಆಟಗಾರ್ತಿಯಾಗಿ ಪ್ರಿಯಾಂಕಾ ಇಂಗ್ಳೆ ಗೌರವ ಪಡೆದರು

ಕೊಕ್ಕೊ ವಿಶ್ವಕಪ್ ಗೆದ್ದ ಭಾರತ ತಂಡಗಳನ್ನು ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಭಿನಂದಿದ್ದಾರೆ



ವಿಶ್ವಕಪ್ ಕೊಕ್ಕೊ ವಿಶ್ವಕಪ್ ಫೈನಲ್‌ನಲ್ಲಿ ನೇಪಾಳ ತಂಡದ ಮೇಲೆ ಜಯ ಸಾಧಿಸಿ ಚಾಂಪಿಯನ್ ಆದ ಭಾರತ ಪುರುಷರ ತಂಡದ ಖುಷಿ.....

> **ಚೊಚ್ಚಲ ವಿಶ್ವಕಪ್ ಟೂರ್ನಿ ನಿರೀಕ್ಷೆಗಿಂತ ಯಶಸ್ವಿಯಾಗಿದೆ. 2028ರ ಏಷ್ಯನ್ ಕ್ರೀಡಾಕೂಟ, 2032ರ ಒಲಿಂಪಿಕ್ಸ್‌ನಲ್ಲಿ ಈ ಕ್ರೀಡೆಯನ್ನು ಸೇರ್ಪಡೆಗೊಳಿಸಲು ಪ್ರಯತ್ನ ನಡೆಸಲಾಗುವುದು.**
> **ಸುಧಾಂಶು ಮಿತ್ತಲ್,** ಅಧ್ಯಕ್ಷ, ಭಾರತ ಕೊಕ್ಕೊ ಫೆಡರೇಷನ್

ಸೈಕ್ಲಿಂಗ್: ವಿಜಯಪುರ ಪ್ರಾಬಲ್ಯ

ಕರ್ನಾಟಕ ಕ್ರೀಡಾಕೂಟ: ಟೇಬಲ್ ಟೆನಿಸ್‌ನಲ್ಲಿ ಅಶ್ವಿನ್ ಹನಗೂಡು, ಅನನ್ಯಾಗೆ ಚಿನ್ನ

• ಪ್ರವೀಣ್ ಕುಮಾರ್ ಪಿ.ವಿ.

ಮಂಗಳೂರು: ವಿಜಯಪುರ ಜಿಲ್ಲೆಯ ಸೈಕ್ಲಿಸ್ಟ್‌ಗಳು ಕರ್ನಾಟಕ ಕ್ರೀಡಾಕೂಟದ ಸೈಕ್ಲಿಂಗ್ ಸ್ಪರ್ಧೆಗಳಲ್ಲಿ ಭಾನುವಾರ ಪಾರಮ್ಯ ಮೆರೆದರು. ಪುರುಷರ ಮತ್ತು ಮಹಿಳೆಯರ ಟೈಮ್ ಟ್ರಯಲ್ ತಂಡ ವಿಭಾಗಗಳಲ್ಲಿ ವಿಜಯಪುರ ಜಿಲ್ಲೆ ಚಾಂಪಿಯನ್ ಆಗಿ ಹೊರಹೊಮ್ಮಿತು. ಮಹಿಳೆಯರ 30 ಕಿ.ಮೀ ಮಾಸ್ ಸ್ಟಾರ್ಟ್ ವಿಭಾಗದಲ್ಲಿ ವಿಜಯಪುರ ಜಿಲ್ಲೆಯ ಪಾಯಲ್ ಚೌಹಾಣ್ ಮೊದಲಿಗರಾದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಒಲಿಂಪಿಕ್ ಸಂಸ್ಥೆ ಮತ್ತು ದಕ್ಷಿಣ ಕನ್ನಡ–ಉಡುಪಿ ಜಿಲ್ಲಾಡಳಿತವು ಉಡುಪಿ ಜಿಲ್ಲೆಯ ಕೊಳಲಗಿರಿ ರಸ್ತೆಯಲ್ಲಿ ಭಾನುವಾರ ಆಯೋಜಿಸಿದ್ದ ಸೈಕ್ಲಿಂಗ್‌ನ ಪುರುಷರ ಟೈಮ್ ಟ್ರಯಲ್ ತಂಡ ವಿಭಾಗದ (40 ಕಿ.ಮೀ) ಸ್ಪರ್ಧೆಯಲ್ಲಿ ವಿಜಯಪುರ (ಶ್ರೀಶೈಲ ವೀರಾಪುರ, ಉದಯ ಗುಳೇದ, ಹಣಮಂತ ಮರನೂರ, ರಮೇಶ್ ಮಳಗುಂಡಿ) ತಂಡವು 58 ನಿಮಿಷ 46.77 ಸೆಕೆಂಡ್‌ನಲ್ಲಿ ರೇಸ್ ಪೂರ್ಣಗೊಳಿಸಿತು. ಬಾಗಲಕೋಟೆ ಜಿಲ್ಲೆ (ಯಲಗೂರಪ್ಪ ಗದ್ದಿ, ಧನೇಶ್ ತೇಲಿ, ಮಲ್ಲಿಕಾರ್ಜುನ ಯಾದವಾಡ, ಉದಯ ಹಂಡಿ) ದ್ವಿತೀಯ ಸ್ಥಾನ ಹಾಗೂ ಮೈಸೂರು ಜಿಲ್ಲೆ (ವಿಶಾಖ ಕೆ.ವಿ., ಸೋಮೇಶ ಜಿ., ಚರಿತ್ ಗೌಡ ಹಾಗೂ ಲಕ್ಮೀಶ ಎಚ್.ಆರ್) ತೃತೀಯ ಸ್ಥಾನ ಪಡೆಯಿತು.

ಟೈಮ್ ಟ್ರಯಲ್ ಮಹಿಳೆಯರ ತಂಡ ವಿಭಾಗದ (20 ಕಿ.ಮೀ) ಸ್ಪರ್ಧೆಯಲ್ಲಿ ವಿಜಯಪುರ ತಂಡವು (ಪಾಯಲ್ ಚೌಹಾಣ್, ಅಕ್ಷತಾ ಭೂತನಾಳ, ಕಾವೇರಿ ಡೊಳ್ಳಿ) 37 ನಿಮಿಷ 03.76 ಸೆಕೆಂಡ್‌ಗಳಲ್ಲಿ ರೇಸ್ ಪೂರ್ಣಗೊಳಿಸಿತು. ಬೆಳಗಾವಿ (ಆಯಿಷಾ ಮೊಮಿನ್, ನಿವೇದಿತಾ ಕೊಕ್ಕಣ್ಣವರ್, ಶೈಲಾ ನ್ಯಾಮಗುಂದ ಹಾಗೂ ಅಮೂಲ್ಯ ಪೂಜಾರ) ದ್ವಿತೀಯ ಹಾಗೂ ಮೈಸೂರು (ಗ್ಲಿಯೋನಾ ಡಿಸೋಜ, ನಾಗಸಿರಿ ಎಚ್. ಎನ್., ಕರೇನ್ ಮಾರ್ಷಲ್) ತೃತೀಯ ಸ್ಥಾನ ಪಡೆಯಿತು.

ಪುರುಷರ 50 ಕಿ.ಮೀ ಮಾಸ್ ಸ್ಟಾರ್ಟ್ ವಿಭಾಗದಲ್ಲಿ ಬಾಗಲಕೋಟೆ ಜಿಲ್ಲೆಯ ಅರುಣ್ ಲಮಾಣಿ ಪ್ರಥಮ, ಮೈಸೂರಿನ ಚರಿತ್ ಗೌಡ ದ್ವಿತೀಯ ಹಾಗೂ ಬೆಂಗಳೂರಿನ ನೀಲ್ ಡಿಸೋಜ ತೃತೀಯ ಸ್ಥಾನ ಪಡೆದರು. ಮಹಿಳೆಯರ 30 ಕಿ.ಮೀ ಮಾಸ್ ಸ್ಟಾರ್ಟ್ ವಿಭಾಗದಲ್ಲಿ ಬಾಗಲಕೋಟೆ ಜಿಲ್ಲೆಯ ದಾನಮ್ಮ ಗುರವ ದ್ವಿತೀಯ ಹಾಗೂ ಮೈಸೂರಿನ ಗ್ಲಿಯೋನಾ ಡಿಸೋಜ ಮೂರನೇ ಸ್ಥಾನ ಪಡೆದರು.

ಫಲಿತಾಂಶಗಳು:

ಫೆನ್ಸಿಂಗ್: ಪುರುಷರು: ವೈಯಕ್ತಿಕ: ಸೇಬರ್: ಯದುನಂದನ ಡಿ. (ಬೆಂಗಳೂರು)–1. ಪಾಯಿಂಟ್ಸ್:15, ಧನುಷ್ (ಮೈಸೂರು)–2, ರೋಹಿತ್ ದಾದಮಟ್ಟಿ (ಬೆಂಗಳೂರು), ರಾಜೇಂದರ್ ಸಿಂಗ್ ಎಚ್ (ಬೆಂಗಳೂರು)–3; ಎಪೀ: ಬಾಹುಬಲಿ ಶಹಾಪುರ (ಬಾಗಲಕೋಟೆ) 1. **ಪಾಯಿಂಟ್ಸ್**:15, ದುರ್ಗೇಶ್ವರ (ಬೆಂಗಳೂರು)–2, ಜಯಸೂರ್ಯ ಎಂ. (ಮೈಸೂರು), ರಾಹುಲ್ ಗೌಡ ಕೆ.ಆರ್–3; ಫಾಯಿಲ್: ಸಾತ್ವಿಕ್ ಶೋಭಾ ಮಂಜುನಾಥ (ಬೆಂಗಳೂರು)–1. ಪಾಯಿಂಟ್ಸ್:15 , ಸೈಯದ್ ಬಹದ್ದೀನ್ (ಬೆಂಗಳೂರು)–2, ನಿಖಿಲ್ (ಚಿಕ್ಕಮಗಳೂರು), ವಿನೋದ್ ಮಳಗಿ (ಬೆಳಗಾವಿ)–3

ಮಹಿಳೆಯರು: **ವೈಯಕ್ತಿಕ:** ಸೇಬರ್: ಎಸ್.ತನ್ವಿ (ಬೆಂಗಳೂರು)–1. ಪಾಯಿಂಟ್ಸ್: 15, ಲಕ್ಷಣ್ಯಾ ಕೃಷ್ಣಪ್ರಸಾದ್ (ಬೆಂಗಳೂರು ನಗರ)–2, ಎಚ್. ವಂದನಾ (ಬೆಂಗಳೂರು), ಯಶಸ್ವಿನಿ ಆರ್. (ಬೆಂಗಳೂರು)–3; ಎಪೀ: ಸೇಜಲ್ ಗುಲಿಯಾ (ಬೆಂಗಳೂರು)–1.ಪಾಯಿಂಟ್ಸ್: 15, ಪಾವನಿ ಪಿ (ಬೆಂಗಳೂರು)–2, ನೈದಿಲೆ ಬಿ (ಬೆಂಗಳೂರು), ಯುಕ್ತಾ ಸಿರಿಲ್ (ಬೆಂಗಳೂರು ನಗರ)–3; ಫಾಯಿಲ್: ಸೈಯೆದಾ ಇಫ್ತಿಕರ್ ಬಾನು (ಬೆಂಗಳೂರು)–1, ಪಾಯಿಂಟ್ಸ್: 15, ಶ್ರೀರಕ್ಷಾ ಐ.ಕೆ (ಬೆಂಗಳೂರು)–2, ಧ್ರುತಿಕಾ ಎನ್ ಅಂದಾನ್ (ಬೆಂಗಳೂರು), ಸಮೀರಾ ಅಂಜುಮ್ (ಬೆಂಗಳೂರು ಗ್ರಾಮಾಂತರ)–3

ಟೇಬಲ್ ಟೆನಿಸ್: ಪುರುಷರು: ಸಿಂಗಲ್ಸ್: ಅಶ್ವಿನ್ ಹನಗೂಡು (ಬೆಂಗಳೂರು)–1, ಸುದರ್ಶನ್ ಕುಮಾರ್ (ಬೆಂಗಳೂರು)–2, ಚೇತನ್ ಸಿ ಅರಳಿಕಟ್ಟಿ (ಧಾರವಾಡ), ಪ್ರೇಮಚಂದರ್ ಜಿ (ಬೆಂಗಳೂರು)–3;

ಮಹಿಳೆಯರು: ಸಿಂಗಲ್ಸ್: ಅನನ್ಯಾ ಎಚ್.ಪಿ (ಬೆಂಗಳೂರು)–1, ಸಹನಾ ಕುಲಕರ್ಣಿ (ಧಾರವಾಡ)–2, ಆರ್ನ ಸದೋತ್ರ (ದಕ್ಷಿಣ ಕನ್ನಡ), ದೃಷ್ಟಿ ಎಸ್. ಮೋರೆ (ಬೆಂಗಳೂರು)–3.

ನೆಟ್‌ಬಾಲ್: ಪುರುಷರು: ಹಾಸನ–1, ಬೆಂಗಳೂರು ನಗರ–2, ಚಾಮರಾಜನಗರ, ಮೈಸೂರು–3;

ಮಹಿಳೆಯರು: ದಕ್ಷಿಣ ಕನ್ನಡ–1, ಬೆಂಗಳೂರು ನಗರ–2, ರಾಮನಗರ, ಹಾಸನ–3.



ಕರ್ನಾಟಕ ಕ್ರೀಡಾಕೂಟದ ಸೈಕ್ಲಿಂಗ್ ಸ್ಪರ್ಧೆಯ ಟೈಮ್ ಟ್ರಯಲ್ ತಂಡ ವಿಭಾಗದಲ್ಲಿ ಚಿನ್ನದ ಪದಕ ಗೆದ್ದ ವಿಜಯಪುರ ಜಿಲ್ಲಾ ಪುರುಷರ ತಂಡದ ಸೈಕ್ಲಿಸ್ಟ್‌ಗಳಾದ (ನಿಂತವರು ಹಿಂದಿನ ಸಾಲು) ರಮೇಶ್ ಮಳಗುಂಡಿ, ಶ್ರೀಶೈಲ ವೀರಾಪುರ, ಉದಯ ಗುಳೇದ ಮತ್ತು ಹಣಮಂತ ಮರಣೂರ ಹಾಗೂ ಮಹಿಳಾ ತಂಡದ ಸದಸ್ಯರಾದ ಕಾವೇರಿ ಡೊಳ್ಳಿ, ಅಕ್ಷತಾ ಭೂತನಾಳ ಮತ್ತು ಪಾಯಲ್ ಚೌಹಾಣ್, ಕೋಚ್ ರಮೇಶ್ ರಾಥೋಡ್ ಹಾಗೂ ತಾಂತ್ರಿಕ ಅಧಿಕಾರಿ ದುಂಡಪ್ಪ

‘ಜೀವನದ ಅವಿಸ್ಮರಣೀಯ ಕ್ಷಣ’

ನವದೆಹಲಿ: ‘ಕೊಕ್ಕೊ ನಮ್ಮ ಮಣ್ಣಿನ ಕ್ರೀಡೆ. ಈ ಕ್ರೀಡೆಯ ಮೊದಲ ವಿಶ್ವಕಪ್ ಅನ್ನು ನಮ್ಮ ದೇಶಕ್ಕೆ ಗೆಲ್ಲಿಸಬೇಕೆಂಬ ಕನಸು ನಮ್ಮದಾಗಿತ್ತು. ಅದು ನನಸಾಗಿರುವ ಕ್ಷಣ ನನ್ನ ಪಾಲಿಕೆ ಅವಿಸ್ಮರಣೀಯವಾದುದು’ ಎಂದು ಕರ್ನಾಟಕದ ಚೈತ್ರಾ ಹೇಳಿದರು.

ಪಂದ್ಯದ ಆಟಗಾರ್ತಿಯಾಗಿ ಹೊರಹೊಮ್ಮಿದ ಅವರು, ಪ್ರಜಾವಾಣಿ ಜೊತೆ ಸಂಭ್ರಮದ ಕ್ಷಣವನ್ನು ಹಂಚಿಕೊಂಡರು.

‘ನಾಲ್ಕನೇ ತರಗತಿಯಿಂದ ಕೊಕ್ಕೊ ಕ್ರೀಡೆಯಲ್ಲಿ ತೊಡಗಿಸಿಕೊಂಡಿದ್ದೇನೆ. ಸಾಕಷ್ಟು ಟೂರ್ನಿಗಳಲ್ಲಿ ಭಾಗವಹಿಸಿದ್ದೇನೆ. ನಾನು ಬಾಲ್ಯದಿಂದಲೇ ಉತ್ತಮ ಡಿಫೆಂಡರ್. ಸೀನಿಯರ್ ವಿಭಾಗದ ಪ್ರದರ್ಶನವನ್ನು ನೋಡಿ 60 ಮಂದಿಯ ರಾಷ್ಟ್ರೀಯ ಶಿಬಿರಕ್ಕೆ ನನ್ನನ್ನು ಸೇರಿದಂತೆ ರಾಜ್ಯದ ನಾಲ್ಕರನ್ನು ಆಯ್ಕೆ ಮಾಡಲಾಗಿತ್ತು. ಆದರೆ, ಅಂತಿಮ ತಂಡದಲ್ಲಿ ನನಗೆ ಮಾತ್ರ ಅವಕಾಶ ದೊರೆಯಿತು. ಸಿಕ್ಕ ಅವಕಾಶದಲ್ಲಿ ಸಾಮರ್ಥ್ಯ ಸಾಬೀತು ಮಾಡಿದ್ದೇನೆ’ ಎಂದು 22 ವರ್ಷ ವಯಸ್ಸಿನ ಚೈತ್ರಾ ಹೇಳಿದರು.



ಚಿನ್ನದ ಪದಕದೊಂದಿಗೆ ಚೈತ್ರಾ


ಗೌರವ ನಿರೀಕ್ಷಿಸುತ್ತೇವೆ: ಗೌತಮ್



ಯಾವುದೇ ಕ್ರೀಡೆಯ ವಿಶ್ವಕಪ್‌ನಲ್ಲಿ ಪ್ರಶಸ್ತಿ ಗೆದ್ದ ಮಹಾರಾಷ್ಟ್ರದ ಆಟಗಾರರಿಗೆ ಅಲ್ಲಿನ ಸರ್ಕಾರವು ₹3 ಕೋಟಿ ಬಹುಮಾನ ಮತ್ತು ಎ ಕೆಟಗರಿ ಉದ್ಯೋಗವನ್ನು ನೀಡುತ್ತಿದೆ. ಕೊಕ್ಕೊ ವಿಶ್ವಕಪ್ ಗೆದ್ದ ಭಾರತದ ಪುರುಷರ ತಂಡದಲ್ಲಿ ನಾನು, ಮಹಿಳೆಯರ ತಂಡದಲ್ಲಿ ಚೈತ್ರಾ ಇದ್ದೆವು. ಕರ್ನಾಟಕ ಸರ್ಕಾರದಿಂದ ನಾವು ಅದೇ ಗೌರವ ನಿರೀಕ್ಷಿಸುತ್ತೇವೆ ಎಂದು ಬೆಂಗಳೂರಿನ ಗೌತಮ್ ಎಂ.ಕೆ. ತಿಳಿಸಿದ್ದಾರೆ.

ಭಾರತ ತಂಡಕ್ಕೆ ರಘುರಾಮ್ ಭಟ್ ಮ್ಯಾನೇಜರ್

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ರಘುರಾಮ್ ಭಟ್ ಅವರು ಇಂಗ್ಲೆಂಡ್ ಎದುರಿನ ಸರಣಿಯಲ್ಲಿ ಆಡಲಿರುವ ಭಾರತ ಕ್ರಿಕೆಟ್ ತಂಡದ ಮ್ಯಾನೇಜರ್ ಆಗಿ ನೇಮಕವಾಗಿದ್ದಾರೆ. 66 ವರ್ಷ ವಯಸ್ಸಿನ ಭಟ್ ಅವರು ಇದೇ ಮೊದಲ ಸಲ ಈ ಹುದ್ದೆಯಲ್ಲಿ ಕಾರ್ಯನಿರ್ವಹಿಸುವರು.



ರಘುರಾಮ್ ಭಟ್

‘ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಕೊಟ್ಟಿರುವ ಹೊಣೆಯನ್ನು ಸಮರ್ಥವಾಗಿ ನಿಭಾಯಿಸುವೆ. ತಂಡದೊಂದಿಗೆ ಕಾರ್ಯನಿರ್ವಹಿಸಲು ತುಂಬಾ ಸಂತಸವಾಗಿದೆ’ ಎಂದು ಭಟ್ ‘ಪ್ರಜಾವಾಣಿ’ಗೆ ತಿಳಿಸಿದರು.

ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಭಟ್ ಅವರು 1983ರಲ್ಲಿ ಭಾರತ ತಂಡದಲ್ಲಿ ಎರಡು ಟೆಸ್ಟ್ ಆಡಿದ್ದರು. ಎಡಗೈ ಸ್ಪಿನ್ನರ್ ಆಗಿದ್ದ ಅವರು ಕರ್ನಾಟಕ ತಂಡದ ನಾಯಕರೂ ಆಗಿದ್ದರು. 82 ಪ್ರಥಮ ದರ್ಜೆ ಪಂದ್ಯಗಳಲ್ಲಿ ಆಡಿ 374 ವಿಕೆಟ್‌ಗಳನ್ನು ಗಳಿಸಿದ್ದರು. 12 ಲಿಸ್ಟ್ ಎ ಪಂದ್ಯಗಳಲ್ಲಿಯೂ ಆಡಿದ್ದಾರೆ. ಅವರು 2022ರಿಂದ ಕೆಎಸ್‌ಸಿಎ ಅಧ್ಯಕ್ಷರಾಗಿದ್ದಾರೆ.

ಭಾರತ ತಂಡವು ಇದೇ 22ರಿಂದ 5 ಟಿ20 ಮತ್ತು 3 ಏಕದಿನ ಪಂದ್ಯಗಳ ಸರಣಿಗಳನ್ನು ಆಡಲಿದೆ.

ಬ್ಯಾಸ್ಕೆಟ್‌ಬಾಲ್: ಕೇರಳಕ್ಕೆ ಪ್ರಶಸ್ತಿ



ಕೇರಳದ ಕವಿತಾ ಜೋಸ್ (ಎಡಗಡೆ) ಅವರು ಚೆಂಡನ್ನು ಗುರಿಸೇರಿಸದಂತೆ ತಮಿಳುನಾಡಿನ ನಿಕಿತಾ ಅಮುದನ್ ತಡೆಯಲು ಮುಂದಾದ ಕ್ಷಣ. ಪ್ರಜಾವಾಣಿ ಚಿತ್ರ: ಎಸ್‌.ಕೆ.ದಿನೇಶ್

ಬೆಂಗಳೂರು: ತಮಿಳುನಾಡು ತಂಡ ಭಾನುವಾರ ಇಲ್ಲಿ ಮುಕ್ತಾಯಗೊಂಡ ನಾಲ್ಕನೇ ವರ್ಷದ 3x3 ಸೀನಿಯರ್ ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪುರುಷರ ವಿಭಾಗದ ಪ್ರಶಸ್ತಿ ಗೆದ್ದುಕೊಂಡಿತು. ಕೇರಳ ತಂಡ ಮಹಿಳೆಯರ ವಿಭಾಗದಲ್ಲಿ ಚಾಂಪಿಯನ್ ಕಿರೀಟ ಧರಿಸಿತು.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಉತ್ತಮ ಹೋರಾಟದ ಫೈನಲ್ ಪಂದ್ಯದಲ್ಲಿ ತಮಿಳುನಾಡು ತಂಡ 21–16 ಪಾಯಿಂಟ್‌ಗಳಿಂದ ಉತ್ತರ ಪ್ರದೇಶ ತಂಡವನ್ನು ಮಣಿಸಿತು. ಮೂರನೇ ಸ್ಥಾನಕ್ಕಾಗಿ ನಡೆದ ಪಂದ್ಯದಲ್ಲಿ ಹರಿಯಾಣ ತೀವ್ರ ಹೋರಾಟದ ನಂತರ ರಾಜಸ್ಥಾನ ತಂಡವನ್ನು 21–19 ರಿಂದ ಸೋಲಿಸಿತು.

ಕೇರಳ ತಂಡ ಮಹಿಳೆಯರ ಫೈನಲ್‌ನಲ್ಲಿ ತಮಿಳುನಾಡು ತಂಡದ ಮೇಲೆ ಜಯಗಳಿಸಿತು. ತೆಲಂಗಾಣ ತಂಡ 21–11 ಪಾಯಿಂಟ್‌ಗಳಿಂದ ಮಧ್ಯಪ್ರದೇಶ ವಿರುದ್ಧ ಜಯಗಳಿಸಿ ಮೂರನೇ ಸ್ಥಾನ ಗಳಿಸಿತು.

ಪ್ರಶಸ್ತಿ ವಿಜೇತ ತಂಡಕ್ಕೆ ₹3 ಲಕ್ಷ ನಗದು, ರನ್ನರ್ಸ್ ಅಪ್ ತಂಡಕ್ಕೆ ₹2ಲಕ್ಷ ಮತ್ತು ಮೂರನೇ ಸ್ಥಾನ ಪಡೆದ ತಂಡಕ್ಕೆ ₹1ಲಕ್ಷ ನಗದು ಬಹುಮಾನ ನೀಡಲಾಯಿತು.

ಯುವ ವಿಶ್ವಕಪ್ ಭಾರತಕ್ಕೆ ಜಯ

ಕ್ವಾಲಾಲಂಪುರ (ಪಿಟಿಐ): ವೆಸ್ಟ್ ಇಂಡೀಸ್ ತಂಡವನ್ನು ಕೇವಲ 44 ರನ್‌ಗಳಿಗೆ ಉರುಳಿಸಿದ ಭಾರತ ತಂಡ, ಮಹಿಳೆಯರ 19 ವರ್ಷದೊಳಗಿನ ಐಸಿಸಿ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ‘ಎ’ ಗುಂಪಿನ ಪಂದ್ಯದಲ್ಲಿ ಭಾನುವಾರ 9 ವಿಕೆಟ್‌ಗಳ ನಿರಾಯಾಸ ಗೆಲುವಿನೊಡನೆ ಅಭಿಯಾನ ಆರಂಭಿಸಿತು.

ಪರುಣಿಕಾ ಸಿಸೋಸಿಯಾ 7ಕ್ಕೆ3 ವಿಕೆಟ್ ಪಡೆದರು. ಸಂಕ್ಷಿಪ್ತ ಸ್ಕೋರು: ವೆಸ್ಟ್ ಇಂಡೀಸ್: 13.2 ಓವರುಗಳಲ್ಲಿ 44 (ಕೆನಿಕಾ ಕಾಸ್ಸರ್ 15; ಪರುನಿಕಾ 7ಕ್ಕೆ3, ಆಯುಷಿ ಶುಕ್ಲಾ 6ಕ್ಕೆ2, ವಿ.ಜೆ.ಜೋಶಿತಾ 6ಕ್ಕೆ2); ಭಾರತ: 4.2 ಓವರುಗಳಲ್ಲಿ 1 ವಿಕೆಟ್‌ಗೆ 47 (ಸನಿಕಾ ಚಾಲ್ಕೆ ಔಟಾಗದೇ 18, ಜಿ.ಕಮಲಿನಿ ಔಟಾಗದೇ 16, ಜಹಜರಾ ಕ್ಲಾಕ್ಸ್‌ಟನ್ 18ಕ್ಕೆ1).

ಮಯಂಕ್ ಬಳಗಕ್ಕೆ ಸ್ವಾಗತ

ಬೆಂಗಳೂರು: ವಡೋದರಾದಲ್ಲಿ ವಿಜಯ್ ಹಜಾರೆ ಟ್ರೋಫಿ ಜಯಿಸಿದ ಕರ್ನಾಟಕ ತಂಡವು ಭಾನುವಾರ ರಾತ್ರಿ ಬೆಂಗಳೂರಿಗೆ ಬಂದಿಳಿಯಿತು. ವಿಮಾನ ನಿಲ್ದಾಣದಲ್ಲಿ ರಾತ್ರಿ 9.30ರ ಸುಮಾರಿಗೆ ಆಗಮಿಸಿದ ತಂಡದ ಆಟಗಾರರನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಜಂಟಿ ಕಾರ್ಯದರ್ಶಿ ಶಾವೀರ್ ತಾರಾಪುರ್ ಮತ್ತಿತರರು ಸ್ವಾಗತಿಸಿದರು.



ದಾಂಪತ್ಯ ಜೀವನಕ್ಕೆ ನೀರಜ್

ಭಾರತದ ಒಲಿಂಪಿಯನ್ ಜಾವೆಲಿನ್ ಥ್ರೋ ಅಥ್ಲೀಟ್ ನೀರಜ್ ಚೋಪ್ರಾ ಅವರು ಭಾನುವಾರ ತಮ್ಮ ದೀರ್ಘ ಕಾಲದ ಗೆಳತಿ ಹಿಮಾನಿ ಅವರೊಂದಿಗೆ ವಿವಾಹವಾದರು. ಎರಡೂ ಕುಟುಂಬಗಳ ಸದಸ್ಯರ ಸಮುಖ್ಯದಲ್ಲಿ ಮದುವೆ ನೆರವೇರಿತು. ನೀರಜ್ ಅವರು 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಮತ್ತು ಹೋದ ವರ್ಷ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಜಯಿಸಿದ್ದರು. ಹಿಮಾನಿ ಪ್ರಸ್ತುತ ಅಮೆರಿಕದಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆಂದು ಕುಟುಂಬದ ಮೂಲಗಳು ತಿಳಿಸಿವೆ – ಎಕ್ಸ್ ಚಿತ್ರ

‘ಸೂರ್ಯ ಬಲ ಇರಬೇಕಿತ್ತು’

ನವದೆಹಲಿ (ಪಿಟಿಐ): ಮುಂದಿನ ತಿಂಗಳು ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಭಾರತ ತಂಡದಲ್ಲಿ ಬ್ಯಾಟರ್ ಸೂರ್ಯಕುಮಾರ್ ಯಾದವ್ ಅವರಿಗೆ ಸ್ಥಾನ ನೀಡಬೇಕಿತ್ತು ಎಂದು ಮಾಜಿ ಕ್ರಿಕೆಟಿಗ ಸುರೇಶ್ ರೈನಾ ಅಭಿಪ್ರಾಯಪಟ್ಟಿದ್ದಾರೆ. ಬ್ಯಾಟರ್ ಸೂರ್ಯಕುಮಾರ್ ಮತ್ತು ವೇಗಿ ಮೊಹಮ್ಮದ್ ಸಿರಾಜ್ ಅವರಿಗೆ ಸ್ಥಾನ ನೀಡಿಲ್ಲ.

ಸಂಕ್ಷಿಪ್ತ ಸುದ್ದಿ

ಶಕೀಬ್ ಬಂಧನಕ್ಕೆ ವಾರಂಟ್

ಢಾಕಾ (ಪಿಟಿಐ): ಬಾಂಗ್ಲಾದೇಶ ಕ್ರಿಕೆಟ್ ತಂಡದ ಆಲ್‌ರೌಂಡರ್ ಶಕೀಬ್ ಅಲ್ ಹಸನ್ ಅವರನ್ನು ಬಂಧಿಸಲು ಢಾಕಾ ನ್ಯಾಯಾಲಯವು ವಾರಂಟ್ ಜಾರಿ ಮಾಡಿದೆ. ಅವಾಮಿ ಲೀಗ್ ಪಕ್ಷದ ಮಾಜಿ ಸಂಸದ ಕೂಡ ಆಗಿರುವ ಶಕೀಬ್ ಅವರ ಮೇಲೆ ಎರಡು ಚೆಕ್ ಬೌನ್ಸ್ ಪ್ರಕರಣಗಳು ದಾಖಲಾಗಿವೆ. ಬಾಂಗ್ಲಾದಲ್ಲಿ ಈ ಹಿಂದೆ ಪ್ರಧಾನಿಯಾಗಿದ್ದ ಶೇಖ್ ಹಸೀನಾ ಅವರ ಪದಚ್ಯುತಿಯ ನಂತರ ಶಕೀಬ್ ಕೂಡ ದೇಶ ಬಿಟ್ಟಿದ್ದಾರೆ.

ರಣಜಿ ಆಡಲಿರುವ ರವೀಂದ್ರ ಜಡೇಜ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಲ್‌ರೌಂಡರ್ ರವೀಂದ್ರ ಜಡೇಜ ಅವರು ಇದೇ 23ರಿಂದ ಆರಂಭವಾಗುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಸೌರಾಷ್ಟ್ರ ತಂಡದಲ್ಲಿ ಆಡುವರು.



ಜಡೇಜ

ದೆಹಲಿ ತಂಡದ ಎದುರು ಸೌರಾಷ್ಟ್ರ ಕಣಕ್ಕಿಳಿಯಲಿದೆ. 2023ರ ಜನವರಿಯಲ್ಲಿ ಜಡೇಜ ಅವರು ಕೊನೆಯ ಸಲ ರಣಜಿ ಪಂದ್ಯದಲ್ಲಿ ಆಡಿದ್ದರು.

ಈಚೆಗೆ ಆಸ್ಟ್ರೇಲಿಯಾದಲ್ಲಿ ಭಾರತ ತಂಡವು ಸರಣಿ ಸೋತ ನಂತರ ರಾಷ್ಟ್ರೀಯ ತಂಡದ ಆಟಗಾರರು ಬಿಡುವು ಇದ್ದಾಗ ದೇಶಿ ಕ್ರಿಕೆಟ್‌ನಲ್ಲಿ ಆಡುವುದು ಕಡ್ಡಾಯ ಎಂದು ನಿಯಮ ರೂಪಿಸಲಾಗಿದೆ.

‘ಇವತ್ತು (ಭಾನುವಾರ) ಜಡೇಜ ಅವರು ನೆಟ್ಸ್‌ನಲ್ಲಿ ಅಭ್ಯಾಸ ಮಾಡಿದರು. ಮುಂದಿನ ಪಂದ್ಯದಲ್ಲಿ ಅವರು ಆಡುವರು’ ಎಂದು ಸೌರಾಷ್ಟ್ರ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ಜಯದೇವ್ ಶಾ ತಿಳಿಸಿದ್ದಾರೆ.

ಸಬಲೆಂಕಾ, ಜೊಕೊ ಜಯದ ನಾಗಾಲೋಟ

ಆಸ್ಟ್ರೇಲಿಯನ್ ಓಪನ್ ಟೆನಿಸ್: ಎಂಟರ ಘಟ್ಟಕ್ಕೆ ಕೊಕೊ ಗಾಫ್, ಅಲ್ಕರಾಜ್

ಮೆಲ್ಬರ್ನ್ (ಎಎಫ್‌ಪಿ): ನೊವಾಕ್ ಜೊಕೊವಿಚ್ ಅವರು ನೇರ ಸೆಟ್‌ಗಳ ಗೆಲುವಿನೊಡನೆ ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಕ್ವಾರ್ಟರ್ ಫೈನಲ್ ತಲುಪಿ, ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಎದುರು ಬಹುನಿರೀಕ್ಷಿತ ಮುಖಾಮುಖಿಗೆ ಸಜ್ಜಾದರು. ಮಹಿಳೆಯರ ವಿಭಾಗದಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬಲೆಂಕಾ ಕೂಡ ಭಾನುವಾರ ಅಧಿಕಾರಯುತ ಗೆಲುವು ಸಾಧಿಸಿದರು.

ಎರಡು ವರ್ಷಗಳಿಂದ ಇಲ್ಲಿ ಚಾಂಪಿಯನ್ ಆಗಿರುವ ಸಬಲೆಂಕಾ ಮತ್ತು ಪ್ರಸ್ತುತ ಒಳ್ಳೆಯ ಲಯಲ್ಲಿರುವ ವಿಶ್ವದ ಮೂರನೇ ಕ್ರಮಾಂಕದ ಆಟಗಾರ್ತಿ ಕೊಕೊ ಗಾಫ್ ಸೆಮಿಫೈನಲ್‌ನಲ್ಲಿ ಮುಖಾಮುಖಿಯಾಗುವ ನಿಟ್ಟಿನಲ್ಲಿ ಹೆಜ್ಜೆಯಿಟ್ಟಿದ್ದಾರೆ. ಇದಕ್ಕೆ ಇಬ್ಬರೂ ಕ್ವಾರ್ಟರ್‌ಫೈನಲ್ ಪಂದ್ಯಗಳನ್ನು ಗೆಲ್ಲಬೇಕಷ್ಟೇ.

ರಾಡ್ ಲೇವರ್ ಅರೇನಾದಲ್ಲಿ 37 ವರ್ಷ ವಯಸ್ಸಿನ ಜೊಕೊವಿಚ್ 6–3, 6–4, 7–6 (7–4) ರಿಂದ 24ನೇ ಕ್ರಮಾಂಕದ ಜಿರಿ ಲೆಹೆಕಾ (ಝೆಕ್ ರಿಪಬ್ಲಿಕ್) ಅವರನ್ನು ಮಣಿಸಿದರು.

ಮೆಲ್ಬರ್ನ್‌ನಲ್ಲಿ ಭಾನುವಾರ ಅತಿ ಹೆಚ್ಚು ಬಿಸಿಲಿದ್ದು, 34 ಡಿಗ್ರಿ ಸೆಲ್ಸಿಯಸ್‌ನಲ್ಲಿ ಆಡಿದ 21 ವರ್ಷ ವಯಸ್ಸಿನ ಕಾರ್ಲೋಸ್ ಅಲ್ಕರಾಜ್ ಅವರಿಗೆ ಬ್ರಿಟನ್‌ನ ಜಾಕ್ ಡ್ರೇಪರ್ ಅರ್ಧದಲ್ಲೇ ಪಂದ್ಯ ಬಿಟ್ಟುಕೊಟ್ಟರು. ಆಗ ಮೂರನೇ ಶ್ರೇಯಾಂಕದ ಅಲ್ಕರಾಜ್ 7–5, 6–1 ರಿಂದ ಮುಂದಿದ್ದರು.

23 ವರ್ಷ ವಯಸ್ಸಿನ ಡ್ರೇಪರ್ ಈ ಹಿಂದಿನ ಮೂರೂ ಪಂದ್ಯಗಳಲ್ಲಿ ಗೆಲುವಿಗೆ ಐದು ಸೆಟ್‌ಗಳನ್ನು ತೆಗೆದುಕೊಂಡಿದ್ದರು. ಅದೂ 1–2 ಹಿನ್ನಡೆಯಿಂದ ಚೇತರಿಸಿದ್ದರು. ದೀರ್ಘ ಪಂದ್ಯಗಳ ದಣಿವು ಅವರ ದೇಹದ ಮೇಲೆ ಪರಿಣಾಮ ಬೀರಿದಂತೆ ಕಂಡಿತು. ಅವರನ್ನು ಕೆಳಬೆನ್ನು ನೋವು ಕಾಡಿತು.

ದಾಖಲೆಯ 11ನೇ ಪ್ರಶಸ್ತಿ ಮತ್ತು ಚಾರಿತ್ರಿಕ 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ನಿರೀಕ್ಷೆಯಲ್ಲಿರುವ ಜೊಕೊವಿಚ್ ನೇರ ಸೆಟ್‌ಗಳ ಗೆಲುವು ಪಡೆಯುತ್ತಿರುವುದು ಎದುರಾಳಿಗಳಿಗೆ ಎಚ್ಚರಿಕೆಯ ಗಂಟೆಯಾಗಿದೆ. ಮೊದಲ ಎರಡು ಪಂದ್ಯಗಳಲ್ಲಿ ಒಂದೊಂದು ಸೆಟ್ ಕಳೆದುಕೊಂಡಿದ್ದ ಸರ್ಬಿಯಾದ ತಾರೆ ಕೊನೆಯ ಎರಡು ಪಂದ್ಯಗಳನ್ನು ನೇರ ಸೆಟ್‌ಗಳಿಂದ ಗೆದಿದ್ದಾರೆ.

ಜೊಕೊವಿಚ್ ಮತ್ತು ಅಲ್ಕರಾಜ್ ಒಟ್ಟು ಏಳು ಬಾರಿ ಮುಖಾಮುಖಿ ಆಗಿದ್ದು ಸರ್ಬಿಯಾದ ತಾರೆ 4–3 ಗೆಲುವಿನ ದಾಖಲೆ ಹೊಂದಿದ್ದಾರೆ. ಅಲ್ಕರಾಜ್ ಈವರೆಗೆ ಆಸ್ಟ್ರೇಲಿಯಾದಲ್ಲಿ ಚಾಂಪಿಯನ್ ಆಗಿಲ್ಲ.

12ನೇ ಶ್ರೇಯಾಂಕದ ಟಾಮಿ ಪಾಲ್ (ಅಮೆರಿಕ) ಅವರು ಸ್ಪೇನ್‌ನ ಅಲೆಕ್ಸಾಂಡ್ರೊ ದಾವಿಡೊವಿಚ್ ಅವರನ್ನು ಹಿಮ್ಮೆಟ್ಟಿಸಿದರು.

ಮುಂದಿನ ಪಂದ್ಯದಲ್ಲಿ ಜರ್ಮನಿಯ ಅಲೆಕ್ಸಾಂಡರ್ ಜ್ವರೇವ್ ಅವರನ್ನು ಎದುರಿಸಲಿದ್ದಾರೆ. ಮೊದಲ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ಜ್ವರೇವ್ 6–1, 2–6, 6–3, 6–2 ರಿಂದ ಫ್ರಾನ್ಸ್‌ನ ಉಗೊ ಹಂಬರ್ಟ್ ಅವರನ್ನು ಸೋಲಿಸಿದರು.

ಸಬಲೆಂಕಾ ಮುನ್ನಡೆ: ಬೆಲಾರೂಸ್‌ನ ಆಟಗಾರ್ತಿ ಸಬಲೆಂಕಾ ಇನ್ನೊಂದು ಪಂದ್ಯದಲ್ಲಿ 17 ವರ್ಷ ವಯಸ್ಸಿನ ಮಿಯೆರಾ ಆಂಡ್ರೀವಾ (ರಷ್ಯಾ) ಅವರನ್ನು 6–1, 6–2 ರಿಂದ ಬಗ್ಗುಬಡಿದರು. ಗೆಲುವಿಗೆ ತೆಗೆದುಕೊಂಡಿದ್ದು 62 ನಿಮಿಷಗಳನ್ನಷ್ಟೇ.

ಸೆಟ್ ಹಿನ್ನಡೆಯಿಂದ ಚೇತರಿಸಿದ ಅಮೆರಿಕದ ಕೊಕೊ ಗಾಫ್ 5–7, 6–2, 6–1 ರಿಂದ ಸ್ವಿಜರ್ಲೆಂಡ್‌ನ ಬೆಲಿಂಡಾ ಬೆನ್ಸಿಕ್ ಅವರನ್ನು ಹಿಮ್ಮೆಟ್ಟಿಸಿದರು. ಅವರ ಮುಂದಿನ ಎದುರಾಳಿ 11ನೇ ಶ್ರೇಯಾಂಕದ ಪೌಲಾ ಬಡೋಸಾ. ಈ ಗೆಲುವಿನೊಡನೆ 20 ವರ್ಷ ವಯಸ್ಸಿನ ಕೊಕೊ ಸತತ 13 ಪಂದ್ಯಗಳನ್ನು ಗೆದ್ದಂತಾಗಿದೆ.



ಸ್ವಿಜರ್ಲೆಂಡ್‌ನ ಬೆಲಿಂಡಾ ಬೆನ್ಸಿಕ್ ವಿರುದ್ಧ ಜಯಗಳಿಸಿದ ಕೊಕೊ ಗಾಫ್ ಸಂಭ್ರಮ... ಎಪಿ / ಪಿಟಿಐ ಚಿತ್ರ

ಕ್ವಾರ್ಟರ್‌ಫೈನಲ್‌ಗೆ ಬೋಪಣ್ಣ–ಶುಯಿ

ಭಾರತದ ಅನುಭವಿ ಡಬಲ್ಸ್ ಆಟಗಾರ ರೋಹನ್ ಬೋಪಣ್ಣ ಅವರು ಚೀನಾದ ಜೊತೆಗಾರ್ತಿ ಝಾಂಗ್ ಶುಯಿ ಜೊತೆ ಮಿಶ್ರ ಡಬಲ್ಸ್ ವಿಭಾಗದಲ್ಲಿ ಬೆವರು ಹರಿಸದೇ ಎಂಟರ ಘಟ್ಟಕ್ಕೇರಿದರು.

ಭಾನುವಾರ ಇಂಡೊ–ಚೀನಾ ಜೋಡಿಗೆ ಎರಡನೇ ಸುತ್ತಿನಲ್ಲಿ ವಾಕ್ ಓವರ್ ದೊರೆಯಿತು. ಅವರ ಎದುರು ಆಡಬೇಕಾಗಿದ್ದ ನಾಲ್ಕನೇ ಶ್ರೇಯಾಂಕದ ಟೇಲರ್ ಟೌನ್ಸೆಂಡ್ (ಅಮೆರಿಕ)– ಹ್ಯೂಗೊ ನಿಸ್ (ಮೊನಾಕೊ) ಅವರು ಕೋರ್ಟ್‌ಗಿಳಿಯಲಿಲ್ಲ.

ಮುಂದಿನ ಸುತ್ತಿನಲ್ಲಿ ಬೋಪಣ್ಣ– ಶುಯಿ ಜೋಡಿ, ತಿಮಿಯಾ ಬೊಬೊಸ್ (ಹಂಗೆರಿ)– ಮಾರ್ಸೆಲೊ ಅರೆವಲೊ (ಎಲ್ ಸಾಲ್ವಡೊರ್) ಜೋಡಿಯನ್ನು ಎದುರಿಸಲಿದೆ.

ಗರಂ ಆದ ಜೊಕೊವಿಚ್

ತಮ್ಮನ್ನು ಲೇವಡಿ ಮಾಡಿದ ಆಸ್ಟ್ರೇಲಿಯಾದ ಚಾನೆಲ್ 9 ವೀಕ್ಷಕ ವಿವರಣೆಗಾರನ ವಿರುದ್ಧ ಜೊಕೊವಿಚ್ ಸಿಡಿಮಿಡಿಗೊಂಡಿದ್ದಾರೆ. ಜೋಕೊ ಮತ್ತು ಅಭಿಮಾನಿಗಳನ್ನು ಅನುಕರಿಸುವ ರೀತಿ ಟೋನಿ ಜೋನ್ಸ್ ಮಾತನಾಡಿದ್ದರು.

ಎರಡು ದಿನಗಳ ಹಿಂದೆ ಅಭಿಮಾನಿಗಳು, ಸರ್ಬಿಯಾ ಆಟಗಾರನನ್ನು ಹುರಿದುಂಬಿಸುತ್ತಿದ್ದ ವೇಳೆ ಈ ರೀತಿ ಮಾತನಾಡಿದ್ದರು ಎನ್ನಲಾಗಿದೆ. ಚಾನೆಲ್ 9 ಟೂರ್ನಿಯ ಅಧಿಕೃತ ಪ್ರಸಾರ ಸಂಸ್ಥೆ. ಬಹಿರಂಗವಾಗಿ ಕ್ಷಮೆ ಕೇಳುವವರೆಗೆ ಈ ಚಾನೆಲ್‌ಗೆ ಯಾವುದೇ ಸಂದರ್ಶನ ನೀಡುವುದಿಲ್ಲ ಎಂದು ಜೊಕೊವಿಚ್ ಮಾಧ್ಯಮದವರಿಗೆ ತಿಳಿಸಿದ್ದಾರೆ.